ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

01 ಏಪ್ರಿಲ್ 2015 ಪುಟ 20 ರೂ. 15/-



ಹಾಸ್ಯ ಪ್ರಬಂಧ

ಮೋದಿ ಬೋರ್‌ವೆಲ್



ಮೋಹಕ್ಕೆ ಬಲಿಯಾದ ದಕ್ಷ

ರಾಯಚೂರು

ಪಿಎಂಸಿಯಲ್ಲಿ ರಿಯಲ್ ಸ್ಟೇಟ್ ದಂಧೆ







ಜನರನ್ನು ಒಳಗೊಳ್ಳುವ ಸಿದ್ದು ಬಜೆಟ್

ಕುಮಟಾ

ಹೈವೇ ದಿಕ್ಕು ತಪ್ಪಿಸುತ್ತಿರುವ ದೇಶಪಾಂಡೆ





ವೈದ್ಯರುಗಳಿಗೆ ಆತ್ಮಸಾಕ್ಷಿ ಇದೆಯೇ?

ಮೊನ್ನೆ ಬೆಂಗಳೂರಿನ ಖಾಸಗಿ ಆಸ್ಪತ್ರೆಗಳ ವೈದ್ಯರುಗಳು ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಿದರು. ಕೆಲವು ಸರ್ಕಾರೀ ವೈದ್ಯರೂ ಅವರಿಗೆ ಸಾಥ್ ನೀಡಿದ್ದರು. ಈ ಪ್ರತಿಭಟನೆ ಹಮ್ಮಿಕೊಳ್ಳಲು ಕಾರಣವಿತ್ತು. ಕೆಲವು ದಿನಗಳ ಹಿಂದೆ ಬೆಂಗಳೂರಿನ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಮೃತಪಟ್ಟ ರೋಗಿಗಳ ಸಂಬಂಧಿಕರು, ಆಸ್ಪತ್ರೆ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದರು. ಐಸಿಯುನಲ್ಲಿನ ಉಪಕರಣಗಳು ಸೇರಿದಂತೆ ಆಸ್ತಿಪಾಸ್ತಿ ಧ್ವಂಸ ಮಾಡಿದ್ದರು. ಅದಕ್ಕೆ ಸ್ವಲ್ಪ ದಿನಗಳ ಹಿಂದೆ ಕೆ.ಆರ್.ಪುರದಲ್ಲಿನ ಆಸ್ಪತ್ರೆಯೊಂದರ ಮುಂದೆಯೂ ರೋಗಿಗಳ ಸಂಬಂಧಿಕರು ಪ್ರತಿಭಟನೆ ನಡೆಸಿದ್ದರು.

ಮಹಾವೀರ್ ಜೈನ್ ಆಸ್ಪತ್ರೆಯವರ ಪ್ರಕಾರ ಮತ್ತು ಅವರ ಪರವಾಗಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಕರೆ ಕೊಟ್ಟವರ ಪ್ರಕಾರ, ಆ ರೋಗಿಗೆ ನೀಡಬೇಕಿದ್ದ ಎಲ್ಲಾ ಲಭ್ಯ ಚಿಕಿತ್ಸೆಗಳನ್ನೂ ನೀಡಲಾಗಿತ್ತು, ಮಾರ್ಚ್ 6ರಂದು ರೋಗಿಯ ಪರಿಸ್ಥಿತಿ ಬಿಗಡಾಯಿಸುತ್ತಿದ್ದುದರಿಂದ, ಐಸಿಯುಗೆ ವರ್ಗಾವಣೆ ಮಾಡಬೇಕೆಂದೂ ಸೂಚಿಸಲಾಗಿತ್ತು. ಆದರೆ ರೋಗಿಯ ಕಡೆಯವರು ಅದಕ್ಕೆ ಒಪ್ಪದೇ ಮನೆಗೆ ಕರೆದುಕೊಂಡು ಹೋಗುತ್ತೇವೆಂದು ಹೇಳಿದ್ದರು. 'ವೈದ್ಯಕೀಯ ಸಲಹೆಗೆ ವಿರುದ್ಧವಾಗಿ ಬಿಡುಗಡೆ ಹೊಂದುವ **(Discharge Against Medical Advice)**' ಫಾರಂಗಳಿಗೆ ಸಹಿಯನ್ನೂ ಮಾಡಿದ್ದರು. ಮನೆಗೆ ಕರೆದೊಯ್ದರೆ ಅಲ್ಲಿ, ಆಕ್ಸಿಜನ್ ನೀಡುವುದೂ ಸೇರಿದಂತೆ ಇನ್ನಿತರ ಪರಿಕರಗಳನ್ನು ಜೋಡಿಸಿಕೊಳ್ಳಬೇಕಾಗುತ್ತದಾದ್ದರಿಂದ, ಸಮಯ ಕೇಳಿಕೊಂಡು ಆಸ್ಪತ್ರೆಯ ವಾರ್ಡ್‌ನಲ್ಲಿಯೇ ಉಳಿದುಕೊಂಡಿದ್ದರು. ಆದರೆ, ಮಾರ್ಚ್ 7ರ ಬೆಳಗ್ಗೆ ಬಾತ್‌ರೂಂಗೆ ಹೋದ ರೋಗಿ ಕುಸಿದರು. ರೋಗಿಯನ್ನು ಐಸಿಯುಗೆ ಕೂಡಲೇ ಕರೆದೊಯ್ಯುತ್ತಾ ಜೀವ ಉಳಿಸಲು ಮಾಡಬಹುದಾದ ಎಲ್ಲಾ ಪ್ರಯತ್ನವನ್ನು ಮಾಡಿಯೂ ರೋಗಿ ಉಳಿಯಲಿಲ್ಲ. ಇದಾದನಂತರ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡದೇ ಇದ್ದುದರಿಂದಲೇ ಹೀಗಾಯಿತು ಎಂದು ರೋಗಿಯ ಸಂಬಂಧಿಕರು ಮತ್ತು ಸಂಬಂಧಿಕರೆಂದು ಹೇಳಿಕೊಂಡವರು ಸಿಕ್ಕಾಪಟ್ಟೆ ದಾಂಧಲೆ ನಡೆಸಿದರು. ಆಸ್ಪತ್ರೆಯ ನಿರ್ದೇಶಕ ಡಾ.ಮಾರ್ಕರ್ ಅವರ ಮೇಲೂ ಹಲ್ಲೆ ನಡೆಸಿದರು. ವೈದ್ಯರೊಬ್ಬರ ಪ್ರಕಾರ 'ಅವರು ನಡೆದುಕೊಂಡ ರೀತಿ ನಾಗರಿಕ ಸಮಾಜದ ಎಲ್ಲಾ ರೀತಿನೀತಿಗಳಿಗೆ ಮೀರಿದ್ದಾಗಿತ್ತು'. ರೋಗಿಯ ಕಡೆಯವರ ಹೇಳಿಕೆಗಳು ಎಲ್ಲೂ ವರದಿಯಾಗಿಲ್ಲ, ಆದರೆ ವೈದ್ಯರು ಹೇಳುತ್ತಿರುವ ರೀತಿ ನಡೆದಿರುವ ಸಾಧ್ಯತೆ ಇದೆ.

ಹೀಗಾಗಿ ಮಾರ್ಚ್ 16ರಂದು ಸ್ವಾತಂತ್ರ್ಯ ಉದ್ಯಾನವನದಲ್ಲಿ ಸುಮಾರು 4,000ಕ್ಕೂ ಹೆಚ್ಚು ಜನ ವೈದ್ಯಕೀಯ ವೃತ್ತಿ ನಿರತರ ಬೃಹತ್ ಪ್ರತಿಭಟನೆ ನಡೆದಿದೆ. ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಸಂಘ, ಭಾರತೀಯ ವೈದ್ಯಕೀಯ ಸಂಘ, ಸರ್ಕಾರೀ ವೈದ್ಯಾಧಿಕಾರಿಗಳ ಸಂಘ ಸೇರಿದಂತೆ ಸುಮಾರು 24 ವಿವಿಧ ಸಂಘ-ಸಂಸ್ಥೆಗಳು ಈ ಪ್ರತಿಭಟನೆಯ ಭಾಗವಾಗಿದ್ದವು. ನಾರಾಯಣ ಹೆಲ್ತ್ ಸಿಟಿಯ ಡಾ.ದೇವಿಪ್ರಸಾದ್ ಶೆಟ್ಟಿ, ಮಣಿಪಾಲ್ ಸಮೂಹದ ಡಾ.ಸುದರ್ಶನ್ ಬಲ್ಲಾಳ್, ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಹಾಸ್‌ಮ್ಯಾಟ್‌ನ ಡಾ.ಥಾಮಸ್ ಚಾಂಡಿ ಹಾಗೂ ಇನ್ನಿತರ ಘಟಾನುಘಟಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಹಾಗಾಗಿ ಸ್ವತಃ ಗೃಹ ಸಚಿವ ಕೆ.ಜೆ.ಜಾರ್ಜ್ ಅವರೇ ಸ್ಥಳಕ್ಕೆ ಬಂದು ಮನವಿ ಪತ್ರವನ್ನು ಸ್ವೀಕರಿಸಿದರು.

ಇನ್ನಿತರ ಒತ್ತಾಯಗಳ ಜೊತೆಗೆ ಮುಖ್ಯವಾಗಿ '2009ರ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿ ಮೇಲಿನ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಕಾಯ್ದೆ'ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಒತ್ತಾಯಿಸಲಾಯಿತು. ಗೃಹಮಂತ್ರಿಗಳು ಮನವಿಪತ್ರ ಸ್ವೀಕರಿಸಿ ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಸೇರಿದಂತೆ ಎಲ್ಲಾ ಅಧಿಕಾರಿಗಳಿಗೂ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಸೂಚಿಸಿರುವುದಾಗಿ ಹೇಳಿದರು.

ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ನಡೆದ ಗಲಾಟೆಯು ಖಂಡನೀಯವಾದುದು. ಜೀವ ಉಳಿಸುವ ಸಲುವಾಗಿ ಸದುದ್ದೇಶದಿಂದ ಮಾಡುವ ಚಿಕಿತ್ಸೆಯಲ್ಲಿ ಎಡವಟ್ಟಾಗಿಯೋ ಅಥವಾ ಸಾಧ್ಯವಿರುವ ಎಲ್ಲಾ ಚಿಕಿತ್ಸೆ ನೀಡಿಯೂ ಕೈಮೀರಿದ ಕಾರಣಗಳಿಂದಾಗಿ ಸಾವು ಸಂಭವಿಸಬಹುದು. ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ಎಷ್ಟೋ ಅಂಶಗಳು ಜನಸಾಮಾನ್ಯರಿಗೆ ಗೊತ್ತಿರುವುದಿಲ್ಲ. ಜೊತೆಗೆ ಕೆಲವರು ಗೊತ್ತಿದ್ದೂ ಬಹಳ ಕೆಟ್ಟದಾಗಿ ನಡೆದುಕೊಳ್ಳುವವರು ಇರುತ್ತಾರೆ. ಈ ರೀತಿ ಮುಂದುವರೆದರೆ, ವೈದ್ಯರು ಯಾವ ಧೈರ್ಯದ ಮೇಲೆ ರೋಗಿಗಳಿಗೆ ಚಿಕಿತ್ಸೆ ನೀಡುವುದು ಎಂಬ ಆತಂಕವನ್ನು ಎದುರಿಸಬೇಕಾಗುತ್ತದೆ ಎಂಬುದೂ ನಿಜ. ಹಾಗಾಗಿ ಇದಕ್ಕೆ ಕೆಲವು ಸೂಕ್ತ ಕ್ರಮಗಳ ಅಗತ್ಯವಿದೆ.

ಆದರೆ, ಈ ಪರಿಸ್ಥಿತಿಗೆ ಕಾರಣವೇನು? ಇದರ ನಿಜವಾದ ಪರಿಹಾರ ಎಲ್ಲಿ ಅಡಗಿದೆ? ಎಂಬುದನ್ನು ಸೂಕ್ತವಾಗಿ ಪರಿಶೀಲಿಸದಿದ್ದಲ್ಲಿ **(if not properly diagnosed)** ರೋಗವನ್ನು ಗುಣಪಡಿಸುವುದು ಸಾಧ್ಯವಿಲ್ಲವೆಂಬುದು ಎಲ್ಲರಿಗಿಂತ ಹೆಚ್ಚು ವೈದ್ಯರಿಗೆ ಗೊತ್ತಿದೆ. ಹಾಗಾಗಿ ಇಂತಹ ಪರಿಸ್ಥಿತಿಯು ಉದ್ಭವವಾಗಲು ಇರುವ ಅಸಲೀ ಕಾರಣಗಳತ್ತ ಸ್ವಲ್ಪ ನೋಡೋಣ. ಇದು ಕೇವಲ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಮಾತ್ರ ನಡೆಯುತ್ತಿರುವುದಲ್ಲ; ವೈದ್ಯರು ನಿರ್ಲಕ್ಷ್ಯ ತೋರುತ್ತಿದ್ದಾರೆಂದು ಆರೋಪಿಸಿ ಪ್ರತಿಭಟನೆ ನಡೆಸುವುದು ದಿನೇದಿನೇ ಹೆಚ್ಚುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸಮಾಜದಲ್ಲಿ ವೈದ್ಯರುಗಳ ಬಗ್ಗೆ ಮತ್ತು ವೈದ್ಯಕೀಯ ವ್ಯವಸ್ಥೆಯ ಬಗ್ಗೆ ದಿನೇದಿನೇ ಸಿಟ್ಟು ಹೆಚ್ಚುತ್ತಾ ಇದೆ. ಹೀಗಾಗಿಯೆ ಮೇಲೆ ಹೇಳಲಾದ ಕಾಯ್ದೆಯನ್ನು ಎಲ್ಲಾ ಆಸ್ಪತ್ರೆಗಳಲ್ಲೂ ಎದ್ದು ಕಾಣುವ ಹಾಗೆ ಪ್ರದರ್ಶನ ಮಾಡುತ್ತಿದ್ದರೂ, ದಿನೇದಿನೇ ವೈದ್ಯಕೀಯ ಸಿಬ್ಬಂದಿ ಮೇಲೆ ರೋಗಿಗಳ ಸಂಬಂಧಿಕರು ಕೂಗಾಡುವುದು ಹೆಚ್ಚಾಗುತ್ತಿದೆ.


ಇದಕ್ಕೆ ಕಾರಣ – ದೇವಲೋಕದಿಂದ ಇಳಿದುಬಂದ ವೈದ್ಯ ಲೋಕದ ಪ್ರತಿನಿಧಿಗಳು ಹೇಳುತ್ತಿರುವಂತೆ – ನಮ್ಮ ದೇಶದಲ್ಲಿ ಅನಕ್ಷರತೆ ಹೆಚ್ಚಾಗಿರುವುದು, ಜನರು ಒಳ್ಳೆಯ ಮ್ಯಾನರ್ಸ್ ಕಲಿತುಕೊಳ್ಳದಿರುವುದು ಕಾರಣವಾ? ಅಥವಾ



ವೈದ್ಯಕೀಯ ವ್ಯವಸ್ಥೆಯಲ್ಲೇ ದೋಷವಿದೆಯಾ? ಒಂದು ವೇಳೆ, ಈ ದೇಶದ ಜನರು ಇನ್ನೂ ಹಿಂದಿನ ಕಾಲದಲ್ಲೇ ಇದ್ದಾರೆ ಎಂಬುದು ನಿಜವೇ ಆಗಿದ್ದರೆ, ಅದೇ ಹಳೆಯ ಕಾಲವೇ ಇಲ್ಲಿ 'ವೈದ್ಯೋ ನಾರಾಯಣೋ ಹರಿಃ' ಎಂದು ಅವರಿಗೆ ಹೇಳಿಕೊಟ್ಟಿತ್ತು, ಬಹುಶಃ ಹಾಗಾಗಿಯೇ ಏನೋ ನಾರಾಯಣನ ಹೆಸರಿಟ್ಟುಕೊಂಡ ಆಸ್ಪತ್ರೆ ಸಮೂಹವೊಂದು ರಾಜ್ಯದ ಮೂಲೆಮೂಲೆಗಳಲ್ಲೂ ಹಬ್ಬುತ್ತಿದೆ.

ಇಷ್ಟೆಲ್ಲಾ ಬೆಳವಣಿಗೆಗಳ ನಂತರವೂ, ಈ ನಾಡಿನ ಬಹುಸಂಖ್ಯಾತ ಜನರು ಆಸ್ಪತ್ರೆಗಳಲ್ಲಿ ವೈದ್ಯರಿಗೆ ತಿರುಗಿ ಮಾತನಾಡುವುದಿಲ್ಲ; ಇಷ್ಟೊಂದೇಕೆ ಹಣ ಕೇಳುತ್ತಿದ್ದೀರಿ ಎಂದು ಕೇಳುವುದಿಲ್ಲ. ಸರ್ಕಾರೀ ಆಸ್ಪತ್ರೆಗಳಲ್ಲಿ ಮಾತ್ರವಲ್ಲ, ಖಾಸಗೀ ಆಸ್ಪತ್ರೆಗಳಲ್ಲೂ ರೋಗಿಗಳಿಗೆ ಅವರ ಕಾಯಿಲೆ ಮತ್ತು ಅದಕ್ಕಿರುವ ಪರಿಹಾರದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುತ್ತಿಲ್ಲ. ದಿನಕ್ಕೆ 1 ಲಕ್ಷ ಸಂಪಾದನೆ ಮಾಡುವ ವೈದ್ಯರಿಗೂ ತಮ್ಮ ರೋಗಿಗಳ ಜೊತೆ ಮಾತನಾಡಲು ಸಮಯವಿರುವುದಿಲ್ಲ. ಇದಕ್ಕೆ ಅಪವಾದಗಳಿಲ್ಲವೆಂದಲ್ಲ, ಹಲವಾರು ವೈದ್ಯರು ನಿಷ್ಠೆಯಿಂದ ರೋಗಿಗಳ ಸೇವೆ ಮಾಡುತ್ತಿರುವುದು ವಾಸ್ತವ. ಆದರೆ ಒಂದು ಸಮಷ್ಟಿಯಾಗಿ ವೈದ್ಯರಲ್ಲಿ ಹೆಚ್ಚಿನವರು ಏನು ಮಾಡುತ್ತಿದ್ದಾರೆ?

ಹಣದ ಹಿಂದೆ ಬಿದ್ದಿದ್ದಾರೆ. ಇದನ್ನು ಇಲ್ಲ ಎಂದು ಎದೆ ತಟ್ಟಿ ಹೇಳುವ ಛಾತಿ ವೈದ್ಯರುಗಳಿಗಿದೆಯೇ? ಇಲ್ಲ, ಬದಲಿಗೆ, 'ಉಳಿದೆಲ್ಲಾ ವೃತ್ತಿಪರರಿಗಿಲ್ಲದ ಈ ನೀತಿಯನ್ನು ನಮಗೆ ಮಾತ್ರ ಏಕೆ ಬೋಧಿಸುತ್ತಿದ್ದೀರಿ' ಎಂದು ಕೇಳುತ್ತಾರೆ. ವಾಸ್ತವದಲ್ಲಿ ಉಳಿದೆಲ್ಲಾ ವೃತ್ತಿಪರರಿಗಿಂತ ಹೆಚ್ಚಾಗಿಯೇ ವೈದ್ಯರು ಹಣದ ಹಿಂದೆ ಬಿದ್ದಿದ್ದಾರೆ. ಒಂದು ವೇಳೆ ನೀವು ಭ್ರಷ್ಟ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು, ರಿಯಲ್ ಎಸ್ಟೇಟ್ ದಂಧೆಕೋರರ ಜೊತೆ ಹೋಲಿಸಿಕೊಳ್ಳುವುದಾದರೆ ನೀವು ಹೇಳುವುದು ಸರಿ. ಹಾಗಾದಾಗ, ಈ ಎಲ್ಲಾ ವಿಭಾಗದವರು ಜನಸಾಮಾನ್ಯರಿಂದ ಏನು ಮಾತು ಕೇಳಬೇಕಾಗುತ್ತದೋ, ಅದನ್ನು ನೀವೂ ಕೇಳಬೇಕಾಗುತ್ತದೆ. ಒಂದು ವೇಳೆ ಒಬ್ಬ ರಾಜಕಾರಣಿ, ಒಬ್ಬ ಅಧಿಕಾರಿ, ಒಬ್ಬ ಭೂ ವ್ಯಾಪಾರದ ದಲ್ಲಾಳಿ ನ್ಯಾಯವಾದ ಮಾರ್ಗದಿಂದ ಹಣ ಸಂಪಾದಿಸಿದ್ದರೂ ಜನರು ಅವರ ಬಗ್ಗೆ ಏಕೆ, ಭ್ರಷ್ಟರ ಬಗ್ಗೆ ಏನು



ಮಾತಾಡುತ್ತಾರೆಂಬುದು ನಿಮಗೆ ಗೊತ್ತು, ಆ ರೀತಿಯಲ್ಲಿ ಇಂದು ಇಡೀ ವೈದ್ಯ ಸಮುದಾಯ ಜನರಿಂದ ಮಾತು ಕೇಳುವ ಪರಿಸ್ಥಿತಿ ಬಂದಿದೆ.

ವೈದ್ಯರಲ್ಲಿ ಹೆಚ್ಚಿನವರು ಸೇವೆಯನ್ನೇ ಮಾಡುತ್ತಿದ್ದೇವೆಂದೂ, ಅನಗತ್ಯವಾಗಿ ಶಸ್ತ್ರಚಿಕಿತ್ಸೆ ಮಾಡುವವರೂ, ಕಾರಣವೇ ಇಲ್ಲದೇ ಹಣ ಕೀಳುವವರು ಕಡಿಮೆಯೆಂದೂ ಕೆಲವರು ಹೇಳುತ್ತಾರೆ. 'ನ್ಯಾಯಬದ್ಧವಾಗಿ', 'ರೋಗಿಗೆ ಸೇವೆಯನ್ನು ನಿಷ್ಠೆಯಿಂದ ಮಾಡಿ' ಪಡೆದುಕೊಳ್ಳುವ ಹಣವೇ ತಿಂಗಳಿಗೆ ಹತ್ತು ಲಕ್ಷ ಇದ್ದರೆ ಅದು ನ್ಯಾಯವಾ? ನ್ಯಾಯದ ಮಾನದಂಡಗಳನ್ನು ನಮಗೆ ಬೇಕಾದಂತೆ ಮಾಡಿಕೊಂಡಾಗ ಅದು ಸಾಧ್ಯ. ಮನುಷ್ಯರ ನೋವಿನಲ್ಲಿ, ಅಸಹಾಯಕತೆಯಲ್ಲಿ, ನರಳಾಟದಲ್ಲಿ ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾದ ವೈದ್ಯರು ಗಂಭೀರ ಆತ್ಮಾವಲೋಕನಕ್ಕೆ ಇಳಿಯುವ ಅಗತ್ಯವಿದೆ. ಅಂತಹ ಕೆಲವಾದರೂ ಆತ್ಮಾವಲೋಕನವು ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದಿದ್ದರೆ, ಈ ಅಂಕಣದಲ್ಲಿ ಈ ಲೇಖನವನ್ನು ಬರೆಯುವ ಅಗತ್ಯವಿರಲಿಲ್ಲ.

ಕೀಲು ಬದಲಾವಣೆ **(joint replacement)**, ಬೆನ್ನುಮೂಳೆಯ ಶಸ್ತ್ರಚಿಕಿತ್ಸೆಯನ್ನು ವರ್ಷಕ್ಕೆ ಇಂತಿಷ್ಟು ಮಾಡಿದರೆ, ಇಷ್ಟು ಕೋಟಿ ಎಂಬ ಪ್ಯಾಕೇಜ್‌ಗಳನ್ನು ವೈದ್ಯರು ಮಾಡಿಕೊಂಡಿರುವುದು ನಿಜವೇ, ಸುಳ್ಳೇ? ಇನ್‌ಶ್ಯೂರೆನ್ಸ್ ಇದ್ದರೆ ಒಂದು ದರ, ಇಲ್ಲದಿದ್ದರೆ ಒಂದು ದರ ಇರುವುದು ನಿಜವೇ ಸುಳ್ಳೇ? ಸರ್ಕಾರೀ ವಿಮೆಯನ್ನು ಭಾರೀ ದೊಡ್ಡ ಪ್ರಮಾಣದಲ್ಲಿ ಉದ್ಘಾಟಿಸಲು ಕಾರಣವಾದ ಪ್ರಮುಖ ವೈದ್ಯರೊಬ್ಬರು ಮೊನ್ನಿನ ಪ್ರತಿಭಟನೆಯಲ್ಲಿ ಮುಂಚೂಣಿಯಲ್ಲಿದ್ದರು. ಅದೇರೀತಿ ಅನಗತ್ಯವಾದ ಶಸ್ತ್ರಚಿಕಿತ್ಸೆಗಳಿಗೆ ಕುಖ್ಯಾತರಾದ ಇನ್ನೊಬ್ಬ ವೈದ್ಯರೂ ಅಲ್ಲಿ ಭಾಷಣ ಮಾಡಿದರು. ಇಂತಹವರನ್ನು ನೀವು ನಿಮ್ಮ ಪ್ರತಿಭಟನೆಯ ಮುಂಚೂಣಿಯಲ್ಲಿರಬಾರದವರು ಎಂದು ಭಾವಿಸುತ್ತೀರೊ ಅಥವಾ ಸಾಧ್ಯವಾದರೆ ನೀವೂ ಅವರಂತೆ ಆಗಬೇಕೆಂದು ಬಯಸುತ್ತೀರೋ?

ತಾನು ಅಧಿಕೃತವಾಗಿ ಪಡೆಯುವ ಶಸ್ತ್ರಚಿಕಿತ್ಸೆಯ ವೆಚ್ಚ ಮತ್ತು ಕನ್ಸಲ್ಟೇಷನ್ ವೆಚ್ಚವನ್ನು ಹೊರತುಪಡಿಸಿ, ತನ್ನ ರೋಗಿಯ ಒಟ್ಟಾರೆ ಆಸ್ಪತ್ರೆಯ ವೆಚ್ಚ ಮತ್ತು ರೋಗನಿದಾನ **(diagnostic)** ಪರೀಕ್ಷೆಗಳಲ್ಲಿ ಕಮೀಷನ್ ಪಡೆಯದ ಪ್ರಾಕ್ಟೀಸಿಂಗ್ ವೈದ್ಯರ ಪ್ರಮಾಣ ಶೇಕಡಾವಾರು ಎಷ್ಟು ಎಂದು ಹೇಳಬಲ್ಲಿರಾ? ಬೆಂಗಳೂರಿನಲ್ಲಿ ಅಂಗಡಿ ತೆರೆದಿಟ್ಟುಕೊಂಡು ಕೂತಿರುವ ಸಿಟಿ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಮಾಡುವವರು ಶೇ.40ರಷ್ಟು ಕಮೀಷ[n] ಕೊಡುತ್ತಿರುವುದು ನಿಜವಾ, ಸುಳ್ಳಾ? ಸಾಮಾನ್ಯವಾಗಿ ದೇಹ[ದ] ಒಂದು ಭಾಗದ ಎಂಆರ್‌ಐ ಸ್ಕ್ಯಾನ್‌ಗೆ 8000 ರೂ ತೆಗೆದುಕೊಳ್ಳುವ, ಸ್ಕ್ಯಾನಿಂಗ್ ದಂಧೆಕೋರರು ವೈದ್ಯ[ರ] ಕಮೀಷನ್ ಬೇಡ ಎಂದರೆ 4,000 ರೂ.ಗಳಿಗೂ ಸ್ಕ್ಯಾ[ನ್] ಮಾಡುತ್ತಾರೆ.

ಇವೆಲ್ಲವೂ ರೋಗಿಗಳಿಗೆ ಗೊತ್ತಿಲ್ಲ ಎಂ[ದು] ತಿಳಿಯಬೇಡಿ. ಸಾಕಷ್ಟು ಉತ್ಪ್ರೇಕ್ಷೆಯೊಂದಿಗೆ ಈ ವಿಚಾರ ಜನಸಾಮಾನ್ಯರಲ್ಲಿ ಚಲಾವಣೆಯಲ್ಲಿದೆ. ಆದರೆ, ಅನಿವಾರ್ಯ ಎಂದಷ್ಟೇ ನಿಮ್ಮಲ್ಲಿಗೆ ಬರುತ್ತಿದ್ದಾರೆ. ಕೆಲವೊಮ್ಮೆ, ವಿ[...] ವೈದ್ಯ ಗೆಳೆಯರಿಂದ ಕಾರ್ಪೋರೇಟ್ ಆಸ್ಪತ್ರೆಗಳ ಅಸ[ಲಿ] ಸತ್ಯ ಗೊತ್ತಾದಾಗ, ಜನಸಾಮಾನ್ಯರ ಉತ್ಪ್ರೇಕ್ಷೆಗಿಂತ ವಾಸ್ತವ ಕಠೋರವಾಗಿರುವುದು ಕಂಡು ಬರುತ್ತದೆ.

ಹಾಗಾಗಿಯೇ ವೈದ್ಯ ಮಹಾಶಯರುಗಳಲ್ಲಿ ಒಂ[ದು] ವಿನಂತಿ.

ಮೊದಲು ನಿಮ್ಮ ಆತ್ಮಸಾಕ್ಷಿಗಳನ್ನು ಜಾಗೃತವಾ[ಗಿ]ಸಿಕೊಳ್ಳಿ. ಇಡೀ ವೈದ್ಯ ಸಮುದಾಯವೇ ಮಾನ್ಯತೆಯ[ನ್ನು] ಕಂಡುಕೊಳ್ಳುತ್ತಿರುವ ಸಂದರ್ಭದಲ್ಲಿ ಯಾವುದೇ ಕಾಯ್ದೆಯ[ೂ] ನಿಮ್ಮನ್ನು ರಕ್ಷಿಸಲಾರದು. ಇಷ್ಟಕ್ಕೂ ನಿಮಗೆ ಜನಸಾಮಾ[ನ್ಯರ] ಕಷ್ಟ ಅರ್ಥವಾಗದೇ ಇದ್ದಲ್ಲಿ, ನಿಮ್ಮ ಪ್ರತಿಭಟನೆಯ ದಿ[ನ] ಸಂಜೆ ಈ ಅಂಕಣಕಾರನಿಗೆ ಆದ ಒಂದು ವ್ಯಕ್ತಿ[ಗತ] ಅನುಭವವನ್ನು ಇಲ್ಲಿ ಕಾಣಿಸಲಾಗಿದೆ. ನಿಮ್ಮ ಆತ್ಮಸಾ[ಕ್ಷಿ] ಏನನ್ನಿಸುತ್ತದೋ ಹಾಗೆ ನಡೆದುಕೊಳ್ಳಿ.

ಚಿಕ್ಕಮಗಳೂರಿನ ಒಬ್ಬ ಸಂಬಂಧಿಕರಿಗೆ ಮೆದುಳಿ[ನ] ರಕ್ತಸ್ರಾವವಾಗಿ ಪ್ರಜ್ಞೆ ಕಳೆದುಕೊಳ್ಳುವ ಹಂತಕ್ಕೆ ಜಾರುತ್ತಿದ್ದಾ[ಗ] ನನಗೆ ಒಂದು ಫೋನ್ ಕರೆ ಬಂದಿತು. ಸ್ಕ್ಯಾನ್ ವ[...] ಏನೆಂದು ಕೇಳಿದಾಗ ಅದು subdur[al] hemorrhage ಎಂದು ಗೊತ್ತಾಯಿತು. ಅಲ್ಲಿನ ವೈದ್ಯ[ರು] ಸಮೀಪದ ನಗರಗಳ ಖಾಸಗಿ ಆಸ್ಪತ್ರೆಗಳಿಗೆ ಹೋಗ[ಲು] ತಿಳಿಸಿ, 'ತಾವೇ ಅಲ್ಲಿನ ವೈದ್ಯರಿಗೆ ಹೇಳಿ ವ್ಯ[ವಸ್ಥೆ] ಮಾಡಿಸುವು'ದಾಗಿ ಹೇಳಿದ್ದರು. ಅದೇನೇ ಇದ್ದರೂ ನ[...] ಸರ್ಕಾರೀ ಆಸ್ಪತ್ರೆಗಳೇ ವಾಸಿ ಎಂದು ರೋಗಿಯ[ನ್ನು] ನಿಮ್ಹಾನ್ಸ್‌ಗೆ ಕರೆತರಲು ಹೇಳಿದೆ. ಇಂದಿಗೂ ನಿಮ್ಹಾ[ನ್ಸ್] ಮತ್ತು ಜಯದೇವ ಆಸ್ಪತ್ರೆಗಳ ಹೇಳತೀರ[ದ] ರೋಗಿದಟ್ಟಣೆಗಳ ಹೊರತಾಗಿಯೂ ಅತ್ಯುತ್ತಮ ಸೇ[ವೆ] ಸಲ್ಲಿಸುತ್ತಿವೆ. ಯಾವುದೇ ಖಾಸಗಿ ಆಸ್ಪತ್ರೆಗಳಿಗಿಂತ ಮಿಗಿಲಾ[ಗಿ].

ಅಲ್ಲಿ ಕೇವಲ 18 ಗಂಟೆಗಳ ಕಾಲ ಮಾ[...] ಇಟ್ಟುಕೊಂಡಿದ್ದರು. ಇನ್ನೂ ಒಮ್ಮೆ ಸಿಟಿ ಸ್ಕ್ಯಾನ್ ಹಾ[ಗೂ] ಇನ್ನಿತರ ಪರೀಕ್ಷೆಗಳನ್ನು ಮಾಡಿದರು; ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿದರು. ಮತ್ತು ಮರುದಿನ ಡಿಸ್‌ಚಾರ್ಜ್ ಮಾಡಿದರು. ಒಟ್ಟು ಖರ್ಚು 5,750 ರೂ.ಗಳು ಆಯಿ[ತು]. ಯಾವುದೇ ದೊಡ್ಡ ಖಾಸಗಿ ಆಸ್ಪತ್ರೆಗೆ ಹೋಗಿದ್ದರೆ (ಬ[...] ಆಸ್ಪತ್ರೆಗಳಲ್ಲಿ ನರರೋಗ ಶಸ್ತ್ರಚಿಕಿತ್ಸಕರು ಇರುವುದಿಲ್ಲ) ಕ[ನಿಷ್ಠ] 1 ಲಕ್ಷ ರೂ ಖರ್ಚಾಗುತ್ತಿತ್ತು. ಹೌದು, ಖಾಸಗಿ ಆಸ್ಪತ್ರೆಗ[ಳು] ಉಚಿತವಾಗಿ ಚಿಕಿತ್ಸೆ ನೀಡಲು ದುಡ್ಡಿನ ಗಿಡಗಳನ್ನೇನ[ೂ] ಬೆಳೆಸಿಕೊಂಡಿರುವುದಿಲ್ಲ, ಆದರೆ ಇದೇ ಶಸ್ತ್ರಚಿಕಿತ್ಸೆಯ[ನ್ನು] ಕನಿಷ್ಠ 25,000 ರೂ.ಗಳಲ್ಲಿ ನಡೆಸಲು ಸಾಧ್ಯ. ಅಂತಹು[ದರಲ್ಲಿ] 1 ಲಕ್ಷ ರೂ. ಸುಲಿಗೆ ಮಾಡುವುದಕ್ಕೆ ಯಾವ ಸಮಜಾಯಿ[ಷಿ] ಕೊಡಬಲ್ಲಿರಿ? ಹಣದ ದಾಹದ ಹೊರತಾಗಿ?

ನಿಮ್ಹಾನ್ಸ್‌ನಲ್ಲಿ ಒಳಗೆ ತುರ್ತು ಶಸ್ತ್ರಚಿಕಿ[ತ್ಸೆ] ನಡೆಯುತ್ತಿರುವಾಗ, ಒಬ್ಬ ಮಧ್ಯವಯಸ್ಸು ದಾಟಿದ ಮಹಿ[ಳೆ] ಬಂದು ನನ್ನ ಅತ್ತಿಗೆಯ ಹತ್ತಿರ ಮೊಬೈಲ್ ಫೋ[ನ್] ಕೇಳಿದ್ದಾರೆ. ನನ್ನ ಅಕ್ಕ ಆ ಮಹಿಳೆ ಕೇಳಿದ ನಂಬರ[ಿಗೆ] ಫೋನ್ ಮಾಡಿಕೊಟ್ಟಿದ್ದಾರೆ. ಆಕೆ ಮಾತನಾಡಿ, ಇನ್ನೊಂ[ದು] ಕಡೆಯ ವ್ಯಕ್ತಿಯ ಬಳಿ ಮಾರನೆಯ ದಿನ ಹಣ ತಂದುಕೊ[ಡು] ಎಂದು ಗೋಗರೆದಿದ್ದಾರೆ. ಆ ಕಡೆಯ ವ್ಯಕ್ತಿ ಆಗ[...] ಎಂದಿರಬೇಕು. ಈಕೆ ಪರಿಪರಿಯಾಗಿ ಕೇಳಿಕೊಂಡಿದ್ದಾ[ರೆ]. ಅಂತಹ ಖಚಿತ ಭರವಸೆಯೇನೂ ಇಲ್ಲದೇ ಈಕೆ ಫೋ[ನ್] ಕಟ್ ಮಾಡಿದ್ದಾರೆ. ತನ್ನ ಕರವಸ್ತ್ರದಲ್ಲಿ ಕಟ್ಟಿಕೊಂಡಿದ್ದ ಚಿ[ಲ್ಲರೆ] ಕಾಸನ್ನು ತೆಗೆದು, ಫೋನ್‌ನ ಖರ್ಚು ನೀಡ[ಲು] ಹೊರಟಿದ್ದಾರೆ. ಆಕೆ ಆಸ್ಪತ್ರೆಯಲ್ಲಿ ಇದ್ದದ್ದು, ಬಹಳ ಕ[...] ಪರಿಸ್ಥಿತಿಯಲ್ಲಿದ್ದ ತನ್ನ ಗಂಡನನ್ನು ಉಳಿಸಿಕೊಳ್ಳ[ಲು] ಫೋನ್‌ನಲ್ಲಿ ಕೇಳಿದ್ದು ಕೇವಲ 200 ರೂ. ಫೋ[ನ್] ಕೊಟ್ಟವರು ಬಹಳ ನೊಂದುಕೊಂಡು, ಆಕೆ ಕೊಡ[ಲು] ಬಂದ ಹಣವನ್ನು ನಿರಾಕರಿಸಿ, ತಾವೇ 500 ರ[ೂ] ಕೊಟ್ಟಿದ್ದಾರೆ. ಹಣ ತೆಗೆದುಕೊಳ್ಳಲು ಹಿಂಜರಿಯು[ತ್ತಾ] ನಂತರ ತೆಗೆದುಕೊಂಡ ಮಹಿಳೆ, ನಂತರ ಬಿಕ್ಕಿಬಿಕ್ಕಿ ಅತ್ತಿದ್ದಾ[ರೆ].

ಹಣವಿಲ್ಲ ಎನ್ನುವ ಒಂದೇ ಕಾರಣಕ್ಕೆ ಪ್ರತಿನಿತ್ಯ ಎಷ್ಟು ಜನ ಸಾಯುತ್ತಿದ್ದಾರೆ. ವರ್ಷಕ್ಕೆ ಹತ್ತೋ, ಇಪ್ಪತ್ತೋ ಜ[ನರಿಗೆ] ಉಚಿತವಾಗಿ ಚಿಕಿತ್ಸೆ ನೀಡಿ, ವರ್ಷ ಪೂರ್ತಿ ಮಾಡು[ವ] ಸುಲಿಗೆಯನ್ನು ಸಮರ್ಥಿಸಿಕೊಳ್ಳುವ ವೈದ್ಯರು ಇದ[ನ್ನು] ಗಮನಿಸಬೇಕು. ಬದಲಾವಣೆ ನಿಮ್ಮಿಂದಲೂ ಸಾಧ್ಯ. ಇನ[್ನು] ಸ್ವಲ್ಪ ವಿಶಾಲವಾಗಿ ಆಲೋಚನೆ ಮಾಡಿ. ∎

ರವಿ ಆತ್ಮಹತ್ಯೆ ಮತ್ತು ರಾಜಕೀಯ ಕಿತಾಪತಿ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಬದುಕು ತುಂಬಾ ಸಂಕೀರ್ಣವಾದದ್ದು. ಪ್ರೀತಿ ಪ್ರೇಮ, ಸುಖದುಃಖ, ಸಾವುನೋವು, ಸಂತೋಷ ನಿರಾಶೆ, ...ಷ್ಟನಷ್ಟ-ಎಲ್ಲವೂ ಈ ಬದುಕಿನಲ್ಲಿ ಎಲ್ಲರೂ ಎದುರಿಸುವಂತದ್ದೇ. ಇಲ್ಲಿ ಯಾವುದೂ ಶಾಶ್ವತವಲ್ಲ. ಸಂತೋಷವನ್ನು ಸ್ವೀಕರಿಸುತ್ತಾ, ಕಷ್ಟವನ್ನು ಸಹಿಸುತ್ತಾ ಸಾಗುವುದೇ ಎಲ್ಲರ ಬದುಕಿನ ಕರ್ಮ.

ಈ ಹಿಂದೆ ಒಮ್ಮೆ ಹೇಳಿದ್ದಂತೆ ಯಾವುದಕ್ಕೂ ಆತ್ಮಹತ್ಯೆ ಎಂಬುದು ಉತ್ತರವಾಗಲಿ, ಪರಿಹಾರವಾಗಲಿ ಅಲ್ಲವೇ ಅಲ್ಲ. ಆದರೆ ಅದು ಒಂದು ಮಾನಸಿಕ ರೋಗದಂತೆ ಸಮಾಜವನ್ನು ಕಾಡುತ್ತಲೇ ಇದೆ. ಅದಕ್ಕೆ ಇತ್ತೀಚಿನ ದಿನಗಳಲ್ಲಿ ನಂದಿತಾಳಂತಹ ತೀರ್ಥಹಳ್ಳಿಯ ಶಾಲಾಬಾಲಕಿ ಮತ್ತು ಡಿ.ಕೆ.ರವಿಯಂತಹ ಐಎಎಸ್ ಅಧಿಕಾರಿ ಬಲಿಯಾಗಿರುವುದು ಒಂದು ದೊಡ್ಡ ದುರಂತ.

ಆದರೆ ಈ ಎರಡೂ ಆತ್ಮಹತ್ಯಾ ಪ್ರಕರಣಗಳ ಸುತ್ತ ವಿರೋಧ ಪಕ್ಷಗಳು ಮಾಡಿರುವ ರಾಜಕೀಯ ಕಿತಾಪತಿ ಅಸಹ್ಯಕರವಾದದ್ದು. ನಂದಿತಾ ಆತ್ಮಹತ್ಯೆ ಮಾಡಿಕೊಂಡಿದ್ದು ಸ್ಪಷ್ಟವಾಗಿದ್ದರೂ, ಆಕೆಯ ತಂದೆಯನ್ನು ತಮ್ಮ ಕೀಲುಗೊಂಬೆಯಂತೆ ಬಳಸಿಕೊಂಡ ಬಿಜೆಪಿಯ ನಾಯಕರು ಮಾಧ್ಯಮಗಳಲ್ಲಿ ಆಕೆಯ ಮೇಲೆ 'ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ' ಮಾಡಿಸಿದರು. ಬಾಯಿಗೆ ಬಂದುದನ್ನು ವರದಿ ಮಾಡಿ ಶಿವಮೊಗ್ಗ ಜಿಲ್ಲೆಯನ್ನೇ ಬಂದ್ ಮಾಡಿಸಿದರು. ಅದೆಲ್ಲೆಲ್ಲಿಂದಲೋ ಚೆಡ್ಡಿಗಳನ್ನು ಕರೆಸಿ ಮುಸಲ್ಮಾನ ಯುವಕರ ಮತ್ತು ಆಸ್ತಿಪಾಸ್ತಿಗಳ ಮೇಲೆ ದಾಳಿ ಮಾಡಿಸಿದರು. ಆದರೆ ಕ್ರಮೇಣ ರಾಜ್ಯ ಪೊಲೀಸರು ನಂದಿತಾಳನ್ನು ಯಾರೂ ಅಪಹರಿಸಿರಲಿಲ್ಲ, ಆಕೆಯ ಮೇಲೆ ಅತ್ಯಾಚಾರವೂ ನಡೆದಿಲ್ಲ, ಆಕೆ ಓದುವ ಒತ್ತಡ ತಾಳಲಾರದೆ ವಿಷ ಸೇವಿಸಿದಳು, ಅದನ್ನು ವೈದ್ಯರಿಗೆ ಆಕೆಯ ತಂದೆ ತಿಳಿಸಲಿಲ್ಲವಾದ್ದರಿಂದ ಸರಿಯಾದ ಚಿಕಿತ್ಸೆ ಸಿಗದೆ ಸತ್ತಳು ಎಂಬುದನ್ನು ಬಯಲು ಮಾಡಿದಾಗ ವಿಧಿ ಇಲ್ಲದೆ ಬಿಜೆಪಿಗಳು ತೆಪ್ಪಗಾದರು. ಆಮೇಲೆ ಅವರು ಪಿಎಫ್ಐ ಸಂಘಟನೆ ಆಯೋಜಿಸಿದ್ದ ರ್‍ಯಾಲಿ ಮೇಲೆ ದಾಳಿ ಮಾಡುವ ಮೂಲಕ ಶಿವಮೊಗ್ಗೆಗೆ ಬೆಂಕಿ ಹಚ್ಚಿ ತಮ್ಮ ವಿಷ ಕಾರಿಕೊಂಡದ್ದೂ ಆಯಿತು.

ಈಗ ರವಿ ಸರದಿ.

ರವಿಯ ಸಾವಿನ ಸುದ್ದಿ ಕೇಳಿ ಎಲ್ಲರಂತೆ ನಮ್ಮ ತಂಡಕ್ಕೂ ಶಾಕ್ ಮತ್ತು ದುಃಖವಾಯಿತು. ಯಾಕೆಂದರೆ ಆತ ಇನ್ನೂ ಯುವ ಅಧಿಕಾರಿ. ಕಷ್ಟದಲ್ಲಿದ್ದ ಜನರ ಪರವಾಗಿ ಕೆಲಸ ಮಾಡುತ್ತಿದ್ದ ಪ್ರಾಮಾಣಿಕ ವ್ಯಕ್ತಿ. ಬಡತನದ ಬೇಗೆಯಲ್ಲೇ ಬೆಳೆದೂ ಐಎಎಸ್ ಪಾಸ್ ಮಾಡಿದ ಸಾಹಸಿ. ಕೋಲಾರ ಜಿಲ್ಲೆಯಲ್ಲಿ ಜನರ ಮೆಚ್ಚುಗೆ ಮತ್ತು ಅಭಿಮಾನವನ್ನು ಗಳಿಸಿದ್ದ ವ್ಯಕ್ತಿ. ಬೆಂಗಳೂರಿಗೆ ವರ್ಗವಾಗಿ ಬಂದ ನಂತರವೂ ರಿಯಲ್ ಎಸ್ಟೇಟ್ ಮತ್ತು ಬಿಲ್ಡರ್ ಲಾಬಿಗಳಿಂದ ಕೋಟ್ಯಂತರ ರೂಪಾಯಿ ತೆರಿಗೆ ಸಂಗ್ರಹಿಸಿದ ಚಾಣಾಕ್ಷ. ಇನ್ನೂ 35ರ ಹರೆಯ. ಇಂತಹ ರವಿ ಇನ್ನಿಲ್ಲ ಎಂದರೆ ಯಾರಿಗೆ ದುಃಖವಾವುದಿಲ್ಲ ಹೇಳಿ.

ಹೌದು ರವಿ ಭ್ರಷ್ಟಗೊಂಡಿರುವ ವ್ಯವಸ್ಥೆಯಲ್ಲಿ ಪ್ರಾಮಾಣಿಕರು ಎದುರಿಸುವ ಸಕಲ ಸಮಸ್ಯೆಗಳನ್ನೂ ಎದುರಿಸಿದ್ದರು. ಅವರ ಮೇಲೆ ರಾಜಕೀಯ, ರಿಯಲ್ ಎಸ್ಟೇಟ್, ಮರಳು ಮಾಫಿಯಾ, ಬಿಲ್ಡರ್ ಲಾಬಿ ಇತ್ಯಾದಿಗಳ ಒತ್ತಡಗಳು ಇದ್ದೇ ಇದ್ದವು. ಇದೆಲ್ಲದರೊಂದಿಗೆ ಬದುಕು ಎಂಬ ಸಂಕೀರ್ಣ ಸವಾಲೂ ಕೈ ಜೋಡಿಸಿತ್ತು. ಈ ಎಲ್ಲದರ ಹಿನ್ನೆಲೆಯಲ್ಲಿ ಅವರನ್ನು ಸಾವಿಗೆ ದೂಡಿದ ಅಂಶ ಯಾವುದು ಎಂದು ಅರ್ಥಮಾಡಿಕೊಳ್ಳುವುದು ಮುಖ್ಯವಾಗುತ್ತದೆ.

ರವಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅವರ ಪತ್ನಿ ಮತ್ತು ಮಾವ ಪೊಲೀಸರಿಗೆ ದೂರಿದ್ದರೂ ವಿರೋಧ ಪಕ್ಷಗಳು ಮತ್ತು ಮಾಧ್ಯಮಗಳು ಅದೊಂದು ಕೊಲೆ ಎಂದು ಬೊಬ್ಬೆ ಹಾಕಲಾರಂಭಿಸಿದವು. ಅದಕ್ಕೆ ಕಾರಣ ಬಿಲ್ಡರ್ ಲಾಬಿ ಎಂದೆಲ್ಲ ಚೀರಾಡಿದರು. ಕೋಲಾರದಿಂದ ಅವರನ್ನು ಬೆಂಗಳೂರಿಗೆ ಬಲವಂತದಿಂದ ವರ್ಗಾ ಮಾಡಲಾಗಿತ್ತು; ಹಾಗೊಮ್ಮೆ ಅವರು ವರ್ಗಾ ಆಗದಿದ್ದರೆ ಅವರ ಕೊಲೆ ನಡೆಯುತ್ತಿರಲಿಲ್ಲ ಎಂದೆಲ್ಲ ಉದ್ವೇಗದಲ್ಲಿ ಬಿತ್ತರಿಸಲಾಯಿತು. ಓರ್ವ ದಕ್ಷ ಮತ್ತು ಜನಪರ ಅಧಿಕಾರಿಯ ಅಸಹಜ ಸಾವಿನ ಸುದ್ದಿ ಕೇಳಿ ಸಹಜವಾಗಿಯೇ ರಾಜ್ಯಾದ್ಯಂತ ಜನ ಭಾವುಕರಾದರು. ಅದನ್ನೇ ಬಂಡವಾಳ ಮಾಡಿಕೊಂಡ ಬಿಜೆಪಿ ಮತ್ತು ಜನತಾದಳದ ನಾಯಕರು ಬೀದಿಗಿಳಿದರು. ನಂದಿತಾಳ ಪ್ರಕರಣದಲ್ಲಿ ತಮ್ಮ ಬೇಳೆ ಬೇಯಿಸಿಕೊಂಡಂತೆ ರವಿ ಪ್ರಕರಣದಲ್ಲೂ ಪ್ರಯತ್ನಿಸುತ್ತಿದ್ದಾರೆ.

ನಂದಿತಾ ಪ್ರಕರಣದಲ್ಲಿ ಹೇಗೆ ಪತ್ರಿಕೆ ಭಾವೋದ್ರಿಕ್ತತೆಗೆ ತುತ್ತಾಗದೆ ಫ್ಯಾಕ್ಟ್ಸ್‌ಗೆ ಒತ್ತು ಕೊಟ್ಟಿತ್ತೋ ಹಾಗೆ ಈ ಬಾರಿಯೂ ಕೆಲಸ ಪ್ರಾರಂಭಿಸಿತು. ನಮಗೆ ಗೊತ್ತಾಗಿದ್ದೇನೆಂದರೆ: ಹೌದು, ರವಿ ದಿಟ್ಟ ಅಧಿಕಾರಿಯಾಗಿದ್ದರಿಂದ ಅವರು ಲಾಬಿಗಳ ಒತ್ತಡಕ್ಕೆ ಶರಣಾಗುವ ಪೈಕಿಯಲ್ಲ; ಆದರೆ ಅವರ ಖಾಸಗಿ ಬದುಕಿನಲ್ಲಿ ಅವರು ತಂದುಕೊಂಡಿದ್ದ ಒತ್ತಡವನ್ನು ಸಹಿಸಲಾಗದೆ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಗೆಂದು ಅವರ ಮೊಬೈಲ್ ಫೋನ್‌ನ ಕಾಲ್ ರೆಕಾರ್ಡ್ಸ್ ಮತ್ತು ಎಸ್ಎಂಎಸ್‌ಗಳೇ ಹೇಳುತ್ತಿವೆ.

ಖಾಸಗಿ ಬದುಕಿನ ಜಟಿಲತೆಯನ್ನು ಎದುರಿಸಲಾಗದೆ ರವಿ ತಮ್ಮ ಸ್ನೇಹಿತೆಗೆ ಕೊನೆ ಬಾರಿಗೆ ಕರೆ ಮಾಡಿ "ನಾನು ಡ್ರಾಸ್ಟಿಕ್ ಸ್ಟೆಪ್ ತೆಗೆದುಕೊಳ್ಳುತ್ತಿದ್ದೇನೆ" ಎಂದಿದ್ದಾರೆ. ಆಮೇಲೆ ಆಕೆಗೆ "ಮುಂದಿನ ಜನ್ಮದಲ್ಲಿ ನಿನ್ನನ್ನು ಭೇಟಿ ಆಗುತ್ತೇನೆ" ಎಂದು ಎಸ್ಎಂಎಸ್ ಕಳುಹಿಸಿದ್ದಾರೆ.

ಅಷ್ಟೇ ಅಲ್ಲ, ರವಿಯ ಆತ್ಮಹತ್ಯೆಯ ಸುದ್ದಿ ಗೊತ್ತಾಗುತ್ತಿದ್ದಂತೆ ಆಕೆ ತನಗೂ ಮತ್ತು ರವಿಗೂ ಆಪ್ತರಾಗಿದ್ದ ಮತ್ತೋರ್ವ ಐಪಿಎಸ್ ಅಧಿಕಾರಿಗೆ ಫೋನ್ ಮಾಡಿ "ಅಯ್ಯೋ, ರವಿ ಹೆಚ್ಚೆಂದರೆ ನಮ್ಮ ಗೆಳೆತನಕ್ಕೆ ಅಂತ್ಯ ಹೇಳುತ್ತಾನೆಂದುಕೊಂಡಿದ್ದೆ. ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆಂದು ನಾನು ಕನಸು ಮನಸ್ಸಿನಲ್ಲಿ ಊಹಿಸಿರಲೂ ಇಲ್ಲ" ಎಂದು ಕಣ್ಣೀರಿಟ್ಟರು. ಈಗ ಆ ಅಧಿಕಾರಿಣಿ ಸಿಐಡಿ ತಂಡಕ್ಕೆ ತಮ್ಮೆಲ್ಲ ಮೊಬೈಲ್ ಫೋನ್‌ಗಳನ್ನು ಮತ್ತು ಐ ಪ್ಯಾಡ್‌ಅನ್ನು ಕೊಟ್ಟಿದ್ದಾರಲ್ಲದೆ ಇವತ್ತು ಗುರುವಾರ ವಿಚಾರಣೆಗೂ ಹಾಜರಾಗಿದ್ದಾರೆ.

ಈ ಸಂಗತಿಗಳು ಕುಮಾರಸ್ವಾಮಿಯವರಿಗಾಗಲಿ, ಜಗದೀಶ್ ಶೆಟ್ಟರ್ ಅವರಿಗಾಗಲಿ ಗೊತ್ತಿಲ್ಲ ಎಂದೇನಲ್ಲ. ಅವರಿಗೆ ಗೊತ್ತಿದ್ದೂ ಜನರನ್ನು ಭಾವೋದ್ರೇಕಗೊಳಿಸಿ ರಾಜಕೀಯ ಕಿತಾಪತಿ ಮಾಡುತ್ತಿದ್ದಾರೆ. ರಾಜಕಾರಣಗಳ ಈ ತಂತ್ರವನ್ನು ಅರಿಯದ ಆತನ ಹೆತ್ತವರೇ ಈಗ ಇವರೆಲ್ಲರ ಕೀಲುಗೊಂಬೆಗಳಾಗಿದ್ದಾರೆ.

ರವಿ ಮತ್ತು ಆಕೆಯ ನಡುವಿನ ಸ್ನೇಹ ಎಂತಹದ್ದು ಎಂಬುದು ಅವರ ಖಾಸಗಿ ವಿಚಾರ. ಆದರೆ ಎಂತೆಂತಹದ್ದೋ ಲಾಬಿಗಳನ್ನು, ಮಾಫಿಯಾಗಳನ್ನು ಎದುರಿಸಿದ್ದ ರವಿ ತನ್ನ ಬದುಕಿನಲ್ಲಿನ ಈ ಒಂದು ಒತ್ತಡವನ್ನು ಸಹಿಸಲಾಗದೆ ಸಾವಿಗೆ ಶರಣಾಗಿದ್ದು ದೊಡ್ಡ ದುರಂತವೇ ಸರಿ. ರವಿ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ತಾನು ನಿಜಕ್ಕೂ ಪ್ರೀತಿಸುತ್ತಿದ್ದವರಿಗೆ ತನ್ನ ಈ ಕೃತ್ಯ ನೆಮ್ಮದಿ ಕೊಡುವುದಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕಿತ್ತು, ತಾನು ಪ್ರೀತಿಸುತ್ತಿದ್ದ ವ್ಯಕ್ತಿಗೆ ಶಾಶ್ವತ ಕಳಂಕ ತಟ್ಟುತ್ತದೆ ಎಂಬ ವಿವೇಚನೆ ಮಾಡಬೇಕಿತ್ತು. ಈ ವಿವೇಚನಾರಹಿತ ಹತ್ಯೆ ಮಾಡಿಕೊಳ್ಳುವ ಮುನ್ನ ಸ್ವಲ್ಪ ಸಂಯಮದಿಂದ ಯೋಚಿಸಿದ್ದರೂ ತನ್ನನ್ನೇ ನಂಬಿ ಕೈಹಿಡಿದಿದ್ದ ಪತ್ನಿಯನ್ನು ಹೀಗೆ ತೊರೆಯುತ್ತಿರಲಿಲ್ಲ, ಬಡವರಾಗಿದ್ದರೂ ತನ್ನನ್ನು ಸಾಕಿ ಸಲುಹಿದ ಅಪ್ಪ ಅಮ್ಮಂದಿರನ್ನು ಕಣ್ಣೀರ ಮಡಲಿನಲ್ಲಿ ಹಾಕುತ್ತಿರಲಿಲ್ಲ, ತನ್ನನ್ನೇ ನಂಬಿದ್ದ ಜನತೆಗೆ ಇಂತಹ ಅನ್ಯಾಯ ಮಾಡುತ್ತಿರಲಿಲ್ಲ...

ಅದಕ್ಕೆ ಮೊದಲೇ ಅಂದದ್ದು ಬದುಕು ತುಂಬಾ ಸಂಕೀರ್ಣವಾದದ್ದು; ಆದರೆ ಯಾವ ಕಾರಣಕ್ಕೂ ಆತ್ಮಹತ್ಯೆ ಅದಕ್ಕೆ ಪರಿಹಾರವಲ್ಲ ಎಂದು... ■


ಹಿಂದೂ-ವೀರಶೈವ-ಲಿಂಗಾಯತ: ಏನಿದರ ಮರ್ಮ?

ಹಿಂದೂವಾದಿ ಸಂಶೋಧಕ ಡಾ.ಎಂ.ಚಿದಾನಂದ ಮೂರ್ತಿ ಅವರು ಕಳೆದ ಅನೇಕ ದಶಕಗಳಿಂದ 'ಹಿಂದೂ ಎಂದರೆ ವೀರಶೈವ. ವೀರಶೈವ ಎಂದರೆ ಲಿಂಗಾಯತ. ಆದ್ದರಿಂದ ಲಿಂಗಾಯತ ಎಂದರೆ ಹಿಂದೂ' ಎಂಬ ಮೊಂಡು ವಾದವನ್ನು ಪ್ರತಿಪಾದಿಸುತ್ತಲೇ ಇದ್ದಾರೆ. ಅವರು ಇದೇ ಮಾರ್ಚ್ 16ರಂದು ವಿಜಯವಾಣಿಯಲ್ಲಿ ಬರೆದ "ವೀರಶೈವ(ಲಿಂಗಾಯತ)ವು ಹಿಂದೂ ಧರ್ಮದ ಶಾಖೆ" ಎಂಬ ಲೇಖನದಲ್ಲಿ ಮತ್ತೆ ಅದೇ ಹಳೆಯ ರಾಗ ತೆಗೆದಿದ್ದಾರೆ. ಅವರು ತಮ್ಮ ಈ ವಿಫಲ ಯತ್ನದಿಂದ ಎಂದೂ ಹತಾಶರಾಗಲಿಲ್ಲ. ಹಾಡಿದ್ದನ್ನೇ ಹಾಡುತ್ತಿರುತ್ತಾರೆ.

"ಎನ್ನ ಬಂದ ಭವಂಗಳನ್ನು ಪರಿಹರಿಸಿ, ಎನಗೆ ಭಕ್ತಿ ...ಸುಮತಿ ತೋರಿ, ಎನ್ನ ಹೊಂದಿದ ಶೈವಮಾರ್ಗಂಗಳನತಿ ...ಳೆದು, ನಿಜವೀರಶೈವಾಚಾರವನರುಹಿ ತೋರಿ .. .. ..
...ನ್ನಬಸವಣ್ಣ ಎನ್ನನಾಗುಮಾಡಿ ಉಳುಹಿದನಾಗಿ .. .. ..
...ನು ಚೆನ್ನಬಸವಣ್ಣನ ಶ್ರೀಪಾದಕೆ ನಮೋ ನಮೋ ...ಎಂದು ಬದುಕುವೆನಾ" ಎಂಬ ಬಸವಣ್ಣನವರ ಹೆಚ್ಚಿನ ವಚನವನ್ನು ...ತ್ತಿ ಹಿಡಿಯುತ್ತ ವೀರಶೈವ ಮತ್ತು ಲಿಂಗಾಯತ ಒಂದೇ ಎಂಬ ವಾದವನ್ನು ಮಂಡಿಸುತ್ತಲೇ ಇದ್ದಾರೆ. ಆದರೆ ...ಚಾಂಶವೇನು? ('ಬಸವಣ್ಣನ ಉದರದಲ್ಲಿ ಹುಟ್ಟಿತ್ತು ಲಿಂಗ' ಎಂದು ಚೆನ್ನಬಸವಣ್ಣನವರು ಹೇಳುವ ಮೂಲಕ ಬಸವಣ್ಣನವರೇ ಇಷ್ಟಲಿಂಗದ ಜನಕ ಎಂದು ಸೂಚಿಸಿದ್ದಾರೆ.)

ಇಲ್ಲಿಯವರೆಗೆ ಬಸವಣ್ಣನವರ 960 ಷಟ್‌ಸ್ಥಲದ ವಚನಗಳು ಸಿಕ್ಕಿವೆ. 454 ಹೆಚ್ಚಿನ ವಚನಗಳು ಸಿಕ್ಕಿವೆ. 12ನೇ ಶತಮಾನ ವಚನಯುಗವಾದರೆ 15ನೇ ಶತಮಾನ ವಚನಸಂಕಲನ ಯುಗ. 12ನೇ ಶತಮಾನದ ಯಾವುದೇ ವಚನಕಾರರ ಹಸ್ತಪ್ರತಿಗಳು ...ದ್ದು 15ನೇ ಶತಮಾನದಿಂದೀಚೆಗೆ. ವಚನಸಂಕಲನದ ...ಸಂದರ್ಭದಲ್ಲಿ ಸಿಕ್ಕ ವಚನಗಳನ್ನು ಷಟ್‌ಸ್ಥಲಗಳಿಗನುಗುಣವಾಗಿ ...ಂಗಡಿಸಿ ಸಂಕಲಿಸಲಾಗಿದೆ. ಬಸವಣ್ಣನವರ ಷಟ್‌ಸ್ಥಲದ ...ವಚನಗಳಂತೆ ಅಲ್ಲಮಪ್ರಭುದೇವರ ಮತ್ತು ಚೆನ್ನಬಸವಣ್ಣನವರ ಷಟ್‌ಸ್ಥಲದ ವಚನಗಳೂ ಸಿಕ್ಕಿವೆ. ಆದರೆ ಈ ಯಾವುದೇ ಷಟ್‌ಸ್ಥಲದ ವಚನಗಳಲ್ಲಿ 'ವೀರಶೈವ' ಪದ ಬಳಕೆಯಾಗಿಲ್ಲ. 13ನೇ ಶತಮಾನದ ಬಸವಧರ್ಮದ ಪ್ರತಿಪಾದಕರಾದ ಹರಿಹರ, ...ಶಾಂಕ ಮತ್ತು ಕೆರೆಯಪದ್ಮರಸರ ಕೃತಿಗಳಲ್ಲಿ 'ವೀರಶೈವ' ...ಪದ ಪ್ರಯೋಗವಾಗಿಲ್ಲ. ಬಸವಣ್ಣನವರ ಸಮಕಾಲೀನರಾದ ...ಸೋಮನಾಥರ 'ಬಸವ ಪುರಾಣಂ' ತೆಲುಗು ಕೃತಿಯಲ್ಲಿ ...ಸಹ ಈ ಪದ ಬಳಕೆಯಾಗಿಲ್ಲ, ಪಾಲ್ಕುರಿಕೆ ಸೋಮನಾಥರ ...ತೆಲುಗು ಬಸವಪುರಾಣದಲ್ಲಿಯೂ ವೀರಶೈವ ಪದ ಬಳಕೆಯಾಗಿಲ್ಲ. ಈತನ ಕೃತಿಯ ಆಧಾರದ ಮೇಲೆ ಭೀಮಕವಿಯ 'ಬಸವಪುರಾಣ' (1368) ರಚನೆಯಾಗಿದೆ. ಇಲ್ಲಿ ಮೊದಲಬಾರಿಗೆ 'ವೀರಮಾಹೇಶ್ವರ' ಬದಲಿಗೆ 'ವೀರಶೈವ' ಪದ ಬಳಕೆಯಾಗಿದೆ. ಅಂದರೆ 14ನೇ ಶತಮಾನದವರೆಗೆ ಕನ್ನಡ ಭಾಷೆಯಲ್ಲಿ 'ವೀರಶೈವ' ಪದ ಬಳಕೆಯಾಗಿರಲಿಲ್ಲ.

ಇನ್ನು ಷಟ್‌ಸ್ಥಲ ವಚನಗಳಲ್ಲಿ ಸಿಗದ 'ವೀರಶೈವ' ಹೆಚ್ಚಿನ ವಚನಗಳಲ್ಲಿ ಹೇಗೆ ಕಂಡುಬಂದಿತು ಎಂಬುದರ ಕುರಿತು ಚಿಂತಿಸುವುದು ಅವಶ್ಯವಾಗಿದೆ. ಷಟ್‌ಸ್ಥಲ ವಚನಕಟ್ಟುಗಳು ಸಿದ್ಧವಾಗುವ ಸಂದರ್ಭದಲ್ಲಿ 'ವೀರಶೈವ' ಪದಕ್ಕೆ ವಚನಸಾಹಿತ್ಯದಲ್ಲಿ ಮಹತ್ವವಿರಲಿಲ್ಲ. ನಂತರದ ಶತಮಾನಗಳಲ್ಲಿ ಆಚಾರ್ಯ ಪರಂಪರೆ (ಮೊದಲು ಚತುರಾಚಾರ್ಯ ನಂತರ 17ನೇ ಶತಮಾನದಲ್ಲಿ ಕಾಶಿ ವಿಶ್ವಾರಾಧ್ಯ ಸೇರಿ ಪಂಚಾಚಾರ್ಯ) ಬೆಳೆದಾಗ, ವಚನಗಳಲ್ಲಿ ವೀರಶೈವ ಪದ ಸೇರಿಸುವ ಹುನ್ನಾರ ಆರಂಭವಾಯಿತು. ಆದರೆ ಬಸವಣ್ಣ, ಅಲ್ಲಮಪ್ರಭುದೇವರು ಮತ್ತು ಚೆನ್ನಬಸವಣ್ಣನವರ ಷಟ್‌ಸ್ಥಲ ವಚನಕಟ್ಟುಗಳು ಅದಾಗಲೇ ಭಕ್ತರ ಮನೆಗಳಲ್ಲಿ ರಾರಾಜಿಸುತ್ತಿದ್ದ ಕಾರಣ, ಆ ಹಸ್ತಪ್ರತಿಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಏನೂ ಮಾಡಲಿಕ್ಕಾಗಲಿಲ್ಲ. ನಂತರ ಸಿಕ್ಕ ಹೆಚ್ಚಿನ ವಚನಗಳ ಹಸ್ತಪ್ರತಿಗಳಲ್ಲಿ 'ವೀರಶೈವ' ಪದ ಸೇರಿಸುವ ಮೂಲಕ ಹಸ್ತಕ್ಷೇಪ ಮಾಡಿದರು. ಅಂಥ ಹಸ್ತಕ್ಷೇಪದ ಹೆಚ್ಚಿನ ವಚನಗಳನ್ನು ತೆಗೆದುಕೊಂಡು ಚಿದಾನಂದಮೂರ್ತಿಗಳು ವಾದ ಮಾಡುತ್ತಿದ್ದಾರೆ.



"ದೇವನಾಮ ಸೊಗಸದು ಲಿಂಗಾಯತಂಗೆ ಮಾನವನಾಮ ಸೊಗಸದು ಜಂಗಮ ಭಕ್ತಂಗೆ" ಎಂಬ ಚೆನ್ನಬಸವಣ್ಣನವರ ವಚನ ಪ್ರಾದಿ ಸ್ಥಲದಲ್ಲಿದೆ. ವಚನಗಳಲ್ಲಿ ಲಿಂಗಾಯತಕ್ಕಿಂತಲೂ 'ಲಿಂಗವಂತ' ಪದದ ಬಳಕೆ ಹೆಚ್ಚಾಗಿದೆ. ಏಕೆಂದರೆ ಲಿಂಗವು ಅಂಗಕ್ಕೆ ಬರವಂಥದ್ದು ಲಿಂಗಾಯತ. ಇದು ಮೊದಲ ಘಟ್ಟ. ಎರಡನೇ ಘಟ್ಟ ಲಿಂಗಸ್ವಾಯತ. ಮೂರನೇ ಘಟ್ಟ ಲಿಂಗಸನ್ನಿಹಿತ. ಈ ಮೂರೂ ಘಟ್ಟಗಳನ್ನು ತಲುಪಿದವನು ಲಿಂಗವಂತ. ಲಿಂಗಾಯತದಿಂದ ಆರಂಭವಾಗಿ ಲಿಂಗವಂತದಲ್ಲಿ ಕೊನೆಮುಟ್ಟುವುದರಿಂದ ವಚನಗಳಲ್ಲಿ 'ಲಿಂಗವಂತ' ಪದ ಬಳಕೆಯಾಗಿದೆ. ಲಿಂಗವಂತದ ಮೂಲ ಲಿಂಗಾಯತದಲ್ಲಿದೆ. ಆದ್ದರಿಂದ ಲಿಂಗಾಯತರು ಎಂಬ ಪದವೇ ಜನಮನದಲ್ಲಿ ಉಳಿದುಕೊಂಡಿದೆ. ಚೆನ್ನಬಸವಣ್ಣನವರ ಪ್ರಾದಿ ಸ್ಥಲದ ವಚನಗಳಲ್ಲಿನ "ಭೃತ್ಯಾಚಾರಿಗಲ್ಲದೆ ಭಕ್ತಾಚಾರವಳವಡದು. ವೇದಶಾಸ್ತ್ರ ಪುರಾಣಂಗಳನರಿದ ಸಂಬಂಧಿಗಲ್ಲದೆ ವೀರಶೈವ ಅಳವಡದು" ಎಂಬ ವಚನದಲ್ಲಿ 'ವೀರಶೈವ' ಪದ ಬಳಕೆಯಾದದ್ದು ನಿಜವೆ? ಎಂದು ಕೇಳಿದರೆ 'ಇಲ್ಲ' ಎಂದು ಹೇಳಬೇಕಾಗುತ್ತದೆ. ಏಕೆಂದರೆ ಆ ವೀರಶೈವ ಪದವನ್ನು ಚೆನ್ನಬಸವಣ್ಣನವರ ವಚನ ಸಂಪುಟದ ಸಂಪಾದಕರಾದ ಡಾ.ಬಿ.ವಿ.ಮಲ್ಲಾಪುರ ಅವರು ತಮಗೆ ಸಿಕ್ಕ ಹಸ್ತಕ್ಷೇಪ ಪ್ರತಿಯಿಂದ ಬಳಸಿದ್ದಾರೆ. (ಕನ್ನಡ ಪುಸ್ತಕ ಪ್ರಾಧಿಕಾರ, ಸಮಗ್ರ ವಚನ ಸಂಪುಟ 3- ದ್ವಿತೀಯ ಮುದ್ರಣ 2001ರ 238ನೇ ವಚನ). ಆದರೆ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ, ಡಾ.ಆರ್.ಸಿ. ಹಿರೇಮಠ ಅವರ ಸಂಪಾದನೆಯ 'ಚನ್ನಬಸವಣ್ಣನವರ ವಚನಗಳು' ದ್ವಿತೀಯ ಮುದ್ರಣ 1971ರಲ್ಲಿನ 530ನೇ ವಚನ ಇದಾಗಿದ್ದು "ಭೃತ್ಯಾಚಾರಿಗಲ್ಲದೆ ಭಕ್ತಾಚಾರವಳವಡದು; ವೇದಶಾಸ್ತ್ರ ಪುರಾಣಂಗಳನರಿದ ಸಂಬಂಧಿಗಳಿಗಲ್ಲದೆ ಆಚಾರವಳವಡದು" ಎಂದಿದೆ. ಹೀಗೆ ಪಟ್ಟಭದ್ರರು ಹಸ್ತಕ್ಷೇಪ ಮಾಡಿ 'ಆಚಾರ' ಶಬ್ದ ಜಾಗದಲ್ಲಿ 'ವೀರಶೈವ' ಪದ ತಂದು ತುರುಕಿದ್ದಾರೆ. ಅದುವೇ ಪುಸ್ತಕ ಪ್ರಾಧಿಕಾರದ ಸಂಪುಟದಲ್ಲಿ ಮುಂದುವರಿದಿದೆ.

"ಚತುರ್ವರ್ಣಿಯಾದಡೇನು ಚತುರ್ವರ್ಣಾತೀತನೇ ವೀರಶೈವ ನೋಡಾ" ಎಂಬ ಸಿದ್ಧರಾಮರದೆಂದು ಹೇಳಲಾದ ವಚನದ ಸಾಲನ್ನು ಚಿದಾನಂದಮೂರ್ತಿ ಅವರು ಉದ್ಧರಿಸುತ್ತಾರೆ. ಇದು ಇನ್ನೂ ಹಾಸ್ಯಾಸ್ಪದವಾಗಿದೆ. ಏಕೆಂದರೆ ಈ ಸಾಲೇ ಗೊಂದಲದ ಗೂಡಾಗಿದೆ. ವೀರಶೈವ ಚತುರ್ವರ್ಣಿಯಾದರೂ ಚತುರ್ವರ್ಣಾತೀತ ಎಂದರೆ ಏನು? ಚಾತುರ್ವರ್ಣ್ಯ ಪದ್ಧತಿಯ ಸಮಾಜದಿಂದ ಹೊರಬಂದವನೇ ಲಿಂಗವಂತ ಅಲ್ಲವೆ? ಆದ್ದರಿಂದ "ಚತುರ್ವರ್ಣಿಯಾದಡೇನು ಚತುರ್ವರ್ಣಾತೀತನೇ ಲಿಂಗವಂತ ನೋಡಾ" ಎಂಬುದು ಮಾತ್ರ ಸಮಂಜಸವಾಗುತ್ತದೆ. ಹೀಗೆ ಚಾತುರ್ವರ್ಣ್ಯ ಪದ್ಧತಿಯಿಂದ ಹೊರಬಂದು ಲಿಂಗಾಯತನಾಗುವುದೇ ಶರಣರ ದೃಷ್ಟಿಯಲ್ಲಿ ಪುನರ್ಜನ್ಮ.

ಇನ್ನು ಚಿದಾನಂದಮೂರ್ತಿ ಅವರು ವಚನಪೂರ್ವ ಯುಗದ ಶೈವಮತದ ಕೊಂಡಗೂಳಿ ಕೇಶಿರಾಜನನ್ನು ಎಳೆದು ತರುತ್ತಾರೆ. ಆತನ 'ಶೀಲವುತ್ತಮ ಕಂದ'ದಲ್ಲಿ ಪಟ್ಟಭದ್ರರು ಲಿಂಗಾಯತ, ಲಿಂಗಾಯತವಂತ ಮತ್ತು ವೀರಶೈವ ಪದಗಳನ್ನು ಸೇರಿಸಿದ್ದಾರೆ. ಇವು ನಂತರದಲ್ಲಿ ಸೇರಿದವು ಎಂದು ಬೇರೆ ಹೇಳಬೇಕಿಲ್ಲ. ಇಲ್ಲಿಯ ಶೀಲಗಳು ಶರಣರಿಗೆ ಒಪ್ಪಿಗೆಯಾಗಿಲ್ಲ. 'ಹೂಭಾವಿ ಮಠಕ್ಕೆ ಸೀಮೆಯ ಮಾಡೂದು ಶೀಲವೆ?' ಎಂದು ಬಸವಯುಗದ ವಚನಕಾರ ಸಕಲೇಶ ಮಾದರಸ ಈ ಕೃತಿಯನ್ನು ತಿರಸ್ಕರಿಸಿದ್ದಾನೆ. ಬಸವಾದಿ ಪ್ರಮಥರಾರೂ ಕೊಂಡಗೂಳಿ ಕೇಶಿರಾಜನನ್ನು ತಮ್ಮ ವಚನಗಳಲ್ಲಿ ಸ್ಮರಿಸಿಲ್ಲ. ಯಾಜ್ಞವಲ್ಕ್ಯ ಸ್ಮೃತಿ ಕಲಿಸುವ ಬ್ರಾಹ್ಮಣರಿಗೆ ದಾನ ಕೊಡುವ ಕೊಂಡಗೂಳಿ ಕೇಶಿರಾಜ ಅದು ಹೇಗೆ ಲಿಂಗಾಯತನಾಗುತ್ತಾನೆ?

ಹತ್ತನೇ ಶತಮಾನದ ಹೂಲಿ ಶಾಸನದಲ್ಲಿ 'ಅಷ್ಟಾವರಣ' ಪದ ಬಂದಿದೆ ಎಂದು ಚಿಮೂ ಇನ್ನೂ ಹಿಂದೆ ಹೋಗುತ್ತಾರೆ. ಆದರೆ ಮೊದಲಿಗೆ ಆ ಶಾಸನದ ಅಧ್ಯಯನ ಮಾಡಿದ ಮಧುರಚೆನ್ನರು, 'ಆ ಶಾಸನದ ಅಕ್ಷರಗಳು ಹತ್ತನೇ ಶತಮಾನದವುಗಳಲ್ಲ' ಎಂದು ಕಳೆದ ಶತಮಾನದಲ್ಲೇ ಸಾಬೀತುಪಡಿಸಿದ್ದಾರೆ. ಹೀಗಾಗಿ ಚಿಮೂ ಅವರ ವಾದ ಇಲ್ಲಿಯೂ ಬಿದ್ದುಹೋಗುತ್ತದೆ.

ಇನ್ನು ಲಿಂಗಾಯತ ಯಾವ ಕಾಲಕ್ಕೂ ಹಿಂದೂ ಧರ್ಮದ ಶಾಖೆಯಾಗದು. ಏಕೆಂದರೆ ಬಸವಣ್ಣನವರ ಕಾಲದಲ್ಲಿ 'ಹಿಂದೂ' ಶಬ್ದದ ಬಳಕೆಯೆ ಇರಲಿಲ್ಲ. ಆಗೇನಿದ್ದರೂ ವೈದಿಕಧರ್ಮ ಚಾಲ್ತಿಯಲ್ಲಿತ್ತು. ಶೈವಧರ್ಮ ಕೂಡ ಬೇರೆಯಾಗಿಯೇ ಇತ್ತು. ಬೌದ್ಧ ಜೈನ ಮುಂತಾದ ಧರ್ಮಗಳೂ ಜೊತೆಯಲ್ಲಿ ಇದ್ದವು.

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯಾ
ಮಹಾದಾನಿ ಕೂಡಲಸಂಗಮದೇವಾ
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ"


ಎಂದು ಬಸವಣ್ಣನವರು ವೇದೋಕ್ತ ವೈದಿಕಧರ್ಮವನ್ನೂ ಆಗಮೋಕ್ತ ಶೈವಧರ್ಮವನ್ನೂ ಏಕಕಾಲಕ್ಕೆ ತಿರಸ್ಕರಿಸಿದ್ದಾರೆ. ಹೀಗಾಗಿ ವೇದಮೂಲದ ಇಂದಿನ ಹಿಂದೂ ಧರ್ಮಕ್ಕೂ ಆಗಮಮೂಲದ ಇಂದಿನ ವೀರಶೈವಧರ್ಮಕ್ಕೂ ಲಿಂಗಾಯತ ಧರ್ಮದ ಜೊತೆ ಯಾವುದೇ ಸಂಬಂಧವಿಲ್ಲ ಎನ್ನುವುದಕ್ಕೆ ಬಸವಣ್ಣನವರ ಈ ವಚನವೇ ಸಾಕ್ಷಿಯಾಗಿದೆ.

ನಂತರ ಚಿಮೂ ಅವರು ಇಷ್ಟಲಿಂಗಕ್ಕೆ ಕೈ ಹಾಕಿದ್ದಾರೆ. ಅದು ಬಸವಣ್ಣನಿಗಿಂತ ಹಿಂದಿನದು ಎಂದು ಹೇಳುತ್ತಾರೆ. ಕೇಶಿರಾಜ 'ಉರಹುಟ್ಟಿಯ ಲಿಂಗ' ಎಂದು ಬರೆದಿದ್ದಾಗಿ ತಿಳಿಸಿದ್ದಾರೆ. ಆ ಉರಹುಟ್ಟಿಯ ಲಿಂಗವು ಚರಲಿಂಗವಾಗಿದೆ. ಆ ಲಿಂಗವನ್ನು ಶಿವರಾತ್ರೀಶ್ವರ ಭಗವತ್ಪಾದರ ಚಿತ್ರದಲ್ಲಿ ಕಾಣಬಹುದು.

ಈ ಲೇಖನವು ಚಿದಾನಂದಮೂರ್ತಿ ಅವರಿಗೆ ನಾನು ಒಡ್ಡಿದ ಸವಾಲಾಗಿದೆ. ಅವರಿಂದ ನಾ... [illegible] ...ತರಗಳನ್ನು ನಿರೀಕ್ಷಿಸುತ್ತೇನೆ. ಏಕೆಂದರೆ ನಾನು ಇನ್ನೂ ಬಹಳ ಬರೆಯುವುದಿದೆ.

■ ರಂಜಾನ್ ದರ್ಗಾ

'ಜನರನ್ನು ಒಳಗೊಳ್ಳುವ' ಸಿದ್ದರಾಮಯ್ಯ ಬಜೆಟ್



ಅನೇಕರು ಸಿದ್ದರಾಮಯ್ಯ ಅವರ 2015-16ನೆಯ ಸಾಲಿನ ಕರ್ನಾಟಕ ಬಜೆಟ್ಟನ್ನು 'ಸರ್ವರ ಸಮಾಧಾನಕ್ಕೆ ನಡೆಸಿರುವ ಕಸರತ್ತು' ಎಂದೂ, 'ಧೀರತನ ತೋರದ ಬಜೆಟ್' ಎಂದೂ, 'ವಾರ್ಷಿಕ ವರದಿಯಂತಿದೆ' ಎಂದೂ ಮತ್ತು 'ಅಧೋಗತಿಯತ್ತ ರಾಜ್ಯ' ಎಂದೂ ಬಣ್ಣಿಸಿದ್ದಾರೆ. ಇವೆಲ್ಲ ಒಂದೋ ಸುಳ್ಳಿನಿಂದ ಕೂಡಿವೆ ಇಲ್ಲವೇ ಉತ್ಪ್ರೇಕ್ಷೆಯ ವ್ಯಾಪ್ತಿಗೆ ಸೇರುತ್ತವೆ ಅಥವಾ ಉಡಾಫೆಯ ಮಾತುಗಳಂತೆ ಕಾಣುತ್ತವೆ. ನಿಜ, ಅವರ ಬಜೆಟ್ಟಿನಲ್ಲಿ ಎಲ್ಲವೂ ಸರಿಯಿಲ್ಲ, ತಾವು ನೆಚ್ಚಿಕೊಂಡಿರುವ ಸಾಮಾಜಿಕ ನ್ಯಾಯ ಮೀಮಾಂಸೆಯ ಕಾರ್ಯಕ್ರಮಗಳಿಗೆ ಸಂಪನ್ಮೂಲವನ್ನು ಅಪಾರ ಪ್ರಮಾಣದಲ್ಲಿ ಎತ್ತುವುದರಲ್ಲಿ ಹಣಕಾಸು ಮಂತ್ರಿಗಳೂ ಆಗಿರುವ ಮುಖ್ಯಮಂತ್ರಿ ಅವರು ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಜೆಟ್ಟಿನಲ್ಲಿ ಒದಗಿಸಿರುವ ಹಣವನ್ನು ಇಲಾಖೆಗಳು ವ್ಯಯಿಸುವುದರಲ್ಲಿ ವಿಫಲವಾಗುತ್ತಿವೆ. ನಮ್ಮ ಆಡಳಿತ ಯಂತ್ರವು ಅತ್ಯಂತ ಮಂದಗತಿಯಲ್ಲಿ ಸಾಗುತ್ತಿದೆ.

ಸಂಪನ್ಮೂಲವನ್ನು ಗರಿಷ್ಠಗೊಳಿಸಲು ಮೂರು ಮಾರ್ಗಗಳಿವೆ. ಆದರೆ ಸಿದ್ದರಾಮಯ್ಯ ಅವುಗಳ ಕಡೆ ಗಮನ ನೀಡಿದಂತೆ ಕಾಣುವುದಿಲ್ಲ.

1. ರಾಜ್ಯವು ತನ್ನ ಉದ್ದಿಮೆಗಳು, ನಿಗಮಗಳು, ಸಂಸ್ಥೆಗಳ ಮೇಲೆ ಹೂಡಿರುವ ಬಂಡವಾಳ (30.03.2014) ರೂ. 55,048 ಕೋಟಿ. ಅದರಿಂದ ಸರ್ಕಾರಕ್ಕೆ ಬರುತ್ತಿರುವ ಪ್ರತಿಫಲ ವಾರ್ಷಿಕ ಕೇವಲ ರೂ. 55.49 ಕೋಟಿ ಲಾಭಾಂಶ. ಇಲ್ಲಿ ಅವುಗಳ ಕಾರ್ಯಕ್ಷಮತೆಯನ್ನು ಉತ್ತಮಪಡಿಸಿ ಅವು ಕನಿಷ್ಠ ಶೇ. 10ರಷ್ಟು ಪ್ರತಿಫಲ ನೀಡುವಂತೆ ಮಾಡಿದರೆ ಸರ್ಕಾರ ವಾರ್ಷಿಕ ರೂ. 5,000 ಕೋಟಿಗೂ ಮೀರಿ ಸಂಪನ್ಮೂಲ ಸಂಗ್ರಹಿಸಿಕೊಳ್ಳಬಹುದು. ಈ ಬಗ್ಗೆ ಸಿದ್ದರಾಮಯ್ಯ ಅವರು ಗಮನ ನೀಡುವುದು ಅಗತ್ಯ.

2. ವಿವಿಧ ತೆರಿಗೆಗಳಿಗೆ ಸಂಬಂಧಿಸಿದ ವಸೂಲಾಗಬೇಕಾಗಿರುವ ಬಾಕಿ ಮೊತ್ತ ರೂ. 5,811 ಕೋಟಿ. ಇದನ್ನು ವಸೂಲು ಮಾಡುವ ಬಗ್ಗೆ ಕ್ರಮಗಳನ್ನು ತೆಗೆದುಕೊಂಡರೆ ಕನಿಷ್ಠ ವಾರ್ಷಿಕ ರೂ. 3,000 ಕೋಟಿ ಸಂಪನ್ಮೂಲ ಪಡೆಯಬಹುದು.

3. ರಾಜ್ಯ ಸರ್ಕಾರ ವಾರ್ಷಿಕ ವಿದ್ಯುಚ್ಛಕ್ತಿಗೆ ಮತ್ತು ಉದ್ದಿಮೆಗಳಿಗೆ ಒಟ್ಟು ರೂ. 7,500 ಕೋಟಿ ಸಬ್ಸಿಡಿ ನೀಡುತ್ತಿದೆ. ಇದರ ಲಾಭ ಉಳ್ಳವರಿಗೂ ದೊರೆಯುತ್ತಿದೆ ಮತ್ತು ಬಿಪಿಎಲ್ ಕುಟುಂಬಗಳಿಗೂ ದೊರೆಯುತ್ತಿದೆ. ಇಲ್ಲಿ ಉಳ್ಳವರಿಗೆ ದೊರೆಯುವ ಸಬ್ಸಿಡಿಗೆ ರವಷ್ಟು ಕತ್ತರಿ ಹಾಕಿದರೆ ವಾರ್ಷಿಕ ಸುಮಾರು ರೂ. 2,000 ಕೋಟಿ ಸಂಪನ್ಮೂಲ ಉಳಿಸಬಹುದು.

ಒಟ್ಟಾರೆ ತೆರಿಗೆಗಳ ಪ್ರಮಾಣವನ್ನು ಹೆಚ್ಚಿಸದೆ ಸರ್ಕಾರವು ತನ್ನ ಕಾರ್ಯಕ್ಷಮತೆಯನ್ನು ಉತ್ತಮಪಡಿಸಿಕೊಳ್ಳುವ ಮೂಲಕ ವಾರ್ಷಿಕ ರೂ. 10,000 ಕೋಟಿ ಮೀರಿ ಸಂಪನ್ಮೂಲ ಸಂಗ್ರಹಿಸಿಕೊಳ್ಳಬಹುದು. ನಿಜ, ಇದು ಸರಳವೂ ಅಲ್ಲ ಮತ್ತು ಸುಲಭವೂ ಅಲ್ಲ, ಆದರೆ ಆಡಳಿತ ಕ್ಷೇತ್ರದಲ್ಲಿ ಕರ್ತೃತ್ವಕ್ಕೆ ಮತ್ತು ಬಿಗಿ ನಿಲುವಿಗೆ ಹೆಸರಾಗಿರುವ ಸಿದ್ದರಾಮಯ್ಯ ಅವರು ಮುಂದಿನ ವರ್ಷಗಳಲ್ಲಿ ಸರ್ಕಾರದ ಆಡಳಿತ ಯಂತ್ರಕ್ಕೆ ಕಾಯಕಲ್ಪ ಮಾಡುವುದರ ಮೂಲಕ ಮತ್ತು ಆಡಳಿತ ಸಿಬ್ಬಂದಿಗೆ ಚುರುಕು ಮುಟ್ಟಿಸುವುದರ ಮೂಲಕ ರಾಜ್ಯದ ಹಣಕಾಸು ಸ್ಥಿತಿಗತಿಯನ್ನು ಸುಧಾರಿಸಬಹುದಾಗಿದೆ.

ನಮ್ಮ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಇಂದು ರೂ 7.36 ಲಕ್ಷ ಕೋಟಿಯಾಗಿದೆ. ಸಿದ್ದರಾಮಯ್ಯ ಅವರು 2015-16ನೆಯ ಸಾಲಿಗೆ ರೂ. 1,42,534 ಕೋಟಿ ಗಾತ್ರದ ಬಜೆಟ್ಟನ್ನು ಮಂಡಿಸಿದ್ದಾರೆ. ಇದರಲ್ಲಿ ಸಬ್ಸಿಡಿ ಪಾಲು ರೂ. 18,455 ಕೋಟಿ. ಅಂದರೆ ಒಟ್ಟು ಬಜೆಟ್ಟಿನಲ್ಲಿ ಇದರ ಪಾಲು ಶೇ. 13 ರಷ್ಟಾಗುತ್ತದೆ ಮತ್ತು ರಾಜ್ಯದ ಒಟ್ಟು ವರಮಾನದಲ್ಲಿ ಇದರ ಪಾಲು ಕೇವಲ ಶೇ. 2.5ರಷ್ಟಾಗುತ್ತದೆ. ಉಳ್ಳವರು ಇದರ ಬಗ್ಗೆ ಇನ್ನಿಲ್ಲದಂತೆ ಅಣಕವಾಡುತ್ತಾರೆ ಮತ್ತು ಅಸೂಯೆಯಿಂದ ಟೀಕೆ ಮಾಡುತ್ತಾರೆ. ಅನ್ನಭಾಗ್ಯಕ್ಕೆ ಸರ್ಕಾರ ನೀಡುತ್ತಿರುವ ಸಬ್ಸಿಡಿ ರೂ. 2,022 ಕೋಟಿ. ಇದು ನಮ್ಮ ರಾಜ್ಯದ ವರಮಾನದ ಶೇ. 0.27ರಷ್ಟಾಗುತ್ತದೆ. ಬಡ ದುಡಿಮೆಗಾರರಿಗೆ ಇಷ್ಟು ಅನುಕೂಲವನ್ನು ಮಾಡಿಕೊಡುವುದು ಹಣಕಾಸಿನ ದುರ್ವಿನಿಯೋಗವೇ? ಇದರಿಂದ ಬಡವರೆಲ್ಲರೂ ಸೋಮಾರಿಗಳಾಗಿ ಬಿಡುತ್ತಾರೆಯೇ?

ಉದ್ದಿಮೆಗಾರರು, ನಗರವಾಸಿಗಳು, ಶೇರು ಮಾರುಕಟ್ಟೆ ದಲ್ಲಾಳಿಗಳು, ಐಟಿ, ಬಿಟಿ ಮತ್ತು ಎನ್‌ಟಿ ಮಾಲಿಕರು ತಮಗೆ ಬಜೆಟ್ಟಿನಲ್ಲಿ ಏನೂ ಮಾಡಿಲ್ಲವೆಂದು ಕುರುಬುವುದು ಸಾಮಾನ್ಯ. ಉಳ್ಳವರನ್ನು ಓಲೈಸುವುದು ಸಾಮಾಜಿಕ ನ್ಯಾಯವಲ್ಲ. ಈ ಬಗ್ಗೆ ಸಿದ್ದರಾಮಯ್ಯ ಅವರ ಧೋರಣೆ ಸರಿಯಾಗಿದೆ.

ಅಭಿವೃದ್ಧಿ ಅನ್ನುವುದು ಬಡವರಿಗೆ, ವಂಚಿತರಿಗೆ, ಅಂಚಿನಲ್ಲಿರುವವರಿಗೆ ಸಂಬಂಧಿಸಿದ ಸಂಗತಿ. ಅದು ಕೇವಲ ವರಮಾನ ವರ್ಧನೆಗೆ ಮೀಸಲಾದ ಕಾರ್ಯವಲ್ಲ. ವರಮಾನ, ಬಂಡವಾಳ, ಉತ್ಪಾದನೆ ಅಭಿವೃದ್ಧಿಗೆ ಅಗತ್ಯ. ಆದರೆ ಅವೇ ಅಭಿವೃದ್ಧಿಯಲ್ಲ. ಇಲ್ಲಿ 'ಅಸ್ವಾತಂತ್ರ್ಯಗಳನ್ನು ನಿವಾರಿಸುವುದೇ ಅಭಿವೃದ್ಧಿ' ಎಂಬ ಅಮರ್ತ್ಯ ಸೆನ್ ವ್ಯಾಖ್ಯೆಯನ್ನು ನೆನಪಿಸಿಕೊಳ್ಳುವುದು ಸೂಕ್ತ. ಅನಕ್ಷರತೆ, ದುಸ್ಥಿತಿ, ಹಸಿವು, ಅಸಮಾನತೆ, ಲಿಂಗ ತಾರತಮ್ಯಗಳು, ಸಾಮಾಜಿಕ ಪ್ರತ್ಯೇಕತನ, ಅನಾರೋಗ್ಯ ಮುಂತಾದವುಗಳನ್ನು ಸೆನ್ ಅಸ್ವಾತಂತ್ರ್ಯಗಳೆಂದು ಕರೆಯುತ್ತಾರೆ. ಅವುಗಳ ನಿವಾರಣೆ ಅಂದರೆ ಬಡವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದು ಎಂದೇ ಅರ್ಥ. ಇದನ್ನು ಅತ್ಯಂತ ನಿಸ್ಪೃಹತೆಯಿಂದ ಮತ್ತು ಕ್ಷಮತೆಯಿಂದ ಸಿದ್ದರಾಮಯ್ಯ ನಿರ್ವಹಿಸುತ್ತಿದ್ದಾರೆ. ಸಾಮಾಜಿಕ ನ್ಯಾಯ ಮೌಲ್ಯವು ಎಲ್ಲೆಲ್ಲೂ ತಿರಸ್ಕಾರಕ್ಕೆ ಮತ್ತು ಅವಹೇಳನಕ್ಕೆ ಒಳಗಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಅದಕ್ಕೆ ಒಂದು ಗೌರವದ ಸ್ಥಾನವನ್ನು ಸಿದ್ದರಾಮಯ್ಯ ಒದಗಿಸುತ್ತಿದ್ದಾರೆ.

ರಾಜ್ಯದ ಒಟ್ಟು ಬಜೆಟ್ ಗಾತ್ರದಲ್ಲಿ ಯೋಜನಾ ವೆಚ್ಚ ರೂ. 72,597 ಕೋಟಿ. ಇದು ಒಟ್ಟು ಬಜೆಟ್ ವೆಚ್ಚದ ಶೇ. 50.03ರಷ್ಟಾಗುತ್ತದೆ. ಕೇಂದ್ರ ಸರ್ಕಾರದ 2015-16ನೆಯ ಸಾಲಿನ ಯೋಜನಾ ವೆಚ್ಚವು ಅಲ್ಲಿನ ಬಜೆಟ್ಟಿನ ಒಟ್ಟು ಗಾತ್ರದ ಶೇ. 26.18ರಷ್ಟಾಗುತ್ತದೆ. ಕೇಂದ್ರ ಸರ್ಕಾರಕ್ಕಿಂತ ಹೆಚ್ಚಿನ ಸಂಪನ್ಮೂಲವನ್ನು ಕರ್ನಾಟಕ ಅಭಿವೃದ್ಧಿಗೆ ಒದಗಿಸುತ್ತಿದೆ.

ಸಿದ್ದರಾಮಯ್ಯ ಅವರು ತಮ್ಮ ಬಜೆಟ್ಟಿನಲ್ಲಿ ರಾಜ್ಯದ ಒಟ್ಟು ವರಮಾನದ ಶೇ. 2.71ರಷ್ಟನ್ನು ಶಿಕ್ಷಣಕ್ಕೆ ಮತ್ತು ಶೇ. 1.16ರಷ್ಟನ್ನು ಆರೋಗ್ಯಕ್ಕೆ ಮೀಸಲಿಟ್ಟಿದ್ದಾರೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಜೆಟ್ಟಿನಲ್ಲಿ ಒದಗಿಸಿರುವ ಮೊತ್ತ ರೂ. 26,575.81 ಕೋಟಿ. ಇದು ಒಟ್ಟು ಬಜೆಟ್ ವೆಚ್ಚದ ಶೇ. 18.64ರಷ್ಟಾಗುತ್ತದೆ. ಬಜೆಟ್ಟಿನ ಒಟ್ಟು ಗಾತ್ರದಲ್ಲಿ ರೂ. 14,253.34 ಕೋಟಿಯನ್ನು (ಶೇ. 10) ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿದ್ದಾರೆ. ಕಳೆದ ಸಾಲಿನಲ್ಲಿ ಕರ್ನಾಟಕ ಸರ್ಕಾರ (2014-2015) ಪ.ಜಾ. ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಗಾಗಿ ರೂ. 15,834 ಕೋಟಿ ಮೀಸಲಿಟ್ಟಿತ್ತು, ಈ ಸಾಲಿನಲ್ಲಿ ರೂ. 16,356 ಕೋಟಿ ಮೀಸಲಿಟ್ಟಿದೆ. ರಾಜ್ಯದಲ್ಲಿ 2011ರಲ್ಲಿ ಪ.ಜಾ. ಜನಸಂಖ್ಯೆ 104.75 ಲಕ್ಷವಾದರೆ ಬುಡಕಟ್ಟು ಸಮುದಾಯದ ಜನಸಂಖ್ಯೆ 42.49 ಲಕ್ಷ. ಒಟ್ಟು ಜನಸಂಖ್ಯೆಯಲ್ಲಿ ಅವರ ಪ್ರಮಾಣ ಕ್ರಮವಾಗಿ ಶೇ. 17.15 ಮತ್ತು ಶೇ. 6.95ರಷ್ಟಾಗುತ್ತದೆ. ಈ ಸಮುದಾಯಗಳ ಬದುಕು ತೀವ್ರ ದುಸ್ಥಿತಿಯಲ್ಲಿದೆ. ಅಭಿವೃದ್ಧಿ ಅನ್ನುವುದು ಘನತೆಯಿಂದ ಮತ್ತು ಗೌರವದಿಂದ ಬದುಕುವುದಕ್ಕೆ ಸಂಬಂಧಿಸಿದ ಸಂಗತಿ ಅನ್ನುವುದನ್ನು ಒಪ್ಪಿಕೊಂಡರೆ, ಬಜೆಟ್ಟಿನಲ್ಲಿ ಸಿದ್ದರಾಮಯ್ಯ ಸರ್ಕಾರ ಅವರ ಬದುಕನ್ನು ಉತ್ತಮಪಡಿಸುವುದಕ್ಕೆ ಅವರಿಗೆ ವಿಶೇಷ ಆದ್ಯತೆ ನೀಡುತ್ತಿರುವುದು ಅಭಿವೃದ್ಧಿಯ ಸಂಗತಿಯೇ ಆಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಬಜೆಟ್ಟಿನಲ್ಲಿ ರೂ. 1,000 ಕೋಟಿ ಹಣವನ್ನು ಮೀಸಲಿಡಲಾಗಿದೆ. ಮೀಸಲಾತಿ ಮತ್ತು ಅದರಲ್ಲಿ ಮುಸ್ಲಿಮರನ್ನು ಸೇರಿಸದಿರುವುದು ಮುಂತಾದ ಸಂಗತಿಗಳ ಬಗ್ಗೆ ಜೀನ್ ಡ್ರೀಜ್ ಮತ್ತು ಅಮರ್ತ್ಯ ಸೆನ್ ತಮ್ಮ ಭಾರತ ಕುರಿತ ಇತ್ತೀಚಿಗಿನ ಕೃತಿಯಲ್ಲಿ (2013) ಹೇಳಿರುವ ಮಾತುಗಳು ಹೀಗಿವೆ: "... ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚುವರಿ ಬೆಂಬಲಾತ್ಮಕ ನೆರವನ್ನು ವಿವಿಧ ಬಗೆಯಲ್ಲಿ (ನಾಗರಿಕ ಸೇವೆ ನೇಮಕಾತಿಯಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಪ್ರವೇಶ) ನೀಡುವ ಬಗ್ಗೆ ಶಾಸನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಆದರೆ ಈ ಪ್ರೋತ್ಸಾಹದಾಯಕ ಕ್ರಮದ ವ್ಯಾಪ್ತಿಯಲ್ಲಿ ಮುಸ್ಲಿಮರನ್ನು ಸೇರಿಸಿಲ್ಲ. ಈ ಬಗೆಯ ಅಸಹ್ಯಕರ ಅನ್ಯಾಯ ಹಿಂದೂಗಳಿಗೆ ವಿಶಿಷ್ಟವಾದುದು ಎಂದು ತೀರ್ಮಾನಿಸಿ ಅದನ್ನು ಸರಿಪಡಿಸುವುದಕ್ಕೆ ಅಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಕ್ರಮಗಳು ತೀವ್ರಗತಿಯನ್ನು ಜಾರಿಗೊಳ್ಳುವಂತೆ ಮಾಡಬೇಕಾಗಿದೆ. ಜಾತಿ ಆಧರಿತ ಅಸಮಾನತೆ ಮತ್ತು ಬಡ ಮುಸ್ಲಿಮರು ಮತ್ತು ಬಡ ಭಾರತೀಯರು ಎದುರಿಸುತ್ತಿರುವ ಸಂಗತಿಗಳಲ್ಲಿ ಆರ್ಥಿಕ ಅಸಮಾನತೆ ಮತ್ತು ಸಾಮಾಜಿಕ ಶ್ರೇಣೀಕರಣಗಳು ಒಂದರೊಡನೊಂದು ಬೆರೆತುಕೊಂಡಿರುವುದನ್ನು ಗಮನಿಸಿ ಸಂವಿಧಾನಾತ್ಮಕ ಪ್ರೋತ್ಸಾಹದಾಯಕ ಕ್ರಮಗಳನ್ನು ಮರುಪರಿಶೀಲನೆಗೆ ಒಳಪಡಿಸುವ ಬಗ್ಗೆ ನಾವು ಚಿಂತಿಸಬೇಕಾಗಿದೆ". ನಮ್ಮ ರಾಜ್ಯದಲ್ಲಿ ಅಲ್ಪಸಂಖ್ಯಾತರ ಪ್ರಮಾಣ ಶೇ. 15ಕ್ಕಿಂತ ಅಧಿಕವಾಗಿದೆ. ಆದರೆ ಅವರ ಅಭಿವೃದ್ಧಿಗೆ ಒದಗಿಸುತ್ತಿರುವ ಸಂಪನ್ಮೂಲ ಒಟ್ಟು ಯೋಜನಾ ವೆಚ್ಚದ ಶೇ. 1.38ರಷ್ಟಾಗುತ್ತದೆ. ಇದೇ ರೀತಿಯ ಸಮಸ್ಯೆ ಒಬಿಸಿಗಳಲ್ಲಿಯೂ ಇದೆ. ಅವರ ಅಭಿವೃದ್ಧಿಗೆ ನೀಡಿರುವ ಮೊತ್ತ ರೂ. 2,000 ಕೋಟಿಗಿಂತ ಕಡಿಮೆ. ಇವರೆಲ್ಲರಿಗೂ ಒಟ್ಟಾರೆ ಅಭಿವೃದ್ಧಿಗೆ ವಿನಿಯೋಗಿಸುವ ಸಂಪನ್ಮೂಲಗಳಿಂದ ಅನುಕೂಲ ದೊರೆಯುತ್ತದೆ ಎಂದು ಅವರಿಗೆ ಬಜೆಟ್ಟಿನಲ್ಲಿ ವಿಶೇಷ ಪ್ರೋತ್ಸಾಹದಾಯಕ ಕ್ರಮಗಳ ಅಗತ್ಯವಿಲ್ಲ ಎಂದು ವಾದಿಸುವವರಿದ್ದಾರೆ. ಆದರೆ ಅಭಿವೃದ್ಧಿಯಿಂದ ವಂಚಿತರಾದವರಿಗೆ, ಸಮಾಜದಲ್ಲಿ ಅಂಚಿನಲ್ಲಿರುವವರಿಗೆ, ಸಾಮಾಜಿಕ ಪ್ರತ್ಯೇಕತನವನ್ನು ಅನುಭವಿಸುತ್ತಿರುವವರಿಗೆ, ಚಾರಿತ್ರಿಕ ತಾರತಮ್ಯ ಎದುರಿಸುತ್ತಿರುವವರಿಗೆ ಮತ್ತು ಮಹಿಳೆಯರಿಗೆ ಬಜೆಟ್ಟು ಮತ್ತು ಸಾಮಾನ್ಯ ಅಭಿವೃದ್ಧಿ ಯೋಜನೆಗಳಲ್ಲಿ ಪ್ರೋತ್ಸಾಹದಾಯಕ ಕ್ರಮಗಳನ್ನು ನೀಡದಿದ್ದರೆ ಸಮಾನತೆಯನ್ನು ಸಾಧಿಸಿಕೊಳ್ಳುವುದು ಮತ್ತು ಸಾಮಾಜಿಕ ನ್ಯಾಯವನ್ನು ಜನರಿಗೆ ನೀಡುವುದು ಸಾಧ್ಯವಾಗುವುದಿಲ್ಲ. ಒಂದು ಅಸಮ ಸಮಾಜದಲ್ಲಿ ಅಭಿವೃದ್ಧಿ ಕ್ರಮಗಳು ಸಮಾನತೆ ಆಧಾರದಲ್ಲಿದ್ದರೆ ಅಲ್ಲಿ ಅಸಮಾನತೆಯು ಉಲ್ಬಣಗೊಳ್ಳುತ್ತದೆಯೇ ವಿನಾ ಅದು ಕಡಿಮೆಯಾಗುವುದಿಲ್ಲ. ಸಿದ್ದರಾಮಯ್ಯ ಸರ್ಕಾರವು ಅನುಸರಿಸುತ್ತಿರುವ ಅಭಿವೃದ್ಧಿ ಕ್ರಮದಿಂದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ ಅನ್ನುವುದಕ್ಕೆ ನಮಗೆ ಆಧಾರಗಳು ಕಡಿಮೆ. ಆದರೆ ರಾಜ್ಯದಲ್ಲಿ ಆಡಳಿತದ ಕಾರ್ಯಕ್ಷಮತೆಯನ್ನು ಉತ್ತಮಪಡಿಸದೆ ಮತ್ತು ಆಡಳಿತ ಸಿಬ್ಬಂದಿಯ ಮೇಲೆ ನಿಗಾ ಇಡದೆ ಸಾಮಾಜಿಕ ನ್ಯಾಯ ಆಧರಿಸಿದ ಅಭಿವೃದ್ಧಿ ಕ್ರಮಗಳು ಯಶಸ್ವಿಯಾಗುವುದು ಸಾಧ್ಯವಿಲ್ಲ. ಸಿದ್ದರಾಮಯ್ಯ ಸರ್ಕಾರ ತನ್ನ ಆಡಳಿತ ವ್ಯವಸ್ಥೆಗೆ ಮತ್ತು ಅಭಿವೃದ್ಧಿ ಸಿಬ್ಬಂದಿಗೆ ಸಂಬಂಧಿಸಿದಂತೆ ಮಹಾ ಕಾರ್ಯಕ್ಷಮತಾ ಸುಧಾರಣಾ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳುವ ಅಗತ್ಯವಿದೆ. ನಮ್ಮ ಆಡಳಿತ ವ್ಯವಸ್ಥೆಗೆ ಕಾಯಕಲ್ಪ ಮಾಡದೆ ಸಿದ್ದರಾಮಯ್ಯ ಅವರ ಸಾಮಾಜಿಕ ನ್ಯಾಯ ಆಧರಿತ ಅಭಿವೃದ್ಧಿ ಪ್ರಯೋಗ ಯಶಸ್ವಿಯಾಗುವುದು ಸಾಧ್ಯವಿಲ್ಲ.

ನಮ್ಮ ರಾಜ್ಯವನ್ನು ಕಾಡುತ್ತಿರುವ ಒಂದು ಸಮಸ್ಯೆಯೆಂದರೆ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ. ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯು ತನ್ನ ವರದಿಯಲ್ಲಿ ರಾಜ್ಯ ಸರ್ಕಾರವು 'ಪ್ರಾದೇಶಿಕ ಅಭಿವೃದ್ಧಿ ನೀತಿ'ಯನ್ನು ಘೋಷಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಆದರೆ ಸದರಿ ವರದಿ ಸಲ್ಲಿಕೆಯಾಗಿ 13 ವರ್ಷಗಳು ಸಂದರೂ ನಮ್ಮಲ್ಲಿ ಒಂದು ಪ್ರಾದೇಶಿಕ ಅಭಿವೃದ್ಧಿ ನೀತಿ ಎಂಬುದಿಲ್ಲ. ನಮ್ಮ ಸರ್ಕಾರಗಳು ಇದರ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯಕ್ಕೆ ಕ್ಷಮೆ ಇಲ್ಲ. ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಹಣ ನೀಡಲಾಗುತ್ತಿದೆ. ಆದರೆ ರಾಜ್ಯದ ಅತ್ಯಂತ ಹಿಂದುಳಿದ ಕಲಬುರಗಿ ವಿಭಾಗದಲ್ಲಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಅಲ್ಲಿ ಇಂದಿಗೂ ಅಭಿವೃದ್ಧಿ ಅಂದರೆ ಕಾಮಗಾರಿಗಳು ಎಂದೇ ಭಾವಿಸಲಾಗಿದೆ. ಶಿಕ್ಷಣ, ಆರೋಗ್ಯ, ಕುಡಿಯುವ

▶▶ 07

Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rule, 1956.

FORM - IV

(See Rule 8)

1. Place of Publication : Bangalore
2. Periodicity of Publication : Weekly
3. Printer's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.
4. Publisher's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.
5. Editor's Name : Gauri Lankesh
   Whether Citizen of India : Yes
   Address : No. 9, E.A.T. Street, Basavanagudi, Bangalore-560 004.

I, Gauri Lankesh, hereby declare that the particulars given above are true to the best of my knowledge and belief.

Date : 20.3.2015

Sd/-
GAURI LANKESH

ರಾಯಚೂರು ಹೊರವಲಯದಲ್ಲಿ ಭೂಮಿಯ ಬೆಲೆ ಪ್ರತಿ ಚದರ ಅಡಿಗೆ ಏನಿಲ್ಲವೆಂದರೂ 1000 ರೂಪಾಯಿ ಇದೆ. ಆದರೆ ಎಪಿಎಂಸಿ ತನ್ನ ಒಡೆತನದಲ್ಲಿದ್ದ 80 ಎಕರೆ ಭೂಮಿಯನ್ನು ಪ್ರತಿ ಚದರ ಅಡಿಗೆ ಕೇವಲ 40 ರೂಪಾಯಿಗೆ ಪರಭಾರೆ ಮಾಡಿ ದಾಖಲೆ ಸೃಷ್ಟಿಸಿದೆ! ಈ ಭಾರಿ ಭೂಹಗರಣದ ಕುರಿತು ದೊಡ್ಡಿಪಾಳ್ಯ ನರಸಿಂಹಮೂರ್ತಿ ಮಾಡಿದ ತಲಸ್ಪರ್ಶಿ ತನಿಖಾ ವರದಿ ಇಲ್ಲಿದೆ.

ರಾಯಚೂರು: ಎಪಿಎಂಸಿಯಲ್ಲಿ ರಿಯಲ್ ಎಸ್ಟೇಟ್ ದಂಧೆ!


ರಾಯಚೂರು ಸಾಮಾಜಿಕ, ಆರ್ಥಿಕ ಹಾಗೂ ...ಕ್ಷಣಿಕ ದೃಷ್ಟಿಯಿಂದ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ...ಂದೆಂದು ಪರಿಗಣಿತವಾಗಿರುವುದೇನೋ ನಿಜ. ಹಾಗಂತ ...ಲ್ಲಿ ಭೂಮಿಯ ಬೆಲೆಯೇನೂ ಕಮ್ಮಿಯಿಲ್ಲ, ನಗರದ ...ಸತಿ ಬಡಾವಣೆಗಳಲ್ಲಿ ಒಂದು ಸೈಟಿಗೆ ಕನಿಷ್ಠ ಮೂವತ್ತೈದು ...ಕ್ಷ ರೂಪಾಯಿ ಬೆಲೆಯಿದೆ. ಅಂತೆಯೇ ನಗರದ ಹೊರವಲ ...ಯದಲ್ಲೂ ಭೂಮಿಯ ಬೆಲೆ ಕಡಿಮೆಯೇನಿಲ್ಲ, ರಾಯ ...ಚೂರು-ಹೈದರಾಬಾದ್ ಹೆದ್ದಾರಿಯ ಆಜೂಬಾಜು ಈಗ ...ತೀ ಚದರ ಅಡಿಗೆ ಏನಿಲ್ಲವೆಂದರೂ 1000 ರಿಂದ ...200 ರೂಪಾಯಿ ಬೆಲೆ ಇದೆ. ಇದಕ್ಕೆ ಪ್ರಧಾನ ಕಾರಣ ... ಭಾಗವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ...ಗಾರಿಕಾ ವಲಯ.

ಕೇವಲ ಇಪ್ಪತ್ತು ಕಿ.ಮೀ. ದೂರದಲ್ಲಿ ಕೃಷ್ಣಾ ನದಿ ...ರಿಯುತ್ತಿರುವುದು, ಇಡೀ ರಾಜ್ಯದ ಸಾರ್ವಜನಿಕ ...ಲಯದಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿನಲ್ಲಿ ಶೇಕಡ ...ರಷ್ಟನ್ನು ಉತ್ಪಾದಿಸುವ ಒಟ್ಟು 1720 ಮೆಗಾವ್ಯಾಟ್ ...ಮರ್ಥ್ಯದ ಎಂಟು ಘಟಕಗಳ ರಾಯಚೂರು ಶಾಖೋತ್ಪನ್ನ ...ದ್ಯುತ್ ಕೇಂದ್ರ, ಕೇವಲ ಹದಿನಾರು ಕಿ.ಮೀ. ...ದೂರದಲ್ಲಿರುವುದು, ಇನ್ನೂ ತಲಾ 1600 ಮೆಗಾವ್ಯಾಟ್ ...ಮರ್ಥ್ಯದ ಎರಡು ಘಟಕಗಳ ಯರಮರಸ್ ಶಾಖೋತ್ಪನ್ನ ...ಕೇಂದ್ರ ಇನ್ನೇನು ಕೆಲವೇ ತಿಂಗಳುಗಳಲ್ಲಿ ಕಾರ್ಯಾರಂಭ ...ಮಾಡಲು ಸಜ್ಜಾಗಿರುವುದು, ಹೈದರಾಬಾದ್ ಮಹಾನಗರ ...ಕೇವಲ ನಾಲ್ಕು ತಾಸುಗಳ ದೂರ ಇರುವುದು, ಹೈದರಾ ...ಬಾದಿನ ಶಂಷಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ...ಕೇವಲ ಎರಡೂವರೆ ತಾಸುಗಳ ಅಂತರದಲ್ಲಿರುವುದು - ...ಇಗೆ ಹತ್ತು ಹಲವು ಕಾರಣಗಳಿಗಾಗಿ ಈ ನಿರ್ದಿಷ್ಟ ...ಪ್ರದೇಶ ಬಹಳ ವೇಗವಾಗಿ ಬೆಳೆಯುತ್ತಿದೆ.

ಕೈಗಾರಿಕೆ ಮತ್ತು ವಾಣಿಜ್ಯ ವ್ಯವಹಾರಗಳ ದೃಷ್ಟಿಯಿಂದ ...ವ್ಯೂಹತಾಂತ್ರಿಕ ವಲಯ ಎಂದೇ ಪರಿಗಣಿತವಾಗಿರುವ ... ಪ್ರದೇಶದಲ್ಲಿಯೇ ರಾಯಚೂರು ಎಪಿಎಂಸಿ (ಕೃಷಿ ...ಉತ್ಪನ್ನ ಮಾರಾಟ ಸಮಿತಿ) ಒಡೆತನದಲ್ಲಿ ನೂರಾರು ಎಕರೆ ...ಭೂಮಿಯಿದೆ. ಕೃಷಿ ಉತ್ಪನ್ನಗಳ ಮಾರಾಟವನ್ನು ಉತ್ತೇಜಿ...ಸುವ, ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆ ಮಾಡುವ ...ಯೋಜನೆಗಳಿಗೆ ಈ ಜಮೀನು ಮೀಸಲಾಗಿತ್ತು, ಆದರೆ ...ಉದ್ದೇಶಿತ ಕೃಷಿ ಕೈಗಾರಿಕೆಗಳ ಕನಸಿನ ಮೇಲೆ ತಣ್ಣೀರು ...ಎರಚಿರುವ ಅಧಿಕಾರಿಗಳು ಹಾಗೂ ರಾಜಕೀಯ ಪುಢಾರಿ...ಗಳ ದುಷ್ಟಕೂಟ 80 ಎಕರೆ ಜಮೀನನ್ನು ಖಾಸಗಿಯವರಿಗೆ ...ಬಿಡಿಗಾಸಿಗೆ ಮಾರಾಟ ಮಾಡಿ ಭಾರೀ ಹಗರಣ ಸೃಷ್ಟಿಸಿದ್ದಾರೆ.


ಹಗರಣದ ಸಾರ

ಎಪಿಎಂಸಿಯು ನಗರದ ಹೊರವಲಯದಲ್ಲಿರುವ ಹತ್ತಿ




ಮಾರುಕಟ್ಟೆಯ ವ್ಯಾಪ್ತಿಯ ಸುಮಾರು 80 ಎಕರೆ ಜಮೀನಿನಲ್ಲಿ ಎ ಮತ್ತು ಬಿ ಎಂಬ ಎರಡು ವಿಭಾಗಗಳನ್ನು ಮಾಡಿ ಅದರಲ್ಲಿ ವಿವಿಧ ಅಳತೆಯ ನಿವೇಶನಗಳನ್ನು ರಚಿಸಿದೆ. ಅವುಗಳಲ್ಲಿ 38 ನಿವೇಶನಗಳು 2ರಿಂದ 3 ಎಕರೆ ವಿಸ್ತೀರ್ಣ ಹೊಂದಿದ್ದು ಅವುಗಳನ್ನು ಹತ್ತಿ ಜಿನ್ನಿಂಗ್ ಮತ್ತು ಪ್ರೊಸೆಸಿಂಗ್ ಘಟಕಗಳನ್ನು ತೆರೆಯಲಿಚ್ಛಿಸುವ ಉದ್ಯಮಿಗಳಿಗೆ ಮೀಸಲಿಡಲಾಗಿತ್ತು. ಉಳಿದ 55 ನಿವೇಶನಗಳು ಒಂದು ಎಕರೆ ಅಥವಾ ಅದಕ್ಕಿಂತ ಸ್ವಲ್ಪ ಕಡಿಮೆ ವಿಸ್ತೀರ್ಣವನ್ನು ಹೊಂದಿದ್ದು ಅವುಗಳನ್ನು ತರಕಾರಿ ಸಗಟು ವ್ಯಾಪಾರ ಮಳಿಗೆಗಳನ್ನು ತೆರೆಯಲಿಚ್ಛಿಸುವ ಉದ್ಯಮಿಗಳಿಗೆ ಮೀಸಲಿಡಲಾಗಿತ್ತು.


ಈ ಯೋಜನೆಯ ಘೋಷಿತ ಉದ್ದೇಶವೆಂದರೆ ಕೃಷಿ ಆಧಾರಿತ ವ್ಯವಹಾರ ಮಾಡುವ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಿಗಳಿಗೆ ಉತ್ತೇಜನ ನೀಡುವುದು ಹಾಗೂ ಆ ಮೂಲಕ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಿ ರೈತರ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಬರುವಂತೆ



ಶರಣ ಪ್ರಕಾಶ್ ಪಾಟೀಲ್



ಹಂಪನ ಗೌಡ



ವಾಸು

ಮಾಡುವುದು.

ಇದು ಪುಸ್ತಕದ ಬದನೆಕಾಯಿಯ ವಿಚಾರವಾಯ್ತು. ವಾಸ್ತವದಲ್ಲಿ ಅಧಿಕಾರಿಗಳು ತಿನ್ನುತ್ತಿರುವ ಬದನೆಕಾಯಿ ವಿಚಾರವೇ ಬೇರೆ. ಕೃಷಿ ಉದ್ಧಾರದ ಹೆಸರಿನಲ್ಲಿ ಸಾರ್ವಜನಿಕ ಆಸ್ತಿಯನ್ನು ಖಾಸಗಿ ಕುಳಗಳಿಗೆ ದುಗ್ಗಾಣಿ ಬೆಲೆಗೆ ಮಾರಾಟ ಮಾಡಿ ತಾವು ಕೂಡ ಒಂದು ನರಿಪಾಲು ಪಡೆದು ದುಂಡಗಾಗುತ್ತಿದ್ದಾರೆ.

ಎಪಿಎಂಸಿ ಒಡೆತನದಲ್ಲಿರುವ ನಿವೇಶನಗಳ ಮೌಲ್ಯವನ್ನು ಬೇಕಾಬಿಟ್ಟಿಯಾಗಿ ನಿಗದಿಪಡಿಸುವುದಕ್ಕೆ ನಿಯಮಗಳಲ್ಲಿ ಅವಕಾಶವಿಲ್ಲ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳ ಪ್ರಕಾರ ಇಂಥಾ ಬೇಕಾಬಿಟ್ಟಿ ಹಂಚಿಕೆಯಾಗಲಿ, ದರ ನಿಗದಿಯಾಗಲಿ ಅವಕಾಶವಿಲ್ಲ. ಆದರೆ ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಅಡ್ಡಾದಿಡ್ಡಿ ಮೌಲ್ಯ ನಿಗದಿ ಮಾಡಿ, ತಮಗೆ ಬೇಕಾದವರಿಗೆಲ್ಲಾ ಬೆಲೆಬಾಳುವ ನಿವೇಶನಗಳನ್ನು ಪರಭಾರೆ ಮಾಡಿಬಿಟ್ಟಿದ್ದಾರೆ.

ಮುದ್ದುಮೋಹನ್ ಮೋಡಿ!

ಚದರ ಅಡಿಗೆ 1000 ರೂಪಾಯಿ ಬೆಲೆ ಬಾಳುವ ಭೂಮಿಗೆ ಕೇವಲ 80 ರೂಪಾಯಿ ಮಾರಾಟದರವನ್ನು ಕೃಷಿ ಉತ್ಪನ್ನ ಮಾರಾಟ ನಿರ್ದೇಶನಾಲಯ ನಿಗದಿಗೊಳಿಸಿತ್ತು. ಆದರೂ ಭೂಮಿಯನ್ನು ಕಬಳಿಸಲು ಹೊಂಚುಹಾಕಿ ಕೂತಿದ್ದವರಿಗೆ ತೃಪ್ತಿಯಾಗಿರಲಿಲ್ಲ. ಬೆಲೆಯನ್ನು ಇನ್ನೂ ಕಡಿಮೆ ಮಾಡಿಸಿಕೊಳ್ಳಬೇಕೆಂಬುದು ಅವರ ಹುನ್ನಾರ. ಕಾರಣಾಂತರಗಳಿಂದ ಅವರ ಹುನ್ನಾರ ಫಲಿಸಿರಲಿಲ್ಲ.

ಹೀಗಿದ್ದಾಗ ರಾಯಚೂರು ಮೂಲದ ಡಾ. ಮುದ್ದುಮೋಹನ್ ಎಂಬ ಐಎಎಸ್ ಅಧಿಕಾರಿ ಕೃಷಿ ಉತ್ಪನ್ನ ಮಾರಾಟ ನಿರ್ದೇಶಕನಾಗಿ ನೇಮಕವಾಗಿ ಬೆಂಗಳೂರು ಕಚೇರಿಯಲ್ಲಿ ಪೀಠಾಲಂಕಾರ ಮಾಡಿದರು. ಇದು ಈ ಭೂಗಳ್ಳರಿಗೆ ವರದಾನವಾಗಿ ಹೋಯಿತು.

ಅಂತಿಮವಾಗಿ ಮಾನ್ಯ ಮುದ್ದುಮೋಹನ್‌ರವರು ಭೂಗಳ್ಳರಿಗೆ ಅನುಕೂಲವಾಗಲೆಂದೇ ಕಳೆದ ಫೆಬ್ರವರಿ 27ರಂದು ಒಂದು ಆದೇಶ ಹೊರಡಿಸಿದ್ದಾರೆ. ಆ ಪ್ರಕಾರ ಒಟ್ಟು 86 ನಿವೇಶನಗಳನ್ನು ಲೀಸ್ ಕಂ ಸೇಲ್ ಡೀಡ್ ಮೂಲಕ ಮಾರಾಟ ಮಾಡುವುದು; ಅದರಲ್ಲಿ 2-3 ಎಕರೆ ವಿಸ್ತೀರ್ಣದ 28 ನಿವೇಶನಗಳ ದರ ಪ್ರತೀ ಚದರ ಅಡಿಗೆ 40 ರೂಪಾಯಿ! ಒಂದು ಎಕರೆ ವಿಸ್ತೀರ್ಣದ ನಿವೇಶನಗಳ ದರ ಚದರ ಅಡಿಗೆ 80 ರೂಪಾಯಿ! ಇಂಥಾ ಮೋಡಿ ಮಾಡಿದ್ದಕ್ಕೆ ಪ್ರತಿಫಲವಾಗಿ ಆತನಿಗೆ ಕೋಟಿ -ಕೋಟಿ ರೂಪಾಯಿ ಕಾಣಿಕೆ ಸಂದಾಯವಾಗಿದೆಯೆಂದು ರಾಯಚೂರಿನ ಹಾದಿಬೀದಿಗಳಲ್ಲಿ ಬಿಸಿ ಸುದ್ದಿ ಹರಡಿದೆ!! ಇನ್ನೇನು ನಿವೃತ್ತಿಯ ಅಂಚಿನಲ್ಲಿರುವ ಈತ ಸಿಕ್ಕಷ್ಟು ಬಳಿದುಕೊಂಡು ಮನೆ ಸೇರಿದರಾಯ್ತು ಅನ್ನೋ ಲೆಕ್ಕಾಚಾರದಲ್ಲಿರಬಹುದು!


ನಿಯಮ 24ರ ದುರಂತ

ಇಂಥಾ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮಗಳನ್ನು ತಡೆಯಲೆಂದು ಎಪಿಎಂಸಿಯ ನಿಯಮ-24ನ್ನು ರೂಪಿಸಲಾಗಿದೆ. ದುರಂತ ನೋಡಿ. ತನ್ನ ಅಂಧಾದುಂಧಿ ವ್ಯವಹಾರವನ್ನು ಸಮರ್ಥಿಸಿಕೊಳ್ಳಲು ಈ ಮಹಾನುಭಾವ ಅದೇ ನಿಯಮವನ್ನು ಉಲ್ಲಂಘಿಸಿರುವುದು ಒಂದು ಕುಚೋದ್ಯವೇ ಸರಿ.

ನಿಯಮ 24 ಹೀಗಿದೆ: "ಅಧಿಸೂಚಿತ ಮಾರುಕಟ್ಟೆ ಉತ್ಪನ್ನಗಳ ಸಂಬಂಧದಲ್ಲಿ ವ್ಯವಹರಿಸುವ ಮತ್ತು ಮಾರುಕಟ್ಟೆ ಪ್ರದೇಶದಲ್ಲಿ ಲೈಸೆನ್ಸ್ ಹೊಂದಿರುವ ಸಹಕಾರ ಸಂಘಕ್ಕೆ ಅಥವಾ ಉಗ್ರಾಣ ನಿಗಮಕ್ಕೆ ಅಥವಾ ಯಾವುದೇ ಸೇವಾಸಂಸ್ಥೆಗೆ ಸಮಿತಿಯು ನಿರ್ದಿಷ್ಟಪಡಿಸಬಹುದಾದಂಥ ಬಾಡಿಗೆ ಅಥವಾ ಶುಲ್ಕದ ಆಧಾರದ ಮೇಲೆ ಮತ್ತು ಅಂಥ ಶರತ್ತುಗಳಿಗೊಳಪಟ್ಟು, ಗುತ್ತಿಗೆ ಸಹಿತ ಮಾರಾಟದ ಆಧಾರದ ಮೇಲೆ ಅಥವಾ ಕೇಳಿದಾಗ ಬಿಟ್ಟು ಕೊಡುವ ಲೈಸೆನ್ಸ್ ಆಧಾರದ ಮೇಲೆ ನಿವೇಶನಗಳನ್ನು ಹಂಚಿಕೆ ಮಾಡಬಹುದು.

ಈ ನಿಯಮವು ಸಹಕಾರ ಸಂಸ್ಥೆಗೆ, ಉಗ್ರಾಣ ನಿಗಮಕ್ಕೆ ಅಥವಾ ಸೇವಾಸಂಸ್ಥೆಗೆ ಎಂದು ಸ್ಪಷ್ಟವಾಗಿ ನಮೂದಿಸಿದೆ. ಮಾತ್ರವಲ್ಲ, ಮಾರಾಟ ದರದ ವಿನಾಯಿತಿಯ ಬಗ್ಗೆ ಇಲ್ಲಿ ಯಾವುದೇ ಪ್ರಸ್ತಾಪವಿಲ್ಲ. ಹೀಗಿದ್ದರೂ ಈ ನಿಯಮಗಳನ್ನು ಹಳ್ಳಹಿಡಿಸಿರುವ ಮುದ್ದುಮೋಹನ ಬೇಕಾಬಿಟ್ಟಿಯಾಗಿ

⏭ 07



ಕರ್ನಾಟಕ ಸರ್ಕಾರ
ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ,
ಪಿ.ಬಿ.ನಂ.5309, ಬೆಂಗಳೂರು-1.

ವಿಷಯ:- ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಹಾಗೂ ಹತ್ತಿ ಮಾರುಕಟ್ಟೆ ಉಪ ಪ್ರಾಂಗಣದ ಎ ಮತ್ತು ಬಿ ವಿಂಗ್‌ನಲ್ಲಿ ಸಾಮಾನ್ಯ ನಿವೇಶನಗಳನ್ನು ... ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು.

ಉಲ್ಲೇಖ:- 1) ಸಮಿತಿ ಪತ್ರ ಸಂಖ್ಯೆ ... /1341/ 14-15, ದಿ:24-12-2014.
2) ... ದಿ:19/02/2015.
3) ಸಮಿತಿ ಪತ್ರ ಸಂಖ್ಯೆ ... /1986/ 14-15, ದಿ:24-02-2015.

*** *** ***


ಆದೇಶ ಸಂ: ... /2014, ದಿನಾಂಕ:27-02-2015

ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಿ:27-11-2014 ... ರೂ.180/- ... ರೂ.80/- ... ನಿಯಮ-24ರ ... ರೂ.40/- ... 10 ... ನಿಯಮ-10 ಹಾಗೂ ನಿಯಮ-24 ... ಅಭಿವೃದ್ಧಿ) ಅಧಿನಿಯಮ, 1966ರ ...

ಕ್ರ.ಸಂ.		ನಿವೇಶನ ಸಂಖ್ಯೆ
01	[illegible]	[illegible]
02	[illegible]	[illegible]
03	[illegible]	[illegible]

ಮುದ್ದು ಮೋಹನ ರಾಗ...!

ಈ ಕೃಷಿ ಮಾರುಕಟ್ಟೆ ಅಭಿವೃದ್ಧಿ ಅಧಿಕಾರಿ ಮುದ್ದುಮೋಹನ್ ಮೂಲತಃ ರಾಯಚೂರು ಜಿಲ್ಲೆಯವರೇ. ...ಎಎಸ್ ಅಧಿಕಾರಿಯಾಗಿ ಎರಡುವರೆ ದಶಕಗಳ ಕಾಲ ಸೇವೆ ಸಲ್ಲಿಸಿದ ನಂತರ ಐಎಎಸ್ ದರ್ಜೆಗೆ ಬಡ್ತಿ ಪಡೆದವರು. ನಂತರ ರಾಯಚೂರಿನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ, ಆಮೇಲೆ ಉಡುಪಿಯ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ...ಗೆ ನಾನಾ ಹುದ್ದೆಗಳನ್ನು ಅಲಂಕರಿಸಿ ...ದ್ದರೂ ಹೇಳಿಕೊಳ್ಳುವಂತಹ ಸಾಧನೆಯನ್ನೇನೂ ಮಾಡಿಲ್ಲ.



ಅಧಿಕಾರಿಯಾಗಿ ಹೆಸರು ಮಾಡದೇ ಇದ್ದರೂ ಸಂಗೀತ ಕ್ಷೇತ್ರದಲ್ಲಿ ಈತನ ಹೆಸರು ಕೇಳಿಬರುತ್ತದೆ. ಹಿಂದೂಸ್ತಾನಿ ಸಂಗೀತದಲ್ಲಿ ಈತನಿಗೆ ಸಾಕಷ್ಟು ಪರಿಶ್ರಮವಿದೆ. ಅಧಿಕಾರಿಯಾಗಿದ್ದೂ ಸಂಗೀತದೆಡೆಗಿನ ಒಲವು, ಸೆಳೆತಗಳನ್ನು ಉಳಿಸಿಕೊಂಡು ಅದನ್ನು ಪೋಷಿಸಿದ ಸಾಧಕ.

ಸುಮಾರು 80 ಎಕರೆ ಸಾರ್ವಜನಿಕ ಸ್ವತ್ತನ್ನು ... ಖಾಸಗಿ ಖದೀಮರಿಗೆ ಪರಭಾರೆ ಮಾಡಿರುವ ಈ ಆಸಾಮಿ, ನಿಜಕ್ಕೂ ಸಾರ್ವಜನಿಕ ಹಿತಕ್ಕಾಗಿ ...ಮೀನು ಅಗತ್ಯವಿದ್ದಾಗ ಏನು ಮಾಡಬಹುದು? ...ಸೂರಿನ ಒಂದು ಉದಾಹರಣೆ ನೋಡಿ.


ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದ ... ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ (ಮೂಡಾ) ಔಟರ್ ರಿಂಗ್ ರೋಡ್ ಯೋಜನೆ ... 240 ಕೋಟಿ ವೆಚ್ಚದ ಈ ಯೋಜನೆ ... ಇದೇ ಎಪಿಎಂಸಿ ಡೈರೆಕ್ಟರ್. ಯಾಕೆಂದರೆ ರಿಂಗ್‌ರೋಡ್‌ಗೆ ಅಡ್ಡಲಾಗಿ ಬಂಡಿಪಾಳ್ಯ ಎಂಬಲ್ಲಿ ಈ ಇಲಾಖೆಗೆ ಸೇರಿದ 8 ಎಕರೆ ಜಮೀನಿದೆ. ಈ 8 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಪರಿಹಾರ ಪಾವತಿಸುತ್ತೇವೆಂಬ ಮೂಡಾದ ಪ್ರಸ್ತಾಪವನ್ನು ಈ ಆಸಾಮಿ ಏಕಾಏಕಿ ತಿರಸ್ಕರಿಸಿಬಿಟ್ಟಿದ್ದಾನೆ. ಮೈಸೂರು ನಗರದ ಅಭಿವೃದ್ಧಿಗೆ ಸಾರ್ವಜನಿಕರ ಹಿತಕ್ಕೆ ಈ ಯೋಜನೆ ತೀರಾ ಅಗತ್ಯವೆಂದು ಪರಿಪರಿಯಾಗಿ ವಿವರಿಸಿದರೂ ಈತ ಜಪ್ಪಯ್ಯ ಎನ್ನಲಿಲ್ಲ.

ಅಂತಿಮವಾಗಿ ಜಿಲ್ಲಾ ಉಸ್ತುವಾರಿ ಸಚಿವ ಶ್ರೀನಿವಾಸ್ ಪ್ರಸಾದ್ ಅವರೇ ನೇರವಾಗಿ ರಂಗಪ್ರವೇಶ ಮಾಡಬೇಕಾಯ್ತು. ನಂತರ ವರಸೆ ಬದಲಿಸಿದ ಈ ಭೂಮಿ ರಕ್ಷಕ ಬೇರೊಂದು ಪಟ್ಟು ಹಾಕಿ ಕುಳಿತಿದ್ದಾನೆ. ಏನೆಂದರೆ 8 ಎಕರೆ ಜಮೀನಿಗೆ ಬದಲಾಗಿ ಮೂಡಾ ವ್ಯಾಪ್ತಿಯಲ್ಲಿರುವ 8 ಎಕರೆಯನ್ನು ಬಿಟ್ಟುಕೊಟ್ಟರೆ ಮಾತ್ರ ಈತ ಜಮೀನು ಬಿಟ್ಟುಕೊಡುತ್ತಾನಂತೆ. ನಗರ ವ್ಯಾಪ್ತಿಯ ಬೆಲೆಬಾಳುವ ಭೂಮಿ ತನ್ನ ವಶದಲ್ಲಿದ್ದರೆ ಏನೆಲ್ಲಾ ಸಾಧಿಸಬಹುದು ಎಂಬುದರ ಒಳಗುಟ್ಟು ಈತನಿಗೆ ಚೆನ್ನಾಗಿ ಗೊತ್ತು.

ಮೈಸೂರಿನಲ್ಲಿ ಎಂಟು ಎಕರೆ ಭೂಮಿಯನ್ನು ಬಿಟ್ಟುಕೊಡದೆ ರಚ್ಚೆ ಹಿಡಿದು ಕೂತಿರುವ ಈ ಆಸಾಮಿ ರಾಯಚೂರಿನ 80 ಎಕರೆ ಜಮೀನನ್ನು ಮಾತ್ರ ಮನಸೋಇಚ್ಛೆ ಪರಭಾರೆ ಮಾಡಿ ಜಾಲಿಯಾಗಿದ್ದಾನೆ. ಅಂದಹಾಗೆ ಗಾಯಕನಾಗಿರುವ ಈತನಿಗೆ ಬಹಳ ಇಷ್ಟವಾದ ಹಾಡು ಯಾವುದು ಗೊತ್ತೆ?

ನಗುಣಗುತಾ ನಲೀ... ನಲಿ... ಏನೇ ಆಗಲಿ!!

ಲಾಕಪ್ಪಿನಲ್ಲಿ ಬನ್ನಂಜೆ: ಪ್ರವೀಣ್ ಶೆಟ್ಟಿ ಕೈ ಎಷ್ಟು ಉದ್ದ!


ಬನ್ನಂಜೆ ರಾಜ

"ಇವತ್ತು ಬಂದ, ನಾಳೆ ಬರುತ್ತಾನೆ, ಇನ್ನೇನು 'ರಾ' ಅಧಿಕಾರಿಗಳ ತಂಡ ಆತನನ್ನು ಹೆಡೆಮುರಿ ಕಟ್ಟಿ ದೆಹಲಿಗೆ ತಂದೇಬಿಟ್ಟಿತು... ಇತ್ಯಾದಿ ಕೇಳಿಬರುತ್ತಿದ್ದ ಬನ್ನಂಜೆ ರಾಜನ ಬಂಧನದ ಕತೆ ದಿನೇದಿನೇ ನಿಗೂಢವಾಗುತ್ತಲೇ ಇದೆ ಏಕೆ?

ಏಕೆ ಆತನನ್ನು ಭಾರತಕ್ಕೆ ಕರೆತರುವ ಪ್ರಕ್ರಿಯೆ ತಡವಾಗುತ್ತಿದೆ? ಮೊರಾಕ್ಕೋದ ಕಾಸಾಬ್ಲಾಂಕಾದಲ್ಲಿ ರಾಜನನ್ನು ಇಂಟರ್‌ಪೋಲ್ ಸೆರೆಹಿಡಿದ ಸುದ್ದಿಯೇನೋ ವಿಜೃಂಭಿಸಿತು. 'ರಾ' ಅಧಿಕಾರಿಗಳ ತಂಡವೊಂದು ಮೊರಾಕ್ಕೋಗೆ ಕಾಲಿಟ್ಟ ಮಾಹಿತಿಯೂ ಬಂತು. ಬೆನ್ನಲ್ಲೇ ಕರ್ನಾಟಕ ಪೊಲೀಸ್ ತಂಡವೊಂದು ಮೊರಾಕ್ಕೋ ವಿಮಾನ ಹತ್ತಿದ್ದೂ ಕೇಳಿಬಂತು. ಯಾರಿಗೂ ಅರ್ಥವಾಗದ ಸಂಗತಿಯೆಂದರೆ, ಇನ್ನೇನು ತಿಂಗಳು ತುಂಬುತ್ತಾ ಬಂದರೂ ಏಕೆ ರಾಜನನ್ನು ಭಾರತಕ್ಕೆ ಕರೆತರಲಾಗುತ್ತಿಲ್ಲ?

ಸದ್ಯ ಕಾಸಾಬ್ಲಾಂಕಾದಲ್ಲಿ ಬೀಡುಬಿಟ್ಟಿರುವ ಕರ್ನಾಟಕದ ಪೊಲೀಸ್ ಅಧಿಕಾರಿಗಳ ಬಗ್ಗೆಯೂ ಇಲಾಖೆ ಮುಗುಮ್ಮಾಗಿದೆ. ಕರ್ನಾಟಕದ ಕರಾವಳಿ, ಬೆಂಗಳೂರು ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಆತನ ವಿರುದ್ಧ ದಾಖಲಾಗಿರುವ ಅಷ್ಟೂ ಪ್ರಕರಣಗಳನ್ನು ಫ್ರೆಂಚ್ ಭಾಷೆಗೆ ತರ್ಜುಮೆ ಮಾಡಿಸಿ ಅದನ್ನು ಮೊರಾಕ್ಕೋ ಪೊಲೀಸರಿಗೊಪ್ಪಿಸಿದ್ದಾರಂತೆ 'ರಾ' ಅಧಿಕಾರಿಗಳು. ಆತನ ಹಾವಳಿ ಕುರಿತಂತೆ ಇಂಗ್ಲಿಷ್ ಪತ್ರಿಕೆಗಳ ಕಟಿಂಗ್ಸ್, ನ್ಯೂಸ್ ಚಾನಲ್ಲುಗಳ ಕಾರ್ಯಕ್ರಮಗಳು, ವೀಡಿಯೋ, ವಿಶೇಷ ಫೋಟೋಗಳೆಲ್ಲವನ್ನೂ ಪಟ್ಟಿ ಮಾಡಿದ ಕರ್ನಾಟಕದ ಪೊಲೀಸರು ಅದನ್ನು ಮೊರಾಕ್ಕೋ ಪೊಲೀಸರ ಮುಂದಿಟ್ಟದ್ದೂ ಆಗಿದೆ. ಕೇವಲ ಇಂಟರ್‌ಪೋಲ್‌ನ ರೆಡ್‌ಕಾರ್ನರ್ ನೋಟಿಸಿನ ಆಧಾರದ ಮೇಲೆಯೇ ಈ ಹೊತ್ತಿಗೆ ರಾಜನನ್ನು ಮೊರಾಕ್ಕೋ ಸರ್ಕಾರ ಭಾರತಕ್ಕೊಪ್ಪಿಸಬೇಕಿತ್ತು, ಇಷ್ಟೆಲ್ಲಾ ವಿಳಂಬದ ಪ್ರಮೇಯವೇ ಬೇಕಿರಲಿಲ್ಲ.


ಬಹುಶಃ ತನ್ನ ದೇಶದ ಹೂಡಿಕೆದಾರನೊಬ್ಬನ ಬಗ್ಗೆ ಮೊರಾಕ್ಕೋ ಸರ್ಕಾರ ಈ ಪಾಟಿ ಮುತುವರ್ಜಿ ವಹಿಸುತ್ತದೆ ಎಂಬ ಸಂಗತಿ ಮೊದಲೇ ಗೊತ್ತಿದ್ದರೆ ಕರ್ನಾಟಕ ಪೊಲೀಸರಾಗಲಿ, 'ರಾ' ತಂಡವಾಗಲಿ ಅಷ್ಟು ಸುಲಭಕ್ಕೆ ಯಾಮಾರುತ್ತಿರಲಿಲ್ಲವೇನೋ!

ತನ್ನ ದೇಶದ ಯಾರೇ ತೆರಿಗೆದಾರನೊಬ್ಬ ನಿಜಕ್ಕೂ ಕ್ರಿಮಿನಲ್ ಎಂದು ಅಲ್ಲಿನ ಸರ್ಕಾರಕ್ಕೆ ಮನವರಿಕೆಯಾಗದ ಹೊರತು ಅಷ್ಟು ಸುಲಭಕ್ಕದು ಯಾರನ್ನೂ ಬಿಟ್ಟುಕೊಡುವುದಿಲ್ಲ. ಹಾಗೊಮ್ಮೆ ಮತ್ತೊಂದು ದೇಶದ ಪೊಲೀಸರಿಗೆ ಆತನನ್ನೊಪ್ಪಿಸಬೇಕೆಂದರೂ ಆತನ ಅಪರಾಧಗಳನ್ನು ಆ ದೇಶದ ಪೊಲೀಸರು ಅಲ್ಲಿನ ನ್ಯಾಯಾಲಯದಲ್ಲಿ ಸಾಬೀತು ಮಾಡಲೇಬೇಕು. ಇಂಥ ಸರ್ಕಾರಿ ಶಿಷ್ಟಾಚಾರದ ಲಾಭವೋ ಎಂಬಂತೆ ಕಾಸಾಬ್ಲಾಂಕಾದ ಪುದಿ ಹೊಟೇಲಿಯರ್ ಹೇಮಂತ್‌ಕುಮಾರ್ ಹೆಗಡೆಯೇ 'ಕರ್ನಾಟಕದ ನಟೋರಿಯಸ್ ಸುಪಾರಿ ಕಿಲ್ಲರ್ ಬನ್ನಂಜೆ ರಾಜ' ಎಂಬುದನ್ನು ಸಾಬೀತುಮಾಡುವಲ್ಲೇ ಕರ್ನಾಟಕ ಪೊಲೀಸರು ಬೆವರು ಹರಿಸಬೇಕಾಯಿತು.

ಏಕೆಂದರೆ ಇಂಟರ್‌ಪೋಲ್ ರೆಡ್‌ಕಾರ್ನರ್ ನೋಟಿಸಿದ್ದದ್ದು ರಾಜೇಂದ್ರಕುಮಾರ್ ಯಾನೇ ಬನ್ನಂಜೆ ರಾಜ ಎಂಬ ಹೆಸರಲ್ಲಿ, ಆದರೆ ಮೊರಾಕ್ಕೋ ಪೊಲೀಸರ ಪಾಲಿಗಾತ ಜಂಟಲ್‌ಮನ್ ಹೇಮಂತ್ ಕುಮಾರ್ ಹೆಗಡೆ. ಮೊರಾಕ್ಕೋದ ಯಾವುದೇ ಪೊಲೀಸ್ ವ್ಯಾಪ್ತಿಯಲ್ಲಾಗಲಿ, ಮೋಜು ಮಸ್ತಿಗೆ ಹೆಸರಾದ ಕಾಸಾಬ್ಲಾಂಕಾದಲ್ಲಾಗಲಿ ಆತನ ವಿರುದ್ಧ ಸಣ್ಣದೊಂದು ದೂರು ಕೂಡ ದಾಖಲಾಗಿಲ್ಲ, ಪೊಲೀಸರು ಕೊಟ್ಟ ಆತನ ಯಾವುದೋ ಕಾಲದ ಫೋಟೋಗಳಿಗೂ ಈಗಿನ ಆತನ ಗೆಟಪ್ಪಿಗೂ ಅಜಗಜಾಂತರ ವ್ಯತ್ಯಾಸವಿತ್ತು, ಊರು, ಹೆಸರು, ಚಹರೆ, ಯಾವುದೂ ಇಂಟರ್‌ಪೋಲ್‌ನ ವಿವರಗಳಿಗೆ ತಾಳೆ ಹೊಂದುತ್ತಿರಲಿಲ್ಲ. ಹೇಮಂತ್ ಹೆಗಡೆಯೇ ಕೊಲೆ ಪಾತಕಿ ರಾಜ ಎಂದು ಸಾಬೀತುಮಾಡುವುದೇ ಕರ್ನಾಟಕ ಪೊಲೀಸ್ ಅಧಿಕಾರಿಗಳ ಪಾಲಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿತು.

Infact ಪ್ರವೀಣ್ ಶೆಟ್ಟಿ ಎಂಬ ಸ್ವಾಭಿಮಾನಿ ಬಿಜಿನೆಸ್ ಮನ್ ಹಠಕ್ಕೆ ಬಿದ್ದು ಒಂದೆಡೆ ದುಬೈ ಪೊಲೀಸರನ್ನೂ ಮತ್ತೊಂದೆಡೆ 'ರಾ' ಅಧಿಕಾರಿಗಳನ್ನೂ ಬೆನ್ನು ಬೀಳದೇ ಹೋಗಿದ್ದರೆ ಈ ಹೊತ್ತಿಗೆ ಇಂಟರ್‌ಪೋಲ್ ಕಣ್ಣಿಗೆ ಮಣ್ಣೆರಚಿ ಬನ್ನಂಜೆ ಮೊರಾಕ್ಕೋ ಬಿಟ್ಟು ಪರಾರಿಯಾಗಿರುತ್ತಿದ್ದ. ಕಾಸಾಬ್ಲಾಂಕಾ ಆಡಳಿತ ವರ್ಗವನ್ನು ಯಾಮಾರಿಸುವುದು ಆತನಿಗೆ ಕಷ್ಟವೇನಾಗಿರಲಿಲ್ಲ, ಆದರೆ ಪ್ರವೀಣ್ ಶೆಟ್ಟಿ ಎಂಬ ದುಬೈ ಉದ್ದಿಮೆದಾರನ ವಿಷಯದಲ್ಲಿ ಮಾತ್ರ ಬನ್ನಂಜೆಯ ಲೆಕ್ಕಾಚಾರಗಳೆಲ್ಲವೂ ತಲೆಕೆಳಗಾಗಿ ಹೋಗಿತ್ತು!

ಯಾವ ಗಳಿಗೆಯಲ್ಲಾತ ಪ್ರವೀಣ್ ಶೆಟ್ಟರ ರಾಶಿಗೆ ಕಾಲಿಟ್ಟನೋ ಆ ಗಳಿಗೆಯಿಂದಲೇ ಆತನ ಪಾಪದ ಕೊಡವೂ ಭರ್ತಿಯಾಗಿತ್ತು, ಹತ್ತಾರು ವರ್ಷಗಳಿಂದ ದುಬೈನಲ್ಲಿ ಅವಿತು ಕೂತು ಸುಪಾರಿ ಕೊಲೆಗಡುಕರನ್ನು ಛೂಬಿಟ್ಟು ಇಲ್ಲಿ ಒಂದರ ಮೇಲೊಂದು ತಲೆ ತೆಗೆಯುತ್ತಲೇ ಬಂದ ಬನ್ನಂಜೆಯನ್ನು ಅಂಥಾ ಇಂಟರ್‌ಪೋಲ್‌ಗೇ ಬಂಧಿಸಲಾಗಲಿಲ್ಲ, ಸಿಬಿಐ, ರಾ, ಕರ್ನಾಟಕ ಪೊಲೀಸರಿಗೂ ದುಸ್ಸಾಧ್ಯವಾದ ಬನ್ನಂಜೆಯ ಸೆರೆ ಓರ್ವ ಸಾಮಾನ್ಯ ಉದ್ಯಮಿಗೆ ಸಾಧ್ಯವಾಗಿದ್ದಾದರೂ ಹೇಗೆಂಬುದೇ ವಿಚಿತ್ರ ಮತ್ತು ಕುತೂಹಲಕಾರಿ.


ವಕ್ವಾಡಿ ಪ್ರವೀಣ್ ಶೆಟ್ಟಿ


ಶಾರ್ಜಾ ಕರ್ನಾಟಕ ಸಂಘದಿಂದ ಪ್ರವೀಣ್‌ಗೆ ಸನ್ಮಾನ

ಅಷ್ಟಕ್ಕೂ ಈ ಪ್ರವೀಣ್ ಶೆಟ್ಟರ ಹಿನ್ನೆಲೆ, ವ್ಯಕ್ತಿತ್ವ ಪ್ರಭಾವ ಇತ್ಯಾದಿಗಳನ್ನು ಕೆದಕಹೊರಟರೆ ಅದೇ ಮತ್ತೊಂದು ಆಸಕ್ತಿಕರ ಕಥಾನಕವಾಗುತ್ತದೆ. ಅನೇಕರು ಭಾವಿಸಿದಂತೆ ಪ್ರವೀಣ್ ಶೆಟ್ಟರಿಗಾಗಲಿ ಬನ್ನಂಜೆ ರಾಜನಿಗಾಗಲಿ ಈ ಹಿಂದೆ ಯಾವುದೇ ಪರಿಚಯವಾಗಲಿ ಸಂಬಂಧವಾಗಲಿ ಇರಲಿಲ್ಲ, ಮೂಲತಃ ಕುಂದಾಪುರ ಸಮೀಪದ ವಕ್ವಾಡಿಯ ಪ್ರವೀಣ್ ಕುಮಾರ್ ಶೆಟ್ಟರಿಗೂ ಭೂಗತ ಜಗತ್ತಿಗೂ ಏನಕೇನ ಸಂಬಂಧಗಳಿಲ್ಲ, ಅವರ ಸ್ನೇಹಿತರು, ಪರಿಚಿತರು ಬಿಚ್ಚಿಡುವ ಸತ್ಯಾಂಶಗಳು ಈ ಪ್ರಕರಣಕ್ಕಿರುವ ಬೇರೆಯದೇ ಆಯಾಮವೊಂದನ್ನು ತೆರೆದಿಡುತ್ತವೆ. ಅದು ಪ್ರವೀಣ್ ಶೆಟ್ಟಿಯ ಶಿಸ್ತು, ಪರಿಶ್ರಮ ಮತ್ತು ಸಜ್ಜನಿಕೆಯ ತಾಕತ್ತು.

ಆ ಪ್ರಕಾರ ಪ್ರವೀಣ್ ಶೆಟ್ಟಿ ದುಬೈ ಸೇರಿಕೊಂಡೇ ಇವತ್ತಿಗೆ 27 ವರ್ಷಗಳಾಗಿವೆ. ಕುಂದಾಪುರದ ಬಂಡಾರ್‌ಕರ್ಸ್ ಕಾಲೇಜಿನಲ್ಲಿ ಬಿಎಸ್ಸಿ ಮುಗಿಸುವ ಹೊತ್ತಿಗೇ ಪ್ರವೀಣ್ ಶೆಟ್ಟಿ ವಿದ್ಯಾರ್ಥಿ ಮುಖಂಡ ಮತ್ತು ಪ್ರತಿಭಾವಂತ ವಿಜ್ಞಾನದ ವಿದ್ಯಾರ್ಥಿ. ಆ ಹೊತ್ತಿಗೆ ಸಮಾಜಸೇವೆಯ ಗೀಳಿತ್ತು, ಆದರೆ ಹೊಟ್ಟೆಪಾಡು ಅವರನ್ನು ದೂರದ ದುಬೈಗೆ ಕರೆದೊಯ್ದಿತು. ದಿನಕ್ಕೆ 18 ಗಂಟೆಗಳ ಕಠಿಣ ದುಡಿಮೆ, ಶ್ರದ್ಧೆ, ಶಿಸ್ತು ಮತ್ತು ಪರಿಶ್ರಮದ ಫಲವಾಗೇ ಪ್ರವೀಣ್ ಯಶಸ್ಸಿನ ಒಂದೊಂದೇ ಮೆಟ್ಟಲೇರುತ್ತಾ ಬಂದರು. ಹಾಗೆ ನೋಡಿದರೆ ದುಬೈನಲ್ಲಿ ನಡೆಯುವ ತುಳು ಮತ್ತು ಕನ್ನಡದ ಬಹುತೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಈ ಪ್ರವೀಣ್ ಶೆಟ್ಟಿಯೇ ಅತಿ ದೊಡ್ಡ ಪ್ರಾಯೋಜಕ!

ಇತ್ತೀಚೆಗೆ ಅಭುದಾಬಿಯಲ್ಲಿ ನಡೆದ 'ಕುವೆಂಪು ವಿಶ್ವ ಕನ್ನಡ' ಸಮ್ಮೇಳನದಲ್ಲಿ ವಿಶ್ವಮಾನವ ಪ್ರಶಸ್ತಿ, ಕರ್ನಾಟಕ ಸರ್ಕಾರ ಅನಿವಾಸಿ ಕನ್ನಡಿಗರಿಗೆಂದೇ ನೀಡುವ ಆರ್ಯಭಟ ಪ್ರಶಸ್ತಿ, ದುಬೈನ ಕರ್ನಾಟಕ ಬ್ಯಾರಿ ಸಂಘದ ಪುರಸ್ಕಾರ ಮತ್ತು ಶಾರ್ಜಾದ ಕರ್ನಾಟಕ ಸಂಘದ ಗೌರವ ಸಲಹೆಗಾರರಾಗಿಯೂ ಪ್ರವೀಣ್ ಶೆಟ್ಟಿಯ ಸೇವೆಯಿದೆ. ದುಬೈ, ಮಸ್ಕತ್, ಶಾರ್ಜಾ, ಅಭುದಾಬಿ ಮುಂತಾದ ಗಲ್ಫ್‌ನಲ್ಲಿನ ಕನ್ನಡಪರ ಚಟುವಟಿಕೆಗಳಿಗೆ ಪ್ರವೀಣ್ ಶೆಟ್ಟಿಯೇ ಪ್ರೋತ್ಸಾಹಕ ಮತ್ತು ಪ್ರೇರಕ.

ಇತ್ತ ಕರಾವಳಿ ಮತ್ತು ಕುಂದಾಪುರದ ಮಟ್ಟಿಗೆ ನೋಡಿದರೂ ಪ್ರವೀಣ್ ಬಗ್ಗೆ ಸಣ್ಣದೊಂದು ಕೊಂಕೂ ಕೇಳಿಸುತ್ತಿಲ್ಲ. ಕುಂದಾಪುರ, ಬ್ರಹ್ಮಾವರ, ಉಡುಪಿ, ಮಂಗಳೂರು ಸೇರಿದಂತೆ ಈ ಭಾಗದ ಸರಿಸುಮಾರು 1300 ಮಂದಿ ನಿರುದ್ಯೋಗಿಗಳನ್ನು ದುಬೈಗೆ ಕರೆದೊಯ್ದು ಉದ್ಯೋಗ ಕಲ್ಪಿಸಿದ ಬಗ್ಗೆ ಇಲ್ಲಿನ ಜನ ಕೃತಜ್ಞತೆಯಿಂದಲೇ ಪ್ರವೀಣ್‌ರನ್ನು ಸ್ಮರಿಸುತ್ತಾರೆ. ಪ್ರತಿವರ್ಷ ಸಾಮೂಹಿಕ ವಿವಾಹ, ಬಸ್‌ಸ್ಟಾಪ್‌ಗಳ ಮೇಲೆ ಕೊಡುಗೆಯ ಬರಹ, ವಕ್ವಾಡಿಯಲ್ಲಿ 50 ಲಕ್ಷದ ವೆಚ್ಚದಲ್ಲಿ ಕಟ್ಟಿಸಿದ ಈಶ್ವರ ದೇವಸ್ಥಾನ, ಅದಕ್ಕೊಂದೇ ವಕ್ವಾಡಿಯ ರಸ್ತೆಯ ಕಾಮಗಾರಿ, ಈ ಸುತ್ತಮುತ್ತಲ 1500 ಕುಟುಂಬಗಳ ಮಕ್ಕಳಿಗೆ ಪ್ರತಿವರ್ಷ ಫೀಜು-ಪುಸ್ತಕ ಇತ್ಯಾದಿ ಪ್ರವೀಣ್ ಶೆಟ್ಟರ ಸಮಾಜಸೇವೆಯದ್ದೇ ದೊಡ್ಡ ಪಟ್ಟಿಯಿದೆ.

ಹಾಗಂತ ಇದ್ಯಾವುದನ್ನೂ ಪ್ರವೀಣ್ ಹೇಳಿಕೊಂಡವರಲ್ಲ, ತನ್ನ ಸಮಾಜ ಸೇವೆಯ ಕುರಿತಂತೆ ಪ್ರಚಾರವನ್ನೂ ಹಂಬಲಿಸಿದವರಲ್ಲ, ತನ್ನ ಹುಟ್ಟೂರು ವಕ್ವಾಡಿ ಸುತ್ತಮುತ್ತಲ ಹತ್ತಾರು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯೊಂದನ್ನು ರೂಪಿಸಿದ ಪ್ರವೀಣ್ ಅದಕ್ಕೊಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಲಿಲ್ಲ, ತನ್ನ ಸ್ನೇಹಿತರು, ದುಬೈನ ಉದ್ದಿಮೆಗಳಿಂದಲೇ ಹಣ ಸಂಗ್ರಹಿಸುತ್ತಿದ್ದಾರಂತೆ. ಯಾವುದೇ ಪಾರ್ಟಿ, ರಾಜಕೀಯ, ಜಾತಿಯ ಹಂಗಿಲ್ಲದೆ ಸದ್ದುಗದ್ದಲವಿಲ್ಲದೆ ತನ್ನ ಕೆಲಸವೊಂದೇ ಮಾತಾಡಬೇಕೆಂಬ ಪ್ರವೀಣ್‌ರ ಈ ಕಾಳಜಿಯೇ ಈಗ ಅವರ ಪಾಲಿಗೆ ಕುತ್ತಾಗಿ ಪರಿಣಮಿಸಿದೆ.

ಕರಾವಳಿ ಭಾಗದ ದಾನಿಗಳು, ಉದ್ದಿಮೆದಾರರು, ಹೊಟೇಲಿಯರ್‌ಗಳು ಹೀಗೆ ಯಾರೆಲ್ಲ ಅಷ್ಟಿಷ್ಟು ದುಡ್ಡು ಕಂಡಿದ್ದಾರೋ ಅಂಥವರನ್ನೇ ತನ್ನ ಸುಲಿಗೆಯ ಮಿಕವಾಗಿಸಿಕೊಳ್ಳುವುದು ಬನ್ನಂಜೆ ರಾಜನ ದುರ್ಬುದ್ಧಿ. ಜನ್ಮಾಪಿ ದುಡಿದು ಯಾರಾದರೂ ಹೊಸ ಮನೆ ಕಟ್ಟಿಸಿದರೆಂದರೆ ಸಾಕು ಅಂಥವರ ಫೋನ್ ನಂಬರ್, ಕಾರಿನ ನಂಬರ್, ತಂದೆ ತಾಯಿಯ ಹೆಸರು, ಪತ್ನಿಯ ಹೆಸರು, ಮಕ್ಕಳ ಹೆಸರಿನ ಸಮೇತ ರಾಜನಿಗೆ ರವಾನಿಸುವ ದುಷ್ಟಕೂಟವೊಂದು ಈ ಭಾಗದಲ್ಲಿ ಸಕ್ರಿಯವಾಗಿದೆ. ಅದ್ಯಾರು ಛೂಬಿಟ್ಟರೋ, ಕಣ್ಣಿಟ್ಟರೋ ಗೊತ್ತಿಲ್ಲ; ಇಲ್ಲಿಗೆ ಮೂರು ತಿಂಗಳ ಹಿಂದೆಯೇ ಬನ್ನಂಜೆ ಪ್ರವೀಣ್‌ಗೆ ಫೋನ್ ಮಾಡಿ ಐದು ಕೋಟಿಯ ಡಿಮ್ಯಾಂಡಿಟ್ಟಿದ್ದ.

ಕರಾವಳಿ ಭಾಗದಲ್ಲಿ ಚಪ್ರಾಸಿಗೂ ಗೊತ್ತಿರುವ ಸಂಗತಿಯೇನೆಂದರೆ ಮೊದಲು ಕೋಟಿ ಕೇಳಿ, ತದನಂತರ ಅದನ್ನು 50 ಲಕ್ಷಕ್ಕೆ ಇಳಿಸಿ ಗಿರಾಕಿ ಅದಕ್ಕೂ ಜಗ್ಗದೇ ಹೋದರೆ ಕೊನೆಕೊನೆಗೆ ಒಂದೋ ಎರಡೋ ಲಕ್ಷಕ್ಕೆ ಕೈಚಾಚುತ್ತಾನೆ ಬನ್ನಂಜೆ. ಅದು ಆತನ ಕೀಳುಮಟ್ಟ. ಬಹುಶಃ ಬನ್ನಂಜೆಯೇ 'ಗತಿಯಿಲ್ಲ ಸಹಾಯ ಮಾಡಿ' ಎಂದಿದ್ದರೆ ಒಂದೋ ಎರಡೋ ಲಕ್ಷ ಬಿಸಾಕುವುದು ಪ್ರವೀಣ್‌ಗೇನೂ ಕಷ್ಟವಿರಲಿಲ್ಲ. ಆದರೆ ಕೇಡಿ ಬುದ್ಧಿಯಿತ್ತಲ್ಲ; ಐದು ಕೋಟಿ ಕೊಡದೇ ಹೋದರೆ ನಿನ್ನನ್ನೇ ಕೊಲ್ತೀನಿ ಅಂದ. ಅದಕ್ಕೂ ಜಗ್ಗದೇ ಹೋದಾಗ ಊರಿನಲ್ಲಿ ಅವರ ವೃದ್ಧ ತಂದೆತಾಯಿಗಳನ್ನೇ ಮುಗಿಸ್ತೀನಿ ಅಂದ. ವಕ್ವಾಡಿಯಲ್ಲಿದ್ದ ಪ್ರವೀಣ್ ಸಂಬಂಧಿಗಳಿಗೆ ಫೋನ್ ಮಾಡಿ 'ಕೊಲ್ತೀನಿ' ಎಂದು ಧಮಕಿ ಕೊಟ್ಟ.

ಮುಗ್ಧರು, ಅಸಹಾಯಕರನ್ನು ಕೊಂದೇ ಹೊಟ್ಟೆಪಾಡಿಗಿಳಿದ ಬನ್ನಂಜೆಯೇ ಈ ಪಾಟಿ ಅಟ್ಟಹಾಸ ಮೆರೆಯುತ್ತಾನೆಂದರೆ ಇಷ್ಟು ಕಷ್ಟಪಟ್ಟು ದುಡಿದು ಮೇಲೆ ಬಂದ ತನಗಿನ್ನೆಷ್ಟು ಸ್ವಾಭಿಮಾನ ಬೇಡ ಎಂಬ ಹಠಕ್ಕೆ ಬಿದ್ದಿದ್ದಾರೆ ಪ್ರವೀಣ್ ಶೆಟ್ಟಿ. ಒಂದು ಮೂಲದ ಪ್ರಕಾರ ಕರಾವಳಿ ಭಾಗದ ದುಬೈ ಉದ್ದಿಮೆದಾರರು ಮತ್ತು ಕನ್ನಡ ಸಂಘಟನೆಗಳ ಒತ್ತಾಯದ ಮೇರೆಗೇ ಕರ್ನಾಟಕ ಸರ್ಕಾರ ಪ್ರವೀಣ್ ಬೆಂಬಲಕ್ಕೆ ನಿಂತಿದೆ. ದುಬೈನ ಭಾರತೀಯ ಹೈಕಮಿಷನ್ ಪ್ರವೀಣ್ ಸಜ್ಜನಿಕೆಯ ಕುರಿತಂತೆ ಭಾರತಕ್ಕೆ ಮನದಟ್ಟು ಮಾಡಿದೆ. ದೆಹಲಿ ಮಟ್ಟದಲ್ಲೂ ಪ್ರವೀಣ್ ಬಗೆಗಿದ್ದ ಪ್ರೀತಿ, ವಿಶ್ವಾಸಗಳ ಫಲವಾಗಿ ಭಾರತ ಸರ್ಕಾರ ಎಚ್ಚೆತ್ತುಕೊಂಡಿದೆ.

ಇವತ್ತು ಬನ್ನಂಜೆ ಭೂಪಟದ ಯಾವುದೋ ದುಸ್ಸಾಧ್ಯ ದೂರದ, ಭಾರತದ ಕೈಗೆಟುಕಲು ಸಾಧ್ಯವೇ ಇಲ್ಲದ, ದುರ್ಲಭ, ದುಸ್ತರ ಪಾತಾಳದಲ್ಲಿ ಅವಿತು ಕುಳಿತಿದ್ದರೂ ಬಿಡದೆ ಹಿಡಿದು ತರುವುದು ಸಾಧ್ಯವಾಗಿದೆಯೆಂದರೆ ಅದಕ್ಕೆ ಕಾರಣವಾಗಿದ್ದು ಪ್ರವೀಣ್ ಶೆಟ್ಟಿಯ ಛಲ ಮತ್ತು ಸ್ವಾಭಿಮಾನ. ವಿಷಾದದ ಸಂಗತಿಯೆಂದರೆ ದುರುಳ ಬನ್ನಂಜೆಯ ಮೂಲಕ ತಮ್ಮ ಬೇಳೆಬೇಯಿಸಿಕೊಂಡೇ ಬಂದ ಕೆಲ ಘಾತಕ ಹಿತಾಸಕ್ತಿಗಳೇ ರಾಜನಿಗೂ ಪ್ರವೀಣ್‌ಗೂ ಮೊದಲೇ ನಂಟಿತ್ತು, ಅವರದ್ದು ಲೈವ್‌ಬ್ಯಾಂಡ್ ದಂಧೆ, ಅವರಿಗೂ ಮುಂಬಯಿ ಅಂಡರ್‌ವರ್ಲ್ಡ್‌ಗೆ ಸಂಬಂಧವಿತ್ತು ಎಂಬಂತೆ ಕತೆ ಕಟ್ಟುತ್ತಿವೆ.

ಪ್ರವೀಣ್ ಪರಿಶ್ರಮ ಮತ್ತು ಛಲದ ಬಗ್ಗೆ ಗೊತ್ತಿದ್ದೂ ದುರುಳಕ್ಕೆ ಕೈಯಿಟ್ಟ ಕ್ರಿಮಿನಲ್ ಬನ್ನಂಜೆ ಅದಕ್ಕೀಗ ದಂಡ ಕಟ್ಟುತ್ತಿದ್ದಾನೆ. ಕಾಸಾಬ್ಲಾಂಕಾದ ಲಾಕಪ್ಪು ಆತನ ಪಾಲಿಗೀಗ ನರಕದ ವಾಹನವಷ್ಟೆ. ದೆಹಲಿಯ ಟಿಕೆಟ್ಟೂ ಸಿದ್ಧವಾಗಿದೆ. ಆತನ ಹೆಕೆವೆರಿಗಿನ್ನು ಮೂರೇ ಗೇಣು!

■ ರಾ. ಸೋಮನಾಥ್

...ಸಿದ್ದರಾಮಯ್ಯ ಬಜೆಟ್

...4 ◀◀

...ರು, ಮಹಿಳೆಯರಲ್ಲಿನ ಅನಿಮಿಯಾ ಮತ್ತು ಮಕ್ಕಳಲ್ಲಿನ ...ಪೌಷ್ಟಿಕತೆ ಮುಂತಾದವುಗಳ ನಿವಾರಣೆ ಆದ್ಯತೆಯ ...ಂಗತಿಯಾಗಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶ ...ಭಿವೃದ್ಧಿಗೆ 2015-16ನೆಯ ಸಾಲಿನಲ್ಲಿ ಒಟ್ಟು ರೂ. ...300 ಕೋಟಿ (ರೂ. 2,300 ಕೋಟಿ ರೂ. 1,000 ...ೋಟಿ) ಹಣವನ್ನು ಬಜೆಟ್ಟಿನಲ್ಲಿ ಒದಗಿಸಲಾಗಿದೆ. ಆದರೆ ...ದರ ಅಭಿವೃದ್ಧಿಗೆ ದೀರ್ಘಾವಧಿ ಯೋಜನೆಗಳೇನಾದರೂ ...ದ್ಧವಾಗಿದೆಯೇ ಅಂದರೆ ಉತ್ತರ ಇಲ್ಲ. ರಾಜ್ಯಮಟ್ಟದಲ್ಲಿ ...ಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಶೇ. ...9ರಷ್ಟಾದರೆ ಕಲಬುರಗಿ ವಿಭಾಗದಲ್ಲಿ ಅದರ ಪ್ರಮಾಣ ...ೇ. 68. ರಾಜ್ಯಮಟ್ಟದಲ್ಲಿ ದಿನಗೂಲಿ ದುಡಿಮೆಗಾರರ ...ಮಾಣ ಶೇ. 25ರಷ್ಟಿದ್ದರೆ ಕಲಬುರಗಿ ವಿಭಾಗದಲ್ಲಿ ...ದು ಶೇ. 40ರಷ್ಟಿದೆ. ಈ ಹಿನ್ನೆಲೆಯಲ್ಲಿ ಅಲ್ಲಿನ ...ದ್ಯತೆಗಳನ್ನು ಗುರುತಿಸಬೇಕಾಗಿದೆ. ಅಲ್ಲಿನ ಜನರ ...ಸ್ಥಿತಿ-ಬವಣೆಗಳನ್ನು ನಿವಾರಿಸುವುದು ಸಾಮಾನ್ಯ ...ಮಗಳಿಂದ ಸಾಧ್ಯವಿಲ್ಲ. ಅದಕ್ಕೆ ವಿಶೇಷ ಯೋಜನೆಯ ...ಗತ್ಯವಿದೆ. ಆದರೆ ಅಂತಹ ಕ್ರಮ ಬಜೆಟ್ಟಿನಲ್ಲಿ ಕಾಣುತ್ತಿಲ್ಲ. ...ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕಾಗಿದೆ.

ಸಿದ್ದರಾಮಯ್ಯ ಅವರು ತಮ್ಮ ಬಜೆಟ್ ಭಾಷಣದ ...ರಂಭದಲ್ಲಿ 'ಸಾಮಾಜಿಕ ನ್ಯಾಯ ನಿಯಮವು ನನ್ನ ...ರ್ಕಾರದ ಅಡಿಪಾಯ' ಎಂದು ಘೋಷಿಸಿದ್ದಾರೆ. 'ರಾಜ್ಯದಲ್ಲಿ ...ಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ...ಮಾಜಿಕ ನ್ಯಾಯ ಸಿದ್ಧಾಂತದ ಚೌಕಟ್ಟಿನಲ್ಲಿ ರೂಪಿಸಲಾಗುತ್ತಿದೆ' ಎಂಬುದನ್ನು ತಮ್ಮ ಭಾಷಣದಲ್ಲಿ ಖಚಿತಪಡಿಸಿದ್ದಾರೆ. ಇಲ್ಲಿ ನಾವು ಬಜೆಟ್ಟಿನಲ್ಲಿ ಉದ್ದಿಮೆ, ಮೂಲಸೌಕರ್ಯ, ನೀರಾವರಿ, ಇಂಧನ ಮುಂತಾದ ಸಂಗತಿಗಳನ್ನು ಕಡೆಗಣಿಸಿಲ್ಲ ಎಂಬುದನ್ನು ಅವಶ್ಯಕ ಗಮನಿಸಬೇಕು. ಒಟ್ಟಾರೆ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿಗಳ ನಡುವೆ ಸಮತೋಲನವನ್ನು ಸಾಧಿಸಿಕೊಳ್ಳಲು ಇಲ್ಲಿ ಪ್ರಯತ್ನಿಸಿರುವುದು ಕಂಡುಬರುತ್ತದೆ. ಪವಾಡ ಸದೃಶ ರೀತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಿಕೊಂಡಿರುವ ಪೂರ್ವ ಏಷ್ಯಾ ದೇಶಗಳು 70-80ರ ದಶಕಗಳಲ್ಲಿ ಸಮಾನತೆಗೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಆದ್ಯತೆಯನ್ನು ನೀಡಿದ ಕಾರಣವಾಗಿ ಇಂದು ಜಗತ್ತಿನಲ್ಲಿ ಸಮೃದ್ಧ ಆರ್ಥಿಕತೆಗಳಾಗಿ ಅವು ಮೆರೆಯುತ್ತಿವೆ. ಸಮಾನತೆ, ಸಾಮಾಜಿಕ ನ್ಯಾಯ, ಜನರನ್ನು ಒಳಗೊಳ್ಳುವ ನೀತಿಗಳು ಯಾವ ದೇಶದಲ್ಲೂ ಅಭಿವೃದ್ಧಿಗೆ ಕಾಲ್ತೊಡಕಾಗಿ ಪರಿಣಮಿಸಿರುವುದು ಕಂಡುಬಂದಿಲ್ಲ. ಈ ಬಗೆಯ ನೀತಿಗಳನ್ನು ಅನುಸರಿಸಿಕೊಂಡು ಬಂದ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಇಂದು ರಾಷ್ಟ್ರದಲ್ಲಿ ಅಭಿವೃದ್ಧಿಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದಿವೆ. ಗುಜರಾತ್ ಮಾದರಿಯ ಬಗ್ಗೆ ತುಂಬಾ ಮಾತನಾಡಲಾಗುತ್ತಿದೆ. ಆದರೆ ಸಮೃದ್ಧ ಬದುಕನ್ನು ಜನರಿಗೆ ನೀಡಿರುವ ಕೇರಳ ಮತ್ತು ತಮಿಳುನಾಡು ಮಾದರಿ ಬಗ್ಗೆ ಯಾರೂ ಚಕಾರವೆತ್ತುತ್ತಿಲ್ಲ. ಕೇರಳ ಮತ್ತು ತಮಿಳುನಾಡುಗಳು ಮತ್ತು ಕೆಲವೊಂದು ವಿಷಯದಲ್ಲಿ ಕರ್ನಾಟಕ ಅಭಿವೃದ್ಧಿಯಲ್ಲಿ ಗುಜರಾತ್ ರಾಜ್ಯಕ್ಕಿಂತ ಬಹಳ ಮುಂದಿವೆ. ಲಿಂಗ ಸಮಾನತೆಗೆ ಸಂಬಂಧಿಸಿದಂತೆ ಸದರಿ ರಾಜ್ಯಗಳಿಗಿಂತ ಗುಜರಾತ್ ಅನೇಕ ದಶಕಗಳು ಹಿಂದಿದೆ.

ಬಜೆಟ್ ನಿರ್ವಹಣೆಯಲ್ಲಿನ ಸಮಸ್ಯೆಗಳು

ನಮ್ಮ ಬಜೆಟ್ಟಿನಲ್ಲಿ ಕಂಡುಬರುತ್ತಿರುವ ಸಮಸ್ಯೆಯೆಂದರೆ ಅನೇಕ ಸಂದರ್ಭಗಳಲ್ಲಿ ಬಜೆಟ್ಟಿನಲ್ಲಿ ಒದಗಿಸಿದ ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡುತ್ತಿಲ್ಲ, ಬಿಡುಗಡೆಯಾದ ಮೊತ್ತವನ್ನು ಪೂರ್ಣವಾಗಿ ಖರ್ಚು ಮಾಡುತ್ತಿಲ್ಲ, ಇದನ್ನು ಸರಿಪಡಿಸಬೇಕಾಗಿದೆ. ಎಲ್ಲ ಇಲಾಖೆಗಳು ವರ್ಷದ ಕೊನೆಯ ಮೂರು ತಿಂಗಳ ಅವಧಿಯಲ್ಲಿ ತರಾತುರಿಯಲ್ಲಿ ಬಜೆಟ್ಟಿನ ಹಣವನ್ನು ಖರ್ಚು ಮಾಡಲು ಪ್ರಯತ್ನಿಸುತ್ತವೆ. ಈ ಆಡಳಿತಾತ್ಮಕ ವಿಕೃತಿ ನಿಲ್ಲಬೇಕು.

ಎರಡನೆಯದಾಗಿ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳಲ್ಲಿ ಅನುಕೂಲಗಳು ಯಾರಿಗೆ ತಲುಪಬೇಕೋ ಅವರಿಗೆ ತಲುಪುತ್ತಿಲ್ಲ. ಈ ಕಾರ್ಯಕ್ರಮಗಳಲ್ಲಿ ಅಪಾರ ಪ್ರಮಾಣದ ಸೋರಿಕೆಯಿದೆ. ಇದನ್ನು ನಿಲ್ಲಿಸುವುದರ ಬಗ್ಗೆ ನಾವು ಗಂಭೀರವಾಗಿ ಕಾರ್ಯ ಪ್ರವೃತ್ತರಾಗಬೇಕಾದ ಅಗತ್ಯವಿದೆ. ಇದು ಕೇವಲ ಸರ್ಕಾರದ ಕೆಲಸವಲ್ಲ, ನಾಗರಿಕ ಸಮಾಜವೂ ಇದರಲ್ಲಿ ಸಹಭಾಗಿಯಾಗಬೇಕು.

ಮೂರನೆಯದಾಗಿ ನಮ್ಮ ಆಡಳಿತ ಇಲಾಖೆಗಳಲ್ಲಿ ಸಾಮಾಜಿಕ ಗುಂಪುವಾರು ಮಾಹಿತಿ ಸಂಗ್ರಹಿಸುವ ಕ್ರಮವಿಲ್ಲ. ಪ.ಜಾ ಮತ್ತು ಪ.ಪಂ.ಗಳ ಬಗ್ಗೆ ನಮಗೆ ಜನಗಣತಿಯಲ್ಲಿ ಮಾಹಿತಿ ದೊರೆಯುತ್ತದೆ. ಆದರೆ ಅಲ್ಪಸಂಖ್ಯಾತರ ಬಗ್ಗೆ ಮತ್ತು ಒಬಿಸಿಗಳ ಬಗ್ಗೆ ಬಿಡಿ ಬಿಡಿ ಅಭಿವೃದ್ಧಿ ಮಾಹಿತಿ ದೊರೆಯುತ್ತಿಲ್ಲ. ಈ ಬಗ್ಗೆ ಸರ್ಕಾರ ತನ್ನ ಸಾಮಾಜಿಕ ನ್ಯಾಯನೀತಿಗೆ ಅನುಗುಣವಾಗಿ ಅಭಿವೃದ್ಧಿ ಅಂಕಿಅಂಶಗಳನ್ನು ಸಾಮಾಜಿಕ ಗುಂಪುವಾರು ಸಂಗ್ರಹಿಸುವ, ವರ್ಗೀಕರಿಸುವ ಮತ್ತು ಪ್ರಕಟಿಸುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ.

ಕೊನೆಯದಾಗಿ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯ ಸಂಭಾವ್ಯ ಸಾಮರ್ಥ್ಯ ಪ.ಜಾ, ಪ.ಪಂ, ಅಲ್ಪಸಂಖ್ಯಾತರು, ಒಬಿಸಿ ಮತ್ತು ಮಹಿಳೆಯರಲ್ಲಿ ಅಗಣಿತವಾಗಿದೆ. ಸದ್ಯ ಅವರ ಅಭಿವೃದ್ಧಿ ಸಾಮರ್ಥ್ಯ ಸಮಾಜಕ್ಕೆ ದಕ್ಕುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ಧಾರಣಾ ಸಾಮರ್ಥ್ಯ ಕೆಳಮಟ್ಟದಲ್ಲಿದೆ ಮತ್ತು ಅವರು ಅನೇಕ ಬಗೆಯ ಅಸಮಾನತೆಗಳಿಂದ ಜರ್ಜರಿತರಾಗಿದ್ದಾರೆ. ಅಭಿವೃದ್ಧಿಯ ಫಲಗಳನ್ನು ಉಳ್ಳವರು ಸಾರಾಸಗಟು ಬಳಿದುಕೊಳ್ಳುತ್ತಿದ್ದಾರೆ. ಈ ಬಜೆಟ್ಟಿನ ಮೂಲಕ ಸಿದ್ದರಾಮಯ್ಯ ಸರ್ಕಾರವು ಅಭಿವೃದ್ಧಿಯ ಅವಕಾಶಗಳನ್ನು ಒಂದು ಕಡೆ ವಿಸ್ತರಗೊಳಿಸುವುದರ ಬಗ್ಗೆ ಗಮನ ನೀಡುತ್ತಿದ್ದರೆ ಮತ್ತೊಂದು ಕಡೆ ಹರಿದು ಬರುತ್ತಿರುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳಲು ಪ.ಜಾ. ಪ.ಪಂ. ಒಬಿಸಿ, ಅಲ್ಪಸಂಖ್ಯಾತರು ಮತ್ತು ಮಹಿಳೆಯರಿಗೆ ಅಗತ್ಯವಾದ ಧಾರಣಾ ಸಾಮರ್ಥ್ಯವನ್ನು ಉತ್ತಮ ಪಡಿಸಲು ಪ್ರಯತ್ನಿಸುತ್ತಿದೆ. ಇಂದು ದೇಶಾದ್ಯಂತ ವರಮಾನ ವರ್ಧನೆ ಬಗ್ಗೆ, ಅವಕಾಶಗಳ ವಿಸ್ತೃತತೆಯ ಬಗ್ಗೆ, ಬಂಡವಾಳ ಹೂಡಿಕೆಯ ಬಗ್ಗೆ ಮಾತನಾಡಲಾಗುತ್ತಿದೆ. ಹೀಗೆ ವಿಸ್ತರಗೊಂಡ ಅವಕಾಶಗಳು ಮತ್ತು ಏರಿಕೆಯಾದ ವರಮಾನ ವಂಚಿತರಿಗೆ, ಅಂಚಿನಲ್ಲಿರುವವರಿಗೆ, ಸಾಮಾಜಿಕ ಪ್ರತ್ಯೇಕತನವನ್ನು ಎದುರಿಸುತ್ತಿರುವವರಿಗೆ ಹೆಚ್ಚು ಹೆಚ್ಚು ದೊರೆಯುವಂತೆ ಮಾಡಲು ಪ್ರಸ್ತುತ ಬಜೆಟ್ಟಿನಲ್ಲಿ ಪ್ರಯತ್ನಿಸಲಾಗಿದೆ.

ಇದು ಎಲ್ಲರನ್ನೂ ಸಮಾಧಾನಪಡಿಸುವ ಬಜೆಟ್ಟಲ್ಲ, ಇದಕ್ಕೆ ಪ್ರತಿಯಾಗಿ ಇದು ಎಲ್ಲರನ್ನು ಒಳಗೊಳ್ಳುವ ಬಜೆಟ್ಟಾಗಿದೆ. ಇದಕ್ಕೆ ಒಂದು ಸ್ಪಷ್ಟ ಗುರಿಯಿದೆ. ಅದಕ್ಕೆ ತಕ್ಕ ಕಾರ್ಯಾಚರಣೆಯಿದೆ. ಈ ಬಜೆಟ್ಟಿಗೆ ಸಮಾನತೆಯನ್ನು ಆಧರಿಸಿದ ಒಂದು ಸೈದ್ಧಾಂತಿಕ ನೆಲೆಗಟ್ಟಿದೆ.

■ ಡಾ.ಟಿ.ಆರ್.ಚಂದ್ರಶೇಖರ,

...ರಾಯಚೂರು: ಎಪಿಎಂಸಿಯಲ್ಲಿ

...05 ◀◀

...ವೇಶನಗಳನ್ನು ಹಂಚಿದ್ದಲ್ಲದೆ, ಬಿಡಿಗಾಸಿನ ದರ ನಿಗದಿಯ ...ನ ಕ್ರಮವನ್ನು ಸಮರ್ಥಿಸಿಕೊಳ್ಳಲು ಇದೇ ನಿಯಮವನ್ನು ...ಉಲ್ಲೇಖಿಸಿದ್ದಾನೆಂದರೆ ಈತನಿಗೆ ಹೇಳೋರು ಕೇಳೋರು ...ಯಾರಾದರೂ ಇದ್ದಾರೆಯೆ?

...ಭಾರಿ ಕುಳಗಳ ಬಾಯಿಗೆ ಭಾರಿ ನಿವೇಶನ

ಎಪಿಎಂಸಿಯ ಸೊತ್ತುಗಳನ್ನು ಲೀಸ್ ಕಂ ಸೇಲ್ ...ಡ್ ಆಧಾರದಲ್ಲಿ ಕಂಡಕಂಡ ಹಾದಿಹೋಕರಿಗೆ ...ಮಾರುವುದಕ್ಕೆ ನಿಯಮಗಳು ಅವಕಾಶ ಕೊಡುವುದಿಲ್ಲ. ...ಈ ನಿವೇಶನಗಳನ್ನು ಪಡೆಯುವ ಉದ್ಯಮಿಗಳು ಅಥವಾ ...ವರ್ತಕರು ಕನಿಷ್ಠ ಹಿಂದಿನ ಮೂರು ವರ್ಷಗಳಿಂದ ಲೈಸನ್ಸ್ ...ಪಡೆದು ಎಪಿಎಂಸಿಯಲ್ಲಿ ವ್ಯವಹಾರ ಮಾಡುತ್ತಿರುವ ...ವರ್ತಕನಾಗಿರಬೇಕು. ಅಲ್ಲದೇ, ಹಿಂದಿನ ವರ್ಷಗಳ ...ರಿಗೆಗಳನ್ನು ಪ್ರಾಮಾಣಿಕವಾಗಿ ಕಟ್ಟಿರಬೇಕು. ನಿವೇಶನ ...ಪಡೆಯುವುದಕ್ಕೆ ಅರ್ಜಿ ಹಾಕಿದ ಜನರಲ್ಲಿ ಅತ್ಯಂತ ...ಸೀನಿಯರ್‌ಗಳನ್ನು ಆಯ್ಕೆಗೆ ಪರಿಗಣಿಸಬೇಕು. ಹೀಗೆ ಹತ್ತು ...ಹಲವು ನಿಯಮಗಳಿವೆ. ಆದರೆ, ರಾಯಚೂರಿನಲ್ಲಿ ...ನಿವೇಶನಗಳನ್ನು ಹಂಚಿಕೆ ಮಾಡುವಾಗ ಈ ಯಾವ ...ನಿಯಮಗಳನ್ನೂ ಪಾಲಿಸಿಲ್ಲ. ನಿವೇಶನ ಮಾರಾಟದ ಬಗ್ಗೆ ...ಅಧಿಸೂಚನೆ ಹೊರಬಿದ್ದ ಮೇಲೆ ನಿವೇಶನ ...ಗಿಟ್ಟಿಸಿಕೊಳ್ಳುವುದಕ್ಕಾಗಿಯೇ ಲೈಸನ್ಸ್ ಪಡೆದ ಹಲವರಿಗೆ ...ನಿವೇಶನ ಮಂಜೂರು ಮಾಡಲಾಗಿದೆ!

15	[illegible]ಲಕ್ಷ್ಮಿದೇವಿ, ಮೆ|| ಶಿವಾ ಟ್ರೇಡಿಂಗ್ ಕಂ., ಪ್ಲಾಟ್ ನಂ.13, ರಾಜೇಂದ್ರ ಗಂಜ್ ರಾಯಚೂರು	ಎ ವಿಂಗ್ 26
16	ಜಿ.ವೀರನಗೌಡ, ಮೆ|| ಶ್ರೀ ಸಿದ್ದರಾಮೇಶ್ವರ ಟ್ರೇಡಿಂಗ್ ಕಂಪನಿ, ಮರ್ಚೆಂಟ್ಸ್ & ಕಮಿಷನ್ ಏಜೆಂಟ್ಸ್ ಪ್ಲಾಟ್ ನಂ.7 ಶಾಪ್ ನಂ.55 ರಾಜೇಂದ್ರ ಗಂಜ್ ರಾಯಚೂರು.	ಬಿ ವಿಂಗ್ 64
17	[illegible], ರವಿ ಟ್ರೇಡಿಂಗ್ ಕಂಪನಿ ಪ್ಲಾಟ್ ನಂ.10/76 ರಾಜೇಂದ್ರ ಗಂಜ್ ರಾಯಚೂರು	ಎ ವಿಂಗ್ 17
18	[illegible] ಪಾಟೀಲ್, ಶ್ರೀ [illegible] ಟ್ರೇಡಿಂಗ್ ಕಂಪನಿ, [illegible] ರಾಜೇಂದ್ರ ಗಂಜ್ ರಾಯಚೂರು.	ಎ ವಿಂಗ್ 07
19	[illegible], ಗೋವಿಂದ್ ಟ್ರೇಡಿಂಗ್ ಕಂಪನಿ, ಪ್ಲಾಟ್ ನಂ.16 ರಾಜೇಂದ್ರ ಗಂಜ್ ರಾಯಚೂರು	ಬಿ ವಿಂಗ್ 63
20	[illegible], [illegible] ಟ್ರೇಡಿಂಗ್ ಕಂಪನಿ, ಪ್ಲಾಟ್ ನಂ.4 ಶಾಪ್ ನಂ.29, ರಾಜೇಂದ್ರ ಗಂಜ್ ರಾಯಚೂರು	ಎ ವಿಂಗ್ 06
21	[illegible], [illegible] ಟ್ರೇಡರ್ಸ್ ಪ್ಲಾಟ್ ನಂ.14 ಬಿ, ರಾಜೇಂದ್ರ ಗಂಜ್ ರಾಯಚೂರು	ಬಿ ವಿಂಗ್ 60
22	[illegible], [illegible] ಟ್ರೇಡರ್ಸ್, ಪ್ಲಾಟ್ ನಂ.14, ರಾಜೇಂದ್ರ ಗಂಜ್ ರಾಯಚೂರು.	ಬಿ ವಿಂಗ್ 61
23	[illegible], [illegible] & ಸನ್ಸ್, ಪ್ಲಾಟ್ ನಂ.18 ಶಾಪ್ ನಂ.143, ರಾಜೇಂದ್ರ ಗಂಜ್ ರಾಯಚೂರು	ಬಿ ವಿಂಗ್ 62
24	[illegible] & ಸನ್ಸ್, ಪ್ಲಾಟ್ ನಂ. 08, ಶಾಪ್ ನಂ. 61, ರಾಜೇಂದ್ರ ಗಂಜ್, ರಾಯಚೂರು.	ಎ ವಿಂಗ್ 18
25	[illegible] ಟ್ರೇಡರ್ಸ್ ಪ್ಲಾಟ್ ನಂ 6 ಶಾಪ್ ನಂ. 64, ರಾಜೇಂದ್ರ ಗಂಜ್, ರಾಯಚೂರು	ಎ ವಿಂಗ್ 24
26	[illegible] ಪ್ಲಾಟ್ ನಂ.5 ಶಾಪ್ ನಂ.36, ರಾಜೇಂದ್ರ ಗಂಜ್ ರಾಯಚೂರು	ಬಿ ವಿಂಗ್ [illegible]
27	[redacted], [illegible] ರಾಯಚೂರು. [illegible]	ಎ ವಿಂಗ್ 20
28	[redacted], #1-4-[illegible]/12 [illegible] ರಾಯಚೂರು. [illegible]	ಬಿ ವಿಂಗ್ 66
	[illegible]	
1	[illegible] ಟ್ರೇಡರ್ಸ್ [illegible] ರಾಜೇಂದ್ರ ಗಂಜ್ ರಾಯಚೂರು.	18
2	[illegible] ಟ್ರೇಡರ್ಸ್ [illegible] ನಂ.2 ಶಾಪ್ ನಂ.8, ರಾಜೇಂದ್ರ ಗಂಜ್ ರಾಯಚೂರು.	20
3	[illegible] ರಾಯಚೂರು	22
4	[illegible] ರಾಯಚೂರು.	02

ಉದಾಹರಣೆಗೆ, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಹಾಗೂ ತುಂಗಭದ್ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ವಸಂತಕುಮಾರ್ ಮೂಲತಃ ಎಪಿಎಂಸಿ ವರ್ತಕರಲ್ಲ, ಹಿಂದಿನ ಮೂರು ವರ್ಷಗಳ ಲೈಸನ್ಸ್ ಕೂಡ ಅವರ ಬಳಿ ಇಲ್ಲ. ಅಧಿಸೂಚನೆ ಹೊರಬೀಳುವುದು ಗೊತ್ತಾಗುತ್ತಿದ್ದಂತೆಯೇ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದರು. ಅವರಿಗೆ 2-3 ಎಕರೆ ವಿಸ್ತೀರ್ಣದ ನಿವೇಶನವನ್ನು ಮಂಜೂರು ಮಾಡಲಾಗಿದೆ. ಈ ಬಗ್ಗೆ ಅವರನ್ನು ಪ್ರಶ್ನಿಸಿದಾಗ "ನಾನು ಪರಿಶಿಷ್ಟ ಜಾತಿ ಮೀಸಲು ಕೋಟಾದ ಅಡಿಯಲ್ಲಿ ನಿವೇಶನ ಪಡೆದಿದ್ದೇನೆ ಎಂದು ಸಮಜಾಯಿಷಿ ನೀಡುತ್ತಾರೆ. ಆದರೆ, ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಲೈಸೆನ್ಸ್ ಅಗತ್ಯವಿಲ್ಲವೆಂದು ಯಾವ ನಿಯಮದಲ್ಲಿದೆ?

ಅದೇ ರೀತಿ, ಇನ್ನೊಬ್ಬ ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಎಮ್ಮೆಲ್ಲೆ ರಾಯಪ್ಪ ನಾಯಕರ ಮಗ ಅಕ್ಷಯ ನಾಯಕ ಕೂಡ ನಿವೇಶನವೊಂದನ್ನು ಗಿಟ್ಟಿಸಿಕೊಂಡಿದ್ದಾನೆ. ಸಿಂಧನೂರಿನ ಶಾಸಕ ಹಂಪನಗೌಡ ಬಾದರ್ಲಿ ಕೂಡ ತನ್ನ ಸಂಬಂಧಿಯೊಬ್ಬನಿಗೆ ಒಂದು ನಿವೇಶನ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮಾಜಿ ಎಮ್ಮೆಲ್ಲೆ ರಾಯಪ್ಪ ನಾಯಕನ ಬಲಗೈ ಭಂಟ ಗಾರಲದಿನ್ನಿ ಸಿದ್ದನಗೌಡ ಬೇರೆ ಬೇರೆ ಹೆಸರುಗಳಲ್ಲಿ ಎಂಟು ನಿವೇಶನ ಪಡೆದುಕೊಂಡಿದ್ದಾನೆಂದರೆ ಮುದ್ದುಮೋಹನನಿಗೂ ಇವರಿಗೂ ಎಂಥಾ ವ್ಯವಹಾರ ಕುದುರಿರಬಹುದು? ವಿಶೇಷ ಎಂದರೆ ಇವರ್ಯಾರೂ ಎಪಿಎಂಸಿ ವರ್ತಕರಾಗಲೀ, ಉದ್ಯಮಿಗಳಾಗಲೀ ಅಲ್ಲ.

ಎಪಿಎಂಸಿಯ ಅಧ್ಯಕ್ಷ ನರಸನಗೌಡ, ಕಾರ್ಯದರ್ಶಿ ವಿ.ವಿ.ಪೂಜಾರಿ ನಿಯಮಗಳ ಉಲ್ಲಂಘನೆಯಾಗಿದ್ದನ್ನು ಒಪ್ಪಿಕೊಳ್ಳುತ್ತಲೇ ತಮ್ಮ ನಡೆಯನ್ನು ಸಮರ್ಥಿಸಿಕೊಳ್ಳುವ ಭಂಡತನ ತೋರುತ್ತಿದ್ದಾರೆ.

"ಪರಿಶಿಷ್ಟ ಜಾತಿಗೆ ಮೀಸಲಿಟ್ಟಿದ್ದ ಎರಡು ನಿವೇಶನಗಳಿಗೆ ಬಂದಿದ್ದು ವಸಂತಕುಮಾರ್ ಅವರ ಅರ್ಜಿಯೊಂದೇ. ಹಾಗಾಗಿ, ಅರ್ಹತೆ ಇಲ್ಲದಿದ್ದರೂ ಅವರನ್ನು ಪರಿಗಣಿಸಲಾಗಿದೆ" ಎಂಬುದು ನರಸನಗೌಡರ ಹೇಳಿಕೆ. ಕೃಷಿ ಮಾರುಕಟ್ಟೆ ವ್ಯವಹಾರದಲ್ಲಿ ಯಾವುದೇ ಸಂಬಂಧವಿಲ್ಲದ ವ್ಯಕ್ತಿಗಳಿಗೆ ಈ ನಿವೇಶನಗಳನ್ನು ಅರ್ಜೆಂಟಾಗಿ ಮಾರಿಬಿಡುವಂಥಾ ತುರ್ತು ಏನಿತ್ತು? ಎಪಿಎಂಸಿ ಅಧ್ಯಕ್ಷಗಿರಿ ಎಂದರೆ ರಿಯಲ್ ಎಸ್ಟೇಟ್ ಬ್ರೋಕರ್ ಹುದ್ದೆಯೇ?

ನರಸನಗೌಡನ ವಾದ ಹಾಗಿರಲಿ. ವಾಸ್ತವದಲ್ಲಿ ಮಾರಾಟಕ್ಕೆ ಲಭ್ಯವಿರುವ ನಿವೇಶನಗಳಿಗಿಂತಲೂ ಹೆಚ್ಚಿನ ಅರ್ಜಿಗಳು ಬಂದಿದ್ದವು. ನಿಯಮಗಳ ಪ್ರಕಾರ ಹಂಚಿಕೆ ಮಾಡಿದ್ದರೆ ಸೀನಿಯಾರಿಟಿ ಆಧಾರದಲ್ಲಿ ಮೊದಲು ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಬೇಕಾಗುತ್ತಿತ್ತು. ಆದರೆ ಈ ದುಷ್ಟಕೂಟ ಆ ಅರ್ಜಿದಾರರ ಮೇಲೆ ಬಹಳಷ್ಟು ಒತ್ತಡ ತಂದು, ಏಕಕಾಲಕ್ಕೆ ಅಷ್ಟೂ ದುಡ್ಡು ಕಟ್ಟಬೇಕಾಗುತ್ತೆ ಎಂದು ಹೆದರಿಸಿ ಅರ್ಜಿಗಳನ್ನು ವಾಪಾಸು ತೆಗೆದುಕೊಳ್ಳುವಂತೆ ಮಾಡಿದ್ದಾರೆ. ಮೊನ್ನೆ ಮೊನ್ನೆ ಅರ್ಜಿ ಹಾಕಿದ ಅನರ್ಹ ಅಭ್ಯರ್ಥಿಗಳಿಗೆ ನಿವೇಶನ ಮಂಜೂರಾಗುವಂತೆ ನೋಡಿಕೊಂಡಿದ್ದಾರೆ.

ಭವಿಷ್ಯದ ಯೋಜನೆಗಳಿಗೆ ಜಾಗವಿಲ್ಲ


ಈ ಹಿಂದೆಯೂ ಎಪಿಎಂಸಿ ಒಡೆತನದ ಭೂಮಿಯನ್ನು ಬೇರೆ ಇಲಾಖೆಗಳಿಗೆ ನೀಡುವುದಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು. ಉದಾಹರಣೆಗೆ, ದೇವರಾಜು ಅರಸು ಟ್ರಕ್ ಟರ್ಮಿನಲ್ ಲಿಮಿಟೆಡ್ ಎಂಬ ರಾಜ್ಯ ಸರ್ಕಾರದ ಒಡೆತನದ ಸಂಸ್ಥೆಯು ಟ್ರಕ್ ಟರ್ಮಿನಲ್ ನಿರ್ಮಿಸುವುದಕ್ಕಾಗಿ 14 ಎಕರೆ ಭೂಮಿಯನ್ನು ಕೇಳಿದ್ದರು. ಎಪಿಎಂಸಿ ಆ ಭೂಮಿಯನ್ನು ಕೊಟ್ಟಿದ್ದರೆ ಅಲ್ಲೊಂದು ಸರ್ಕಾರದ್ದೇ ಸುಸಜ್ಜಿತ ಟ್ರಕ್ ಟರ್ಮಿನಲ್ ತಲೆಯೆತ್ತುತ್ತಿತ್ತು. ಅದರಿಂದ ರೈತರ ಉತ್ಪನ್ನ ಸಾಗಾಟಕ್ಕೂ ಅನುಕೂಲವಾಗುತ್ತಿತ್ತು. ಆದರೆ ಎಪಿಎಂಸಿ ಮುಂದೆ ತಾನು ಕೈಗೆತ್ತಿಕೊಳ್ಳಲಿರುವ ಹೊಸ ಹೊಸ ಯೋಜನೆಗಳಿಗೆ ಭೂಮಿ ಬೇಕಾಗುತ್ತದೆ ಎಂಬ ಕಾರಣವೊಡ್ಡಿ ಜಮೀನು ಕೊಡಲು ನಿರಾಕರಿಸಿತು. ಎಪಿಎಂಸಿ ಎಂಥಾ ಘನಂದಾರಿ ಯೋಜನೆ ರೂಪಿಸಿದೆ ಎಂಬುದು ಈಗ ಬಟಾಬಯಲಾಗಿದೆ.

ಕೇಂದ್ರ ಸರ್ಕಾರವು ರಫ್ತು ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಂಬಂಧಪಟ್ಟ ಚಟುವಟಿಕೆಗಳಿಗಾಗಿ ರಾಜ್ಯಗಳಿಗೆ ನೀಡುವ ಸಹಾಯಧನ (ಅಸೈಡ್) ಅಡಿಯಲ್ಲಿ 40 ಕೋಟಿ ರೂಪಾಯಿಗಳನ್ನು ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಈ ಹಿಂದೆ ಎಪಿಎಂಸಿ ಮನವಿ ಮಾಡಿಕೊಂಡಿತ್ತು. ಹಣ ಬಿಡುಗಡೆಯ ಪ್ರಕ್ರಿಯೆ ಜಾರಿಯಲ್ಲಿದ್ದು ಇನ್ನೇನು ಬಿಡುಗಡೆಯಾಗುವ ಸಾಧ್ಯತೆಯೂ ಇದೆ. ಹಣ ಬಂದಮೇಲೆ ರಾಯಚೂರು ಎಪಿಎಂಸಿಯಲ್ಲಿ ಕೋಲ್ಡ್‌ಸ್ಟೋರೇಜ್, ಬೃಹತ್ ಉಗ್ರಾಣ ಮತ್ತಿತರ ಮೂಲ ಸೌಕರ್ಯಗಳನ್ನು ವಿಸ್ತರಿಸುವ ಯೋಜನೆ ಅದು.

ಎಪಿಎಂಸಿಯ ದುಸ್ಥಿತಿ ನೋಡಿ. ಹತ್ತಿ ಮಾರುಕಟ್ಟೆಯ ಎ ಮತ್ತು ಬಿ ವಿಂಗ್‌ನಲ್ಲಿ ಬಿಡಿಗಾಸಿಗೆ ಬಿಕರಿಯಾದ 2-3 ಎಕರೆ ವಿಸ್ತೀರ್ಣದ ಹತ್ತಿ ಜಿನ್ನಿಂಗ್ ಘಟಕಗಳಿಗೆ ಮೀಸಲಾದ ಎಲ್ಲಾ 28 ನಿವೇಶನಗಳು ಹಲವು ಭೂಗಳ್ಳರ ಹೆಸರಿಗೆ ಮೊನ್ನೆ ಸೋಮವಾರ ನೋಂದಣಿಯಾಗಿಬಿಟ್ಟಿವೆ! ಮುಂದಿನ ಅಭಿವೃದ್ಧಿ ಯೋಜನೆಗಳಿಗೆ ಜಾಗವೇ ಇಲ್ಲದಂತಾಗಿದೆ!

ಅಂದಹಾಗೆ, ರಾಯಚೂರು ಉಸ್ತುವಾರಿ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರೂ ಆದ ಡಾ. ಶರಣಪ್ರಕಾಶ ಪಾಟೀಲ್ ಈ ಹಗರಣಕ್ಕೂ ತಮಗೂ ಏನೂ ಸಂಬಂಧವಿಲ್ಲವೆಂಬಂತೆ ಜಾಣ ಮೌನವಹಿಸಿದ್ದಾರೆ. ಪ್ರಾಯಶಃ ಅವರ ಎಡಗೈ ಭಂಟ ವಸಂತಕುಮಾರ್ ಕೂಡ ಒಬ್ಬ ಫಲಾನುಭವಿ ಆಗಿರುವುದೂ ಇದಕ್ಕೆ ಕಾರಣ ವಿರಬಹುದೇನೊ? ■


ಕುಮಟಾ: ದೋಷಪಾಂಡೆಯ ಕೊಂಕಣಿ ಮಾಫಿಯಾ ಹೈವೇ ದಿಕ್ಕೇಕೆ ತಪ್ಪಿಸುತ್ತಿದೆ?!




ದೇಶಪಾಂಡೆ

"ಅಜ್ಜಿಗೆ ಅರಿವೆ ಚಿಂತೆಯಾದ್ರೆ ಮೊಮ್ಮಗಳಿಗೆ ಮಿ.... ಚಿಂತೆಯಂತೆ" - ಅಂತಾರಲ್ಲಾ ಹಂಗಾಗಿದೆ ಉತ್ತರ ಕನ್ನಡದ ಹಿಟ್ಲರ್‌ಶಾಹಿ ಆಡಳಿತಗಾರ ಆರ್.ವಿ. 'ದೋಷ'ಪಾಂಡೆ ಸಾಹೇಬರ ಮಂತ್ರಿಗಿರಿ ದರ್ಬಾರು! ವ್ಯಾಪಾರಿ ಜಾಯಮಾನ ಮತ್ತು ಪಾಳೆಗಾರಿ ಪೊಗರಿನ ದೇಶಪಾಂಡೆಗೆ ಜನಸಾಮಾನ್ಯರೆಂದರೆ ಯಾವಾಗಲೂ ಅಲರ್ಜಿ. ಅಸಹಾಯಕ ಬಡವರ ಬಾಳಿಗೆ ಬೆಂಕಿ ಹಾಕಿ ಸ್ವ-ಜಾತಿ ಕೊಂಕಣಿ ಸಮುದಾಯದ ದಗಾಕೋರ ವರ್ತಕರ-ಉದ್ಯಮಿಗಳ ಅಡ್ಡೆಯಲ್ಲಿ ದೇಶಪಾಂಡೆ ನಂದಾದೀಪ ಬೆಳಗಿದ ಅದೆಷ್ಟೋ ಕತೆಗಳು ಆತನ ಈ ಮೂವತ್ತು ವರ್ಷದ ಅಧಿಕಾರ ರಾಜಕಾರಣದ ಪರ್ವದುದ್ದಕ್ಕೂ ಆಗಿಹೋಗಿದೆ! ದೇಶಪಾಂಡೆಯ ಪಾತಕ-ಪುಂಡಾಟದಿಂದ ಕಂಗೆಟ್ಟ ಜಿಲ್ಲೆಯ ಜನರು ಕಳೆದ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಆತನ ಕುಲೋದ್ಧಾರಕನನ್ನು ದೊಡ್ಡ ಅಂತರದಲ್ಲಿ ಮಣ್ಣು ಮುಕ್ಕಿಸಿ ಎಚ್ಚರಿಕೆ ಕೊಟ್ಟಿದ್ದರು. ಆದರೂ ಆತನಿಗೆ ಬುದ್ಧಿ ಬಂದಿಲ್ಲ; ಜಿಲ್ಲೆಗೆ ಅನಿಷ್ಟ ತಪ್ಪಿಲ್ಲ!!


ದೇಶಪಾಂಡೆ ಮಾಡಿದ್ದೆಲ್ಲ ಜಿಲ್ಲೆ ಬರಡಾಗಿಸುವ ಮತ್ತು ಸ್ವ-ಜಾತಿ ದೋನಂಬರ್ ವರ್ತಕರ ಹೊಟ್ಟೆ ಬೆಳೆಸುವ ಕಾರಸ್ಥಾನವೇ! ಆತನ ಕೊಂಕಣಿ ಬಕಾಸುರ ಪಡೆ ಪ್ರತಿ ತಾಲ್ಲೂಕಲ್ಲಿ ಮಾಡಿದ ಸ್ವಾಹಾ-ಹಾವಳಿ ಹೇಳತೀರದು. ಈಗ ದೇಶಪಾಂಡೆ ಕುಮಟಾದ ಮೂರ್‍ನಾಲ್ಕು ಬಿಲ್ಡರ್ ಮಾಫಿಯಾದ 'ಹಮ್ಗಲೆ' ಹರಾಮಿಗಳ ಹಿತ ಕಾಯಲು ಸಾವಿರಾರು ಹಿಂದುಳಿದ ವರ್ಗದ ಕುಟುಂಬ ಆಪೋಷನ ಪಡೆಯಲು ಸ್ಕೆಚ್ ಹಾಕಿಕೊಂಡು ಕಿತಾಪತಿ ಮಾಡುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿ 66ರ ಚತುಷ್ಪಥ ಕಾಮಗಾರಿ ದಿಕ್ಕನ್ನೇ




ವಿದ್ಯಾಧಿಕಾರ ಸ್ವಾಮೀಜಿ




ಆರ್.ಜೆ. ನಾಯಕ್




ಹರೀಶ್




ಮನೋಹರ್ ಪಾರಿಕ್ಕರ್




ಸುರೇಶ್ ಪ್ರಭು



ಅನಂತಕುಮಾರ್ ಹೆಗ್ಡೆ



ಗಡ್ಕರಿ



ಮಂಗೇಶ್

ಬದಲಿಸಿ ಸರ್ಕಾರದ ಬೊಕ್ಕಸಕ್ಕೆ 400-500 ಕೋಟಿ ಹಾನಿ ಮಾಡಲು ಹೊರಟಿರುವ ದೇಶಪಾಂಡೆ ಹಿಂದೆ ಆರೆಸ್ಸೆಸ್‌ನ ಮೇಲ್‌ಸ್ತರದಲ್ಲಿರುವ 'ದೇಶಭೋಗಿ' ಕೊಂಕಣಿ ಚಡ್ಡಿಗಳು ನಿಂತಿವೆ! ಜತೆಗೆ ಕೇಂದ್ರ ಮಂತ್ರಿಗಳಾದ ಮನೋಹರ ಪರಿಕ್ಕರ್, ಸುರೇಶ್ ಪ್ರಭುನಾಥ್ ಕೊಂಕಣಿಗರ ಸಕ್ರಿಯ ಸಹಕಾರ ಈ ಬಿಲ್ಡರ್-ಹೋಟೇಲ್-ಕಂಟ್ರಾಕ್ಟ್ ಮಾಫಿಯಾಕ್ಕೆ ಸಿಕ್ಕಿದೆ!

ಹೈವೇ ಕಾಮಗಾರಿ

ಉತ್ತರ ಕನ್ನಡದಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 66 ನಾಲ್ಕು ಪಥ ಮಾಡುವ ಕಾಮಗಾರಿ ಶರವೇಗದಲ್ಲಿ ಶುರುವಾಗಿದೆ. ಇದು ಎಂದೋ ಆಗಬೇಕಿದ್ದ ಕೆಲಸ. 1970ರ ದಶಕದಲ್ಲಾದ ಈ ಹೈವೇನಲ್ಲಿ ಈಗ ಮಿತಿಮೀರಿದ ವಾಹನ ದಟ್ಟಣೆ. ಹೀಗಾಗಿ ನಿತ್ಯ ನೂರಾರು ಅಪಘಾತ-ಅವಘಡ. ಚತುಷ್ಪಥ ಕಾಮಗಾರಿ ಆರಂಭವಾದಾಗ ಜನ ಖುಷಿಗೊಂಡಿದ್ದರು. ಅಷ್ಟೇ ಅಲ್ಲ, ತಮ್ಮ ಆಸ್ತಿಪಾಸ್ತಿ ಹೋದರೂ ಬೇಸರಿಸದೆ ಈ ರಾಷ್ಟ್ರೀಯ ಹಿತಾಸಕ್ತಿಯ ಯೋಜನೆಗೆ ಸಹಕಾರ ಕೊಡುತ್ತಿದ್ದಾರೆ. 1968ರಲ್ಲೇ ನಾಲ್ಕು ಪಥಕ್ಕೆ ಬೇಕಾಗುವಷ್ಟು ಖಾಸಗಿ-ಸರ್ಕಾರಿ ಭೂಮಿಯನ್ನು ಹೆದ್ದಾರಿ ಇಲಾಖೆ ವಶಪಡಿಸಿಕೊಂಡು ಯೋಗ್ಯ ಪರಿಹಾರವೂ ಕೊಟ್ಟಿದೆ. ಆದರೆ ಬದಲಾದ ದಿನಮಾನದಂತೆ ಈಗ ಅಗತ್ಯವಾಗಿರುವುದು ಇನ್ನೂ ಶೇ.20ರಷ್ಟು ಭೂಮಿಯಷ್ಟೇ.

ಇದಕ್ಕೂ ಜನಸಾಮಾನ್ಯರು ಅನಿವಾರ್ಯವಾಗಿ ಒಗ್ಗಿಕೊಂಡಿದ್ದಾರೆ. ಇಕ್ಕಟ್ಟಾದ ರಸ್ತೆಯಲ್ಲಿ ಆಗುತ್ತಿರುವ ಸಾವು-ನೋವಿಗೆ ಹೋಲಿಸಿದರೆ ಈ ತ್ಯಾಗ ದೊಡ್ಡದಲ್ಲ ಎಂಬ ತೀರ್ಮಾನಕ್ಕೆ ಬಂದಿರುವ ಜನರು ಅಗಲೀಕರಣಕ್ಕೆ ನೆರವಾಗುತ್ತಿದ್ದಾರೆ.

ಕುಮಟಾದಲ್ಲಿ ಕ್ಯಾತೆ!

ಕುಮಟಾ ಪಟ್ಟಣದ ವ್ಯಾಪ್ತಿಯಲ್ಲಿ ಮಾತ್ರ ಮೂರು ಮತ್ತೊಬ್ಬ ಅಕ್ರಮ ಬಹುಮಹಡಿ ಕಟ್ಟಡ ಕಿಂಗ್‌ಗಳು ಅಗಲೀಕರಣಕ್ಕೆ ಅಪಸ್ವರ ಎತ್ತಿದ್ದಾರೆ. ತಮ್ಮ ಕಪ್ಪು ಹಣ ಬೆಂಗಳೂರು-ದಿಲ್ಲಿ-ಆರೆಸ್ಸೆಸ್‌ನ "ನಾಗಪುರ ಭವನ"ದ ತನಕ ಹರಿಸಿ ಹೈವೇ ದಿಕ್ಕು ತಪ್ಪಿಸಲು ತಿಪ್ಪರಲಾಗ ಹಾಕುತ್ತಿದ್ದಾರೆ. 'ಹಿಂದೂ ನಾವೆಲ್ಲ ಒಂದು' ಎಂಬ ಹಸಿಹಸೀ ಹುಸಿ ಸ್ಲೋಗನ್ ಬಾರಿಸುವ ಈ ವಂಚಕ ಚಡ್ಡಿ ಚತುರರು 'ಶೂದ್ರರೆಲ್ಲ ಸಾಯಲಿ; ಕೊಂಕಣಿ ಬ್ರಾಹ್ಮಣರಷ್ಟೇ ಸುಖ ಪಡಲಿ' ಎಂಬ ಘಾತುಕ ಸಿದ್ಧಾಂತದವರು. ತಮ್ಮ ಕೋಟ್ಯಂತರ ರೂ.ಗಳ ಕಾನೂನುಬಾಹಿರ ಬಹುಮಹಡಿ ಕಟ್ಟಡಗಳ ಬಚಾವಿಗೆ ಈ ಬಿಲ್ಡರ್ ಮಾಫಿಯಾ ಬೈಪಾಸ್ ರಸ್ತೆ ಮಾಡಿಸಲು ಚಡ್ಡಿ ಲಾಬಿ ಮೋದಿ ಸರ್ಕಾರದ ಮೇಲೆ ಪ್ರಯೋಗಿಸುತ್ತಿದೆ.

ಹಲವು ಅಂಗಡಿ ಮುಂಗಟ್ಟು-ಮನೆಗಳು ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕಾಗಿ ತೆರವು ಮಾಡಬೇಕಾಗಿದೆ ಕುಮಟಾದ ನಗರ ವ್ಯಾಪ್ತಿಯಲ್ಲಿ, ಇವರ್‍ಯಾರು ದೊಡ್ಡ ತಕರಾರು-ತಗಾದೆ ತೆಗೆಯುತ್ತಿಲ್ಲ, ಬೈಪಾಸ್ ರಸ್ತೆ ಬೇಕು-ಹೈವೇ ಅಗಲೀಕರಣ ಪೇಟೆಯಲ್ಲಿ ಬೇಡ ಎಂದು ಬೊಬ್ಬೆ ಹೊಡೆಯುತ್ತಿರುವವರು ಬರೀ ನಾಲ್ಕು ಬಿಲ್ಡಿಂಗ್‌ನವರಷ್ಟೇ.

ಇವೆಲ್ಲ ಅಕ್ರಮ ಕಟ್ಟಡಗಳು. 1968ರಲ್ಲಿ ಹೆದ್ದಾರಿ ಇಲಾಖೆ ಸ್ವಾಧೀನಪಡಿಸಿಕೊಂಡು ಪರಿಹಾರ ಕೊಡಲ್ಪಟ್ಟ ಜಾಗದಲ್ಲಿ ಸದ್ರಿ ಕಟ್ಟಡಗಳಿವೆ. ರಾಷ್ಟ್ರೀಯ ಹೆದ್ದಾರಿ ಮಾರ್ಗಸೂಚಿ-ಕಾನೂನು-ಕಟ್ಟಳೆ ಧಿಕ್ಕರಿಸಿ ದುಡ್ಡಿನ ಸೊಕ್ಕಿನಿಂದ ತಲೆ ಎತ್ತಿದ ಪಾಪದ ಸ್ಥಾವರಗಳಿವು!!

ಪಾಂಡುರಂಗ ಗೋವಿಂದಾSSS....

ಕುಮಟಾದ ಕುಪ್ರಸಿದ್ಧ 'ಪಾಂಡುರಂಗ ಇಂಟರ್‌ನ್ಯಾಷನಲ್' ಹೋಟೇಲ್ ಕಮ್ ಲಾಡ್ಜ್ ಇದೆಯಲ್ಲ, ಅದರ ದಿವಂಗತ ಒಡೆಯ ಪಿ.ಆರ್. ನಾಯಕ್ ಎಂಬ ಕೊಂಕಣಿ ಕುಳ! ಈತ ಸರ್ಕಾರಿ ಗುತ್ತಿಗೆದಾರನಾಗಿದ್ದ. ಗೋಲ್‌ಮಾಲ್ ಕಾಮಗಾರಿಯಿಂದ ಭರ್ಜರಿ ಕಾಸು ಕಂಡ ಪಿ.ಆರ್. ನಾಯಕ್ ಮಾಮ ಅಂದಿನ ಅಧಿಕಾರಸ್ಥ ರಾಮಕೃಷ್ಣ ಹೆಗಡೆಯಂಥವರ ಸಖ್ಯ ಕುದುರಿಸಿಕೊಂಡಿದ್ದರು. 'ಶುದ್ಧ ಹಸ್ತ' ಎಂಬ ಹುಸಿ ಇಮೇಜಿನ ಹೆಗಡೆಜೀ, ನಿಜಲಿಂಗಪ್ಪ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿದ್ದಾಗ ಸದ್ರಿ ಪಿ.ಆರ್. ನಾಯಕ್‌ಗೆ ಬರೋಬ್ಬರಿ 9 ಎಕರೆ ಭೂಮಿ ಕುಮಟೆಯಲ್ಲಿ ಮಂಜೂರಿ ಮಾಡಿಸಿದ್ದರು. ಹಾಗೇ ಹೆಗಡೆ ಸಿಎಂ ಆಗಿದ್ದಾಗ ಸ್ವ-ಜಾತಿ ಹುಡುಗ ರಘುನಾಥ ದೇಶಪಾಂಡೆಯನ್ನು ನಾಯಕ ಮಾಮ ಪಳಗಿಸಿಕೊಂಡಿದ್ದರು. ದೇಶಪಾಂಡೆ ಸಂಡೇ ಪ್ಲೀಡರ್ ಆಗಿ ಹಳಿಯಾಳದಲ್ಲಿ ಲಾಟರಿ ಹೊಡೆದ ದಿನಗಳಲ್ಲಿ 'ಅಕಸ್ಮಾತ್' ಶಾಸಕನಾಗಿದ್ದರಲ್ಲಿ ಆಗ ಪಿ.ಆರ್. ನಾಯಕರು

'ಹಮ್ಗಲೆ ಚಲೋ' ಎಂದು ಆತನ ಮುದ್ದಾಡುತ್ತಿದ್ದರು. ದೇಶಪಾಂಡೆ ಮಂತ್ರಿಯಾಗಿ ಅವತರಿಸಿದಾಗೆಲ್ಲ ಆತನ ರಾಜಕಾರಣಕ್ಕೆ ನಾಯಕ್ ಮಾಮ ಅಷ್ಟಿಷ್ಟು ಫೈನಾನ್ಸ್ ಮಾಡಿ ಪೋಷಿಸಿದ್ದರು.

ಇಂಥ ದೇಶಪಾಂಡೆ ಕೈಗಾರಿಕಾ ಮಂತ್ರಿಯಾಗಿದ್ದಾಗಲೇ ನಾಯಕ್‌ರ ಮಗ ಹರೀಶ್ ನಾಯಕ್ 'ಉದ್ಯಮಿ' ಗೆಟಪ್ ಪಡೆದುಕೊಂಡಿದ್ದ. ದೇಶಪಾಂಡೆ ಕೃಪೆಯಲ್ಲಿ ಆತ ಅಪ್ಪನಿಗೆ ಹೆಗಡೆಜೀ ಬಳುವಳಿಯಾಗಿ ನೀಡಿದ್ದ 9 ಎಕರೆ ಸರ್ಕಾರಿ ಜಾಗದಲ್ಲಿ ಬಹುಮಹಡಿಯ 'ಪಾಂಡುರಂಗ ಇಂಟರ್‌ನ್ಯಾಷನಲ್' ಹೋಟೇಲ್ ಕಟ್ಟಿ ನಿಲ್ಲಿಸಿದ್ದ. ಗೋಲ್‌ಮಾಲ್ ಸಬ್ಸಿಡಿ ಸ್ಕೀಮ್‌ನಲ್ಲಿ ಪಾಂಡುರಂಗ ಹೋಟೇಲ್ ಸ್ಥಾಪಿಸಿದ್ದ ಹರೀಶ್‌ಗೆ ಇಡೀ ಬಿಲ್ಡಿಂಗ್ ಪುಕ್ಕಟೆಯಾಗಿದೆ ಅನ್ನುವವರೂ ಇದ್ದಾರೆ. ದೇಶಪಾಂಡೆಯ ಸ್ವ-ಜಾತಿ ಪ್ರೀತಿಯ ವೈಖರಿ ಬಲ್ಲವರು ಸುಳ್ಳು ಸಬ್ಸಿಡಿ ಪಾಂಡುರಂಗಕ್ಕೆ ಸಿಕ್ಕಿರುವುದು ಆ ಕಟ್ಟಡದ ಅಂದಿನ ಮೌಲ್ಯಕ್ಕೆ ಸಮವಾಗುತ್ತದೆ ಅಂತಾರೆ.

ಈ ಕಟ್ಟಡವನ್ನು ಅಧಿಕ ಪ್ರಸಂಗಿ ಹರೀಶ್ ನಾಯಕ್ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡೇ ಕಟ್ಟಿದ್ದಾನೆ. ಹಿಂದೆ ವಿಶಾಲವಾದ 9 ಎಕರೆ ಭೂಮಿಯಿದ್ದರೂ ಸರ್ಕಾರಿ ಜಾಗಕ್ಕೆ ನಾಲಿಗೆಯೊಡ್ಡಿದ್ದಾನೆ. ಹೋಟೇಲ್‌ನ ಅಂಗಳ 1968ರಲ್ಲೇ ಹೆದ್ದಾರಿ ಇಲಾಖೆ ವಶಪಡಿಸಿಕೊಂಡ ಜಾಗದಲ್ಲೇ ಬರುತ್ತದೆ. ಇದಕ್ಕವನ ಅಪ್ಪ ಪಾಂಡುರಂಗ ಮಾಮ ಅಂದೇ ಪರಿಹಾರ ಪಡೆದೂ ಆಗಿತ್ತು, ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಮಾರ್ಗಸೂಚಿ ಮತ್ತು ಕಾನೂನನ್ನು ಉಲ್ಲಂಘಿಸಿ ಅಪ್ಪ-ಮಗ ಕಟ್ಟಡ ಎಬ್ಬಿಸಿದ್ದಾರೆ. ಅಂದು ಕುಮಟಾ ಮುನ್ಸಿಪಾಲ್ಟಿಯೂ ಈ ಕಟ್ಟಡಕ್ಕೆ ಪರವಾನಗಿ ಕೊಡಲು ನಿರಾಕರಿಸಿತ್ತು, ಆಗ ಸ್ಥಾಯಿ ಸಮಿತಿ ಚೇರಮನ್ ಆಗಿದ್ದ ಸದಾನಂದ ನಾಯಕ್ ಎಂಬ ಕಾನೂನು ನಿಷ್ಠ ಆಸಾಮಿ ಎನ್‌ಓಸಿ ಕೊಡಲಾರೆನೆಂದು ಹಠ ಹಿಡಿದಿದ್ದರು; 'ಹಿರಿಯ' ಪಿ.ಆರ್. ನಾಯಕರಿಂದ ಬೆದರಿಕೆಯ ಬೈಗುಳವೂ ಕೇಳಿದ್ದರು. ಆದರೂ ಪರವಾನಗಿ ಮಾತ್ರ ಕೊಡಲಿಲ್ಲ, ಅಧಿಕಾರಸ್ಥರ ಸಖ್ಯದ ಪಿ.ಆರ್. ನಾಯಕ್ ಕೇರ್ ಮಾಡದೆ ಕಟ್ಟಡ ಕಟ್ಟಿ ನಿಲ್ಲಿಸಿಬಿಟ್ಟರು. ಸದಾನಂದ ನಾಯ್ಕರ ನಂತರ ಸ್ಟ್ಯಾಂಡಿಂಗ್ ಕಮಿಟಿಗೆ ಬಂದ "ಮಾಣಿ"ಯೊಬ್ಬನಿಗೆ ದಕ್ಷಿಣೆ ಕೊಟ್ಟು ನಾಯಕ್ ಮಾಮ ಎನ್‌ಓಸಿ ಪಡೆದರು.

ಅಂದು ಅಪ್ಪ-ಮಗ ಕಾನೂನು ಧಿಕ್ಕರಿಸಿ ಹಾರಾಡಿದ್ದೇ ಈಗ ಗಂಡಾಂತರಕಾರಿಯಾಗಿದೆ. ಹೆದ್ದಾರಿ ಅಗಲೀಕರಣಕ್ಕೆ ಹರೀಶ್ ನಾಯಕ್ ಪಾಂಡುರಂಗ ಹೋಟೇಲಿನ ಅಂಗಳ ಬಿಟ್ಟುಕೊಡಬೇಕಾಗಿ ಬಂದಿದೆ. ಕಟ್ಟಡ ಕಟ್ಟುವಾಗಲೇ ಕಾನೂನು ಪಾಲಿಸಿ- ಮುಂದಾಲೋಚನೆಯಿಂದ ವರ್ತಿಸಿದ್ದರೆ ಇಂದು ವಾಮಮಾರ್ಗದಿಂದ ದಿಲ್ಲಿ-ಬೆಂಗಳೂರಿಗೆ ಎಡತಾಕುವ ಪರಿಸ್ಥಿತಿ ಹರೀಶ್‌ಗೆ ಬರುತ್ತಿರಲಿಲ್ಲ ಪಾಪ. ಪಾಂಡುರಂಗ ಹೋಟೇಲ್ ಮಾತ್ರವಲ್ಲ ಈತನ ಮನೆ ಮತ್ತು ಅದರ ಮುಂದಿರುವ ವಾಣಿಜ್ಯ ಮಳಿಗೆಯೂ ಹೆದ್ದಾರಿ ಇಲಾಖೆಯ ನಿಯಮ ಮೀರಿ ನಿಂತಿದೆ! ಇದನ್ನೂ ಆತ ಅಗಲೀಕರಣಕ್ಕೆ ಆಹುತಿಯಾಗಿ ಕೊಡಲೇಬೇಕಾಗಿದೆ.

ಈ ಮೂರೂ ಕಟ್ಟಡಗಳನ್ನು ಹೆದ್ದಾರಿಗೆ ತ್ಯಾಗ ಮಾಡಿದರೂ ಹರೀಶ್ ನಾಯಕ್ ಬಡವನೆಂದೂ ಆಗಲಾರ. ಆತನಿಗೆ ಬೇಕಷ್ಟು ಜಾಗ-ಹಣವಿದೆ. ಸುಸಜ್ಜಿತ ಬಂಗಲೆ ನೋಡು-ನೋಡುತ್ತಿರುವಂತೆಯೇ ಕಟ್ಟಿ ನಿಲ್ಲಿಸುವ ತಾಕತ್ತಿದೆ. ಒಣ ಪ್ರತಿಷ್ಠೆಗಾಗಿ ಹಳೆ ಕಟ್ಟಡಗಳ ಬಚಾಯಿಸುವ ಹಠಕ್ಕೆ ಬಿದ್ದು ಅಡ್ಡ ದಾರಿ ಹಿಡಿದಿದ್ದಾನೆ. ಅಷ್ಟಕ್ಕೂ ಈ ಕಟ್ಟಡಗಳು ಇರುವುದೇ ಹೆದ್ದಾರಿ ಪ್ರಾಧಿಕಾರದ ಎಕ್ವಾಯರಿ ಜಾಗದಲ್ಲಿ!

ರಾಷ್ಟ್ರೀಯ ಹಿತಾಸಕ್ತಿಗೆ ಸಣ್ಣ ತ್ಯಾಗ ಮಾಡುವ ದೊಡ್ಡ ಗುಣ ಕಮರ್ಷಿಯಲ್ ಗುಣ-ಧರ್ಮದ ನಾಯಕ್ ಸಂತತಿಗೆ ಅದೆಲ್ಲಿಂದ ಬರಬೇಕು? ಹೀಗಾಗಿ ಹೊಸ ಮನೆ-ಕಟ್ಟಡ ಕಟ್ಟುವ ದುಡ್ಡಲ್ಲಿ ಬೈಪಾಸ್ ರಸ್ತೆಗಾಗಿ ಆತ ಬುರ್ನಾಸ್ ಪ್ರಯತ್ನ ನಡೆಸಿದ್ದಾನೆ. ಮತ್ತೊಂದು ಇಂಥವೇ ಅಕ್ರಮ ಅಪಾರ್ಟ್‌ಮೆಂಟ್ ಒಡೆಯರ ಜತೆ ಸೇರಿ ವಾರಕ್ಕೆರಡು ಬಾರಿ ದಿಲ್ಲಿಗೆ ಹೋಗಿ ಆರೆಸ್ಸೆಸ್ ದೊರೆಗಳ ಕಾಲಿಗೆ ಬಿದ್ದು ಬರುತ್ತಿದ್ದಾನೆ. ಆತನಿಗೆ ಮಂತ್ರಿ ದೇಶಪಾಂಡೆ ರಾಜ್ಯ ಸರ್ಕಾರದ ವತಿಯಿಂದ ಬೇಕಾದ ಎಲ್ಲ ನೆರವು ಮನಃಪೂರ್ವಕವಾಗಿ ಕೊಡುತ್ತಿದ್ದಾರೆ. ಆ ಮೂಲಕ ತಾನು ಗತಿಗೇಡಿ ಶಾಸಕ-ಮಂತ್ರಿಯಾಗಿದ್ದ ದಿನಗಳಲ್ಲಿ ಪಿ.ಆರ್. ನಾಯಕ್ ಮಾಮ ಮಾಡಿದ ಹಣಕಾಸಿನ ಉಪಕಾರದ ಋಣ ತೀರಿಸಲು ನಿದ್ದೆಗೆಟ್ಟು ಬೆವರಿಳಿಸುತ್ತಿದ್ದಾರೆ.

ಬಲಮುರಿ ದಾಸನ ಬಿಲ್ಡಿಂಗ್!!

ಕುಮಟಾ ನಗರ ಪರಿಧಿಯ ರಾಷ್ಟ್ರೀಯ ಹೆದ್ದಾರಿ ಪಕ್ಕ 'ರಾಮನಗರ' ಎಂಬ ಪ್ರದೇಶವಿದೆ. ಅಲ್ಲಿ ಎಕರೆಗಟ್ಟಲೆ ಜಾಗ 'ಮಹಾಲಕ್ಷ್ಮಿ ಅಸೋಸಿಯೇಟ್ಸ್' ಎಂಬ ಬಿಲ್ಡರ್ ಮಾಫಿಯಾದ ತ್ರಿಮೂರ್ತಿಗಳು ಖರೀದಿಸಿದ್ದಾರೆ. ಶೇಷಗಿರಿ ಕೃಷ್ಣ ಶಾನಭಾಗ್ ಯಾನೆ ಬಲಮುರಿ ದಾಸ, ರಾಮನಾಥ ವಾಸುದೇವ ಶಾನಭಾಗ್ ಮತ್ತು ದಾಸರಂಗ ಶಾನಭಾಗ್ ಎಂಬ ಲಾಭಕೋರ ಕೊಂಕಣಿ ವ್ಯಾಪಾರಿಗಳೇ ಆ ಜಾಗದ ಮಾಲೀಕರು. ಹೆದ್ದಾರಿಗೆ ಹೊಂದಿಕೊಂಡಿರುವ ಈ ಜಾಗದ ಒಂದಿಷ್ಟು ಪ್ರದೇಶ 1968ರಲ್ಲೇ ಎನ್‌ಎಚ್ ಇಲಾಖೆ ಸ್ವಾಧೀನಪಡಿಸಿಕೊಂಡು ಅಂದಿನ ಕಬ್ಜಾದಾರನಿಗೆ ಪರಿಹಾರವೂ ಕೊಟ್ಟಿದೆ. ಆದರೆ ಹೆದ್ದಾರಿ ಎಕ್ವಾಯರಿ ಜಾಗವನ್ನೂ ಸೇರಿಸಿ ಈ ಬಿಲ್ಡರ್ ಭೂಪರು ಐದಂತಸ್ತಿನ ಕಟ್ಟಡ ಎಬ್ಬಿಸಿದ್ದಾರೆ. ಮೊದಲಂತಸ್ತಿನಲ್ಲಿ ವಾಣಿಜ್ಯ ಮಳಿಗೆ ಹೊಂದಿದ್ದರೆ, ಮೇಲೆಲ್ಲ ವಾಸ್ತವ್ಯದ ಅಪಾರ್ಟ್‌ಮೆಂಟ್‌ಗಳು.

ಈ ಮಹಾಲಕ್ಷ್ಮಿ ಅಪಾರ್ಟ್‌ಮೆಂಟ್ ಇದೆಯಲ್ಲ ಅದು ನೂರಕ್ಕೆ ನೂರು ಪಕ್ಕಾ ಅಕ್ರಮ ಕಟ್ಟಡ. ಇದಕ್ಕೆ ಪಟ್ಟಣ ಪಂಚಾಯ್ತಿ ಪರವಾನಗಿಯಿಲ್ಲ; ಟೌನ್ ಪ್ಲಾನಿಂಗ್‌ನ ಒಪ್ಪಿಗೆಯಿಲ್ಲ, ರಾಷ್ಟ್ರೀಯ ಹೆದ್ದಾರಿ ಇಲಾಖೆ ಸದ್ರಿ ಕಟ್ಟಡ ತಲೆಯೆತ್ತುವಾಗಲೇ ನೆಲಸಮ ಮಾಡುವಂತೆ ಕುಮಟಾ ಮುನ್ಸಿಪಾಲಿಟಿಗೆ ನೋಟಿಸು ನೀಡಿತ್ತು! ಈ ಕಟ್ಟಡ ಕಟ್ಟುವಾಗ ಬಲಮುರಿ ದಾಸ ಅಂಡ್ ಕೋ ಮಾಡಿರುವ ಕಾನೂನುಬಾಹಿರ ಪಾತಕ ಒಂದೆರಡಲ್ಲ. ಅಸಲಿಗೆ ಈ ಜಾಗ ನಾನ್ ಅಗ್ರಿಕಲ್ಚರ್ (ಎನ್‌ಎ) ಆಗಿರುವುದೇ ವಾಣಿಜ್ಯ ಉದ್ದೇಶಕ್ಕೆ. ಆದರೆ ಇಲ್ಲಿ ಎದ್ದಿರುವುದು ವಸತಿ ಸಮುಚ್ಚಯ. ಹಿಂದೆ ಕೃಷ್ಣಯ್ಯ ಎಂಬ ನಿಷ್ಠೂರ ಜಿಲ್ಲಾಧಿಕಾರಿ ಕಾರವಾರದಲ್ಲಿದ್ದಾಗ ಹೌಸಿಂಗ್ ಎನ್‌ಎ ಮಾಡಿಕೊಡಲು ನಿರಾಕರಿಸಿ ಫೈಲ್ ಬಿಸಾಡಿದ್ದರು. ಆ ಹೊತ್ತಲ್ಲಿ ಹೆಡ್‌ಕ್ವಾಟರ್ಸ್ ಅಸಿಸ್ಟೆಂಟ್ ಆಗಿದ್ದಾತ ಡಾ. ಕೆ.ಎಚ್. ನರಸಿಂಹಮೂರ್ತಿ ಎಂಬ ಲಂಚದ ಕಾಸು ಕಂಡರೆ ಜೊಲ್ಲು ಸುರಿಸುವ ವಿಪ್ರೋತ್ತಮ! ಈತ ಜಿಲ್ಲಾಧಿಕಾರಿ ಕೆಲದಿನ ರಜೆ ಮೇಲೆ ಹೋದಾಗ ಪ್ರಭಾರ ಡಿಸಿಯಾಗಿದ್ದ.

ಆ ಸಂದರ್ಭ ಸಾಧಿಸಿದ ಬಲಮುರಿ ದಾಸನ ಟೋಳಿ ನರಸಿಂಹಮೂರ್ತಿಯನ್ನು ಖರೀದಿಸಿಬಿಟ್ಟಿತು. ಆತ ನಾಲ್ಕೇನಾಲ್ಕು ದಿನದಲ್ಲಿ ವಸತಿ ಉದ್ದೇಶದ ಬಿನ್ ಶೇತ್ಕಿ ಪರಿವರ್ತನೆ ಮಾಡಿ ಕೊಟ್ಟ. ಹಂಗಾಮಿ ಜಿಲ್ಲಾಧಿಕಾರಿ ಭೂ ಪರಿವರ್ತನೆಯಂಥ ಮಹತ್ವದ ಕೆಲಸ ಮಾಡುವಂತಿಲ್ಲವೆಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ

ಲ್ಲ ನರಹಿಂತಮೂರ್ತಿಗೆ ಬಲಮುರಿ ದಾಸನ ಗ್ಯಾಂಗ್ ದಿವ ಕಳಕಾಸಿನೆದುರು ಲೆಕ್ಕಕ್ಕೇ ಬಂದಿಲ್ಲ. ತನಿಖೆಯಾದರೆ ಹಾಲಕ್ಷ್ಮೀ ಅಪಾರ್ಟ್‌ಮೆಂಟ್‌ನ ಬಾಸ್‌ಗಳ ಕರ್ಮಕಾಂಡ ಮೊಂದಾಗಿ ಹೊರಬರುವುದು ಗ್ಯಾರಂಟಿ! ಬಲಮುರಿ ಸನ ಬಿಲ್ಡಿಂಗ್ ಎಂದೇ ಕುಪ್ರಸಿದ್ಧವಾಗಿರುವ ಸದ್ರಿ ಪಾಪದ ಪಾರ್ಟ್‌ಮೆಂಟ್ ರಕ್ಷಿಸಲು ಕೊಂಕಣಿಗರ ಪರ್ತಗಾಳಿ ಠಾಧೀಶರು ಕಟಿಬದ್ಧನಾಗಿರುವುದು ತೂಹಲಕರವಾಗಿದೆ!

ಕೊಂಕಣಿಗರ ಸ್ವಾಮಿ ಎಂಟ್ರಿ


ದಿಲ್ಲಿಯಲ್ಲಿ ಯುಪಿಎ ಸರ್ಕಾರ ಇದ್ದಾಗ ಪಾಂಡುರಂಗ ಾಟೀಲು ಮತ್ತು ಪಿರೀಶ್ ನಾಯಕನ ಕಮರ್ಷಿಯಲ್ ಾಪ್ಲೆಕ್ಸ್ ಮತ್ತಾತನ ಬಂಗ್ಲೆ ಹಾಗು ಬಲಮುರಿ ದಾಸನ ೋ ನಂಬರ್ ದುಡ್ಡಿನ ದಂಡಿನ ಮಹಾಲಕ್ಷ್ಮೀ ಪಾರ್ಟ್‌ಮೆಂಟ್ ಉಳಿಸಲು ಮೊದಲು ಪ್ರಯತ್ನ ಶುರು ಾಡಿದ್ದು ಮಂತ್ರಿ ದೋಷಪಾಂಡೆ. ಈ ಚೆಡ್ಡಿಗಳ ಹಿತ ಜಾತಿ ಪ್ರೀತಿಯಿಂದ ಕಾಪಾಡುವ ಮುಲಾಜಿಗೆ ಿದಿದ್ದರು. ಹಾಗಾಗಿ ಅಂದಿನ ಹೆದ್ದಾರಿ ಮಂತ್ರಿ ಆಸ್ಕರ್ ಫರ್ನಾಂಡಿಸ್‌ರನ್ನು ಹತ್ತಾರು ಬಾರಿ ಸಂಧಿಸಿ ದಿಗೋಣದಿಂದಲೇ ಹೈವೇ ಅಡ್ಡದಾರಿ ಹಿಡಿಸುವ ಪ್ಲಾನ್ ುಂದಿಟ್ಟಿದ್ದರು. ಇದು ಹಣಕಾಸಿನ ದೃಷ್ಟಿಯಿಂದಷ್ಟೇ ಲ್ಲ ಪರಿಸರ ಮತ್ತು ಒಕ್ಕಲೆಬ್ಬಿಸುವಿಕೆ ಕಾರಣದಿಂದಲೂ ಾಡ್ಡ ದುಬಾರಿ ಎಂದು ಹೆದ್ದಾರಿ ಪ್ರಾಧಿಕಾರ ತಳ್ಳಿ ಕಿತ್ತು. ಆದರೆ ಪಟ್ಟು ಬಿಡದ ದೇಶಪಾಂಡೆ ಮಂತ್ರಿ ಸ್ಕರ್‌ರನ್ನು ಕುಮಟೆಗೆ ಕರೆದೊಯ್ದು ಬಲಮುರಿ ಬಿಲ್ಡಿಂಗ್ ತ್ತು ಪಾಂಡುರಂಗದ ಗೋಳು ತೋರಿಸಿದ್ದರು. ದೇಶಪಾಂಡೆ ಹಮತ್ತಿನ ಒಳಗುಟ್ಟು ಅರ್ಥಮಾಡಿಕೊಂಡಿದ್ದ ಆಸ್ಕರ್ ೈಪಾಸ್ ಪ್ರಪೋಸಲ್ ಅನ್ನು ನಾಜೂಕಾಗಿ ಬದಿಗೆ ಸಿದ್ದರು.

ಅಷ್ಟರಲ್ಲಿ ಕೇಂದ್ರದಲ್ಲಿ ಚೆಡ್ಡಿ ಸರ್ಕಾರವೇ ಅಧಿಕಾರಕ್ಕೆ ತು. ಆ ಅಕ್ರಮ ಕಟ್ಟಡ ಕುಳಗಳು ಮೊರೆ ಹೋಗಿದ್ದು ಜಾತಿ ಮಠದ ಗುರು ಜೀವೋತ್ತಮ ತೀರ್ಥ ವಿದ್ಯಾಧಿರಾಜ ೀರ್ಥ ಸ್ವಾಮೀಜಿ ಪಾದಕ್ಕೆ. ಆತ ಅಪಾರ್ಟ್‌ಮೆಂಟ್ ಟ್ಟಡದ ಹಿಂದೊಂದು ಮುಖ್ಯಪ್ರಾಣ ಆಂಜನೇಯ ೇವಸ್ಥಾನ ಕಟ್ಟಿದರೆ ಸಂಕಟ ಪರಿಹಾರ ಆಗುತ್ತದೆಯೆಂಬ ರಣಿಕ' ವಾಣಿ ಹೊರಡಿಸಿದ್ದರು. ಅಂತೆಯೇ ಬಲಮುರಿ ುತ್ರ ಮಂಡಳಿ ಲಗುಬಗೆಯಲ್ಲಿ ಮಾರುತಿ ದೇವಸ್ಥಾನ ್ಥಾಪಿಸಿಯೇ ಬಿಟ್ಟಿತು. ಆದರೆ ಹೆದ್ದಾರಿ ಪ್ರಾಧಿಕಾರ ಮಾತ್ರ ೈಪಾಸ್ ರಸ್ತೆಗೆ ಸುತರಾಮ್ ಒಪ್ಪಲಿಲ್ಲ. ಆಗ ಪೀಕಲಾಟಕ್ಕೆ ದ್ದಿದ್ದು ಸಾಥ್ ನಂಬರಿಗಳ ಸ್ವಾಮಿ. ತನ್ನ ದೇವರ ಬಗ್ಗೆ ಕ್ತರಲ್ಲಿ ಅಪನಂಬಿಕೆ ಮೂಡುತ್ತದೆ; 'ದೈವೀ ಕಳೆ'ಗೆ ಂದಾಗುತ್ತದೆ ಎಂಬ ಆತಂಕ ಸ್ವಾಮಿಗೆ ಶುರುವಾಯಿತು. ್ಯಾಮೇಜು ಕಂಟ್ರೋಲ್‌ಗೆ ಆಗ ವಿದ್ಯಾಧಿರಾಜ ಸ್ವಾಮೀಜಿ ಜಾತಿಯ ಕೇಂದ್ರ ಮಂತ್ರಿ ಮನೋಹರ ಪಾರಿಕ್ಕರ್ ೂಲಕ ಬೈಪಾಸ್ ರಸ್ತೆಗೆ ಕರಾಮತ್ತು ಮಾಡಿಸಲು ಾರ್ಯಾಚರಣೆ ಮಾಡಿದರು.

ಚೆಡ್ಡಿ ಮಾಫಿಯಾ!!

ಕೇಂದ್ರ ಮಂತ್ರಿ ಪಾರಿಕ್ಕರ್ ಕೊಂಕಣಿಗರ ಪರ್ತಗಾಳಿ ಠದ ನಿಷ್ಠಾವಂತ ಶಿಷ್ಯ. ವಿದ್ಯಾಧಿರಾಜ ಸ್ವಾಮಿ ಜೊತೆ ಾರಿಕ್ಕರ್‌ಗೆ ನಿಕಟ ನಂಟು ಲಾಗಾಯ್ತಿನಿಂದಲೂ ಇದೆ. ಕೊಂಕಣಿಗರ ಮಠದ ಹೆಡ್‌ಕ್ವಾರ್ಟರ್ಸ್ ಇರುವುದೇ ೋವಾದಲ್ಲಿ. ಹೀಗಾಗಿ ಸ್ವಾಮಿ-ಪಾರಿಕ್ಕರ್ ಗಳಸ್ಯಕಂಠಸ್ಯ ುರು-ಶಿಷ್ಯರು. ಗುರುವಿನ ಅಪ್ಪಣೆ ಬಂದಿದ್ದೇ ತಡ, ುಮಟಾದ ಬೈಪಾಸ್ ರಸ್ತೆಗೆ ಪಾರಿಕ್ಕರ್ ಶತಪ್ರಯತ್ನ ುರು ಹಚ್ಚಿಕೊಂಡರು. ಕರ್ನಾಟಕ ಸರ್ಕಾರದಿಂದ ಬೈಪಾಸ್ ಸ್ತೆಗೆ ಪ್ರಸ್ತಾವನೆ ಬಂದರೆ ತಾನು ದಿಲ್ಲಿಯ ಹೆದ್ದಾರಿ ುಂತ್ರಿ ಕಚೇರಿಯಲ್ಲಿ ಪ್ರಯತ್ನ ನಡೆಸುತ್ತೇನೆಂದು ಆತ ುರುಗಳಿಗೆ ಅರುಹಿದರು. ವಿದ್ಯಾಧಿಕಾರ ಸ್ವಾಮೀಜಿ ತನ್ನ ುತ್ತೊಬ್ಬ ಅಧಿಕಾರಸ್ಥ ಶಿಷ್ಯನಾದ ಕರ್ನಾಟಕ ಸರ್ಕಾರದ ಂದಾರಿ ಮಂತ್ರಿ ದೇಶಪಾಂಡೆಗೆ ಬೈಪಾಸ್ ಪ್ರಪೋಸಲ್ ಿಸಲು ಹೇಳಿದರು.

ದೋಷಪಾಂಡೆ ಮೊದಮೊದಲು ಕ್ಯಾಬಿನೆಟ್ ಭೆಯಲ್ಲೇ ಕುಮಟಾದ ಹಂದಿಗೋಣದಿಂದ ಮಾನೀರ್‌ವರೆಗಿನ ಬೈಪಾಸ್ ರಸ್ತೆಗಾಗಿ ಹೆದ್ದಾರಿ ಪ್ರಾಧಿಕಾರವನ್ನು ಒತ್ತಾಯಿಸುವ ಠರಾವು ಪಾಸ್ ಮಾಡಿಸಲು ಹವಣಿಸಿದರು. ಇದಕ್ಕೆ ಲೋಕೋಪಯೋಗಿ ಮಂತ್ರಿ ಮಹದೇವಪ್ಪ ಸೊಪ್ಪು ಹಾಕಲಿಲ್ಲ. ಆಗ ದೇಶಪಾಂಡೆ ಬೇರೆ ಗತಿಯಿಲ್ಲದೆ ಪಿಡಬ್ಲ್ಯೂಡಿ ಸೆಕ್ರೆಟರಿಯೇಟ್‌ನಿಂದ ಒಂದು ಪ್ರಸ್ತಾವನೆ ಹೋಗುವಂತೆ ಮಾಡಿದ್ದಾರೆ. ಇದಕ್ಕೂ ಒಪ್ಪಲಿಲ್ಲ ಮಹದೇವಪ್ಪ. ಕಡೆಗೆ ದೇಶಪಾಂಡೆ ಕಿರಿಕಿರಿ ತಾಳಲಾಗದೆ ಸುಮ್ಮನಾದರು. ಆಗ ಹೊರಡುತ್ತದೆ ಪಿಡಬ್ಲ್ಯೂಡಿ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಕಚೇರಿಯಿಂದ ಬೈಪಾಸ್ ಪ್ರಸ್ತಾವನೆ ಪತ್ರ. ದಿನಾಂಕ **31.12.2014** ರಂದು ಅಧೀನ ಕಾರ್ಯದರ್ಶಿ ಉಮಾಪತಿ ಕುಮಟಾದ ಬಲಾಢ್ಯ ಕೊಂಕಣಿಗರಿಗೆ ಬೇಕಾದ ಬೈಪಾಸ್ ಪ್ರಪೋಸಲ್ **(No. PWD 156 CNH 2014 (P))** ಹೆದ್ದಾರಿ ಪ್ರಾಧಿಕಾರದ ಚೀಫ್ ಜನರಲ್ ಮ್ಯಾನೇಜರ್‌ಗೆ ಕಳಿಸುತ್ತಾರೆ.




ಪಿರೀಶ್ ನಾಯ್ಕನ ವಾಣಿಜ್ಯ ಮಳಿಗೆ

ದೇಶಪಾಂಡೆ ಮತ್ತು ಮನೋಹರ್ ಪಾರಿಕ್ಕರ್ ಕುತಂತ್ರಕ್ಕೆ ಸಮಾನಾಂತರವಾಗಿ ಆರೆಸ್ಸೆಸ್ ಲಾಬಿ ಕಾರ್ಯಾಚರಣೆ ನಡೆಸಿದೆ. ಬಲಮುರಿದಾಸನ ಖಾಸಾ ಅಣ್ಣ ಹನುಮಂತ ಶಾನಭಾಗ್ ಚೆಡ್ಡಿ ವಲಯದಲ್ಲಿ ಪ್ರಭಾವಿ. ಕಾರ್ಪೊರೇಷನ್ ಬ್ಯಾಂಕ್‌ನ ನಿವೃತ್ತ ನೌಕರನಾದ ಈತ "ಉತ್ತರ ಕನ್ನಡದ ಕಲ್ಲಡ್ಕ" ಎಂದೇ ಕುಖ್ಯಾತನಾಗಿದ್ದಾನೆ. ಮೊನ್ನೆ ಕುಮಟಾದಲ್ಲಿ ನಡೆದ ಕೋಮು ದೊಂಬಿಯ ಹಿಂದೆ ಈತನ ನೆರಳಿದೆ. ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕನ್ನಡದ ಕರಾವಳಿಯಲ್ಲಿ ಎಲ್ಲೇ ಹಿಂದೂತ್ವ-ಅನೈತಿಕ ಪೊಲೀಸ್‌ಗಿರಿ ಹೆಸರಲ್ಲಿ ಗಲಾಟೆ-ಹಿಂಸಾಚಾರವಾದರೆ ಈ ಹನ್ಮಂತನ ಬಾಲದ ಮಹಿಮೆ ಇದ್ದೇ ಇರುತ್ತದೆ. ಕೆನರಾ ಸಂಸದ ಅನಂತ್ಕುಮಾರ್ ಈ ಹನ್ಮಂತನ ನಿಷ್ಠಾವಂತ ಬಂಟ!

ಇಂಥ ಹನುಮಂತ ಶಾನಭಾಗ್ ತನ್ನ ತಮ್ಮ ದಾಸ ಶಾನಭಾಗ್ ಮತ್ತು ತಂಗಿ ಗಂಡ ದಾಸರಂಗ ಶಾನಭಾಗರ ಮಹಾಲಕ್ಷ್ಮಿ ಅಪಾರ್ಟ್‌ಮೆಂಟ್ ಉಳಿಸಲು ಚೆಡ್ಡಿ ವಲಯದಲ್ಲಿ ಚಮತ್ಕಾರ ನಡೆಸಿದ್ದಾನೆ. ಹಳಿಯಾಳದ ಮಂಗೇಶ್ ಭೇಂಡೆ ಆರೆಸ್ಸೆಸ್‌ನ ನಾಗಪುರ ಹೈಕಮಾಂಡ್‌ನಲ್ಲಿ ಪ್ರಮುಖ ಸ್ಥಾನದಲ್ಲಿದ್ದಾರೆ. ಈತ ಜಾತಿಯಿಂದ ಕೊಂಕಣಿ. ಹನುಮಂತ ಶಾನಭಾಗ್‌ಗೆ ಈತ ತೀರ ಆತ್ಮೀಯ. ಹಾಗೆಯೇ ಕೇಂದ್ರ ಹೆದ್ದಾರಿ ಮಂತ್ರಿ ಗಡ್ಕರಿ ಯಾವತ್ತೂ ಭೇಂಡೆ ಮಾತು ಮೀರುವುದಿಲ್ಲ. ಹನುಮಂತ ಶಾನಭಾಗ ಒಂದು ಕಡೆ, ಮತ್ತೊಂದು ಕಡೆ ಸ್ವಜಾತಿ ಸ್ವಾಮೀಜಿ ನಿಂತು ಭೇಂಡೆಗೆ "ಬಲಮುರಿ ಬಿಲ್ಡಿಂಗ್" ಬಚಾಯಿಸಲು ಬೈಪಾಸ್ ಹೈವೆ ಅನಿವಾರ್ಯ ಎಂಬುದನ್ನು ಮನದಟ್ಟು ಮಾಡಿದ್ದಾರೆ. ಭೇಂಡೆ ಜಾತಿ ಬಂಧುಗಳ ಅಕ್ರಮ ಕಟ್ಟಡ ರಕ್ಷಿಸಲು ಗಡ್ಕರಿಗೆ ಆರ್ಡರ್ ಮಾಡಿದ್ದಾರೆ. ಜೊತೆಗೆ ರೈಲ್ವೆ ಮಂತ್ರಿ ಸುರೇಶ್ ಪ್ರಭು ಎಂಬ ಕೊಂಕಣಿ ಕುಲತಿಲಕನೂ ಸೇರಿಕೊಂಡಿದ್ದಾರೆ. ಅನಂತ್ಕುಮಾರ್‌ಯಂತೂ ಚೆಡ್ಡಿಗಳ ಬೈಪಾಸ್ ಹಿಕಮತ್ತಿಗೆ ತನ್ನ ಎಂಪಿಗಿರಿ ತಾಕತ್ತು ವಿನಮ್ರವಾಗಿ ನೀಡುತ್ತಿದ್ದಾನೆ. ಅಲ್ಲಿಗೆ ಕುಮಟಾದ ಬೈಪಾಸ್ ಲಾಬಿ ದಿಲ್ಲಿತನಕ ವ್ಯವಸ್ಥಿತವಾಗಿ ಹೆಣೆದುಕೊಂಡಂತಾಗಿದೆ. ಅರ್ಥಾತ್ ಕುಮಟಾದ ನಾಲ್ಕು ಅಕ್ರಮ ಕಟ್ಟಡಗಳ ಬಚಾಯಿಸಲು ಕೊಂಕಣಿ ಸ್ವಾಮಿ, ಕೊಂಕಣಿ ಮಂತ್ರಿಗಳು ಮತ್ತು ಆರೆಸ್ಸೆಸ್‌ನ ಕೊಂಕಣಿ ಲಾಬಿ ಮಾಡಬಾರದ್ದೆಲ್ಲ ಮಾಡುತ್ತಿದೆ.

ಅನಾಹುತಕಾರಿ ಬೈಪಾಸ್

ಉಳ್ಳವರ ಖುಷಿಗಾಗಿ ಸಿದ್ಧಪಡಿಸಲಾಗಿರುವ ಬೈಪಾಸ್ ಯೋಜನೆಯಂತೆ ಹೈವೆ ಪಥ ಕುಮಟಾ ನಗರಕ್ಕೆ ನಾಲ್ಕೈದು ಕಿಲೋಮೀಟರ್ ಮೊದಲೇ ಬದಲಾಗುತ್ತದೆ. ಹಂದಿಗೋಣ ಎಂಬ ಹಳ್ಳಿಯಿಂದ ಸೋಕನಮಕ್ಕಿ, ಬಗ್ಗೋಣ, ಹೊಸಹೆರವಟ್ಟಾ, ಗುಡಾಳ, ಚಿಕ್ಕೊಳ್ಳಿ, ಸಿದ್ದನಭಾವಿ, ಮಾನೀರ ಗ್ರಾಮಗಳ ಮೂಲಕ ಸುಮಾರು ಏಳು ಕಿ.ಮೀ. ಉದ್ದದ ಬೈಪಾಸ್ ರಚನೆಯಾಗಲಿದೆ. ಇದು ಆರ್ಥಿಕವಾಗಿ ದುಬಾರಿ. ಹೊಸದಾಗಿ ಇಲ್ಲಿ ಭೂಸ್ವಾಧೀನ ಆಗಬೇಕಾಗುತ್ತದೆ; ಹೊಸದಾಗಿ ಚತುಷ್ಪಥ ನಿರ್ಮಾಣ ಮಾಡಬೇಕಾಗುತ್ತದೆ. ಇದಕ್ಕೆ **400-500** ಕೋಟಿ ಖರ್ಚು ಬರಲಿದೆ. ಬೈಪಾಸ್ ಇಲ್ಲದೆ ಈಗಿನಂತೆ ನೇರವಾಗಿ ಹೋದರೆ ಇಷ್ಟು ಖರ್ಚು ಬಾರದು. ಈಗಾಗಲೇ ಚತುಷ್ಪಥಕ್ಕೆ ಬೇಕಾದ ಶೇ. **80**



GOVERNMENT OF KARNATAKA

No. PWD 156 CNH 2014(P)

Karnataka Government Secretariat, Vikasa Soudha, Bengaluru, dated: 31.12.2014

From:
The Principal Secretary to Government, Public Works, Ports & IWT Deptt.,

To:
The Chief General Manager (T)
National Highways Authority of India,
14th Km, Near Deepak Bus Stop,
Nagasandra, M.S. Ramaiah Enclave,
Bengaluru-560 073.

Sir,

Sub: 4-laning of Goa-Karnataka border to Kundapur [illegible] of NH-66 (Formerly NH-17) in the State of Karnataka-reg.

Ref: 1) Your letter No. [illegible] dated 03.04.2014
2) Proceedings of the meeting held on 16.10.2014 under the Chairmanship of the Hon'ble Minister for Public Works.

With reference to the above subject, in the letter under ref(1), NHAI has requested the concurrence of Government of Karnataka on the areas of issues referred in the letter. Accordingly, a meeting was convened on 16.10.2014 under the Chairmanship of the Hon'ble Minister for Public Works. As per the decision taken in the meeting and as agreed by the authorities of NHAI, I am directed to convey the consent of the Government of Karnataka for the following issues:-

(a) To reduce the RoW to 30m in Kumta, Honnavar, Karwar, Ankola, Karki & Bhatkal [illegible];
(b) For the construction of by-pass in Kumta; and
(c) For the construction of flyover from Londa bridge to RTO Office in Karwar.

The above mentioned bypass and flyover should be constructed in the overall savings of the Project.

Yours faithfully,
(K. UMAPATHY)
Under Secretary to Government,
Public Works, Ports & Inland Water Transport Department
(Communication)

ದೇಶಪಾಂಡೆ ಬರೆಸಿದ ಬೈಪಾಸ್ ಪ್ರಸ್ತಾವನೆ

ಭೂಮಿ ಹೆದ್ದಾರಿ ಪ್ರಾಧಿಕಾರದ ವಶದಲ್ಲಿದೆ. **1968** ರಷ್ಟು ಹಿಂದೆಯೇ ಪರಿಹಾರ ನೀತಿ ಸ್ವಾಧೀನ ಮಾಡಿಕೊಳ್ಳಲಾದ ಜಾಗವಿದು. ಪರಿಹಾರ ಕೊಡಬೇಕಾಗಿರುವುದು ಅಲ್ಪ ಪ್ರಮಾಣ ಮಾತ್ರ.

ಕೇವಲ ಮೂರ್‍ನಾಲ್ಕು ಮಂದಿಯ ಮೂರ್‍ನಾಲ್ಕು ಬಿಲ್ಡಿಂಗ್ ಉಳಿಸಲು **8-9** ಹಳ್ಳಿಗಳ ಅಮಾಯಕ ಬಡ ಹಿಂದುಳಿದ ವರ್ಗದವರ ಸಾವಿರಾರು ಮನೆ-ಕೊಟ್ಟಿಗೆ-ಹೊಲ-ತೋಟ ಬಲಿಗೊಡಬೇಕಾಗುತ್ತದೆ! 7 ಕಿ.ಮೀ. ವ್ಯಾಪ್ತಿಯ ಅರಣ್ಯ ಇಲಾಖೆಯ ಬೆಲೆಬಾಳುವ ಮರಗಳ ಮಾರಣಹೋಮವೇ ಆಗಲಿದೆ. ಹಾಗೊಮ್ಮೆ ಈ ಪ್ರದೇಶದಲ್ಲಿ ಹೆದ್ದಾರಿಯಾದರೆ ಅಲ್ಲಿಯ ಪದರುಗಳಿಂದ ನಿರ್ಮಿತವಾದ ಭೂಮಿ-ಗುಡ್ಡಗಳು ಕುಸಿಯಲಿವೆ; ನೀರಿನ ಸೆಲೆ ಬತ್ತಲಿದೆ. ಫಲವತ್ತಾದ ಭೂಮಿ ಬಂಜರಾಗಲಿವೆ. ವಾಸ್ತವ್ಯದ ಮನೆ-ಬದುಕಿನಾಧಾರವಾದ ಸಾಮೀಪ್ಯ ಕಳೆದುಕೊಂಡು ಜನ ಬೀದಿಗೆ ಬೀಳಬೇಕಾಗುತ್ತದೆ. ಕುಮಟಾ ತಾಲ್ಲೂಕಲ್ಲಿ ವಾಸ್ತವ್ಯಕ್ಕೆ ಯೋಗ್ಯವಾದ ಪುನರ್ವಸತಿ ವ್ಯವಸ್ಥೆ ಸಾಧ್ಯವೇ ಇಲ್ಲ. ಒಂದೆಡೆ ಬಿಗಿಯಾದ ಅರಣ್ಯ ಕಾಯ್ದೆಯ ಅರಣ್ಯ ಭೂಮಿ, ಮತ್ತೊಂದೆಡೆ ಸಿಆರ್‌ಝಡ್ ನಿಯಮದ ಇಕ್ಕಟ್ಟು. ಜನ ಜೀವನಾಧಾರ ಕಸುಬು ಕಳೆಕೊಂಡು ಅಕ್ಷರಶಃ ಬಿಕಾರಿಗಳಾಗಲಿದ್ದಾರೆ ಈ ಎಡವಟ್ಟು ಯೋಜನೆಯಿಂದ.

ಕುಮಟಾದಿಂದ ಹೊರಗೆ ಹೆದ್ದಾರಿ ಹೋದರೆ ಪಟ್ಟಣದ ಆರ್ಥಿಕತೆ ಮೇಲೆ ದೊಡ್ಡ ಹೊಡೆತ ಬೀಳುವುದು ಖಂಡಿತ. ಇಲ್ಲಿಯ ವ್ಯಾಪಾರ-ವಹಿವಾಟಿಗೆ ಧಕ್ಕೆಯಾಗುತ್ತದೆ. ಸೋಶಿಯೋ ಇಕಾನಮಿ ನೆಲ ಕಚ್ಚಲಿದೆ. ಕುಮಟಾದ ದೆಸೆಯೇ ಹಾಳಾಗುತ್ತದೆ. ಚೆಡ್ಡಿ ಲಾಬಿಗೆ, ಮಂತ್ರಿಗಳಿಗೆ ಮತ್ತು ಕೊಂಕಣಿ ಸ್ವಾಮಿಗೆ ಆಪ್ತರಾದ ನಾಲ್ಕು ದಗಲುಬಾಜಿ ದಂಧೆದಾರರ ಅಕ್ರಮ ಸಾಮ್ರಾಜ್ಯ ಉಳಿಸಲು ಪ್ರಳಯಾಂತಕ ಬೈಪಾಸ್ ಪ್ಲಾನ್ ಜಾರಿಗೆ ಹೊರಟಿರುವುದು ಮೋದಿ ಸರ್ಕಾರದ ಉಳ್ಳವರ ಪರವಾದ ಬರ್ಬರ-ಅಮಾನುಷ-ಹೇಯ ಧೋರಣೆಗೆ ಸಾಕ್ಷಿಯಂತಿದೆ!!

ಹೋರಾಟ

ಬೈಪಾಸ್ ಭಾನಗಡಿ ಕುಮಟಾದಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವೆ ಸಂಘರ್ಷ ಸೃಷ್ಟಿಸಿಬಿಟ್ಟಿದೆ. ಬಲಾಢ್ಯ ಕೊಂಕಣಿ ಲಾಬಿ ಮಾಡುತ್ತಿರುವ ಅನ್ಯಾಯ-ಅನಾಹುತ-ಅವಾಂತರ ಆ ಜಾತಿಯ ಪ್ರಜ್ಞಾವಂತರಲ್ಲಿ ಮತ್ತು ಬಡವರಲ್ಲಿ ಅಸಹ್ಯ ಮೂಡಿಸಿದೆ. ತಮ್ಮ ಸ್ವಾಮಿ-ಮಂತ್ರಿಗಳು-ಆರೆಸ್ಸೆಸ್ ಡಾನ್‌ಗಳು ಒಟ್ಟಾಗಿ ಆಡುತ್ತಿರುವ ಆಟ. ಅಸಹಾಯಕ ಬಡವರ ಬಲಿಗೊಡುವ ಘೋರ ಪಾತಕವೆಂದೇ ಸಾಮಾನ್ಯ ಕೊಂಕಣಿಗರು ಹೇಳುತ್ತಿದ್ದಾರೆ. ಅಕ್ರಮ ಕಟ್ಟಡದ ಕುಳಕರು ರಹಸ್ಯವಾಗಿ ಬೈಪಾಸ್ ಯೋಜನೆಗಾಗಿ ಪ್ರಯತ್ನ ನಡೆಸುತ್ತಿದ್ದರೆ, ಇತ್ತ ಕುಮಟೆಯಲ್ಲಿ ದುರ್ಬಲರು ಬಹಿರಂಗ ಹೋರಾಟಕ್ಕೆ ಇಳಿದಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಸಮಿತಿ ಎಂಬೊಂದು ಸಂಘಟನೆ ಹುಟ್ಟಿಕೊಂಡಿದ್ದು ಇದು ಬೈಪಾಸ್ ಪರಿಯಾದ ಹಳ್ಳಿಗರ ರಕ್ಷಣೆಗೆ ಹೋರಾಡುತ್ತಿದೆ. ದೇಶಪಾಂಡೆ ಮತ್ತು ಚೆಡ್ಡಿಗಳ ಕುಟಿಲ ಕಾರಸ್ಥಾನದ ಬಗ್ಗೆ ಅರಿವು ಮೂಡಿಸಿ ಜನರನ್ನು ಪ್ರತಿಭಟನೆಗೆ ಅಣಿಗೊಳಿಸುತ್ತಿದೆ. ದೇಶಪಾಂಡೆಯ ಷಡ್ಯಂತ್ರಗಳಿಗೆ ಎಂದೂ ಹೆದರದ ಆರ್.ಜಿ. ನಾಯ್ಕ ಮತ್ತು ಹರೀಶ್ ಶೇಟ್ ಎಂಬ ಎದೆಗಾರರು ಜನರನ್ನು ಸಂಘಟಿಸುತ್ತಿದ್ದಾರೆ. ಅತ್ತ ಕಾನೂನಾತ್ಮಕ ಬಡಿದಾಟಕ್ಕೂ ಯೋಜನೆ ಹಾಕಿಕೊಂಡಿರುವ ಈ ಜನಪರ ಹೋರಾಟಗಾರರು ಪ್ರಧಾನಿ ಮೋದಿಯ ಭೇಟಿಗೆ ಪ್ರಯತ್ನ ನಡೆಸಿದ್ದಾರೆ. ಪ್ರಳಯಾಂತಕ ಬೈಪಾಸ್ ಬೇಡ; ನೇರವಾಗಿ ಕುಮಟಾದ ನಟ್ಟನಡುವಿಂದಲೇ ಹೈವೇ ಹೋಗಲಿ ಎಂಬುದು ಈ ಹೋರಾಟಗಾರರ ಬೇಡಿಕೆ.


ಕೈಯಲ್ಲಿ ಕಾಸಿಲ್ಲದಿದ್ದರೂ ಬಲಾಢ್ಯ ಅಧಿಕಾರಸ್ಥ ಚೆಡ್ಡಿ ಮಂತ್ರಿಗಳು, ಬಿಲ್ಡರ್ ಭೂಪರು ಮತ್ತು ಅಪಾಯಕಾರಿ ದೇಶಪಾಂಡೆ ಎದುರು ಹಾಕಿಕೊಂಡಿರುವ ಬೈಪಾಸ್ ವಿರೋಧಿ ಆಂದೋಲನಕಾರರು ಜಿಲ್ಲೆಯಾದ್ಯಂತ ಭೇಷ್ ಅನ್ನಿಸಿಕೊಳ್ಳುತ್ತಿದ್ದಾರೆ. ಈ ನಾಯ್ಕ-ಶೇಟ್ ಬಳಗದ ಕಳಕಳಿ-ಪ್ರಾಮಾಣಿಕತೆ ನಿಜಕ್ಕೂ ಮೆಚ್ಚುವಂಥದ್ದು. ಹುಚ್ಚು ದೇಶಪಾಂಡೆ ಮತ್ತು ನಕಲಿ ದೇಶಭಕ್ತರಾದ ಚೆಡ್ಡಿಗಳು ಜನರ ಮುಂದೀಗ ಬೆತ್ತಲಾಗಿಬಿಟ್ಟಿದ್ದಾರೆ. ಚೆಡ್ಡಿಗಳು ಮತ್ತು ಮೋದಿ ಸರ್ಕಾರದ ಅಸಲೀಯತ್ತೇ ಶೂದ್ರ-ಅಸಹಾಯಕ-ಬಡವರ ಘಾತುಗೊಳಿಯುವ ನೀತಿ ಎಂಬುದು ಖಾತ್ರಿಯಾಗುತ್ತಿದೆ.

ದೇಶಪಾಂಡೆ ಒಬ್ಬನಲ್ಲಿ "ಮನುಷ್ಯತ್ವ" ಬೆಳೆದರೆ ಸಾಕು, ಬೈಪಾಸ್‌ನಿಂದಾಗುವ ಆರ್ಥಿಕ-ಸಾಮಾಜಿಕ-ಪರಿಸರ-ಬಡವರ ಬದುಕು ಬಚಾವಾಗುವುದೆಲ್ಲ ತಪ್ಪುತ್ತದೆ; ಬಿಜೆಪಿಯ ಕೇಂದ್ರ ಮಂತ್ರಿ-ನಾಗಪುರದ ಚೆಡ್ಡಿ ಮಾಫಿಯಾದಿಂದ ಆಗೇನೂ ಮಾಡಲಾಗದು. ಇದು ಜನ ಬೀದಿಗಿಳಿದು ಅರ್ಥ ಮಾಡಿಸುವ ಮೊದಲೇ ದೇಶಪಾಂಡೆಗೆ ಅರಿವಾದರೆ ಒಳ್ಳೆಯದು.


■ ನಮುಷ



ಪಿರೀಶ್ ನಾಯ್ಕನ ಹೋಟೆಲ್



ಬಲಮುರಿ ದಾಸನ ಬಿಲ್ಡಿಂಗ್



ಮೋಹಕ್ಕೆ ಬಲಿಯಾದ ದಕ್ಷ





'ಊರಿನ ಜನಕ್ಕೆಲ್ಲಾ ನ್ಯಾಯ ಕೊಡ್ತೀಯಂತೆ. ನನಗೆ ಮಾತ್ರ ಇಂಥಾ ಅನ್ಯಾಯ ಮಾಡಬಹುದಾ? ಯಾರ್ಯಾರದೋ ಕಷ್ಟನೋವಿಗೆ ಹೋರಾಡ್ತೀಯಂತೆ. ಯಾವ ಪಾಪಕ್ಕೆ ಅಂತ ನನಗೆ ಇಂಥಾ ಅನ್ಯಾಯ ಮಾಡಿಬಿಟ್ಟೆ? ಹೀಗೆಲ್ಲಾ ಮಾಡಿಕೊಳ್ಳೋ ಮುಂಚೆ ಒಂದೇಒಂದು ಕ್ಷಣಕ್ಕೂ ನಾನು ನಿನಗೆ ನೆನಪಾಗಲಿಲ್ಲವೆ? ಯಾರ್ಯಾರಿಗೋ ಆದ ಅನ್ಯಾಯಕ್ಕೆ ನ್ಯಾಯ ಕೊಡಿಸೋ ನೀನು ಯಾವ ತಪ್ಪು ಮಾಡ್ದೆ ಅಂತ ನನಗಿಂತ ಅನ್ಯಾಯ ಮಾಡ್ಬಿಟ್ಟೆ? ನಿನ್ನ ಪ್ರಾಣ ಏನೋ ತಕ್ಕೊಂಡೆ.... ಒಮ್ಮೇನೂ ನಾನು ನಿನಗೆ ನೆನಪಾಗಲಿಲ್ಲವೆ.....?'

ಧೀರೋದ್ಧಾತ್ತ ಐಎಎಸ್, ಡಿ.ಕೆ. ರವಿಯ ಕಳೇಬರಕ್ಕೆ ಆತುಕೊಂಡು ಎದೆ ಬಡಿದುಕೊಳ್ಳುತ್ತಿದ್ದ ಪತ್ನಿ ಕುಸುಮಾಳ ಆಕ್ರಂದನದ ಮಾತುಗಳಿವು. ನಾಗರಬಾವಿಯ ಮಾವನ ಮನೆಯ ಪಡಸಾಲೆಯಲ್ಲಿ ರವಿ ಶವವಾಗಿ ಮಲಗಿದ್ದ. ಮಾವ ಹನುಮಂತರಾಯಪ್ಪ ಜನಪ್ರಿಯ ಜನನಾಯಕ ಮತ್ತು ಸಂಭಾವಿತ. ಆಳಿಯನ ಶವದೆದುರು ಇನ್ನಿಲ್ಲದಂತೆ ರೋದಿಸುತ್ತಿದ್ದ ಮಗಳಿಗೆ ಹೇಳಲು ಮಾತೆಲ್ಲಿಯದು?

ಕುಸುಮಾಳ ಆರ್ತನಾದದ ಒಂದೊಂದೇ ಪದ, ವಾಕ್ಯದೆದುರು ಪ್ರಶ್ನೆಯಂತೆ ಕಾಣಿಸುತ್ತಿದ್ದದ್ದು, ಸುತ್ತ ನೆರೆದವರಷ್ಟೇ ಅಲ್ಲ, ಮಲಗಿದ್ದ ಆ ನಿರ್ಜೀವ ಕಳೆಬರವೇ ದೊಡ್ಡ ಪ್ರಶ್ನೆಯಾಗಿ ಗೋಚರಿಸುತ್ತಿತ್ತು. ಉತ್ತರಿಸುವವರ್ಯಾರು?

ಇತ್ತ ಕುಣಿಗಲ್ ತಾಲ್ಲೂಕು ದೊಡ್ಡಕೊಪ್ಪಲಿಗೆ ಬಂದ ರವಿಯ ಕಳೇಬರದ ಮುಂದೆ ತಾಯಿಯ ಗೋಳಾಟ. ಬೊಬ್ಬಿಡುವ ತಂದೆ, ಎದೆ ಹಿಡಿದುಕೊಂಡು ರೋದಿಸುತ್ತಿದ್ದ ಅಣ್ಣ. ನ್ಯೂಸ್ ಚಾನಲ್ಲೊಂದರಲ್ಲಿ ಅವತ್ತು ರವಿ ಐಎಎಸ್ ಅಧಿಕಾರಿಯಾದ ಸುದ್ದಿ ಕೇಳಿ ಖುಷಿಪಟ್ಟ ತಾಯಿಯ ಸಂದರ್ಶನದ ತುಣುಕೊಂದು ಪ್ರಸಾರವಾಗುತ್ತಿತ್ತು. ಒಡಲಾಳದ ಸಾಕವ್ವನೋ ಸಾಲುಮರದ ತಿಮ್ಮಕ್ಕನೋ ಎಂಬಂತಿದ್ದ ತಾಯಿ ಗೌರಮ್ಮ ಆಗಷ್ಟೇ ಕೊಟ್ಟಿಗೆಯಿಂದ ಸಗಣಿ ಗುಡಿಸಿ ಬಂದವಳಂತೆ... ನನ್ನ ಮಗ ರಾತ್ರಿ ಇಡೀ ನಿದ್ದೆಗೆಟ್ಟು ಓದ್ತಿದ್ದ ಕಷ್ಟ ನನ್ನಿಂದ ನೋಡಕ್ಕಾಗ್ತಿರಲಿಲ್ಲ ಕಣಪ್ಪಾ, ಬ್ಯಾಡಪ್ಪಾ ಕೂಲಿ ನಾಲಿ ಮಾಡ್ಕಂಡಿದ್ದು ಬಿಡಾಣ. ಎಷ್ಟೋ ನೂರೋ ರೂಪಾಯಿ ಕೂಲಿ ಕೊಡ್ತಾರೆ. ಅದರಲ್ಲೇ ಮುದ್ದೆ ಉಪ್ಸೆಸ್ರು ತಿಂದು ಕಣ್‌ತುಂಬಾ ನಿದ್ದೆ ಮಾಡಬಹುದು ಅಂತಿದ್ದೆ. ಮಗಾಕೇಣ್‌ಲಿಲ್ಲ, ಈಗ ನೋಡಿ ಎಂಥಾ ಸಾಧ್ನೆ ಮಾಡವ್ನೆ-ಆತ ಕಷ್ಟ ಪಟ್ಟಿದ್ದೂ ಸಾರ್ಥಕ ಆಯ್ತು ಕಣಪ್ಪಾ....!



ರವಿಯ ತಾಯಿ ಅವತ್ತು ಟೀವಿ ಕ್ಯಾಮರಾಕ್ಕೆ ಕೊಟ್ಟ ಸಂದರ್ಶನದ ಯಾವ ವಾಕ್ಯವಾದರೂ ಕುಣಿಕೆ ಬಿಗಿದುಕೊಳ್ಳುವುದಕ್ಕೂ ಮುನ್ನ ರವಿಗೆ ನೆನಪಾಗಬೇಕಿತ್ತು. **Atleast** ಪತ್ನಿ ಕುಸುಮಾ ಕೇಳಬಹುದಾದ ಯಾವ ಪ್ರಶ್ನೆಯಾದರೂ ಸಾವಿನ ಕೊನೇ ಕ್ಷಣಕ್ಕಾದರೂ ರವಿ ಅಂತಃಪ್ರಜ್ಞೆಗೆ ನಿಲುಕಬೇಕಿತ್ತು. ಹೊಟ್ಟೆಬಟ್ಟೆ ಕಟ್ಟಿ ಓದಿಸಿದ ತಂದೆತಾಯಂದಿರ ಮುಖ, ಒಡಹುಟ್ಟಿದ ಅಣ್ಣನ ನಗುವು, ಕೈಹಿಡಿದ ಮಡದಿಯ ಮುಗುಳು, ಕಾಪಾಡಿದ ಗೆಳೆಯರು, ಜನರ ಪ್ರೀತಿ, ಮಣ್ಣಿನ ಋಣ, ನಾಡಿನ ನಿರೀಕ್ಷೆ, ಓದಿದ ಸಿದ್ಧಾಂತ, ನಂಬಿದ ಆದರ್ಶ, ರೈತಾಪಿಗಳ ಬವಣೆ, ಅನ್ಯಾಯದ ವಿರುದ್ಧ ಆಕ್ರೋಶ, ಕರ್ತವ್ಯದ ಹೊಣೆಗಾರಿಕೆ, ಮಗನಾಗಿ, ಪತಿಯಾಗಿ, ಅಧಿಕಾರಿಯಾಗಿ, ಓರ್ವ ಕನ್ನಡಿಗನಾಗಿ ನಿಭಾಯಿಸಬೇಕಾದ ಜವಾಬ್ದಾರಿ... ಏನೊಂದೂ ಉರುಳಿಗೆ ಕೊರಳೊಡ್ಡುವ ಮುನ್ನ ಧೀರ ಐಎಎಸ್ ರವಿಗೆ ನೆನಪಾಗಲೇ ಇಲ್ಲವೆ?

ಇರಲಿ, ಖುದ್ದು ತಂದೆತಾಯಿಗಳೇ ಇವತ್ತು ಮಗನ ಸಾವಿನ ಕುರಿತಂತೆ ಸಿಬಿಐ ತನಿಖೆಯಾಗಲೇಬೇಕೆಂದು ವಿಧಾನಸೌಧದೆದುರು ಕೂತಿದ್ದಾರೆ. ಹೆಣ್ಣು ಕೊಟ್ಟ ಮಾವನಿಗೇ ಅಳಿಯನ ಸಾವಿನ ಬಗ್ಗೆ ಅನುಮಾನ. ತಪ್ಪೇನಲ್ಲ, ನಾಡಿನಾದ್ಯಂತ ಜನಕ್ಕಿದು ಅರಗಿಸಿಕೊಳ್ಳಲಾಗುತ್ತಿಲ್ಲ. ರವಿ ಅಂಥಾ ಹೇಡಿಯಲ್ಲವೆಂದೇ ನಾಡು ನಂಬಿದೆ. ಜನ ಬೀದಿಗಿಳಿದಿದ್ದಾರೆ. ಕೆಲವರಿಗಿದು ಮರಳು ಮಾಫಿಯಾ ಕೃತ್ಯ. ಇನ್ನೂ ಕೆಲವರು ರಿಯಲ್ ಎಸ್ಟೇಟ್ ಮಾಫಿಯಾ ಕಾರಣವೆನ್ನುತ್ತಿದ್ದಾರೆ. ದೈತ್ಯ ಕಂಪೆನಿಗಳ ನೂರಾರು ಕೋಟಿಯ ತೆರಿಗೆ ವಂಚನೆಗೆ ರವಿ ಕೈಹಾಕಿದ್ದೇ ಆಪತ್ತಾಯಿತೆನ್ನುವವರು, ದೈತ್ಯ ಬಿಲ್ಡರುಗಳೇ ಅವರನ್ನು ಮುಗಿಸಿದ್ದಾರೆನ್ನುವವರು, ಸರ್ಕಾರವೇ ದಿಟ್ಟ ಅಧಿಕಾರಿಯನ್ನು ಮುಗಿಸಿರಬೇಕೆಂದು ನಂಬಿರುವವರು, ಹಾಗಿಲ್ಲದಿದ್ದರೆ ಸಿಬಿಐ ತನಿಖೆಗೇಕೆ ಹಿಂಜರಿಕೆಯೆಂದು ದೂರುವವರು, ರವಿ ಸಾವಿನ ಕ್ಷಣದಿಂದಲೂ ಈತನಕ ಬೀದಿಗಿಳಿದು ಪ್ರತಿಭಟಿಸುತ್ತಲೇ ಇರುವ ನಾಡಿನ ಅಸಂಖ್ಯಾತ ಜನಸಾಮಾನ್ಯರಿಗೆ, ಹೋರಾಟಗಾರರಿಗೆ, ಸಂಘಟನೆಗಳಿಗೆ ವಾಸ್ತವದ ಮತ್ತೊಂದು ಮುಖವೂ ಗೊತ್ತಾದರೆ ಏನನಿಸುತ್ತೋ, ಗೊತ್ತಿಲ್ಲ.

ಬಹುಶಃ ವಿರೋಧ ಪಕ್ಷಗಳು ಪತ್ರಿಕೆಗಳು, ಮೀಡಿಯಾ ಯಾರಿಗೂ ರವಿ ಸಾವಿನ ಕಾರಣದ ಮತ್ತೊಂದು ಆಯಾಮವೂ ಗೊತ್ತಿದ್ದೂ ಬೇಕಿಲ್ಲ, ಪ್ರಿಯವಲ್ಲ, ಇಷ್ಟವಾಗುತ್ತಿಲ್ಲ.

ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಡಿ.ಕೆ. ರವಿ ಅರ್ಥಾತ್ ದೊಡ್ಡಕೊಪ್ಪಲು ಕರಿಯಪ್ಪನವರ ಮಗ 36ರ ಹರೆಯದ ರವಿ ಶವವಾಗಿ ಫ್ಯಾನಿಗೆ ನೇತಾಡಿದ್ದು ಮೊನ್ನೆ ಮಾರ್ಚ್ 16ರ ಸೋಮವಾರ. ಬೆಳಗ್ಗೆ ನಾಗರಬಾವಿಯ ಮಾವನ ಮನೆಯಿಂದಲೇ ತಮ್ಮ ಕಚೇರಿಗೆ ಹೋದ ರವಿ ಹಾಜರಾತಿಗೆ ಸಹಿ ಹಾಕಿದ್ದೇ ಕೊನೆ. ತಮ್ಮ ಛೇಂಬರಿನಲ್ಲಿ ಹೆಚ್ಚೆಂದರೆ ಕಾಲು ಗಂಟೆ ಕಳೆದಿರಬೇಕು. ಹನ್ನೊಂದರ ಹೊತ್ತಿಗೆಲ್ಲಾ ವಾಪಸ್ಸು ತಮ್ಮ ಕೋರಮಂಗಲದ ಫ್ಲಾಟಿಗೆ ಬಂದಿದ್ದಾರೆ. ತಾವಾಗಿಯೇ ಬಂದಿದ್ದಾರೆ. ಯಾರೂ ಅವರನ್ನು ಬಲವಂತವಾಗಿ ಕೋರಮಂಗಲದ ಫ್ಲಾಟಿಗೆ ಕರೆತಂದಿಲ್ಲ.

ಏಕೆಂದರೆ ಅವರ ಕಾರಿನ ಡ್ರೈವರ್ ಅಪಾರ್ಟ್‌ಮೆಂಟಿನ ಕೆಳಗೇ ಸಂಜೆ ತನಕ ಧಣಿ ಬರುತ್ತಾರೆಂದು ನಂಬಿಕೊಂಡೇ ಕಾರಿನಲ್ಲಿ ಕಾಯುತ್ತಿದ್ದ. ಮಧ್ಯಾಹ್ನ ಮಾವನ ಮನೆಯಿಂದ ಮಡದಿ ಕಳಿಸಿದ ಊಟ ಅವರ ಛೇಂಬರಿನಲ್ಲೇ ಅನಾಥವಾಗಿತ್ತು. ಫೋನು ಸ್ವಿಚ್ ಆಫ್. ಮನೆಯವರು ಡ್ರೈವರ್‌ನ ಮೊಬೈಲಿಗೆ ಫೋನ್ ಮಾಡಿ ಕೇಳಿದರೆ 'ಸಾಹೇಬರು ಫ್ಲಾಟಿಗೆ ಹೋದವರು ಇನ್ನೂ ವಾಪಸ್ಸಾಗಿಲ್ಲ' ಎಂಬ ಉತ್ತರ. ಫ್ಲಾಟಿನ ಫೋನೂ ನಿರುತ್ತರ. ಏನೋ ಗುಮಾನಿ ಬಂದು ಪತ್ನಿ ಕುಸುಮಾ ತನ್ನ ತಂದೆ ಜೊತೆ ಸಂಜೆ ಆರೂವರೆ ಹೊತ್ತಿಗೆ ಮತ್ತೊಂದು ಕೀ ಬಳಸಿ ಬಾಗಿಲು ತೆಗೆದು ನೋಡಿದರೆ ನಂಬಲಾಗದ ದೃಶ್ಯ!

ಅನ್ಯಾಯ, ಅಕ್ರಮ, ಭ್ರಷ್ಟಾಚಾರ, ಮಾಫಿಯಾಗಳ ವಿರುದ್ಧ ಹೋರಾಡಿಕೊಂಡೇ ಬಂದ ದಿಟ್ಟ ರವಿಯನ್ನು ಆ ಪೈಕಿ ಯಾವುದೋ ದುಷ್ಟ ಶಕ್ತಿಯೊಂದು ಮುಗಿಸಿರಬೇಕೆಂದೇ ಭಾವಿಸೋಣ. ರವಿ ಬಗೆಗಿದ್ದ ಜನರ ನಿರೀಕ್ಷೆ, ನಂಬಿಕೆಗಳ್ಯಾವುದೂ ಸುಳ್ಳಾಗದಿರಲಿ ಎಂದೇ ಪ್ರಾರ್ಥಿಸೋಣ. ಸಾವಿಗೆ ಕಾರಣರಾದವರನ್ನು ಗಲ್ಲಿಗೂ ಹಾಕೋಣ. ಆದರೆ ನಮ್ಮ ತನಿಖೆ ಈ ಸಾವಿಗೆ ಜನರು ಈವರೆಗೆ ಅಂದುಕೊಂಡಿರುವ ಆಯಾಮದ ಜೊತೆಗೆ ಮತ್ತೊಂದು ಖಾಸಗಿ ಆಯಾಮವೂ ಇದೆ ಮತ್ತೆ ಅದು ಅವರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಮುಖ ಪ್ರೇರಣೆ ನೀಡಿದೆ ಎಂಬುದನ್ನು ಸಾಬೀತುಮಾಡುತ್ತದೆ.

ಸದ್ಯ ರವಿ ಸಾವಿನ ಮರ್ಮ ಅಡಗಿರುವುದು ಅವರ ಸೆಲ್‌ಫೋನೆಂಬ ಮೂರಂಗುಲದ ಪುಟ್ಟ ಪೆಟ್ಟಿಗೆಯಲ್ಲಿ. ಅದರ ನಂಬರ್ **8891196969**. ಬಹುಶಃ ರವಿ ಬಯಸಿ ಬಯಸಿ ಪಡೆಗೊಂಡ ಫ್ಯಾನ್ಸಿ ನಂಬರದು. ಪತ್ರಿಕೆ ಕಳೆದ ನಾಲ್ಕು ದಿನಗಳಿಂದ ನಡೆಸಿದ ತನಿಖೆ, ಹಾಕಿದ ಶ್ರಮ ಮತ್ತು ಹರಿಸಿದ ಬೆವರಿನ ಫಲವೋ ಎಂಬಂತೆ ಅವರ ಸ್ವಿಚ್ ಆಫ್ ಆದ ಮೊಬೈಲಿನಿಂದ ರವಾನೆಯಾದ ಕೊನೆಯ ಮೆಸೇಜ್ ಈ ರೀತಿ ಇದೆ.

"...... ಗುಡ್‌ಬೈ, ಇನ್ನೇನಿದ್ದರೂ ಮುಂದಿನ ಜನ್ಮದಲ್ಲಿ ಭೇಟಿಯಾಗೋಣ!"

ಇಂಥಾದ್ದೊಂದು ವಿಚಿತ್ರ, ವಿಲಕ್ಷಣ ಮೆಸೇಜ್ ರವಾನೆಯಾಗಿರುವುದು **948 xxx2000** ಸಂಖ್ಯೆ ಹೊತ್ತ ಮೊಬೈಲಿಗೆ!


ಅದು ಯಾರ ನಂಬರ್? ನಾಡಿಗೆ ನಾಡೇ ಬೀದಿಗಿಳಿದು ಪ್ರತಿಭಟಿಸುತ್ತಿರುವ ಜನಸಾಮಾನ್ಯರ











ರೋ ರವಿಯಿಂದ ಈ ಥರದ ಮೆಸೇಜೊಂದು ರೇ ರೈತಾಪಿ, ನಕ್ಸಲೈಟ್, ಜನಸಾಮಾನ್ಯ ರಾಟಗಾರನೊಬ್ಬನ ಮೊಬೈಲಿಗೆ ರವಾನೆಯಾಗಿದ್ದರೆ ಮಾತು ಬೇರೆ. ಆದರದು ಮತ್ತೊಬ್ಬ ಮಹಿಳಾ ಎಎಸ್ ಅಧಿಕಾರಿಣಿಯ ಅಧಿಕೃತ ಸರ್ಕಾರಿ ನಂಬರ್. ಯಾರೂ ನಂಬಲಿಕ್ಕಿಲ್ಲ. ನೇಣು ದುಕೊಳ್ಳುವುದಕ್ಕೂ ಮುನ್ನ ಕೊನೆಯದ್ದೋ ಬಂತೆ ರವಿಯವರ ಮೊಬೈಲಿನಿಂದ ಹೊರಬಿದ್ದ ಮೆಸೇಜಿನಲ್ಲೇ ಅವರ ಸಾವಿನ ರಹಸ್ಯವೂ ಗಿರುವಂತಿದೆ. ಇದಲ್ಲದೆ ಮತ್ತೂ ಒಂದು ನಂಬರಿಗೆ ಮೊಬೈಲಿನಿಂದ ಅನಿರೀಕ್ಷಿತ, ಅಸಹಜ, ಅಚ್ಚರಿಯ ದೇಶಗಳು ರವಾನೆಯಾಗಿವೆ. ಅದು 6xxx9999 ಎಂಬ ಮತ್ತೊಂದು ನಂಬರ್. ಈ ಡೂ ನಂಬರುಗಳ ಪೈಕಿ ಎರಡನೆಯದ್ದು ಅದೇ ಎಎಸ್ ಅಧಿಕಾರಿಣಿಯ ಖಾಸಗಿ ಮೊಬೈಲು. ಆಕೆ ಬೇರೆ ಯಾರೂ ಅಲ್ಲ ಬೆಂಗಳೂರಿನ ಸ್ವರದ ಜಿಲ್ಲೆಯೊಂದರ ಜಿಲ್ಲಾ ಪಂಚಾಯ್ತಿ ಸಿಇಓ. ದರೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ. ಚ್ಚೂಕಮ್ಮಿ ರವಿಯದ್ದೇ ವಯೋಮಾನದ, ಅವರಷ್ಟೇ ಡೈನಾಮಿಕ್ ವ್ಯಕ್ತಿತ್ವದ, ತನ್ನ ಪ್ರತಿಭೆ, ಪರಿಶ್ರಮ ತ್ತು ಶ್ರದ್ಧೆಯಿಂದಲೇ ಇಡೀ ದೇಶದ ಗಮನ ಸೆಳೆದ, ರ್ಷಕ ವ್ಯಕ್ತಿತ್ವ, ಎಂಥವರಿಗೂ ಮತ್ತೊಮ್ಮೆ ನೋಡಬೇಕೆನಿಸುವ ಸೌಂದರ್ಯದ ಐಎಎಸ್ ಧಿಕಾರಿಣಿ ಆಕೆ.

ರವಿಯ ಕಾಲ್ ಡೀಟೇಲ್ಸ್ ತೆರೆದಿಡುವ ಸತ್ಯ ಥವರಿಗೂ ಸುಲಭಕ್ಕೆ ಜೀರ್ಣವಾಗಲಿಕ್ಕಿಲ್ಲ. ಸದ್ಯ ಕೆಗೆ ನಿಲುಕಿದ ವಿವರಗಳೇ ಹೇಳುವಂತೆ ಮಾರ್ಚ್ ರ ಸಂಜೆ 6.45 ಕ್ಕೆ ರವಿಯ ಮೊಬೈಲಿನಿಂದ ಗೊಂದು ಮೆಸೇಜ್ ರವಾನೆಯಾಗಿದೆ. ಆವತ್ತೇ ತ್ರಿ 12ಕ್ಕೆ ಆಕೆಯಿಂದ ರವಿ ಮೊಬೈಲ್‌ಗೆ ಕರೆ ದಿದೆ. ಹೆಚ್ಚೂಕಮ್ಮಿ ಒಂದು ಗಂಟೆ ಕಾಲ ಇಬ್ಬರೂ ತಾಡಿಕೊಂಡಿದ್ದಾರೆ. ಮಾತಿನ ವಿವರಗಳಿಲ್ಲಿ ಪ್ರಸ್ತುತ. ಆವತ್ತು ಶನಿವಾರವಾದ್ದರಿಂದ ರವಿ ತಮ್ಮ ಮಾವನ ಮನೆಯಲ್ಲಿದ್ದರು. ರವಿಯವರ ಮೊಬೈಲಿನ ಟವರ್‌ನ ವಿಳಾಸ ಔಟರ್ ರಿಂಗ್ ರೋಡ್, ಪರೆಡ್ಡಿಪಾಳ್ಯ ಎಂದು ಸೂಚಿಸುತ್ತದೆ.

ಆ ನಡುರಾತ್ರಿಯಲ್ಲಿ ಒಂದು ಗಂಟೆಕಾಲ ರವಿ ಎಎಸ್ ಚೆಲುವೆಯ ಜೊತೆ ನಾಡಿನ ಅಭಿವೃದ್ಧಿ ತೋ ಜನಸಾಮಾನ್ಯರ ಕಷ್ಟಕಾರ್ಪಣ್ಯಗಳ ಕುರಿತೋ ರ್ಚಿಸಿರಬೇಕೆಂದೇ ಭಾವಿಸೋಣ. ಮತ್ತೆ ಮಾರ್ಚ್ ರ ಬೆಳಗ್ಗೆ ಸುಮಾರು ಹತ್ತು ಗಂಟೆಗೆ ಆಕೆಯೇ ಮೊಬೈಲ್‌ಗೆ ಕರೆ ಮಾಡುತ್ತಾಳೆ. ಆ ಹೊತ್ತಿಗೆ ಮೊಬೈಲಿನ ಟವರ್ ಲೋಕೇಷನ್ ರಮಂಗಲವನ್ನು ಸೂಚಿಸುತ್ತದೆ. ಅದೇ ದಿನ ಸಂಜೆ 30ಕ್ಕೆ ಇತ್ತ ರವಿಯೇ ಆಕೆಗೆ ಫೋನ್ ಮಾಡಿ ಹತ್ತು ಮಿಷಗಳ ಕಾಲ ಮಾತಾಡಿದ್ದಾರೆ. ಅದರ ಮಾರನೇ ಅಂದರೆ ಮಾರ್ಚ್ 11 ಕ್ಕೆ ಸಂಜೆ 7 ರ ಹೊತ್ತಿಗೆ ಮತ್ತೆ ರವಿ ಮೊಬೈಲಿನಿಂದ ಆಕೆಗೆ ಕರೆ ಹೋಗಿದೆ. ಇಬ್ಬರೂ 2 ನಿಮಿಷ ಮಾತಾಡಿದ್ದಾರೆ. ಈ ಹೊರಟಿರುವುದು ಸೆಂಟ್ ಮಾರ್ಕ್ಸ್ ರಸ್ತೆಯ ಟವರ್‌ನಿಂದ. ಅಂದರೆ ರವಿ ಆ ಹೊತ್ತಿಗೆ ಎಂ.ಜಿ. ರಸ್ತೆ ಆಸುಪಾಸಿನಲ್ಲಿರಬೇಕು. ಮತ್ತೆ ಮಾರ್ಚ್ 12ರ ಗುರುವಾರ ರಾತ್ರಿ 9ಕ್ಕೆ ರವಿಯಿಂದ ಆಕೆಗೆ ಕರೆ ಹೋಗಿದೆ. ಅದು 15 ನಿಮಿಷ ಅಂದರೆ ಕಾಲುಗಂಟೆ [illegible] ಆವತ್ತೇ ರಾತ್ರಿ 10 ಕ್ಕೆ ಆಕೆಯಿಂದ [illegible] [illegible] ಕರೆ. [illegible] ಕಟ್ ಆಗುತ್ತದೆ. ಮರುದಿನ ಮಾರ್ಚ್ 13. ಸಂಜೆ 4.30 ಕ್ಕೆ [illegible] ಕರೆ ಹೋಗಿದೆ. ಅದು ಕೇವಲ 2 ನಿಮಿಷದ ಮಾತುಕತೆ.

[illegible] ಈ 2 ನಿಮಿಷದ [illegible] "[illegible] [illegible]


ಚೆಲುವಿತ್ತು ಗುಣವಿತ್ತು ಸಾವೂ ಅಡಗಿತ್ತು

ರವಿಯ ದಿಟ್ಟತನ, ಪ್ರಾಮಾಣಿಕತೆ, ಶಿಸ್ತು ಮತ್ತು ಜನರೆಡೆಗಿನ ಆತನ ಕಾಳಜಿಯ ಬಗ್ಗೆ ಎರಡು ಮಾತಿಲ್ಲ. ಆದರೆ ಆಕೆಯೆಡೆಗಿನ **obsession** ಮಾತ್ರ ಯಾರಿಗೂ ಅರ್ಥವಾಗುತ್ತಿಲ್ಲ. ಇಬ್ಬರೂ **2009**ರ ಸಾಲಿನ ಐಎಎಸ್ ಬ್ಯಾಚ್‌ಮೇಟ್‌ಗಳು. ದೆಹಲಿಯಲ್ಲಿ ಐಎಎಸ್ ಪರೀಕ್ಷೆ ಪಾಸಾಗಿ ತದನಂತರ ಮಸ್ಸೂರಿಯ ಅಕಾಡೆಮಿ ಆಫ್ ಇಂಡಿಯನ್ ಅಡ್ಮಿನಿಸ್ಟ್ರೇಷನ್‌ನಲ್ಲಿ ತರಬೇತಿಯಲ್ಲಿದ್ದಾಗಲೇ ಇಬ್ಬರಿಗೂ ಪರಿಚಯವಾಗಿದೆ.

ಆಕೆ ಆಂಧ್ರಾ ಮೂಲದವಳಾದರೆ ರವಿ ಹಳ್ಳಿಗಾಡಿನ ಹುಡುಗ. ಬಹುಶಃ ಆಕೆಯ ಪ್ರತಿಭೆ, ಶಿಸ್ತು ಮತ್ತು ಚಾಕಚಕ್ಯತೆ ನೋಡಿಯೇ ರವಿ ಕೋಲಾರದಲ್ಲಿ ಅದನ್ನು ಮೈಗೂಡಿಸಿಕೊಂಡರೋ ಅಥವಾ ರವಿಯ ತಾಕತ್ತು, ಪರಿಶ್ರಮದಿಂದ ಪ್ರಭಾವಿತಳಾಗಿ ಈಕೆಯಲ್ಲಿ ಜನ ಕಾಳಜಿ ಹುಟ್ಟಿತೋ ಗೊತ್ತಿಲ್ಲ. ಇಬ್ಬರದ್ದೂ ಡೈನಾಮಿಕ್ ವ್ಯಕ್ತಿತ್ವವೆಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ವಿಪರ್ಯಾಸವೆಂದರೆ ರವಿಗೆ ಈ ಮಧ್ಯೆ ಮದುವೆಯಾಗಿತ್ತು. ಮಕ್ಕಳಿರಲಿಲ್ಲ. ಸಂತಾನಹೀನತೆಯ ವಿರುದ್ಧ ಚಿಕಿತ್ಸೆಯೂ ನಡೆದಿತ್ತು. ಆದರೆ ಬರಬರುತ್ತಾ ರವಿಗೆ ಆಕೆಯೆಡೆಗಿನ ಆಕರ್ಷಣೆ ಹೆಚ್ಚಾಯಿತು. ತಾನು ಕಾರ್ಯ ನಿರ್ವಹಿಸುವ ಜಿಲ್ಲಾ ಪಂಚಾಯ್ತಿಯ ವ್ಯಾಪ್ತಿಯಲ್ಲಿ ದೇಶಕ್ಕೆ ದೇಶವೇ ನಿಬ್ಬೆರಗಾಗುವಂತೆ ಒಂದೇ ವರ್ಷದ ಅವಧಿಯಲ್ಲಿ ಸಹಸ್ರಾರು ಶೌಚಾಲಯ ನಿರ್ಮಿಸಿಕೊಟ್ಟದ್ದೇ ಆಕೆಯ ಹೆಗ್ಗಳಿಕೆಯಾಗಿತ್ತು. ಮೋದಿ ಸರ್ಕಾರವೇ ಆಕೆಯ ಪ್ರತಿಭೆ ಗುರುತಿಸಿದ ಮೇಲಂತೂ ರವಿಗೆ ಆಕೆಯದ್ದೇ ಕನಸಾಗಿರಬೇಕು.

ಆದರೆ ಆಕೆಗೆ ಈ ಹೊತ್ತಿಗಾಗಲೇ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬನ ಜೊತೆ ಮದುವೆಯಾಗಿತ್ತು, ಮಗುವೂ ಇತ್ತು. ಪ್ರತಿ ಶನಿವಾರ ಮತ್ತು ಭಾನುವಾರ ಗಂಡನೇ ಬೆಂಗಳೂರಿನಿಂದ ಆಕೆಯಿದ್ದಲ್ಲಿಗೆ ಬರುತ್ತಿದ್ದ. ಕೆಲವೊಮ್ಮೆ ಆಕೆ ಬೆಂಗಳೂರಿಗೆ ಬಂದಿರುತ್ತಿದ್ದಳು. ಈಗಾಗಲೇ ಮದುವೆಯಾಗಿ ಮಗುವಿದ್ದವಳು ತಾನು ಬಯಸಿದ ಮಾತ್ರಕ್ಕೆ ಅದನ್ನೆಲ್ಲಾ ತೊರೆದು ಬರುತ್ತಾಳೆಂಬ ನಿರೀಕ್ಷೆಯಾದರೂ ರವಿಗೇಕಿತ್ತೋ?

ಬೆಲೆ ಕೊಡುತ್ತೀಯ ಅಂದರೆ ನಾಳೆ ಅಥವಾ ನಾಡಿದ್ದು ಈ ಎರಡು ಪೈಕಿ ಒಂದು ದಿನ ನೀನು ಮೈಸೂರಿಗೆ ಬರಲೇಬೇಕು...." ಎಂದು ರವಿ ಕೋರಿಕೆಯಿಟ್ಟಿದ್ದಾರೆ. ಅತ್ತಲಿಂದ ಆಕೆ ಆಗಲ್ಲ ಎಂದಿದ್ದಾರೆ.

ಇದಕ್ಕೆ ಪೂರಕವೋ ಎಂಬಂತೆ ಮೈಸೂರಿನ ದಾಸಪ್ರಕಾಶ್ ಪ್ಯಾರಡೈಸ್ ಹೋಟೆಲಿನ ದಾಖಲೆಗಳಿವೆ. ರವಿ ಮಾರ್ಚ್ 14ರ ಎರಡನೇ ಶನಿವಾರ ಮತ್ತು ಮಾರ್ಚ್ 15ರ ಭಾನುವಾರ ಈ ಎರಡೂ ದಿನಗಳ ಮಟ್ಟಿಗೆಂದು ದಾಸ್‌ಪ್ರಕಾಶ್ ಪ್ಯಾರಡೈಸ್‌ನ ಅಕ್ಕಪಕ್ಕದ ಎರಡು ಐಷಾರಾಮಿ ರೂಮುಗಳನ್ನು ಬುಕ್ ಮಾಡಿದ್ದಾರೆ. ಆ ರೂಮ್‌ಗಳನ್ನು ರವಿ ಬುಕ್ ಮಾಡಿಸಿದ್ದು ತಮ್ಮ ಸಂಬಂಧಿಕರ ಹೆಸರಲ್ಲಿ. ಹಾಗೆಯೇ ಅವುಗಳು ಬುಕ್ ಆಗಿರುವುದನ್ನು ಕನ್‌ಫರ್ಮ್ ಮಾಡಿದ್ದೂ ಆಫೀಸಿನಲ್ಲಿದ್ದ ಅವರ ಆಪ್ತ ಸಿಬ್ಬಂದಿ. ವಿಚಿತ್ರವೆಂಬಂತೆ ಮಾರ್ಚ್ 14 ರಂದು ಇಬ್ಬರ ಮಧ್ಯೆ ಯಾವುದೇ ಕರೆಯಿಲ್ಲ. ಆದರೆ ಮಾರ್ಚ್ 15 ಕ್ಕೆ ಬೆಳಗ್ಗೆ 11 ಕ್ಕೆ ಆಕೆಯಿಂದಲೇ ಕರೆ ಬಂದಿದೆ. ಒಂದೇ ನಿಮಿಷಕ್ಕದು ಕಡಿತಗೊಂಡಿದೆ. ಮತ್ತೆ 11.22 ಕ್ಕೆ ಆಕೆಯಿಂದಲೇ 2 ನೇ ಕರೆ ಬಂದಿದೆ. ಕೇವಲ 5 ನಿಮಿಷದ ಸಂಭಾಷಣೆಯಷ್ಟೇ. ಆ ಹೊತ್ತಿಗೆ ರವಿಯ ಟವರ್ ಲೊಕೇಷನ್ ಹೆಬ್ಬಾಳದ ಅಮೃತನಗರ, ಬಳ್ಳಾರಿ ರಸ್ತೆಯೆಂದು ತೋರಿಸುತ್ತದೆ.



11.29ಕ್ಕೆ ರವಿಯಿಂದ 17 ನಿಮಿಷದ ಕರೆ, 11.48ಕ್ಕೆ ಮತ್ತೆ 2 ನಿಮಿಷದ ಕರೆ, ಆಕೆಯಿಂದ 11.51 ಕ್ಕೆ ವಾಪಸ್ಸು ಅರ್ಧ ಗಂಟೆಯ ಕರೆ. ಅಂದರೆ ಮಾರ್ಚ್ 15 ರ ಭಾನುವಾರದ ಅಪರಾಹ್ನ ಪದೇಪದೇ ಕರೆ. ಬಿಸಿಬಿಸಿ ಡಯಲಿಂಗ್ ನಡೆದೇ ಇತ್ತು. ಅದೇ ಹೊತ್ತಿಗೆ ಮೈಸೂರಿನಲ್ಲಿ ಬುಕ್ಕಾಗಿದ್ದ ಎರಡೂ ರೂಮುಗಳು ಅನಾಥವಾಗಿದ್ದವು. ಅಂದರೆ ಯಾರೊಬ್ಬರೂ ಮೈಸೂರಿಗೆ ಹೋಗಲಿಲ್ಲ ಅಥವಾ ಬರಬೇಕಾದವಳು ಬರಲಿಲ್ಲವೆಂದು ರವಿಯೂ ಹೋಗಿಲ್ಲ.

ಇದರ ಪರಿಣಾಮವೆಂಬಂತೆ ಸಂಜೆ 5 ಕ್ಕೆ ಆಕೆಯಿಂದಲೇ ಕರೆ ಬಂದಿದೆ. 10 ನಿಮಿಷ ಮಾತಾಡಿದ್ದಾರೆ. ಅದೇ ಸಂಜೆ 7.18 ಕ್ಕೆ ಮತ್ತೆ ಆಕೆಯೇ ಕರೆ ಮಾಡಿ ಅರ್ಧ ಗಂಟೆ ಮಾತಾಗಿದೆ. ರವಿಯ ಆತ್ಮಹತ್ಯೆಯ ಹಿಂದಿನ ದಿನದ ಈ ಕರೆಯಲ್ಲಿ ರವಿಗೆ ಹೇಳುವಷ್ಟು ಹೇಳಿದ ಆಕೆ ಇನ್ನು ಸರಿಹೋಗದೆಂದು ಪಕ್ಕದಲ್ಲೇ ಇದ್ದ ತನ್ನ ಪತಿಯ ಕೈಗೆ ಫೋನ್ ಕೊಟ್ಟಿದ್ದಾರೆ. ಅತ್ತಲಿಂದ ಆಕೆಯ ಪತಿ ಮಾತಾಡಿ ರವಿಗೆ ಹೇಳಿದ್ದಾರೆ. ಒಬ್ಬ ಗಂಡಸು ಮತ್ತೊಬ್ಬಳು ಹೆಂಗಸಿನ ನಡುವಿನ ಫೋನ್ ಕರೆಗಳ ಆವೇಗ, ಅವುಗಳ ಫ್ರೀಕ್ವೆನ್ಸಿ, ಮಾತಿನ ಅವಧಿಗಳೇ ಸಾಕಷ್ಟು ಪ್ರಶ್ನೆಗಳನ್ನು ಹುಟ್ಟಿ ಹಾಕುತ್ತವೆ.

ಹಾಗೆ ಮಾರ್ಚ್ 15 ರ ಸಂಜೆ 7.18 ರ ಹೊತ್ತಿಗೆ ಆಕೆಯಿಂದ ಬಂದ ಅರ್ಧ ಗಂಟೆಯ ಕರೆಯೇ ಕೊನೆ. ಅಂದರೆ ಆ ಹೊತ್ತಿಗೆ ರವಿ ತನ್ನ ಮಾವನ ಮನೆಯಲ್ಲಿ ಪತ್ನಿ ಕುಸುಮಾ ಜೊತೆಗಿದ್ದ. ಈ ಅಧಿಕಾರಿಣಿ ತನ್ನ ಪತಿ ಜೊತೆಗಿದ್ದಾಳೆ. ಒಂದು ಹಂತದಲ್ಲಿ ತನ್ನ ಪತಿಗೇ ಫೋನ್ ಕೊಟ್ಟು ಹೇಳಿಸಿದ್ದಾಳೆ. ಬಹುಶಃ ಆ ಕೊನೆಯ ಕರೆಯಿಂದಲೇ ರವಿಗೇನೋ ಆಘಾತವಾಗಿರಬೇಕು. ಮರುದಿನ ಅಂದರೆ ಮಾರ್ಚ್ 16 ರ ಸೋಮವಾರ ಬೆಳಗ್ಗೆ ಮಾವನ ಮನೆಯಿಂದಲೇ ಕಚೇರಿಗೆ ಹೋಗಿದ್ದಾನೆ. 11 ರ ಹೊತ್ತಿಗೆ ಅವರ ಮೊಬೈಲ್‌ನ ಟವರ್ ಲೊಕೇಷನ್ ಕೋರಮಂಗಲದ ತಾವರೆಕೆರೆ ರಸ್ತೆಯ **prestige lexington tower** ಎಂದು ಸೂಚಿಸುತ್ತಿತ್ತು.

ಅದು ರವಿಯ ಮೊಬೈಲಿನಿಂದ ಆಕೆಯ ಮೊಬೈಲಿಗೆ ಹೋದ ಕೊನೆಯ ಕರೆ. ಬೆಳಗ್ಗೆ 11.12 ಕ್ಕೆ ಕೇವಲ 16 ಸೆಕೆಂಡಿಗೇ ಕೊನೆಗೊಂಡಿದೆ. ಇದಾದನಂತರ ಅದೇ ಮೊಬೈಲಿನಿಂದ ಆಕೆಗೊಂದು ಮೆಸೇಜ್ ರವಾನೆಯಾಗಿದೆ. "ಗುಡ್ ಬೈ.... ಇನ್ನೇನಿದ್ದರೂ ಮುಂದಿನ ಜನ್ಮದಲ್ಲಿ ಭೇಟಿಯಾಗೋಣ....!"

ಇದು ನೇಣು ಬಿಗಿದುಕೊಳ್ಳುವುದಕ್ಕೂ ಮುನ್ನ ಅಂದರೆ ತನ್ನ ಬದುಕಿನ ಕೊನೇ ಕ್ಷಣದಲ್ಲಿ ರವಿ ಐಎಎಸ್ ಅಧಿಕಾರಿಣಿಯ ಮೊಬೈಲಿಗೆ ಕಳುಹಿಸಿದ ಕಟ್ಟಕಡೆಯ ಮೆಸೇಜು!

ಐಎಎಸ್ ಅಧಿಕಾರಿಯಾದ ಮಾತ್ರಕ್ಕೆ ಹಳ್ಳಿ ಹುಡುಗನೊಬ್ಬನ ಭ್ರಮೆ, ಹುಡುಗಾಟಿಕೆ, ಮುಗ್ಧತೆ, ಮೂರ್ಖತನಗಳು ಮಾಯವಾಗಬೇಕೆಂದಿಲ್ಲವಲ್ಲ? ವಾಸ್ತವವೇ ಬೇರೆ ಭ್ರಮೆಯೇ ಬೇರೆ. ಭ್ರಮೆ ರವಿಯನ್ನು ಆತ್ಮಹತ್ಯೆಯ ತನಕ ಕೈಹಿಡಿದು ಕರೆ ತಂದಿದೆ. ವಾಸ್ತವ ಆತನ ಶವದೆದುರು ಕೂತು ಪತ್ನಿ ಕುಸುಮಾ ಕೇಳಿದ ಪ್ರಶ್ನೆಯ ರೂಪ ತಾಳಿ ನಿಂತಿದೆ. ಹೊಲಕ್ಕೆ ಗೊಬ್ಬರದ ಬುಟ್ಟಿ ಹೊತ್ತು ತಮ್ಮನ ಐಎಎಸ್ ಯಶಸ್ಸಿಗಾಗಿ ಸಂಭ್ರಮಿಸಿದ ಅಣ್ಣ, ಮಗ ಅಧಿಕಾರಿಯಾದ ಖುಷಿಯಲ್ಲಿ ಮಾಸಲು ಬಟ್ಟೆ ತೊಟ್ಟೇ ಕಷ್ಟ ನೆನಪಿಸಿಕೊಂಡ ತಾಯಿ ಮತ್ತು ಈಗ ವಿಧಾನಸೌಧದ ಮುಂದೆ ಕೂತು ಕಣ್ಣೀರಿಡುವ ತಂದೆಯಷ್ಟೇ ಈ ದೃಷ್ಟಾಂತದ ಅವಶೇಷಗಳಂತಿದ್ದಾರೆ.

■ ರಾ. ಸೋಮನಾಥ್

ಮೋದಿ ಬೋರ್‌ವೆಲ್

ನನ್ನ ಭಾಗಕ್ಕೆ ಮೂರು ಎಕರೆ ಬಾರೆ ಜಮೀನು ಬಂದಿತ್ತು. ಅರ್ಧ ಶತಮಾನದ ಹಿಂದೆ ನಮ್ಮಪ್ಪ ದರಖಾಸ್ತಿನಲ್ಲಿ ಹಿಡಿದ ಈ ಜಮೀನನ್ನು ಮೂವರು ಸಹೋದರರು ಹಂಚಿಕೊಂಡಾಗ ಫಲವತ್ತಾದ ಜಾಗವನ್ನು ಅವರಿಗೆ ಬಿಟ್ಟು ಯಾತಕ್ಕೂ ಬೇಡವಾದ ಭಾಗವನ್ನು ನಾನು ಪಡೆದಿದ್ದೆ. ಇದರಲ್ಲಿ ಒಂದು ಎಕರೆ ಚಟುರು ಮಣ್ಣು, ಒಂದು ಎಕರೆಯಷ್ಟು ಕರಲು ಮಣ್ಣು, ಇನ್ನೊಂದೆಕರೆ ಕೆಂಪು ಜಲ್ಲಿಯಿಂದ ಕೂಡಿತ್ತು. ಇದನ್ನು ಎತ್ತುಗಳಿಂದ ಉಳಲು ಸಾಧ್ಯವೇ ಇರಲಿಲ್ಲ, ಟ್ರಾಕ್ಟರಿಯಲ್ಲೇ ಉಳಿಸಬೇಕು.

ಯಾವುದಕ್ಕೂ ಮೊದಲು ನನ್ನ ಜಮೀನನ್ನು ಬಂದೋಬಸ್ತು ಮಾಡಿಕೊಳ್ಳಬೇಕೆಂದು ತಂತಿಬೇಲಿ ಹಾಕಿಸುವ ಸಲುವಾಗಿ ಹುಲಿಕೆರೆ ಬಂಡೆಯಿಂದ ಕಲ್ಲುಕಂಬ ತರಿಸಿದೆ. ಆ ಜಾಗಕ್ಕೆ ಹೋದಾಗ ಶಿಲಾಯುಗಕ್ಕೆ ಹೋಗಿಬಂದ ಅನುಭವವಾಯ್ತು. ಬಂಡೆಯನ್ನು ಸೀಳಿ, ಐದಾರಡಿ ಎತ್ತರದ ಕಲ್ಲು ಕಂಬಗಳನ್ನು ತುಂಡರಿಸಿ, ಅವನ್ನೆಲ್ಲಾ ನೀಟಾಗಿ ಟ್ರಾಕ್ಟರಿಗೆ ತುಂಬಲು ತುಂಬಾ ಶಕ್ತಿ ಬೇಕು. ಆದ್ದರಿಂದ ಈ ಕೆಲಸ ಮಾಡುತ್ತಿದ್ದ ಜನ ಕಲ್ಲು ಪಡೆಯ ಸೊಣೆಗಳಲ್ಲಿ ಒಲೆ ಹಾಕಿಕೊಂಡು, ದನದ ಮಾಂಸ ಬೇಯಿಸಿ ಅಡಿಗೆ ಮಾಡಿಕೊಂಡು, ಉಂಡ ನಂತರ ಕಲ್ಲುಗೆಲಸಕ್ಕೆ ರೆಡಿಯಾಗುತ್ತಿದ್ದರು. ಅದೊಂದು ರೀತಿ ಹುಲಿಗಳು ವಾಸ ಮಾಡುವ ತಾಣ ನೋಡಿದಂತಾಯ್ತು. ಅಲ್ಲಿ ಕೆಲಸ ಮಾಡುತ್ತಿದ್ದ ಜನರಿಗೆ ಬಂಡೆ ಸೀಳಿ ಬದುಕುವುದನ್ನು ಬಿಟ್ಟರೆ ಬೇರೆ ಜಗತ್ತೇ ಇದ್ದಂತೆ ಕಾಣುತ್ತಿರಲಿಲ್ಲ.

ಕಲ್ಲು ಕಂಬ ತಂದು ಜಮೀನಿನ ಸುತ್ತ ಇಳುಕಿದ ಮೇಲೆ ಕಂಬ ನೆಟ್ಟು ತಂತಿಬೇಲಿ ಹಾಕಿಕೊಡುವಂತಹ ಜನಗಳೇ ಇದ್ದಾರೆಂದು ಗೊತ್ತಾಯಿತು. ಅದಕ್ಕೆಲ್ಲಾ ಐವತ್ತು ಸಾವಿರ ಬೇಕೆಂದಾಗ ಮನೆ ಜನಗಳಿಂದಲೇ ಆ ಕೆಲಸ ಮಾಡಿಸುತ್ತೇನೆಂದು ಸುಮ್ಮನಾದೆ. ಈ ಎಲ್ಲ ತಯಾರಿಗಿಂತ ಮೊದಲೇ ಸರ್ಕಾರಕ್ಕೆ ಬೋರ್‌ವೆಲ್ ಅರ್ಜಿ ಗುಜರಾಯಿಸಿ ಅದು ಮಂಜೂರಾಗುವುದನ್ನು ಕಾಯುತ್ತ ಕುಳಿತೆ. ಆದರೆ ನನ್ನ ಜೊತೆಗಿನ ಅರ್ಜಿಗಳಿಗೆಲ್ಲಾ ಮಂಜೂರಾತಿ ದೊರೆತರೂ ನನ್ನದು ಮಾತ್ರ ತಾತ್ಸಾರಕ್ಕೆ ಒಳಗಾಗಿತ್ತು. ವಿಚಾರಿಸಲಾಗಿ ಸ್ಥಳೀಯ ಶಾಸಕನಿಗೆ ನಾವು ಕಾಂಗ್ರೆಸ್ಸಿಗರಾಗಿ ಕಂಡಿದ್ದೆವು. ಕೆರಳಿದ ನಾನು ಮುಖ್ಯಮಂತ್ರಿಯನ್ನೇ ಭೇಟಿ ಮಾಡಿ ಈ ಶಾಸಕನ ಸಣ್ಣತನದ ಬಗ್ಗೆ ದೂರು ಹೇಳಿ ಅಲ್ಲಿಂದಲೇ ಬೋರ್‌ವೆಲ್ ಮಂಜೂರು ಮಾಡಿಸಿಕೊಂಡು ಬರುವ ಶಪಥ ಮಾಡಿದೆ.

ಇದನ್ನು ಕೇಳಿಸಿಕೊಂಡ ಬೋರ್‌ವೆಲ್ ಬ್ರೋಕರ್ "ಮುಖ್ಯಮಂತ್ರಿ ನಿಮ್ಮದೊಂದನ್ನೇ ಮಂಜೂರು ಮಾಡಲ್ಲ ಸಾರ್. ಕನಿಷ್ಟ ಐದು ಜನರ ಅರ್ಜಿ ಹಿಡಿದುಕೊಂಡು ಹೋಗಿ. ಕೂಡಲೇ ಸಹಿ ಮಾಡುತ್ತಾರೆ. ನಿಮ್ಮ ಜೊತೆಗೆ ಮಂಜೂರಾತಿ ಪಡೆದವರಿಂದ ಕನಿಷ್ಟ ಮುವ್ವತ್ತು ಸಾವಿರ ವಸೂಲು ಮಾಡಿಕೊಂಡರಾಯ್ತು" ಎಂದ. ನಾನು ಹಳ್ಳಿಗರು ಮುಗ್ಧರೆಂದು ಭಾವಿಸಿದ್ದೆ. ಆದರೆ ಈತನ ಒಳ ವ್ಯವಹಾರದ ಸಂಚಿನ ಮಾತಿಗೆ ದಂಗುಬಡಿದು "ಸರ್ಕಾರದ ಹಂಗಿನ ಬೋರ್‌ವೆಲ್ಲೇ ಬ್ಯಾಡ. ನನ್ನ ಸ್ವಂತ ಹಣದಿಂದ ನಾನೇ ಕೊರೆಸುತ್ತೇನೆ" ಎಂದು ತಯಾರಾದೆ.

ಅದಕ್ಕಾಗಿ ಒಳ್ಳೆಯ ಪಾಯಿಂಟ್ ಮಾಡುವ ಆಸಾಮಿಗಾಗಿ ಹುಡುಕತೊಡಗಿದೆ. ನನ್ನ ಹುಡುಕಾಟ ಪರಿಸರ ಶಿವರಾಂಗೆ ಗೊತ್ತಾಗಿ, ಅವರು ಭೂಗರ್ಭಶಾಸ್ತ್ರವನ್ನು ಅರೆದು ಕುಡಿದವನನ್ನು ಹಿಡಿದುಕೊಟ್ಟರು. ವಿಚಾರಿಸಲಾಗಿ ಆತ ಮಾಡಿ ಕೊಟ್ಟಿರುವ ಬೋರ್‌ವೆಲ್ ಪಾಯಿಂಟು ವಿಫಲವಾಗಿಲ್ಲವಂತೆ. ಕೆಲವು ಪಾಯಿಂಟುಗಳಂತು ಮಾರುದ್ದಕ್ಕೆ ನೀರನ್ನು ಉಗುಳಿದ್ದಾವಂತೆ ಎಂಬುದು ತಿಳಿಯಿತು. ಅಂತಹ ಭೂಪತಿಯನ್ನು ಕರೆದುಕೊಂಡು ಬಂದಿದ್ದೇ ಒಂದು ಹೆಮ್ಮೆಯ ಸಂಗತಿಯಾಗಿತ್ತು.

ಈ ಭೂಪತಿ ಮೊದಲು ಮಾಡಿದ ಕೆಲಸವೆಂದರೆ ಜಮೀನಿನಲ್ಲಿರುವ ಅರೆಬಂಡೆಯ ಪಟ್ಟಿಗಳನ್ನು ವೀಕ್ಷಿಸಿದ್ದು. ನನ್ನ ಜಮೀನಿನಲ್ಲಿದ್ದ ಅರೆಬಂಡೆ ಪಟ್ಟಿಯನ್ನು ಬಹುದೂರದಲ್ಲಿನ ಬಂಡೆಯ ಹೊಟ್ಟೆಯ ಮೇಲೆ ಹಾದುಹೋಗಿರುವುದನ್ನು ತೋರಿಸಿ ದಂಗುಬಡಿಸಿದ. ಕಡೆಗೆ ತಾನು ತಂದಿದ್ದ ಯಂತ್ರವನ್ನಿಟ್ಟು ಅದಕ್ಕೆ ಉತ್ತರ ದಕ್ಷಿಣವಾಗಿ ತಂತಿ ಬಿಗಿದು, ತಂತಿಗಳ ತುದಿಗೆ ಕಬ್ಬಿಣದ ಮೊಳೆಕಟ್ಟಿ, ಅವನ್ನು ಭೂಮಿಗೆ ಹೊಡೆದು, ಭೂಮಿಗೆ ಬ್ಯಾಟರಿ ಚಾರ್ಜು ಮಾಡುತ್ತಿದ್ದ. ಆಗ ಅವನ ಯಂತ್ರದ ಮುಳ್ಳು ತಲೆ ಕೆಟ್ಟಂತೆ ತಿರುಗಿ ನಿಲ್ಲುತ್ತಿತ್ತು. ಭೂಪತಿಯವರು ಅದನ್ನು ಮಾರ್ಕು ಮಾಡಿಕೊಂಡು ಅಲ್ಲೇ ಗುಣಿಸಿ ಭಾಗಿಸಿ "ಈ ಜಾಗದಲ್ಲಿ ಮುನ್ನೂರಡಿಗೆ ನೀರು ಬರುತ್ತೆ ಆದ್ರೂ ಐನೂರಡಿ ಕೊರಿಸಿ" ಎಂದ. ಯಾವುದಕ್ಕೂ ಇರಲಿ ಎಂದು ಇನ್ನೊಂದು ಪಾಯಿಂಟನ್ನು ಅದೇ ರೀತಿ ಮಾಡಿ ಮೊದಲ ಪಾಯಿಂಟಿಗೇ ಶಿಫಾರಸ್ಸು ಮಾಡಿ ತನ್ನ ಫೀಜು ತೆಗೆದುಕೊಂಡು ಹೋದ.

ಭೂಗರ್ಭ ಶಾಸ್ತ್ರಜ್ಞನೇ ಬಂದು ಪಾಯಿಂಟ್ ಮಾಡಿದ ಮೇಲೆ ನನ್ನ ಭೂಮಿಯಲ್ಲಿ ನೀರು ಚಿಮ್ಮುವ ಬಗ್ಗೆ ಯಾವ ಅನುಮಾನವೂ ಬೇಡವೆಂದು ಶಿವರಾಂ ಹೇಳಿದರು. ಹಾಗಾಗಿ ನೀರು ಬಂದು ಕೂಡಲೇ ಊರು ಬಿಟ್ಟು ಜಮೀನಲ್ಲೇ ಇರಬೇಕಾದರೆ, ಮೊದಲೊಂದು ಕೋಳಿ ಫಾರು ಮಾಡಬೇಕು. ಈಗಾಗಲೇ ಜಮೀನಿನ ಸಮೀಪವೇ ಒಬ್ಬರು ಕೋಳಿ ಫಾರಂ ಮಾಡಲು ತಯಾರಿದ್ದಾರೆ ಎಂಬುದು ತಿಳಿಯಿತು. ಇನ್ನುಳಿದಂತೆ ಮೂರು ಎಕರೆಯಲ್ಲಿ ಯಾವಯಾವ ಗಿಡ ನೆಡಬಹುದು, ವರ್ಷವೆಲ್ಲಾ ಫಲ ಕೊಡುವ ಗಿಡಗಳು ಮತ್ತು ಪುಟ್ಟ ಹೊಂಡ, ಅದರಲ್ಲಿ ಮೀನು, ತೇಲುವ ಬಾತು, ನಾಟಿ ಕೋಳಿ, ಚೀಣಾ ಕೋಳಿ, ನಾಯಿ, ಬೆಕ್ಕು... .ಚರ್ಚಿಸುತ್ತಾ ಹೋದಂತೆ ನಿಜವಾದ ಬದುಕೊಂದು ತೆರೆದುಕೊಂಡಿತು.

ಆದರೆ ಎಲ್ಲವೂ ಭೂಮಿಯಿಂದ ಚಿಮ್ಮುವ ನೀರನ್ನು ಅವಲಂಬಿಸಿತ್ತು. ಈಗ ಮುಂದಿನ ಕೆಲಸವೆಂದರೆ ಬೋರ್‌ವೆಲ್‌ಗಾಗಿ ಹಣ ಒದಗಿಸುವುದಷ್ಟೇ. ಬೋರ್‌ವೆಲ್ಲಿಗೆ ಎಂದಕೂಡಲೇ ಬಹಳ ಸುಲಭವಾಗಿ ಹಣ ಒದಗಿಬರುವುದು ನನಗೆ ಗೊತ್ತೇಯಿರಲಿಲ್ಲ. ಹಣ ಕೊಟ್ಟವರೂ ಬೋರ್ ಕೊರೆಯುವ ಜಾಗದಲ್ಲಿದ್ದು ನೀರು ಬಂದಕೂಡಲೇ ಸಂಭ್ರಮಗೊಂಡು ಎದ್ದು ಹೋಗುತ್ತಾರಂತೆ. ಇದು ನಮ್ಮ ಹಳ್ಳಿಗರಲ್ಲಿರುವ ಅನಾದಿಕಾಲದ ಒಂದು ಗುಣ.



ನಾನು ಬೋರ್‌ವೆಲ್ ಕೊರೆಸುವ ದಿನವೂ ಅದು ಹೇಗೆ ವರ್ತಮಾನ ತಲುಪಿತೋ ಏನೋ, ನೂರಾರು ಜನ ಬಂದು ಮರದ ನೆರಳಲ್ಲಿ ಕೂತು ಗಣ್ಯ ವ್ಯಕ್ತಿಯ ಸಂಸ್ಕಾರ ನೋಡುವವರಂತೆ ತದೇಕಚಿತ್ತರಾಗಿ ಕುಳಿತರು. ಹೇಗಾದರಾಗಲಿ ಎಂದು ನಾನು ಇಪ್ಪತ್ತೈದು ಕೆ.ಜಿ. ಚಿಕನ್ ತರಿಸಿ, ಸಾರು ಮಾಡಿಸಿ, ಒಂದು ರೂ. ಕೆ.ಜಿ. ಅಕ್ಕಿ ತರಿಸಿ ಅನ್ನವನ್ನು ಧಾರಾಳವಾಗಿಯೇ ಮಾಡಿಸಿದ್ದೆ. ನೀರು ಬರುವುದಕ್ಕೆ ಮೊದಲೇ ಈ ಆತಿಥ್ಯ ಎಂದಮೇಲೆ ಇನ್ನು ನೀರು ಬಂದ ನಂತರ ಇಲ್ಲೊಂದು ಬಯಲು ಪಾರ್ಟಿ ಇರಬಹುದೆಂದು ಊಹಿಸಿದ ಬೋರ್‌ಪ್ರಿಯರು ಕುಳಿತ ಭಂಗಿ ಬದಲಿಸದೆ ಬೇರು ಬಿಟ್ಟರು!

ನಾನು ತಿಳಿದಂತೆ ಈ ಬೋರ್‌ವೆಲ್ ಜನರೆಲ್ಲಾ ತಮಿಳುನಾಡಿನವರು. ಆದರೆ ಇತ್ತೀಚಿಗೆ ಏಜೆಂಟರು ಮಾತ್ರ ತಮಿಳುನಾಡಿನವರಾಗಿದ್ದು ಕೆಲಸಗಾರರೆಲ್ಲಾ ಜಾರ್ಖಂಡ್ ಹುಡುಗರಾಗಿದ್ದುದ್ದು ಆಶ್ಚರ್ಯ ಹುಟ್ಟಿಸಿತು. ನೋಡಲು ತಮಿಳಿಗರಂತೆಯೇ ಇದ್ದ ಆ ಹುಡುಗರು ಹಿಂದಿ ಮಾತನಾಡುತ್ತಿದ್ದರು. ನಾವು ಮಾಡಿಸಿದ್ದ ಅಡುಗೆ ಕಡೆ ತಿರುಗಿಯೂ ನೋಡದೆ ಅವರೇ ಬೇರೆ ಅಡುಗೆ ಮಾಡಿಕೊಂಡು ಹಸಿವಾದಾಗಲೆಲ್ಲಾ ಹೋಗಿ ಉಣ್ಣುತ್ತಿದ್ದರು.

ಬೋರ್‌ವೆಲ್ ಆಗಲೇ ಮುನ್ನುರು ಅಡಿ ತಡಾದು ಹೋಗಿತ್ತು. ಅಷ್ಟರಲ್ಲಿ ನನ್ನ ನಾಟಕ್ಕೆ ಪಾತ್ರಕ್ಕೆ ಸ್ಫೂರ್ತಿ ಕೊಡುವ ಪುಟ್ಟರಾಜ ಬಂದು "ಚಂದ್ರಣ್ಣ ಮುನ್ನೂರಡಿಗೂ ಒಂದೇ ಬಂಡೆ ಅದೆ ಅಂದ್ರೆ ನಿನ್ನ ಜಿಯಾಲಜಿಸ್ಟು ಸರಿಯಾದ ಆಸಾಮಿನೆ ಬುಡು" ಎಂದ. ನಾನೇನು ಉತ್ತರ ಹೇಳಲಿಲ್ಲ.

ಅಷ್ಟರಲ್ಲಿ ಅಂಗಡಿ ಕೃಷ್ಣೇಗೌಡ ಬಂದು "ಅಲ್ಲ ಕಣೊ, ಭೂಮಿಯಿಂದ ಗಂಗೆ ತಗಿಯೋ ಶುಭ ಕಾರ್ಯದಲ್ಲಿ ಈ ಹೊಲಸು ಚಿಕನ್ ಮಾಡಿಸಿದ್ದಿಯಲ್ಲಾ? ಇದು ಅಪಸಕುನಲ್ಲವೇನೊ?" ಎಂದ. ನಾನು ರೇಗಿ "ಅಂತ ಹೊಲಸನ್ನೆ ಹ್ವಟ್ಟೆ ತುಂಬ ತಿಂದ್ಯಲ್ಲ ಹೇಳು" ಎಂದೆ. "ಅಲ್ಲಾ ಊಟ ಮಾಡು ಅಂತ ಹಿಜ ಮಾಡಿದ್ರು ಅದ್ಕೆ ಉಂಡೆ. ಆದ್ರು ಇಂತ ಶುಭ ಕಾರ್ಯಕ್ಕಲ್ಲ ಹೊಲಸು ಮಾಡಬಾರ್ದು" ಎಂದ.

ಬೋರ್‌ವೆಲ್ ನಾನೂರು ತಡಾದು ನುಗ್ಗತೊಡಗಿದಂತೆ ನನಗೆ ಪಾಯಿಂಟ್ ಮಾಡಿಕೊಟ್ಟ ಭೂಪತಿಯ ಬಗ್ಗೆ ಅನುಮಾನವೇಳತೊಡಗಿದವು. ಆತನನ್ನು ಕರೆದುಕೊಂಡು ಬರುವಾಗ ನಾನು ಹಿಗ್ಗಾಮುಗ್ಗಾ ಮೋದಿಯನ್ನು ಟೀಕಿಸಿದ್ದೆ. ಮುಖ್ಯವಾಗಿ ಆತ ಹೆಂಡತಿ ವಿಷಯದಲ್ಲಿ ಸುಳ್ಳು ಹೇಳಿದ್ದು, ನಯವಂಚನೆಯ ಭಾಷಣದ ಶೈಲಿ, ಇವೆಲ್ಲವನ್ನು ಆಡಿಕೊಂಡಿದ್ದೆ. ಆಗ ನಮ್ಮ ಬೋರಿಂಗ್ ಪಾಯಿಂಟ್ ವಿಜ್ಞಾನಿಯ ಮುಖದಲ್ಲಿ ತುಂಬ ಅಸಹನೆಯಿದ್ದುದನ್ನು ಗುರುತಿಸಿದ್ದೆ.

ನಮ್ಮ ಟೀಕೆ ಜಾಸ್ತಿಯಾದಾಗ ಆತ ಯಾರಿಗೊ ಮೊಬೈಲ್ ಮಾಡಿಕೊಂಡು ನಮ್ಮ ಮಾತುಗಳನ್ನು ಅವಾಯ್ಡ್ ಮಾಡುತ್ತಿದ್ದ. ಇದೆಲ್ಲಕ್ಕಿಂತ ಮುಖ್ಯವಾಗಿ ಆತನಿಗೇ ಅವಮಾನವಾದಂತೆ ಕಂಡ ಪ್ರಸಂಗ ಯಾವುದೆಂದರೆ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾನ ಎದುರು ಚಿನ್ನದ ಎಳೆಯಲ್ಲಿ ಹೆಸರು ನೇಯ್ದಿಕೊಂಡು ಮೋದಿ ಇಕ್ಕಿದ ಸೂಟಿನ ವಿಷಯ. ಸರಳ ಸುಂದರನಾಗಿ ಮತ್ತು ಮಹಾ ಮಾನವತಾವಾದಿಯಂತೆ ಕಂಡ ಒಬಾಮಾನ ಎದುರು ಈ ಗುನ್ನಪಟ್ಟ ಗಿರಾಕಿ ಬಗ್ಗೆ ಒಬಾಮ ಒಳಗೇ ನಕ್ಕಿರಬಹುದಲ್ಲವೆ ಎಂಬ ನಮ್ಮ ನಗುವಿನ ಸ್ಫೋಟ ಖಂಡಿತವಾಗಿ ಬೋರ್ ವಿಜ್ಞಾನಿಗೆ ಇನ್ನಿಲ್ಲದ ಅವಮಾನವುಂಟುಮಾಡಿರಬಹುದು. ಆದ್ದರಿಂದ ಬ್ರಾಹ್ಮಣನಾದ ಆತ ಬಾಯಿಬಡದೆ ಎಲ್ಲವನ್ನು ಸಹಿಸಿಕೊಂಡು ನನ್ನನ್ನು ಸರಿಯಾದ ಬಂಡೆಗೆ ಡಿಕ್ಕಿ ಹೊಡೆಸಿದ್ದಾನೆ ಅನ್ನಿಸತೊಡಗಿತು.

ನನ್ನ ಅನುಮಾನ ನನಗೇ ಖಚಿತವಾದ ಮಾಹಿತಿ ಒದಗಿಸಿದ್ದರಿಂದ ಅದಾಗಲೇ ಐನೂರೈವತ್ತು ಅಡಿ ಆಳ ಕೊರೆದಿದ್ದ ಬೋರ್‌ವೆಲ್ ನಿಲ್ಲಿಸಲು ಹೇಳಿದೆ. ಅಷ್ಟರಲ್ಲಿ ಮರದ ನೆರಳಲ್ಲಿ ಕುಳಿತ ರೈತರು ಸಾವಿನ ಮನೆಗೆ ಸಾಂತ್ವನ ಹೇಳುವಂತೆ ಬಂದು ಸಮಾಧಾನದ ಮಾತನಾಡಿ ಹೊರಡತೊಡಗಿದರು.

ಊರಿನ ಯಜಮಾನರ ಮಗ ಬಂದು "ಚಂದ್ರಣ್ಣ ಒಂದು ಬೋರ್‌ವೆಲ್ಲಿಗೇ ಸಪ್ಪಗಾಗಿದ್ದಿಯಲ್ಲಾ? ನನ್ನವು ಇಪ್ಪತ್ತೈದು ಬೋರ್‌ವೆಲ್ ಫೇಲಾಗ್ಯವೆ" ಎಂದ. ದಂಗುಬಡಿದ ನಾನು ಆತನ ವಿವರವನ್ನು ಕೇಳತೊಡಗಿದೆ. ಅದ್ಯಾವುದೊ ಬರುಗಾಳಿಯಂತಹ ಸಮಯದಲ್ಲಿ ಆತ ಬೆಳೆದ ಟೊಮೊಟೋಗೆ ಹತ್ತು ಲಕ್ಷ ಲಾಭ ಬಂತಂತೆ. ಆ ದುಡ್ಡಿನಲ್ಲಿ ಬೋರ್‌ವೆಲ್ ಕೊರೆಸಲು ಹೊರಟ. ಒಂದಾದ ಮೇಲೆ ಒಂದರಂತೆ ಹಟಕ್ಕೆ ಬಿದ್ದು ಕೊರೆಸುತ್ತಾ ಹೊರಟ. ಭೂದೇವಿಯೂ ಹಟಕ್ಕೆ ಬಿದ್ದಳು. ಈ ಬೋರ್‌ವೆಲ್ ಜೂಜಿನಲ್ಲಿ ಆತ ಕಟ್ಟಿದ್ದ ಹೊಸ ಮನೆಯನ್ನೇ ಮಾರಲು ಹೊರಟ. ಇದನ್ನು ನೋಡಲಾಗದ ತಂದೆ ಆತ್ಮಹತ್ಯೆ ಮಾಡಿಕೊಂಡರು. ಊರ ಯಜಮಾನ ಮಾಡಿಕೊಂಡ ಆತ್ಮಹತ್ಯೆಯ ನಿಜವಾದ ಕಾರಣ ನನಗೆ ಗೊತ್ತೇ ಇರಲಿಲ್ಲ. ತನ್ನ ಜಮೀನು ಹಟಕ್ಕೆ ಬಿದ್ದ ಮಗನಿಂದ ತತಾನ್ ತೂತಾದುದನ್ನು ನೋಡಲಾಗದೆ ಯಜಮಾನನೇ ನಿರ್ಗಮಿಸಿದ್ದ.

ಈ ಕತೆಯಿಂದ ದಂಗುಬಡಿದ ನಾನು ನನ್ನ ಬೋರ್‌ವೆಲ್ ಕತೆಯನ್ನೇ ಮರೆತುಬಿಟ್ಟೆ. ಐನೂರೈವತ್ತು ಅಡಿಗೆ ಲೆಕ್ಕ ಹಾಕಿದ ಮೇಸ್ತ್ರಿ ಬಿಲ್ಲು ಕೊಟ್ಟ. ದುಡ್ಡು ಚುಕ್ತಾ ಆದನಂತರ ಆತ ಮತ್ತೊಂದು ಬೋರ್ ಕೊರೆಯಲು ಹೊರಟುಹೋದ. ಬೋರ್ ಕೊರೆದ ಜಾಗದಲ್ಲಿ ಅರೆಬಂಡೆಯ ಬಿಳಿಪುಡಿ ಬಿದ್ದಿತ್ತು. ಅದು ಥೇಟ್ ಬೂದಿಗುಡ್ಡೆಯಂತೆ ಕಂಡು ನನ್ನ ತೋಟಗಾರಿಕೆ ಕನಸೆಲ್ಲಾ ಬೂದಿಯಾದಂತೆ ಕಾಣುತ್ತಿತ್ತು. ಬೋರ್ ನೀರು ಬಂದಿದ್ದರೆ ಪಾರ್ಟಿ ಇದ್ದೇ ಇರುತ್ತಿತ್ತು. ಆದರೆ ನೀರು ಬರದೇಯಿದ್ದುದಕ್ಕೆ ವಿಷಾದಕರ ಪಾರ್ಟಿಯೊಂದು ಬೇಡವೆ? ಅದನ್ನು ನೆನೆಸಿಕೊಂಡು ಊರ ಕಡೆ ಹೆಜ್ಜೆ ಹಾಕಿದೆ!

ಬೆಳಗ್ಗೆ ಸೂರ್ಯೋದಯಕ್ಕೆ ಸರಿಯಾಗಿ ಫೋನ್ ಬಂತು. ಅದು ಬೋರ್‌ವೆಲ್ ಮೇಸ್ತ್ರಿಯ ಫೋನು. ನಾಲ್ಕು ತಮಿಳು ಪದಗಳಿದ್ದರೆ ಒಂದು ಕನ್ನಡ ಪದ. ಅದೂ ತಮಿಳುಶೈಲಿಯಲ್ಲಿ. ಅವರು ಆ ಪ್ರಾಂತ್ಯದಲ್ಲಿ ಎಲ್ಲೇ ಬೋರು ಕೊರೆದರೂ ಅವರಿಗೆ ಪಾಯಿಂಟ್ ಮಾಡಿಕೊಡುವ ಭಗೀರಥನಿದ್ದಾನಂತೆ. ಅವನು ನೇರ ಭೂಗರ್ಭದಲ್ಲಿನ ನೀರಿನ ನರಕ್ಕೇ ರಿಗ್ಗು ಪಂಚ್ ಮಾಡುವಂತಹ ಪಾಯಿಂಟ್ ಮಾಡಿಕೊಡುತ್ತಾನಂತೆ.

"ನೀವು ಹೂ ಅಂದರೆ ಈಗಲೇ ಕರೆದುಕೊಂಡು ಬರುತ್ತೇನೆ" ಎಂದರು. "ಆಯ್ತು ಕರೆದುಕೊಂಡು ಬನ್ನಿ" ಎಂದು ಹೊಲದ ಹತ್ತಿರ ಹೋದೆ. ರಾತ್ರಿಯೆಲ್ಲಾ ಯಾವುದೋ ಊರಿನ ಬೋರ್ ಕೊರೆದರೂ ಸುಸ್ತಾಗದಂತಿದ್ದ ಬೋರ್‌ವೆಲ್ ಜನರ ಜೊತೆಯಲ್ಲೇ ಭಗೀರಥನೂ ಬಂದಿದ್ದ. ಅವನು ಎಲ್ಲಿಂದಲೋ ಬಂದವನಲ್ಲ, ಬೆಳ್ಳೂರು ಸಮೀಪ ಹಳ್ಳಿಯವನು. ಬರುತ್ತಲೇ ಒಂದು ಬಿಸ್ಲೆರಿ ಬಾಟಲ್ ನೀರು ತಂದಿದ್ದ. "ಪಾಯಿಂಟ್ ಮಾಡಲು ಎರಡು ಸಾವಿರ, ನೀರು ಬಂದರೆ ನಾಲ್ಕು ಸಾವಿರ ಫೀಜು" ಎಂದ. "ಆಯ್ತು" ಎಂದೆ. ಬಿಸ್ಲೆರಿ ಬಾಟಲ್ ನೀರು ಹಿಡಿದವನು ಇಡೀ ಜಮೀನನ್ನು ಒಂದು ಸುತ್ತು ಬಂದ. ಕಡೆಗೆ ಮೋದಿ ಬೋರ್ ಬಿದ್ದ ನೂರಡಿ ದೂರದಲ್ಲಿ ಬಂದು ನಿಂತು ತನ್ನ ಪಾಯಿಂಟನ್ನು ನಿಖರಗೊಳಿಸಲು ತೆಂಗಿನಕಾಯಿ ಪ್ರಯೋಗ ಮಾಡಿದ. ನಂತರ ಕಡ್ಡಿ ಪ್ರಯೋಗವನ್ನು ಮಾಡಿದ. ಮೂರು ಫಲಿತಾಂಶಗಳು ನೀರು ಬರುವ ಖಚಿತತೆಯನ್ನು ಒದಗಿಸಿದವು. ಅಷ್ಟರಲ್ಲಾಗಲೇ ನಾಟಕದ ಸೀನು ಇಳುಕಿದಂತೆ ಜಾರ್ಖಂಡ್ ಹುಡುಗರು ಲಾರಿಯಿಂದ ಬೋರಿಂಗ್ ಹತಾರಗಳನ್ನು ಇಳಿಸತೊಡಗಿದರು. ಈ ಬೋರ್ ಕೊರೆಯುವ ಹುಡುಗರಿಗೆ ನಾನು ಒಳ್ಳೆ ಮನುಷ್ಯನಾಗಿ ಕಂಡಿದ್ದನಂತೆ. ಅಂತ ಒಳ್ಳೆ ಮನುಷ್ಯನ ಜಮೀನಲ್ಲಿ ನೀರು ಬರದೇಯಿದ್ದುದಕ್ಕೆ ಅವರಿಗೂ ಬೇಸರವಾಗಿ ಸರಿಯಾದ ಪಾಯಿಂಟ್ ಮಾಡುವವನನ್ನು ಅವರೇ ಪುಸಲಾಯಿಸಿ ಕರೆತಂದಿದ್ದರಂತೆ. ಆದ್ದರಿಂದ ನೀರು ಬರುವುದು ಗ್ಯಾರಂಟಿ ಎಂಬ ಸಂಭ್ರಮದಲ್ಲಿ ಚುರುಕಾಗಿ ಓಡಾಡುತ್ತ ಕೆಲಸ ಮಾಡತೊಡಗಿದರು.

ಕ್ರಮೇಣ ನಿನ್ನೆಯಂತೆಯೇ ಜನ ಸೇರತೊಡಗಿದರು. ಆ ಪೈಕಿ ಹನ್ನೊಂದು ಬೋರು ಕೊರೆಸಿದವನೊಬ್ಬ ಬಂದ. ಅವನು ಕೊರೆಸಿದ ಹನ್ನೊಂದು ಬೋರುಗಳು ಚೆನ್ನಾಗಿಯೇ ಇದ್ದವಂತೆ. ಆದರೆ ಕಳೆದ ವರ್ಷದಿಂದ ಒಂದೊಂದೇ ಬತ್ತಿಹೋದವಂತೆ. ಯಾವಾಗ ನೀರಿನ ಸಪ್ಲೈ ನಿಂತುಹೋಯಿತೊ ಆಗ ತೆಂಗಿನಮರಗಳು ಮುಷ್ಕರ ಹೂಡಿದಂತೆ ಹೊಂಬಾಳೆಯನ್ನೇ ನೂಕಲಿಲ್ಲವಂತೆ. ಅವನ ಪ್ರಕಾರ ಬೋರ್ ನೀರಿಗೆ ಹೊಂದಿಕೊಂಡ ತೆಂಗಿನಮರ ನೀರು ಕೊಟ್ಟರೆ ಕಾಯಿ ಎಂಬ ಲೆಕ್ಕಾಚಾರದಲ್ಲಿರುತ್ತವಂತೆ. ಅದೇ ಸಹಜವಾಗಿ ಬೆಳೆದ ಮರಗಳು ಮಳೆಗಾಲದಲ್ಲಿ ಸಿಕ್ಕ ನೀರಿನಿಂದಲೇ ಸಾಧ್ಯವಾದಷ್ಟು ಕಾಯಿಬಿಡುತ್ತವಂತೆ. "ಆದ್ದರಿಂದ ಬೋರಿಂಗ್ ನೀರಿನಲ್ಲಿ ತೆಂಗಿನಮರ ಬೆಳೆಸಬಾರದು" ಎಂದ.

ಅಷ್ಟರಲ್ಲಾಗಲೇ ಹೊಸ ಪಾಯಿಂಟು ಮುನ್ನೂರು ಅಡಿ ಆಳಕ್ಕೆ ಹೋಗಿತ್ತು, ನೀರು ಬಂತು! ಜನರೆಲ್ಲಾ ಓಡಿಬಂದರು. ಬೋರ್‌ವೆಲ್ಲೇ ಮೂತ್ರ ಬಿಟ್ಟಷ್ಟು ನೀರು ಬಂದಿದ್ದು ಬಿಟ್ಟರೆ ಆರುನೂರು ಅಡಿವರೆಗೂ ಬೂದಿಯಂತಹ ಮಣ್ಣು ಹೊರಬರತೊಡಗಿತು. ನಾನು ಸಾಕು ಮಾಡಲು ಹೇಳಿದೆ. ನೀರು ಬಂದರೆ ನಾಲ್ಕು ಸಾವಿರ ಎಂದು ಹೇಳಿದ್ದ ಭಗೀರಥ "ಇನ್ನು ಐವತ್ತು ಅಡಿಗೆ ಬರುತ್ತೆ ಕೊರಿಸಿ ಸಾರ್" ಎಂದ. ಅದನ್ನು ಒಪ್ಪಿಕೊಂಡ ನಾನು ಇನ್ನೈವತ್ತು ಅಡಿ ಕೊರೆಸಿದೆ. ಬರೀ ಇಟ್ಟಿಗೆ ಮಣ್ಣು ಬಂತು. ಪುನಃ ಓಡಿಬಂದ ಭಗೀರಥ "ಇನ್ನು ಐವತ್ತಡಿಗೆ ನೀರು ಗ್ಯಾರಂಟ ಬತ್ತದೆ ಸಾರ್" ಎಂದ. "ಈಗ ನನ್ನಲ್ಲಿರುವ ದುಡ್ಡಿಗೆ ಇಷ್ಟಡಿ ಸಾಕು. ನೀನಿನ್ನು ಹೊರಡು" ಎಂದೆ. ಅಲ್ಲದೆ ಕಲ್ಲಿನಿಂದ ಬೋರ್‌ಗುಂಡಿ ಮುಚ್ಚಿ ಮೇಲೆ ಚಪ್ಪಡಿ ಎಳೆಸಿದೆ. ಏಕೆಂದರೆ ಈ ಬೋರ್‌ಗುಂಡಿಯ ಅನಾಹುತ ನೆನೆಸಿಕೊಂಡರೆ ನಿದ್ರೆಯಲ್ಲೂ ಬೆಚ್ಚಿ ಎದ್ದು ಕೂರುತ್ತೇನೆ. ಆದ್ದರಿಂದ ಅಂತಹ ಅನಾಹುತಕ್ಕೆ ನಾನೇ ಕಾರಣನಾಗಬಾರದೆಂದು ದಫನ್ ಮಾಡಿದಂತೆ ಗುಂಡಿ ಮುಚ್ಚಿ ಹೊರಟಾಗ ಜಲಕಣ್ಣೇ ಇಲ್ಲದ ಭೂಮಿ ವಿಷಯದಲ್ಲಿ ನಾನೇಕೆ ಹೀಗೆ ಹಟಕ್ಕೆ ಬಿದ್ದೆ ಎನ್ನಿಸಿತು.


ಪಾಪ ಸುಮ್ಮನೆ ಬ್ರಾಹ್ಮಣನನ್ನು ದೂರಿದೆ ಅಂದುಕೊಂಡರೂ ಸದಾ ನೀರಿನ ಜವುಗಿನಿಂದ ಹಸಿರುಮಯವಾಗಿದ್ದ, ಬೇಸಿಗೆಯಲ್ಲೂ ಗುಂಡಿ ಗೊಟರೆಯಲ್ಲಿ ನೀರು ತುಂಬಿಸಿಕೊಂಡಿದ್ದ ಈ ಜಾಗದಲ್ಲಿ ಜಲ ಕಣೇ ಬತ್ತಿಹೋಗಿರುವುದನ್ನು ನೆನೆಸಿಕೊಂಡು ದಿಗ್ಭ್ರಮೆಯಾಗತೊಡಗಿತು. ಯಾವ ಕ್ಷಾಮವನ್ನಾದರೂ ಸಹಿಸಿಕೊಳ್ಳಬಹುದು. ಆದರೆ ಜಲಕ್ಷಾಮ ಊಹಾತೀತ. ಬರಲಿರುವ ದುರ್ದಿನ ಭಯಾನಕ ಅನ್ನಿಸಿತು.

■ ಬಿ. ಚಂದ್ರೇಗೌಡ

ರವಿ ಸಾವು: ಇಂದಿನ ರಂಗದ ಮೇಲೆ ಬ್ರೂಟಸ್, ಆ್ಯಂಟೋನಿಗಳು

'ಧೀರೋದ್ಧಾತ ನಾಯಕನಿಗಾಗಿ ಕಾಯುತ್ತಿರುವ ನಾಡಿಗಿಂತ ...ಚನೀಯವಾದ ನಾಡು ಮತ್ತೊಂದಿಲ್ಲ'- ಇದು ಜರ್ಮನ್ ಭಾಷೆಯ ...ಹಾಕವಿ ಹಾಗು ನಾಟಕಕಾರ ಯುಜಿನ್ ಬರ್ಟೋಲ್ಟ್ ಬ್ರೆಕ್ಟನ ಉಕ್ತಿ. ಆತ ...ಮಾತನ್ನು ಹೇಳಿದ್ದು ತನ್ನ ನಾಡಾದ ಜರ್ಮನಿಯಲ್ಲಿ ಅಡೋಲ್ಫ್ ಹಿಟ್ಲರ್ ...ಪ್ರಿಯನಾಗುತ್ತಿದ್ದ ಸಮಯದಲ್ಲಾದರೂ, ಅವನ ಬದುಕಿನ ಕಾಲದಲ್ಲೇ ...ಅವನು ಬಹುವಾಗಿ ನೆಚ್ಚಿದ್ದ ಸಮಾಜವಾದದ ಹೆಸರಲ್ಲಿ ಆಟಾಟೋಪ ...ಸಿದ ನಾಯಕರ ಕುರಿತೂ ಆಡಿದ ಘಾತಾಗಿತ್ತು ಎಂದು ...ಕೊಳ್ಳಬಹುದಾಗಿದೆ. ಅಧಿಕಾರಹೀನರಾದ ಜನರು ತಮ್ಮ ಮೇಲೆ ಸವಾರಿ ...ಡುತ್ತಿರುವ ಅಧಿಕಾರದ ವರಸೆಗಳನ್ನು ತಾವೇ ಅರಿತು ಸಂಘಟಿತ ಹೋರಾಟ ...ಡಿ ಎದುರಿಸಬೇಕಲ್ಲದೆ, ತಮ್ಮನ್ನು ಪಾರು ಮಾಡುವ ನಾಯಕನಿಗಾಗಿ ...ಯುವುದೆಂದರೆ ಮತ್ತೊಬ್ಬನ ಅಧಿಕಾರದ ಹಿಡಿತಕ್ಕೆ ಕಾದು ಸೋಲುವುದೇ ...ರುತ್ತದೆ ಎನ್ನುವುದನ್ನು ಬ್ರೆಕ್ಟ್ ಕಂಡುಂಡು ಆಡಿದ ಮಾತಿದು. ಜನರನ್ನು ...ರುತನದಲ್ಲಿ ಸಂಘಟಿಸಿ, ಅವರಲ್ಲಿ ಸ್ವಾವಲಂಬಿ ಹೋರಾಟದ ಕಸುವು ...ಬುತ್ತಿದ್ದ ಲೆನಿನ ಬಗ್ಗೆ ಅವನಿಗೆ ಪ್ರೀತಿ ಇತ್ತು; ಆದರೆ, ಅದೇ ಲೆನಿನನ್ನು ...ರೋದ್ಧಾತ ನಾಯಕನನ್ನಾಗಿಸಿ, ಅವನ ಪ್ರತಿ ಆಣತಿಯನ್ನೂ ಶಿರಸಾವಹಿಸುವ ...ಸ್ಥೆಯ ಬಗ್ಗೆ ಬ್ರೆಕ್ಟನ ವಿರೋಧವಿತ್ತು, ಅಧಿಕಾರಹೀನ ಜನ, ಎಂಥಾ ...ಕಶಾಲಿಯೂ, ಚತುರನೂ, ಉದಾತ್ತನೂ ಆದ ನಾಯಕನಿಂದ ಅಧಿಕಾರವನ್ನು ...ರಿಸುವ ಛಲ ಹಾಗು ಎಂಥಾ ಅಧಿಕಾರವನ್ನೂ ತಲೆಬಾಗದೇ ಸೆಟೆದು ...ತು ಸೆಣಸುವ ಸ್ವಾವಲಂಬಿ ಗುಣ ರೂಢಿಸಿಕೊಳ್ಳಬೇಕಲ್ಲದೆ, ತಮ್ಮ ಕಷ್ಟಗಳನ್ನು ...ಯಕ ನಿವಾರಿಸಲಿ ಎಂದು ಕಾಯುವ ಸೋಮಾರಿಗಳಾಗ ಕೂಡದು ಎನ್ನುವುದು ...ನ ಉಕ್ತಿಯ ಆಶಯ. ಹೀಗೆ ಹೇಳುವಾಗ ಬ್ರೆಕ್ಟ್ ತನ್ನ ಪೂರ್ವಸೂರಿಯಾದ ...ಯಂ ಷೇಕ್ಸ್ಪಿಯರನ ನಾಟಕಗಳ ನಾಯಕರ ಚಿತ್ರಣಗಳನ್ನು ಚೆನ್ನಾಗಿ ...ತವನಾಗಿದ್ದ.

...ಷೇಕ್ಸ್ಪಿಯರನ 'ಜೂಲಿಯಸ್ ಸೀಸರ್' ನಾಟಕ ಬಹು ಖ್ಯಾತವಾದದ್ದು. ...ದುರಂತ ನಾಟಕದ ನಾಯಕ ರೋಮನ್ ಚಕ್ರಾಧಿಪತಿ ಜೂಲಿಯಸ್ ...ಸರ್. ಆತ ವ್ಯಕ್ತಿಗತವಾಗಿ ಸಜ್ಜನ, ಉದಾತ್ತ, ಜನರ ಶ್ರೇಯೋಭಿವೃದ್ಧಿ ...ಬಯಸುವ ಮುತ್ಸದ್ದಿ. ತನ್ನ ಆಶಯದ ಜನಕಲ್ಯಾಣ ರಾಜ್ಯ ಕಟ್ಟಲು ಅವನು ...ತಹಂತವಾಗಿ ಅಧಿಕಾರದ ಏಣಿ ಏರಬೇಕು; ಆ ಏಣಿ ಏರಲು ತನ್ನ ...ಣಗಳನ್ನು ಅರಿತು ಬೆಂಬಲಿಸುವ ಆಪ್ತರೂ, ಸಮಾಜಮುಖಿಗಳೂ ಆದ ...ದು ಹಿತೈಷಿ ಗಣವನ್ನು ಕಟ್ಟಿಕೊಳ್ಳುವುದು ಅನಿವಾರ್ಯ; ಆದರೆ, ಅವನ ...ಪ್ತಗಣದ ಪ್ರತಿಯೊಬ್ಬನಿಗೂ ಸಾಮಾಜಿಕ ಒಳಿತು-ಕೆಡಕುಗಳ ಬಗ್ಗೆ ತನ್ನದೇ ...ಯತ್ತ ನಿಲುವುಗಳಿರುತ್ತವೆ. ತನಗಿಂತ ಧೀರನೂ, ಚತುರನೂ ಆದ ಸೀಸರ್ ...ಅಭಿಲಾಷೆಗಳನ್ನು ಪೂರೈಸುವ ನಾಯಕನೆಂದು ಅವನ ಹಿಂದೆ ಅವರು ...ಲ್ಲುತ್ತಾರೆ. ಸೀಸರ್ ಚಕ್ರಾಧಿಪತಿಯಾಗುವವರೆಗೂ, ಅವರ ನಿಷ್ಠೆಗಳಲ್ಲಿ ಒಡಕು ...ಕೋದಿಲ್ಲ. ಅವನು ಅಧಿಕಾರ ವಹಿಸಿಕೊಂಡ ನಂತರದಲ್ಲಿ, ಆತ ತಮ್ಮ ...ಉದ್ದೇಶಗಳನ್ನು ಈಡೇರಿಸುವ ಬದಲು ಅಧಿಕಾರಲೋಲುಪನಾಗುತ್ತಿರುವನೋ ...ಬ ಅನುಮಾನ ಸುಳಿಯತೊಡಗುತ್ತದೆ. ಅಧಿಕಾರದಾಟ ಎಂದಮೇಲೆ,



ಸೀಸರನಿಂದ ಪೆಟ್ಟು ತಿಂದ ಮಂದಿಯೂ ಹೆಡೆ ಎತ್ತಿ ತಮ್ಮ ಪ್ರತೀಕಾರಕ್ಕಾಗಿ ಕಾಯುತ್ತಿರುತ್ತಾರೆ. ಅಂಥವರ ಹಲವು ಪ್ರಯತ್ನಗಳಲ್ಲಿ, ಸೀಸರನ ಆಪ್ತರಲ್ಲೇ ಒಡಕು ಹುಟ್ಟಿಸಿ ಸೀಸರನ ವಿರುದ್ಧ ಎತ್ತಿಕಟ್ಟುವ ಹುನ್ನಾರವೂ ಒಂದು. ಆಗ ಅವರಿಗೆ ಸೀಸರನ ಆಪ್ತವಲಯದಲ್ಲಿ ಸುಲಭದ ಮಿಕವಾಗಿ ಕಾಣುವುದು ಬ್ರೂಟಸ್. ಬ್ರೂಟಸ್ ಅಧಿಕಾರ ನಿರ್ಮೋಹಿ, ಸರಳಜೀವಿ, ಸಜ್ಜನ; ಅವನು ಸೀಸರನ ಜೊತೆಗಿರುವುದೇ ಸೀಸರನಿಗೆ ಜನಕಲ್ಯಾಣ ಮುಖ್ಯವೇ ಹೊರತು ಅಧಿಕಾರವಲ್ಲವೆಂಬ ಅಚಲ ನಂಬಿಕೆಯಲ್ಲಿ. ಸೀಸರನ ವಿರೋಧಿಗಳು ಅವನ ಈ ಸುಗುಣವನ್ನೇ, ದೌರ್ಬಲ್ಯದ ಕೊಂಡಿಯಾಗಿಸಿಕೊಳ್ಳುತ್ತಾರೆ; ಸೀಸರ್ ದಿನೇದಿನೇ ಸರ್ವಾಧಿಕಾರಿಯಾಗುತ್ತಿರುವನೆಂದೂ, ಮುಂದೊಂದು ದಿನ ಜನರ ದಬ್ಬಾಳಿಕೆ ನಡೆಸುವ ಲಕ್ಷಣಗಳನ್ನು ತೋರುತ್ತಿರುವನೆಂದೂ, ಸಹಜ ಸಾಮಾನ್ಯ ವಿವರಗಳನ್ನು ತಮ್ಮ ಮೂಗಿನ ನೇರಕ್ಕೆ ನಿರೂಪಿಸುತ್ತಾರೆ; ಅನುಮಾನದ ಬೀಜಗಳನ್ನು ಬಿತ್ತಲು ಎದೆ ತೆರೆದುಕೊಂಡ ಬ್ರೂಟಸ್‌ಗೆ ತನ್ನ ಪ್ರಿಯ ಮಿತ್ರನಾದ ಸೀಸರ್, ದಬ್ಬಾಳಿಕೆಗೆ ಸನ್ನದ್ಧನಾಗಿರುವ ಸರ್ವಾಧಿಕಾರಿಯ ಹಾಗೆ ಕಾಣತೊಡಗುತ್ತಾನೆ. ಈಗಲೇ ತಡೆಯದೇ ಹೋದಲ್ಲಿ ಮುಂದೆ ಸೀಸರನನ್ನು ಮಣಿಸುವುದು ಅಸಾಧ್ಯವೆಂದು ಸೀಸರನ ವಿರೋಧಿಗಳು ಬ್ರೂಟಸನಿಗೆ ಮನವರಿಕೆ ಮಾಡಿಕೊಡುವುದರಲ್ಲಿ ಯಶಸ್ವಿಯಾಗುತ್ತಾರೆ. ಜನಕಲ್ಯಾಣಕ್ಕೋಸ್ಕರ ಸೀಸರನನ್ನು ಕೊಲ್ಲುವುದು ಪವಿತ್ರವಾದ ಕೆಲಸ ಎಂಬ ಸ್ಥಿತಿಗೆ ಬ್ರೂಟಸನನ್ನು ತಂದು ನಿಲ್ಲಿಸುತ್ತಾರೆ. ಬ್ರೂಟಸ್, ಗೆಳೆಯ ಸೀಸರನ ಬಗ್ಗೆ ತನಗಿರುವ ಅಪಾರ ಪ್ರೇಮವನ್ನು ನಿವೇದಿಸಿಕೊಳ್ಳುತ್ತಲೇ, ರೋಮನ್ ಜನರ ಕಲ್ಯಾಣದ ಬಗ್ಗೆ ಅದಕ್ಕಿಂತ ದುಪ್ಪಟ್ಟು ಕಾಳಜಿ ಇರುವುದಾಗಿ ದುಃಖಿತನಾಗಿ ಹೇಳುತ್ತಲೇ ಸೀಸರನನ್ನು ಕೊಲ್ಲುತ್ತಾನೆ. ಮತ್ತೂ ತನ್ನ ಕೊಲೆಯನ್ನು ರೋಮನ್ ಜನರಿಗೆ ಪ್ರಾಮಾಣಿಕವಾಗಿ ವಿವರಿಸುತ್ತಾನೆ; ಜನ ಅವನ ಮಾತಿಗೆ ಸೋತು ಈ ಕೊಲೆ ಸಮ್ಮತ ಎಂದು ತಲೆದೂಗುತ್ತಾರೆ. ಈ ಗಳಿಗೆ ಹೀಗೆ ಬಿಟ್ಟರೆ ಬ್ರೂಟಸ್‌ನ ಕೃತ್ಯಕ್ಕೆ ಅಪಾರ ಜನಮನ್ನಣೆ ಸಿಕ್ಕುತ್ತದೆ ಎಂದರಿತ ಮತ್ತೊಬ್ಬ ಸೀಸರನ ಆಪ್ತ ಆ್ಯಂಟೋನಿ, ಬ್ರೂಟಸನ ಗುಣಗಾನ ಮಾಡುತ್ತಲೇ, ಬ್ರೂಟಸನ ಕೃತ್ಯದ ಬಗ್ಗೆ ಜನ ಅನುಮಾನ ತಳೆಯುವಂಥ

ವಾದ ಸರಣಿ ರಚಿಸುತ್ತಾನೆ. ಆ ನಾಟಕದ ಬಹು ವಿಖ್ಯಾತ ಸಾರ್ವಜನಿಕ ಭಾಷಣದಲ್ಲಿ, ಆ್ಯಂಟೋನಿಯೋ ನಿಧಾನಕ್ಕೆ ಬ್ರೂಟಸ್ ಹೇಗೆ ರೋಮನ್ ಜನರ ವಿರೋಧಿಗಳ ಸಂಚನ್ನು ಕಾರ್ಯಗತಗೊಳಿಸಿದ ಸಿಪಾಯಿ ಕೊಲೆಗಾರನೆಂದು ವಿವರಿಸುತ್ತಾ ಜನರನ್ನು ಬ್ರೂಟಸನ ವಿರುದ್ಧ ತಿರುಗಿ ಬೀಳುವಂತೆ ಮಾಡುತ್ತಾನೆ. ಸೀಸರನ ಉತ್ತರಾಧಿಕಾರಿಯಾಗುತ್ತಾನೆ.

ಇಲ್ಲಿ ರೋಮ್ ಚಕ್ರಾಧಿಪತ್ಯದ ಜನಸಾಮಾನ್ಯರು, ಸೀಸರ್, ಬ್ರೂಟಸ್ ಹಾಗು ಆ್ಯಂಟೋನಿಯರ ನಾಯಕತ್ವಗಳು ಉಣ್ಣಿಸುವ ವಿವೇಚನೆಗೆ ಮಾತ್ರ ತಲೆಕೊಟ್ಟವರಾಗಿ, ಈ ಎಲ್ಲರನ್ನೂ ಒಳಗೊಂಡಿರುವ ಅಧಿಕಾರದಾಟದ ಬಗ್ಗೆ ತಮ್ಮ ಸ್ವಾವಲಂಬಿ ವಿವೇಕವಿಲ್ಲದೆ ಅತ್ತಿತ್ತ ತೂಗುವುದನ್ನು ಒಬ್ಬ ಮಹಾನ್ ನಾಟಕರಕಾರ (ಷೇಕ್ಸ್ಪಿಯರ್) ತೋರಿದರೆ, ಮುನ್ನೂರು ವರ್ಷಗಳ ನಂತರ ಆ ಕೃತಿಯ ಅರ್ಥವಂತಿಕೆಯನ್ನು ಜಾಗೃತಗೊಳಿಸುವ ಹಾಗೆ ಅವನ ಉತ್ತರಾಧಿಕಾರಿ ಬ್ರೆಕ್ಟ್ ನಮ್ಮನ್ನು ಎಚ್ಚರಿಸಿದ.

ಇಂದು, ಜನಾನುರಾಗಿಯೂ, ಪ್ರಾಮಾಣಿಕನೂ, ನೇರ-ನಿಷ್ಠುರನೂ ಆಗಿದ್ದ ಡಿ.ಕೆ.ರವಿ, ಜನರ ಕಣ್ಮಣಿಯಾಗಿರುವುದು ಅಚ್ಚರಿಯೇನೂ ಅಲ್ಲ, ಅವರ ನಿಗೂಢ ಸಾವು ಜನಮಾನಸಕ್ಕೆ ಆಘಾತವುಂಟುಮಾಡಿರುವುದೂ ಆರೋಗ್ಯಕರವೇ. ಈ ಸಾವಿನ ಹಿಂದೆ ಸ್ವಾತಂತ್ರೋತ್ತರ ಭಾರತದ ಆರು ದಶಕಗಳ ಒಂದು ಸಮಾಜವಿದೆ: ಇಲ್ಲಿ ಭ್ರಷ್ಟರ ಹಾಗೆ ಪ್ರಾಮಾಣಿಕರಿದ್ದಾರೆ; ಅಧಿಕಾರದಾಟದಲ್ಲಿ ಬ್ರೂಟಸ್‌ಗಳಾದವರಿದ್ದಾರೆ, ಬ್ರೂಟಸ್‌ಗಳಿಗೆ ಕಿವಿ ಚುಚ್ಚುವ ಕ್ಯಾಸಿಯಸ್‌ಗಳಿದ್ದಾರೆ; ಇವರುಗಳ ಆಟದಲ್ಲಿ ತಾನು ಉಳಿಯಬೇಕೆನ್ನುವ ಆ್ಯಂಟೋನಿಗಳಿದ್ದಾರೆ. ಆದರೆ, ಇದು ರೋಮನ್ ಚಕ್ರಾಧಿಪತ್ಯವಲ್ಲ-ಔಪಚಾರಿಕವಾಗಿಯಾದರೂ ಪ್ರಜಾತಾಂತ್ರಿಕ ಆಡಳಿತವಿರುವ ಕರ್ನಾಟಕ. ರವಿಯವರ ಸಾವಿನ ಹಿಂದೆ ಅಡಗಿರುವ ಸತ್ಯಾಸತ್ಯತೆಗಳನ್ನು ಬಯಲುಗೊಳ್ಳುವಂತೆ ಮಾಡಲು ಬೇಕಾಗಿರುವುದು ರವಿಯವರ ಪ್ರಾಮಾಣಿಕತೆ-ಜನಕಲ್ಯಾಣ ಗುಣವನ್ನು ನಮ್ಮ ಸ್ವಾಯತ್ತ ಸ್ವಾವಲಂಬಿ ವಿವೇಕಕ್ಕೆ ಬೆನ್ನೆಲುಬಾಗಿಸಿಕೊಳ್ಳುವ ಸಂಯಮ; ಈ ಸಂಯಮ ಸುಲಭವಲ್ಲ; ಸಾಮಾಜಿಕ ವಿಷಯಗಳಲ್ಲಿ ನಾವು ಹೆಚ್ಚು ಜಾಗ್ರತೆ ವಹಿಸುವಂತೆ, ಅಧಿಕಾರದಲ್ಲಿರುವವರು ಸಂವಿಧಾನ ವಿರೋಧಿ ಚಟುವಟಿಕೆಗಳಲ್ಲಿ ತೊಡಗದಂತೆ, ಎಲ್ಲಾ ಬಗೆಯ ಹಿಂಸೆಗಳಿಗೂ ಜಾತಿ-ಮತ-ಲಿಂಗ ಭೇದ ತೊರೆದು ನಾಗರಿಕ ಪ್ರಜ್ಞೆಯಲ್ಲಿ ಪ್ರತಿಕ್ರಿಯಿಸುವ ಉತ್ತರದಾಯಿತ್ವವನ್ನು ಬೇಡುತ್ತದೆ. ಇವತ್ತೇ ಆಗಲೀ, ಇಲ್ಲೇ ನ್ಯಾಯ ದೊರಕಲಿ ಎಂಬ ಉದ್ವೇಗವನ್ನು ಸೃಷ್ಟಿಸಿ ತಮ್ಮ ಅಧಿಕಾರದ ಬೇಳೆ ಬೇಯಿಸುವ ಸಾವಿರಾರು ಕ್ಯಾಸಿಯಸ್‌ಗಳು ನಮ್ಮಲ್ಲಿದ್ದಾರೆ; ಅವರ ಉನ್ಮಾದವನ್ನು ತಮ್ಮ ಮೂಗಿನ ನೇರಕ್ಕೆ ಬಳಸುವ ಆ್ಯಂಟೋನಿಗಳಿದ್ದಾರೆ.

ರವಿ ಬ್ರೂಟಸ್, ಆ್ಯಂಟೋನಿ, ಕ್ಯಾಸಿಯಸ್‌ಗಳ ಪಾಲಾದ ಸೀಸರನಾಗಬೇಕೋ, ನಿಜಕ್ಕೂ ಜನರ ಮನದಲ್ಲಿ ಸಮಾಜ ಕಲ್ಯಾಣ, ಅಧಿಕಾರ ಪ್ರತಿರೋಧದ ಸಂಕಲ್ಪ ತುಂಬುವ ಜನರ ಸೀಸರನಾಗಬೇಕೋ ಎನ್ನುವುದನ್ನು 'ವಿ ದ ಪೀಪಲ್' ನಿರ್ಣಯಿಸಬೇಕೆ ವಿನಃ ಬ್ರೂಟಸ್, ಆ್ಯಂಟೋನಿಗಳಲ್ಲ, ಸ್ವತಃ ಸೀಸರನೂ ಅಲ್ಲ, ಯೋಚಿಸಿ.

■ ಕೆ. ಫಣಿರಾಜ್

ಗ್ರಂಥಾಲಯ ಮೇಲ್ವಿಚಾರಕರೆ ಮೋಸ ಹೋಗಬೇಡಿ!

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಪಂಚಾಯ್ತಿ ...ಥಾಲಯದ್ದೇ ಒಂದು ವಿಭಾಗವಿದೆ. ಇದು ಆಯಾ ...ಡಳಿತಕ್ಕೆ ಒಳಪಟ್ಟಿರುತ್ತದೆ. ಜಿಲ್ಲಾ ಪಂಚಾಯ್ತಿಯ ...ಖ್ಯ ಕಾರ್ಯದರ್ಶಿಯೇ ಇವರ ಮೇಲಧಿಕಾರಿ. ...ರ್ನಾಟಕದಲ್ಲಿ ಮಂಡಲ ಪಂಚಾಯ್ತಿಗಳು ಹೋಗಿ ಗ್ರಾಮ ...ಪಂಚಾಯ್ತಿ ಅಸ್ತಿತ್ವಕ್ಕೆ ಬಂದ ಮೇಲೆ ಸರ್ಕಾರ ಪ್ರತಿ ಗ್ರಾಮ ...ಪಂಚಾಯ್ತಿಗೊಂದು ಗ್ರಂಥಾಲಯವೆಂಬ ಕ್ರಾಂತಿಕಾರಿ ...ರ್ಮಾನ ತೆಗೆದುಕೊಂಡಿತು. ಅದು ಎಂ.ಪಿ. ಪ್ರಕಾಶರ ...ವಾದ್ದರಿಂದ ಈ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳ ... ವಿಶೇಷ ಗಮನ ಹರಿಸಲಾಗಿತ್ತು.


...ಸಾಮಾಜಿಕ ಚಿಂತಕರಾದ ಕಡಿದಾಳು ಶಾಮಣ್ಣನವರು ...ಥಾಲಯ ಮೇಲ್ವಿಚಾರಕರ ಗೌರವಧನದ ಬಗ್ಗೆ ಹೋರಾಟ ...ಸಿದ್ದರು. ತಮ್ಮ ಗೆಳೆಯರಾದ ಜೆ.ಎಚ್. ಪಟೇಲರು ...ಮುಖ್ಯಮಂತ್ರಿಗಳಾಗಿದ್ದಾಗ ಒಂದು ಅರ್ಜಿ ...ದುಕೊಂಡು, ಅಲ್ಲೇ ಮೂಲೆಯಲ್ಲಿ ಬಿದ್ದಿದ್ದ ...ರದೋ ಹೂವಿನಹಾರದ ನಾಲ್ಕು ದಳ ...ಕೊಂಡು ಅರ್ಜಿ ಮೇಲಿಟ್ಟು, "ಪಟೇಲರೆ, ...ಪಂಚಾಯ್ತಿ ಗ್ರಂಥಾಲಯದ ಮೇಲ್ವಿಚಾರಕರ ...ಗಮನಹರಿಸಿ" ಎಂದು ಮನವಿ ಕೊಟ್ಟರು. ...ರ್ಜಿ ನೋಡಿದ ಪಟೇಲರು "ಶಾಮಣ್ಣ ಈ ...ಬರಿ ಖಾತೆಯ ಒಂದು ದೊಣ್ಣೆಗೆ ಕೊಟ್ಟಿದ್ದಿನಿ. ...ಗೋಗಿ ವಿಚಾರಿಸ್ರಿಯು" ಎಂದರು.

...ಆಗ ಬೆಂಗಳೂರಿನ ಸೌದೆ ಕೃಷ್ಣಪ್ಪ ಎಂಬುವರು ...ಥಾಲಯ ಇಲಾಖೆ ಮಂತ್ರಿಯಾಗಿದ್ದರು. ಆತನ ...ದ್ದಿ ಮತ್ತು ಪಡಪಳಿಕೆ ನೋಡಿದ ಪಟೇಲರು ..."ಣ್ಣ" ಎಂದು ಸಂಭೋದಿಸಿದ್ದಕ್ಕೆ ...ಮಣ್ಣನವರಿಗೂ ನಗುಬಂತು. ಪಟೇಲರೂ ನಕ್ಕರು. ...ಪಟೇಲರು "ಶಾಮಣ್ಣ, ಇದನ್ನೆಲ್ಲ ಸರಿಮಾಡಿದಂತೆ ...ದು ಮಂತ್ರಿಯಾಯ್ತಿದ್ಯಾ?" ಎಂದರು ಶಾಮಣ್ಣ, ...ನಿಗಾಯ್ತದೆ? ನಾನು ಚುನಾವಣೆಗೆ ನಿಲ್ಲಾಯ್ತಾ? ...ದು ಬೇಡವೆ?" ಎಂದರು ಶಾಮಣ್ಣ "ಅದೆಲ್ಲ ನನಗಿಲ್ರೀ. ...ಗೂ ಮಾಡ್ಸಿ ನಾನು. ಎಮ್ಮೆಲ್ಲೆ ಮಾಡಿ ಮಂತ್ರಿ ...ಸ್ತಿ. ಈ ಗ್ರಾಮಾಭಿವೃದ್ಧಿ, ಕಸದ್ದು ರೂಮು, ಲೈಬ್ರರಿ ... [illegible] ಎಂದರು.

[illegible]

ಸ್ವಾಮಣ್ಣನವರಿಗೆ ಸಮಸ್ಯೆ ಸುತ್ತಿಟ್ಟುಡುವ ಪಟೇಲರ ವರಸೆಗೆ ಸುಸ್ತಾಗಿ ಅಂದಿನಿಂದ ಇಂದಿನವರೆಗೆ ಗ್ರಂಥಾಲಯ ಮೇಲ್ವಿಚಾರಕರ ಬಗೆಹರಿಯದ ಸಮಸ್ಯೆ ಬಗ್ಗೆ ಸುಮ್ಮನಾಗಿದ್ದಾರೆ.

ಈ ಗ್ರಂಥಾಲಯ ಮೇಲ್ವಿಚಾರಕರನ್ನು ಸ್ಥಳೀಯ ಪಂಚಾಯ್ತಿ ಶಿಫಾರಸ್ಸಿನನ್ವಯ ಇಲಾಖೆ ಮೂವರು ಅಭ್ಯರ್ಥಿಗಳ ಪೈಕಿ ಒಬ್ಬನನ್ನು ಆಯ್ಕೆ ಮಾಡುತ್ತದೆ. ಈತನಿಗೆ ಯಾವುದೇ ಸಾಮಾಜಿಕ ಜವಾಬ್ದಾರಿ, ಜನರನ್ನು ಓದಿಗೆ ಹಚ್ಚುವ ಕಳಕಳಿ, ತಾನಾದರೂ ಓದಿ ಮುಂದಾಲೋಚನೆ ಗಳಿಸಿಕೊಳ್ಳುವ ಯಾವು ಗುಣಗಳೂ ಇರುವ ಅಗತ್ಯವಿಲ್ಲ, ಇಲಾಖೆ ನಿರ್ಧರಿಸಿದ ಮೀಸಲಾತಿ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದರಾಯ್ತು, ಆಯ್ಕೆಯಾಗುತ್ತಾನೆ. ಆದರೂ ಸಿಕ್ಕ ಅವಕಾಶವನ್ನು ಬಳಸಿಕೊಂಡು ಮುಂದೆ ಬಂದವರಿದ್ದಾರೆ.



ಕುಡಿದು ನಾಶವಾದವರೂ ಇದ್ದಾರೆ. ಗ್ರಂಥಾಲಯದ ಬಾಗಿಲು ತೆಗೆಯದೆ ಅಲೆಯುವವರ ಸಂಖ್ಯೆಯೂ ಜಾಸ್ತಿಯಿದೆ. ಇವರಿಂದ ಕೆಲಸ ತೆಗೆಯುವ ಕಾರಣಕ್ಕೆ, ಪಂಚಾಯ್ತಿಯ ಪಿಡಿಓರಿಂದ ಹಾಜರಾತಿ ಪ್ರಮಾಣ ಪತ್ರಕ್ಕೆ ಸಹಿ ಪಡೆದು ಬಂದರೆ ಮಾತ್ರ ಸಂಬಳ ಮಂಜೂರು ಮಾಡುವಂತೆ ಸರ್ಕಾರ ನಿಯಮ ಮಾಡಿತ್ತು, ಇದನ್ನು ವಿರೋಧಿಸಿದ ಮೇಲ್ವಿಚಾರಕರು ಕಿಮ್ಮನೆ ರತ್ನಾಕರ್‌ರವರಿಗೆ "ಪಿಡಿಓಗಳು ನಮ್ಮಿಂದ ಮನೆ ಕೆಲಸ ಮಾಡಿಸಿಕೊಳ್ಳುತ್ತಾರೆ" ಎಂದು ದೂರು ಹೇಳಿ ಪಿಡಿಓ ಸಹಿಯ ಅಗತ್ಯವಿಲ್ಲವೆಂಬ ಸುತ್ತೋಲೆ ಹೊರಡಿಸಿಕೊಂಡರು. ಈಗ ಯಾರೂ ಸರಿಯಾಗಿ ಬಾಗಿಲು [illegible] ದೂರು ಮಂತ್ರಿಗಳ ಗಮನಕ್ಕೆ

ಬರತೊಡಗಿದೆ. ಆದರೆ ಮೇಲ್ವಿಚಾರಕರ ಬಗ್ಗೆ ಅವರ ಕನಿಷ್ಠ ವೇತನದ ಬಗ್ಗೆ ಕನಿಕರ ಪಡುವ ಕಿಮ್ಮನೆ ರತ್ನಾಕರ್ ಯಾವುದೇ ಕ್ರಮ ಕೈಗೊಳ್ಳದೆ ಮೌನವಾಗಿದ್ದಾರೆ.

ಈ ಗ್ರಂಥಾಲಯ ಮೇಲ್ವಿಚಾರಕರು ಬಾಗಿಲು ಬಂದ್ ಡ್ಯೂಟಿ ಹೀಗೇ ಮುಂದುವರಿದರೆ ಮುಂದೊಂದು ದಿನ ಮತ್ತೆ ಪಿಡಿಓ ಸಹಿ ಪಡೆದು ಸಂಬಳ ಪಡೆವ ಹಂತಕ್ಕೆ ಬರಬಹುದು. ಪಂಚಾಯ್ತಿ ಗ್ರಂಥಾಲಯದ ಬಾಗಿಲು ತೆಗೆಯದ ಬಗ್ಗೆ ಇಲಾಖೆ ಅಧಿಕಾರಿಗಳು ತನಿಖೆ ಮಾಡಿದರೆ ಈ ಮೇಲ್ವಿಚಾರಕರು ಜಿಲ್ಲಾ ಮಂತ್ರಿಗಳಿಂದಲೇ ಫೋನ್ ಮಾಡಿಸಿ ಕೆಟ್ಟದಾಗಿ ಬೈಸುವ ಕೃತ್ಯಗಳೂ ನಡೆಯುತ್ತಿವೆ. ಐದೂವರೆ ಸಾವಿರ ಸಂಬಳಕ್ಕೆ ಬುಲೆಟ್‌ನಲ್ಲಿ ಬಂದು ಡ್ಯೂಟಿ ಮಾಡುವ, ಅಂದರೆ ಬಾಗಿಲು ತೆಗೆದು ಪೇಪರ್ ಓದಿಹೋಗುವ ಭೂಪರೂ ಇದ್ದಾರೆ. ಐದೂವರೆ ಸಾವಿರ ಸಂಬಳವನ್ನು ತಮ್ಮ ಕಾರಿನ ಪೆಟ್ರೋಲ್‌ಗೆ ಬಳಸುವ ಧೀಮಂತ ಮೇಲ್ವಿಚಾರಕರೂ ಇದ್ದಾರೆ. ತನ್ನ ಸಂಬಳದಲ್ಲೊಂದಿಷ್ಟು ಬೇರೆಯವರಿಗೆ ಕೊಟ್ಟು ಬಾಗಿಲು ತೆಗೆಸುವ ಸಾಮಾಜಿಕ ಕಳಕಳಿಯವರೂ ಇದ್ದಾರೆ! ಆದರೆ ಇಲಾಖೆಗೆ ಸೇರಿದಾಗ 300 ರೂ. ಪಡೆಯುತ್ತ ಈಗ ಐದೂವರೆ ಸಾವಿರ ಗೌರವಧನಕ್ಕೆ ತಲುಪಿರುವ ನಿಷ್ಠಾವಂತ ಮೇಲ್ವಿಚಾರಕರೂ ಇದ್ದಾರೆ. ನಮ್ಮದು ಎಂದಾದರೊಂದು ದಿನ ಪರ್ಮನೆಂಟ್ ಆಗೇ ಆಗುತ್ತದೆಂದು ಕಾಯುತ್ತಿರುವ ಮೇಲ್ವಿಚಾರಕರೂ, ಅದಕ್ಕಾಗಿ ಹೋರಾಡುವವರಿಗೆ ಆಗಾಗ್ಗೆ ಧನಸಹಾಯ ಮಾಡುವಂತಹವರೂ ಇದ್ದಾರೆ. ಆದ್ದರಿಂದ ಗ್ರಂಥಾಲಯದ ಮೇಲ್ವಿಚಾರಕ ಸಂಘದ ಅಧ್ಯಕ್ಷರು ಜಿಲ್ಲಾಧ್ಯಕ್ಷರೆಲ್ಲಾ ಸೇರಿ ತಮ್ಮ ಸಮಸ್ಯೆಯನ್ನು ತಾವೇ ಕೈಗೆತ್ತಿಕೊಂಡರು. ಆದರೀಗ ಹಲವರು ಶುದ್ಧ ಮನೆಹಾಳ ಕೆಲಸಕ್ಕೆ ಕೈಹಾಕಿರುವ ಸುದ್ದಿಯೊಂದು ಕೋಲಾರ, ಚಿಕ್ಕಬಳ್ಳಾಪುರ, ರಾಮನಗರದ ಕಡೆಯಿಂದ ಕೇಳಿಬರುತ್ತದೆ..

ಅದೇನೆಂದರೆ, "ರಾಜ್ಯದಲ್ಲಿರುವ ಗ್ರಂಥಾಲಯ ಮೇಲ್ವಿಚಾರಕರೆಲ್ಲಾ ತಲಾ ಎಪ್ಪತ್ತು ಸಾವಿರ ಕೊಟ್ಟರೆ 42 ಕೋಟಿ ರೂ.ಗಳಾಗುತ್ತವೆ. ಈ ಹಣವನ್ನು ಸಮನಾಗಿ ಭಾಗ ಮಾಡಿ ಇಲಾಖಾ ನಿರ್ದೇಶಕರು, ಇಲಾಖಾ ಮಂತ್ರಿ, ಫೈನಾನ್ಸ್ ಡಿಪಾರ್ಟ್‌ಮೆಂಟ್ ಮತ್ತು ಮುಖ್ಯಮಂತ್ರಿಗೆ ಕೊಟ್ಟರೆ ನಮ್ಮನ್ನು ಪರ್ಮನೆಂಟ್ ಮಾಡುತ್ತಾರೆ. ಅಲ್ಲಿಗೆ ನಾವೂ ಕೂಡ ಕೆ.ಸಿ.ಎಸ್ಸಾರ್ ನಿಯಮದಡಿ ಸರ್ಕಾರಿ ನೌಕರರಾಗಿ ಎಲ್ಲಾ ಸವಲತ್ತುಗಳನ್ನು ಪಡೆಯುತ್ತೇವೆ. ಆದ್ದರಿಂದ ನೀವೆಲ್ಲಾ ತಲಾ ಎಪ್ಪತ್ತು ಸಾವಿರ ಕೊಡಿ" ಎಂದು ತಾಕೀತು ಮಾಡತೊಡಗಿದ್ದಾರೆ.

ತಮ್ಮ ಈ ಹೋರಾಟದ ಸಾಕ್ಷಿಯಾಗಿ ಶಿಕ್ಷಣ ಸಚಿವರಿಗೆ ಯಾವುದೋ ಅರ್ಜಿ ಕೊಡುವ ಫೋಟೋ ತೋರುವುದು, "ನಾವೀಗ ಮುಖ್ಯಮಂತ್ರಿ ಮನೆ ಬಾಗಿಲಲ್ಲಿದ್ದೇವೆ. ಇನ್ನೇನು ಒಳಗೆ ಕರೆದು ನಮ್ಮ ಕಾಯಮ್ಮಾತಿಯ ಬಗ್ಗೆ ಆಜ್ಞೆ ಹೊರಡಿಸಲಿದ್ದಾರೆ" ಎಂದು ಫೋನು ಮಾಡುವುದು, ಇಂತಹ ನಾಟಕ ಆರಂಭಿಸಿದ್ದಾರೆ. ಗ್ರಂಥಾಲಯ ಮೇಲ್ವಿಚಾರಕ ಸಂಘದ ಲೀಡರುಗಳು ಹಣ ಸಿಕ್ಕ ನಂತರ, ಎಲ್ಲರನ್ನು ಚೀಟ್ ಮಾಡಿ, ಇಲಾಖೆಯನ್ನೇ ಬಿಟ್ಟು ಹೋಗುವುದರಲ್ಲಿ ಯಾವ ಸಂಶಯವೂ ಇಲ್ಲ. ಹೋಗುವ ಮುನ್ನ "ಸಂಗ್ರಹವಾದ ಹಣವನ್ನು ನಾವು ಎಲ್ಲರಿಗೂ ತಲುಪಿಸಿದೆವು. ಅವರು ಪರ್ಮನೆಂಟ್ ಮಾಡಲಿಲ್ಲ ಎಂದರೆ ನಾವೇನು ಮಾಡಲಾಗುವುದಿಲ್ಲ" ಎಂದು ಕೈ ಎತ್ತುವುದೂ ಗ್ಯಾರಂಟಿ. ಆದ್ದರಿಂದ ಈಗಾಗಲೇ ಹಣ ಕೊಡಲು ಹೊರಟಿರುವ ಮೇಲ್ವಿಚಾರಕರು ಈ ಬಗ್ಗೆ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್‌ರವರನ್ನು ಭೇಟಿ ಮಾಡಿ ಸತ್ಯ ಸಂಗತಿ ತಿಳಿದುಕೊಳ್ಳುವುದು ಒಳ್ಳೆಯದು.

ಗ್ರಂಥಾಲಯ ಮೇಲ್ವಿಚಾರಕರ ಕಾಯಮಾತಿಯ ಸಮಸ್ಯೆ ತುಂಬ ಜಟಿಲವಾದದ್ದು. ಏಕೆಂದರೆ ಇವರನ್ನು ನೇಮಿಸಿಕೊಂಡಿದ್ದೇ ಗೌರವಧನದ ಮೇಲ್ವಿಚಾರಕರೆಂದು. ಒಂದು ರೀತಿಯಲ್ಲಿ ಇವರದ್ದು ಅಂಗನವಾಡಿ ಕಾರ್ಯಕರ್ತೆಯರ ಸೇವೆಗೆ ಸಮನಾದದ್ದು. ಆಗಾಗ್ಗೆ ಇವರ ಗೌರವಧನವನ್ನು ಏರಿಸಬಹುದೇ ಹೊರತು ಎಂದೂ ಕಾಯಂಗೊಳಿಸಲು ಕಾನೂನಿನ ತೊಡಕುಗಳಿವೆ. 1979 ರಲ್ಲಿ ದೇವರಾಜ ಅರಸು ಸರ್ಕಾರ ತೆಗೆದುಕೊಂಡಂತಹ ದಿಟ್ಟ ನಿರ್ಧಾರ ತೆಗೆದುಕೊಂಡರೆ ಇವರ ಕಾಯಮಾತಿ ನಡೆಯಬಹುದು. ಆದರೆ ಇದೂ ಕೂಡ ಬಡ ಮೇಲ್ವಿಚಾರಕರು ಸಂಗ್ರಹಿಸಿ ಕೊಟ್ಟ ಲಂಚದಿಂದ ನಡೆಯುವಂತದ್ದಲ್ಲ.

ಈಗ ಹಾಲಿ ಇರುವ ಇಲಾಖಾ ಮಂತ್ರಿ, ಮುಖ್ಯಮಂತ್ರಿಗಳು ಇಂತಹ ಹಣ ತಿಂದು ಕೆಲಸ ಮಾಡುವವರಲ್ಲ ಎಂಬುದನ್ನು ಮೇಲ್ವಿಚಾರಕರು ತಿಳಿದುಕೊಳ್ಳಬೇಕು. ಯಾವುದಕ್ಕೂ ಇಲಾಖಾ ನಿರ್ದೇಶಕರು ಇಂತಹ ಚಟುವಟಿಕೆಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು. [illegible] ಸಾರ್ವಜನಿಕರ ಹಣದ ವಿಷಯದಲ್ಲಿ ಶುದ್ಧವಾಗಿರುವ ಮಂತ್ರಿ ಕಿಮ್ಮನೆ ರತ್ನಾಕರ್‌ರವರಿಗೆ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು [illegible]

■ ವರದಿಗಾರ

ಕಾಡಿನ ನನ್ನ ಸಂಗಾತಿಗಳ ನೆನಪಿನಲ್ಲಿ...


ಒಂದು ರೀತಿಯಲ್ಲಿ ಹೇಳುವುದಾದರೆ ಪೊಲೀಸ್ ವಿಚಾರಣೆ ನಿರೀಕ್ಷಿಸಿದ್ದಕ್ಕಿಂತಲೂ ನಿರಾಳವಾಗಿ ಮುಗಿಯಿತು. ಆದರೆ ಪೊಲೀಸರು ತೋರಿಸಿದ ಫೋಟೋಗಳು ನೆನಪಿನ ಗಂಟನ್ನು ಬಿಚ್ಚಿ ಕಾಡುತ್ತಲೇ ಇವೆ. ಒಡನಾಡಿದ್ದ ಮುಖಗಳು, ಕಂಡಿದ್ದ ಮುಖಗಳು ಮಸುಕಾಗಿಯೂ, ಮನಃಪಟಲದಲ್ಲಿ ಮೂಡಿ ಮೂಡಿ ಹೋಗುತ್ತಿವೆ. ನಮ್ಮ ನಿಲುವುಗಳು ಏನೇ ಆಗಿದ್ದರೂ, ನಮ್ಮ ಭಾವನೆಗಳು ಒಂದೇ ಆಗಿದ್ದವು. ಭಿನ್ನಾಭಿಪ್ರಾಯಗಳು ನಮ್ಮ ಸಂಬಂಧಕ್ಕೆಂದೂ ತೊಡಕನ್ನುಂಟುಮಾಡಿರಲಿಲ್ಲ. "ನೀವು ತೆಗೆದುಕೊಂಡಿರುವ ಈ ತೀರ್ಮಾನದಿಂದ ಕಾಡಲ್ಲಿರುವ ನಿಮ್ಮವರಿಂದ ನಿಮ್ಮ ಜೀವಕ್ಕೆ ಅಪಾಯವಿಲ್ಲವೇ" ಎಂದು ಪೊಲೀಸರು, ತಿಳಿಯದವರು ಹಲವಾರು ಬಾರಿ ಕೇಳಿದ್ದಾರೆ. ಈ ಪ್ರಶ್ನೆಗೆ ಉತ್ತರಿಸುವುದಕ್ಕೂ ಮುಜುಗರವಾಗುತ್ತಿತ್ತು. ಭಿನ್ನಾಭಿಪ್ರಾಯದ ನಡುವೆಯೂ ಇದ್ದ ಬಾಂಧವ್ಯವನ್ನು ಹೇಗೆ ವಿವರಿಸುವುದು! 2006ರ ಜುಲೈನಲ್ಲಿ ನಾವು ಪರಸ್ಪರ ವಿದಾಯ ಹೇಳಿದ ದಿನ ಹರಿದ ಕಣ್ಣೀರು ಮಾತ್ರವೇ ಅದನ್ನು ಅಷ್ಟೇ ಆಳವಾಗಿ, ಆಪ್ತವಾಗಿ ಅರ್ಥಮಾಡಿಕೊಳ್ಳಬಲ್ಲದೇನೋ? ಜಿಲ್ಲಾಧಿಕಾರಿ "ನಿಮಗೆ (ನಿಮ್ಮವರಿಂದ) ರಕ್ಷಣೆ ಬೇಕೇ?" ಎಂದು ಕೇಳಿದ್ದನ್ನು ಸಹಿಸಿಕೊಳ್ಳಲಾಗದೇ ನಾಗರಾಜ್ ಅವರ ಜೊತೆ ಚರ್ಚೆಗೇ ಬಿದ್ದಿದ್ದರು. ನಾನೇ ಎಳೆದಾಡುವ ಅಗತ್ಯವಿಲ್ಲವೆಂದು "ಅಂತಹ ಅಗತ್ಯವಿಲ್ಲ, ಬೇಕಿದ್ದರೆ ಹೇಳುತ್ತೇವೆ" ಎಂದು ಹೇಳಿ ಹೊರಬಂದೆವು. ಆದರೆ ಆ ನನ್ನ ಮಾತೇ ನನಗೆ ಕೆಡುಕೆನಿಸುತ್ತಿತ್ತು, ಮನಸ್ಸಲ್ಲೇ ನನ್ನ ಸಂಗಾತಿಗಳಿಗೆ 'ಸಾರಿ' ಎಂದು ಹೇಳಿಕೊಂಡೆ.

ಮರುದಿನ ಕೊಪ್ಪ ಕೋರ್ಟ್‌ನಲ್ಲಿ ನಮ್ಮನ್ನು, ಅದರಲ್ಲೂ ಮುಖ್ಯವಾಗಿ ನಾಗರಾಜರನ್ನು ನೋಡಲು ಹಲವರು ಬಂದಿದ್ದರು. ಅದರಲ್ಲಿ ಪತ್ರಿಕೆಯೊಂದರ ಸಂಪಾದಕರೂ ಆಗಿರುವ ಸಂಜೀವಣ್ಣ ಸಹ ಒಬ್ಬರು. ಅವರ ಬಗ್ಗೆ ಕೇಳಿದ್ದರೂ ನಾನು ಅವರನ್ನು ನೋಡಿರಲಿಲ್ಲ. ಅದೂ ಇದೂ ಮಾತಾಡುತ್ತಾ ಮಾತು ಪ್ರಭ ವಿಚಾರಕ್ಕೆ ಬಂತು. ಸಂಜೀವಣ್ಣ ಪ್ರಭ ಬಗ್ಗೆ ಮಾತಾಡುತ್ತಾ "ಪ್ರಭ ಸತ್ತುಹೋದಳಂತಲ್ಲ ಮಾರಾಯ್ರೇ" ಎಂದು ಪೇಚಾಡಿಕೊಂಡರು. ನನಗೆ ಕಷ್ಟವೆನಿಸುತ್ತಿತ್ತು, "ಇಲ್ಲ, ಪ್ರಭ ಸತ್ತಿಲ್ಲ, ನನಗಿರುವ ಮಾಹಿತಿ ಪ್ರಕಾರ ತುಂಬಾ ಸೀರಿಯಸ್ ಆಗಿದ್ದಿದ್ದು ನಿಜ. ಆದರೆ ಪವಾಡದಂತೆ ಮತ್ತೆ ಚೇತರಿಸಿಕೊಂಡಿದ್ದಾರಂತೆ" ಎಂದೆ. ಇನ್ಸ್‌ಪೆಕ್ಟರ್ ಹೆಗಡೆಯವರು ನಮ್ಮ ಮಾತುಗಳನ್ನು ಗಮನಿಸುತ್ತಲೇ ಇದ್ದರು. ಹಾಗಾಗಿಯೋ ಏನೋ ಸಂಜೀವಣ್ಣ ಹೆಚ್ಚು ಮಾತನಾಡಲಿಲ್ಲ. ನನ್ನ ಮನಸ್ಸು ಪ್ರಭ ಹೇಗಿರಬಹುದೆಂದು ಹುಡುಕಾಡುತ್ತಿತ್ತು. ಸರಳ ಸ್ವಭಾವದ ಪ್ರಭಾಳ ಬದುಕಿನಲ್ಲಿ ಅವಳಿಗೇ ಗೊತ್ತಿಲ್ಲದಂತೆ ಸಂಕೀರ್ಣತೆ ಸೇರ್ಪಡೆಯಾಗುತ್ತಾ ಹೋಯಿತು. ಅಂತರ್ಮುಖಿಯಾದ ಪ್ರಭ ಸುಲಭವಾಗಿ ತನ್ನ ಭಾವನೆಗಳನ್ನು ಹೊರಹಾಕುವವಳಲ್ಲ, ಜಟಿಲ ಪರಿಸ್ಥಿತಿಯ ಸಿಕ್ಕುಗಳನ್ನು ತಾನೂ ಬಿಡಿಸಿಕೊಳ್ಳಲಾಗದೇ, ಹೇಳಿ ಇತರರ ಆಸರೆಯನ್ನೂ ಪಡೆಯದೆ ಒದ್ದಾಡಿಕೊಳ್ಳುತ್ತಿದ್ದಳು. ನಾವು ಕಾಡಿನಿಂದ ಹೊರಡಬೇಕಿದ್ದ ಹಿಂದಿನ ದಿನ ನಮ್ಮ ಟೆಂಟಿಗೆ ಬಂದು ಕೈಹಿಡಿದುಕೊಂಡು ಮೌನವಾಗಿ ಕೂತು ಮೌನದಲ್ಲೇ ಮಾತಾಡಿ ಹೊರಟುಹೋಗಿದ್ದಳು.

ಮುಂಡಗಾರು ಲತಾ ಬಗ್ಗೆ ಅಧಿಕೃತವಾಗಿ ಮತ್ತು ಅನಧಿಕೃತವಾಗಿ ಪೊಲೀಸರು ಕುತೂಹಲದ ಪ್ರಶ್ನೆಗಳನ್ನು ಹಾಕುತ್ತಿದ್ದರು. ಲತಾಗೆ ಕಮ್ಯಾಂಡ್ ಮಾಡುವ ದೊಡ್ಡ ಗಂಟಲಿದೆ ಎಂದು ಮೆಚ್ಚಿಕೊಳ್ಳುತ್ತಿದ್ದರು. ಲತಾ ಗಟ್ಟಿಗಿತ್ತಿ, ಮನಸ್ಸು, ದೇಹ ಎರಡೂ ಗಟ್ಟಿಯೇ. ಆಕೆ ಇನ್ನೂ ಮನೆಯಲ್ಲಿದ್ದಾಗ ಕೆಂಪು ಅಳಿಲೊಂದನ್ನು ಸಾಕಿಕೊಂಡಿದ್ದಳಂತೆ. ಆಕೆ ಕೂಗಿದೊಡನೆ ಅದು ಮರದಿಂದ ಹಾರುತ್ತಾ ಬಂದು ಆಕೆಯ ಕೈಯಲ್ಲಿರುವುದನ್ನು ತೆಗೆದುಕೊಂಡು ಮತ್ತೆ ಮರ ಏರಿಬಿಡುತ್ತಿತ್ತಂತೆ. ಇಂತಹ ಹಲವು ವಿಚಾರಗಳನ್ನು ಆಕೆಯ ಬಗ್ಗೆ ಕೇಳಿದ್ದೆ. ಸಶಸ್ತ್ರ ದಳಕ್ಕೆ ಬಂದನಂತರ ಮೈಮುರಿದು ಕೆಲಸ ಮಾಡುತ್ತಿದ್ದಳು. ತನ್ನ ಕೆಲಸಕ್ಕೆ ಮನ್ನಣೆಯಿಲ್ಲ ಎಂದು ಸಣ್ಣಗೆ ಮುನಿಸುಕೊಳ್ಳುತ್ತಿದ್ದಳು. ಅಷ್ಟೇ ಬೇಗ ಅದನ್ನು ಮರೆತು ತನ್ನ ಕರ್ತವ್ಯಗಳನ್ನು ನಿಭಾಯಿಸಲು ಹೊರಡುತ್ತಿದ್ದಳು. ಆಯ್ಕೆ ಮಾಡಿಕೊಂಡ ಬದುಕಿನಲ್ಲಿ ದೃಢವಾಗಿ ನಿಂತು, ನಡೆಯುತ್ತಾ, ಎಡವುತ್ತಾ, ಒಂದೊಂದೆ ಹೆಜ್ಜೆ ಬೆಳೆಯುತ್ತಾ ಹೋದಂತೆ ನನ್ನ ಮನಸ್ಸು ಆಕೆಯನ್ನು ರೂಪಿಸಿಕೊಂಡಿದೆ.

ಪೊಲೀಸರು ಮತ್ತೆ ಮತ್ತೆ ನೆನಪಿಗೆ ತರುತ್ತಿದ್ದದ್ದು ಪದ್ಮನಾಭರನ್ನು. "ಕಾಲಿಗೆ ಪೆಟ್ಟಾಗಿದೆಯಂತೆ, ಹೌದೆ?" ಎಂದು ಕೇಳಿದರು. "ಹೌದಂತೆ. ವಿವರ ನನಗೂ ಗೊತ್ತಿಲ್ಲ" ಎಂದೆ. "ಅವರಿನ್ನೂ ಒಳಗಿದ್ದಾರೆಯೇ?" ಎಂದು ಕೇಳುತ್ತಿದ್ದರು. "ಒಳಗಿದ್ದಾರೋ, ಹೊರಗಿದ್ದಾರೋ ಗೊತ್ತಿಲ್ಲ, ಆದರೆ ಇರುತ್ತಾರೆ. ಅವರು ಗಟ್ಟಿಕುಳ" ಎಂದೆ. ಪದ್ಮನಾಭ ನನ್ನ ಮನಸ್ಸಿನಲ್ಲಿರುವುದೇ ಹಾಗೆ. ನಿಜ ಹೇಳಬೇಕೆಂದರೆ ನಮ್ಮಲ್ಲಿ ಹಲವರನ್ನು ಚಕಿತಗೊಳಿಸಿದ ವ್ಯಕ್ತಿ. ನ್ಯಾಷನಲ್ ಪಾರ್ಕ್ ವಿಚಾರಕ್ಕೆ ಕವಿರಂ ಪರವಾಗಿ ಕೆಲಸ ಮಾಡಲು ಹೋದವರು. ಗಟ್ಟಿಯಾಗಿ ಮಾತೂ ಆಡದ ವ್ಯಕ್ತಿ ಹೇಗೆ ಸಂಘಟಿಸುತ್ತಾರೆ ಎಂಬ ಅನುಮಾನ ನನ್ನ ಮನಸ್ಸಿನಲ್ಲಿಯೂ ಇತ್ತು, ಆದರೆ ನೋಡನೋಡುತ್ತಿದ್ದಂತೆ ಅವರು ಸಮರ್ಥ ನಾಯಕರಾಗಿ ಬೆಳೆದರು. ಆದಿವಾಸಿಗಳ ಆತ್ಮೀಯರಾಗಿಬಿಟ್ಟರು. ಯುವಕರ ಸ್ಫೂರ್ತಿಯಾದರು. ಹಲವರನ್ನು ಹೋರಾಟಕ್ಕೆ ಕರೆತಂದರು. ಕಷ್ಟನಷ್ಟಗಳಲ್ಲಿ ಅಲುಗಾಡದೆ ನಿಂತು ಬೆಳೆದರು. ಕಾಡಿನ ಬದುಕಿಗೆ ಅವರು ಎಷ್ಟು ಅಂಟಿಕೊಂಡಿದ್ದರೆಂದರೆ ನಗರಕ್ಕೆ ಬಂದಕೂಡಲೇ ಅವರಿಗೆ ತಲೆನೋವು ಪ್ರಾರಂಭವಾಗುತ್ತಿತ್ತು, ಕಾಡು ನೆಮ್ಮದಿ ನೀಡುತ್ತಿತ್ತು.

ಬಿ.ಜಿ.ಕೃಷ್ಣಮೂರ್ತಿಯ ಬಗ್ಗೆಯೂ ಪೊಲೀಸರಿಗೆ ವಿಶೇಷ ಆಸಕ್ತಿ, ಆದರೆ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬ ಸ್ಪಷ್ಟತೆಯಿಲ್ಲ, 'ಬಿಜಿ' ಒಳ್ಳೆ ವಕೀಲನಾಗಬೇಕೆಂದು ಆಳವಾದ ಬಯಕೆ ಹೊಂದಿದ್ದವರು. ಶಿವಮೊಗ್ಗದಲ್ಲಿ ಲಾ ಮುಗಿಸಿ ಬೆಂಗಳೂರಿನಲ್ಲಿ ಪ್ರಾಕ್ಟೀಸ್ ಮಾಡಲು ಬಂದವರು. ಪ್ರಾಕ್ಟೀಸ್ ಮಾಡಬೇಕೆಂದು ಒಂದು ಮನಸ್ಸು ಹೇಳುತ್ತಿದ್ದರೆ, ಹೋರಾಟ ಅವರ ಮತ್ತೊಂದು ಮನಸ್ಸನ್ನು ಸೆಳೆಯುತ್ತಿತ್ತು, ಬಿಎಂಐಸಿ ಹೋರಾಟ ಅವರನ್ನು ಪ್ರಾಕ್ಟೀಸ್ ಬಿಡಿಸಿತು.



ಅಷ್ಟುಹೊತ್ತಿಗೆ ಮಲೆನಾಡಿನಲ್ಲಿ ಸಶಸ್ತ್ರ ಹೋರಾಟ ಪ್ರಾರಂಭ ಮಾಡುವ ತೀರ್ಮಾನವಾದ್ದರಿಂದ ಮಲೆನಾಡಿನವರಾದ ಅವರಿಗೆ ಪಕ್ಷದ ಬುಲಾವ್ ಬಂತು. ಅವರೂ ಒಲ್ಲೆ ಎನ್ನಲಿಲ್ಲ. ಬಿ.ಜಿ. ಎಷ್ಟೇ ಬಿಜಿಯಾಗಿದ್ದರೂ ಅವರೊಳಗಿನ ಕವಿಗೆ ಸಮಯ ಕೊಡುತ್ತಿದ್ದರು. ಹಾಗಾಗಿಯೇ 'ಅಂಗುಲಿಮಾಲ' ಎಂಬ ಅದ್ಭುತ ನೀಳ್ಗವನ ಹುಟ್ಟಿಬಂದಿತು. ಇತ್ತೀಚೆಗೆ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಅವರ ಕವನವೊಂದು ಪ್ರಕಟವಾಗಿತ್ತು. ಶೀರ್ಷಿಕೆ ನೆನಪಾಗುತ್ತಿಲ್ಲ, ಅದು ಬದುಕಿನ ದ್ವಂದ್ವ, ದುಗುಡ ಮತ್ತು ಏರಿಳಿತಗಳನ್ನು ಸ್ಫುರಿಸುತ್ತಿತ್ತು, ಆದರೆ ಬಿಜಿ ಆ ಕವನದ ಮೂಲಕ ಮತ್ತೇನನ್ನಾದರೂ ಹೇಳಲು ಬಯಸುತ್ತಿದ್ದರಾ ಎಂಬುದು ಅರ್ಥವಾಗಲಿಲ್ಲ, ಬಿಜಿ ತನ್ನ ಕವನಗಳಂತೆ ಸ್ವಲ್ಪ ನಿಗೂಢವೇ.

ಈ ಆಲೋಚನೆಗಳ ಜೊತೆಜೊತೆಗೆ ನಮ್ಮನ್ನಗಲಿದ ಸಂಗಾತಿಗಳಾದ ಪಾರ್ವತಿ, ಹಾಜಿಮಾ, ಸಾಕೇತ್, ಶಿವಲಿಂಗು, ಅಜಿತ್, ಉಮೇಶ್, ದಿನಕರ್, ಗೌತಮ್, ಮನೋಹರ್, ಆನಂದ್... ನೆನಪುಗಳು ಒತ್ತೊರಿಸಿ ಬರತೊಡಗಿದವು. ಒಬ್ಬೊಬ್ಬರೂ ಒಂದೊಂದು ರೀತಿಯ ಅಮೂಲ್ಯ ಚೇತನಗಳು. ಪಾರ್ವತಿ ಪಾದರಸ ಇದ್ದಂತೆ. ಹಾಜಿಮಾ ನಿಷ್ಕಲ್ಮಶ ನೀರಿನಂತೆ. ಸಾಕೇತ್ ಆದರ್ಶದ ಸಂಕೇತದಂತೆ. ಶಿವಲಿಂಗು ಶಿಸ್ತಿನ ಸಿಪಾಯಿಯಂತೆ. ಅಜಿತ್ ಮಗುವಿನಂತೆ. ಗೌತಮ್ ಕನಸಿನಂತೆ. ದಿನಕರ್ ಕರ್ತವ್ಯದಂತೆ. ಮನೋಹರ್ ಮಮತೆಯಂತೆ. ಆನಂದ ನಗುವಿನಂತೆ... ಕವಿಯಂತೆ ಉತ್ಪ್ರೇಕ್ಷಿಸುತ್ತಿದ್ದೇನೆ ಎಂದುಕೊಳ್ಳಬೇಡಿ. ನಿಜವಾಗಲೂ ಅವರು ಇದ್ದದ್ದೇ ಹಾಗೆ. ನೋಡನೋಡುತ್ತಿದ್ದಂತೆ ಈ ಜೀವಸೆಲೆಗಳು ಕಣ್ಮರೆಯಾಗಿ ಹೋದವಲ್ಲ ಎಂದು ಮನಸ್ಸು ಒದ್ದಾಡುತ್ತದೆ. ಇದೇ ರೀತಿಯ ಇನ್ನಷ್ಟು ನಿಸ್ವಾರ್ಥಿ ಜೀವಗಳು ಕ್ರಾಂತಿಯ ಕನಸು ಹೊತ್ತು ಕಾಡಿನಲ್ಲಿ ಓಡಾಡುತ್ತಿವೆ.

ಇನ್ನಷ್ಟು ಜನರು ದೀರ್ಘಕಾಲದ ಸೆರೆವಾಸ ಮುಗಿಸುವ ಹಂತದಲ್ಲಿದ್ದಾರೆ. ಈ ಎಲ್ಲಾ ಸಂಗಾತಿಗಳ ಜೊತೆಯೂ ಇದ್ದು ಆಗ ನನ್ನ ಜೊತೆಗೂ ಇದ್ದ ಜೈಲ್ ಸಂಗಾತಿಗಳು "ದೇವೇಂದ್ರಪ್ಪ ತುಂಬಾ ತಿಳ್ಕೊಂಡಿದಾರೆ ಸಾರ್", "ಕೃಷ್ಣಣ್ಣ ನನ್ನ ಜೊತೆ ತುಂಬಾ ಆತ್ಮೀಯವಾಗಿದ್ದರು ಸಾರ್", "ಧಾರವಾಡದಲ್ಲಿ ಉಜ್ಜನಿಗೌಡ್ರು ನಾವು ಒಟ್ಟಿಗಿದ್ವಿ ಸಾರ್" ಎಂದೆಲ್ಲಾ ಹೇಳುತ್ತಿದ್ದರು. ನನ್ನನ್ನು ಕೋರ್ಟಿಗೆ ಕರೆದೊಯ್ಯುತ್ತಿದ್ದ ಡಿ.ಎ.ಆರ್. ಪೊಲೀಸರು "ನಂದಕುಮಾರ್ ತುಂಬಾ ಜೆಂಟಲ್‌ಮ್ಯಾನ್ ಬಿಡಿ ಸಾರ್" ಎಂದೆಲ್ಲಾ ಪ್ರತಿಕ್ರಿಯಿಸುತ್ತಿದ್ದರು. ನಮ್ಮ ಸಂಗಾತಿಗಳನ್ನು ಹೊಗಳುತ್ತಿದ್ದಾಗ ಮನಸ್ಸಿಗೆ ಹಿತವೆನಿಸುತ್ತಿತ್ತು. ಅವರಂತೆಯೇ ಕಷ್ಟನಷ್ಟಗಳನ್ನನುಭವಿಸಿ ಹೊರಬಂದಿರುವ ದಿಟ್ಟಯುವತಿಯರಾದ ಗಂಗಮ್ಮ, ಅನಿತಾ, ಆಶಾ, ಮಲ್ಲಿಕಾ, ಯಶೋದಾ ಮುಂತಾದವರೆಲ್ಲಾ ನೆನಪಿಗೆ ಬಂದರು. ಆರಲೂ ಬಯಸದ, ಬೆಳಗುವ ಹೆಚ್ಚು ಅವಕಾಶಗಳು ಇಲ್ಲದ ಮಿಣುಕು ಹಣತೆಗಳಂತೆ ಮನಸ್ಸಿಗೆ ಭಾಸವಾಗುತ್ತಿದ್ದರು. ಇವರ ಹಾಗೂ ಇವರಂತೆ ಇರುವ ಅನೇಕ ಒಡನಾಡಿಗಳ ಚೈತನ್ಯ ಸೋರಿಹೋಗುತ್ತಿರುವುದು, ನಾಶವಾಗುತ್ತಿರುವುದು, ಕಮರಿಹೋಗುತ್ತಿರುವುದು ಖೇದಕರ.

ನಮ್ಮ ಈ ಎಲ್ಲಾ ಸಂಗಾತಿಗಳು ನಮ್ಮ ಈ ತೀರ್ಮಾನದ ಬಗ್ಗೆ ಹೇಗೆ ಆಲೋಚಿಸುತ್ತಿರಬಹುದು ಎಂಬ ಪ್ರಶ್ನೆಯೂ ಮೂಡದಿರಲಿಲ್ಲ. "ಅವರು ಹೋದದ್ದರಿಂದ ಚಳವಳಿಗೆ ಯಾವ ನಷ್ಟವೂ ಇಲ್ಲ. ಅವರು ಅವಕಾಶವಾದಿಗಳು" ಎಂಬ ಸಿದ್ಧ ಮಾದರಿಯ ಪ್ರತಿಕ್ರಿಯೆಯನ್ನು ಮಾವೋವಾದಿ ಪಕ್ಷದ ನಾಯಕತ್ವ ನೀಡುತ್ತದೆ ಎಂಬುದು ನಮಗೆ ಗೊತ್ತು. (ಈ ಲೇಖನ ಬರೆಯುತ್ತಿರುವಾಗ ನನಗಿದ್ದ ನಿರೀಕ್ಷೆಗೂ ಮೀರಿದ ನಂಜು ಹಾಗೂ ಬಾಲಿಶತನದಿಂದ ಕೂಡಿದ ಹೇಳಿಕೆಯೊಂದು ಪಕ್ಷದ ನಾಯಕತ್ವದ ಕಡೆಯಿಂದ ಹೊರಬಿತ್ತು, ಅದು ಹಾಗಾಗುವುದರಲ್ಲಿ ಆಶ್ಚರ್ಯವೂ ಇಲ್ಲ, ಅದಕ್ಕೆ ಉತ್ತರಿಸುವ ಅಗತ್ಯವೂ ಇಲ್ಲವೆನಿಸುತ್ತದೆ. ನಮ್ಮ ನಿಲುವು ಮತ್ತು ಕ್ರಮಗಳ ಬಗ್ಗೆ ನಮಗೆ ಯಾವ ಅಳುಕೂ ಇಲ್ಲ, ಆದರೆ ನಮ್ಮೊಡನೆ ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದ ಸಂಗಾತಿಗಳು ಮಾತ್ರ ಹೇಗೆ ಗ್ರಹಿಸುತ್ತಾರೆ ಎಂಬ ಪ್ರಶ್ನೆ ಮಾತ್ರ ಒಳಗಿದೆ. ಹಾಗಾಗಿ ಆ ಸಂಗಾತಿಗಳೊಡನೆ ಒಂದೆರಡು ವಿಚಾರಗಳನ್ನು ಹಂಚಿಕೊಳ್ಳಬೇಕಿದೆ.

ಸಂಗಾತಿಗಳೇ,

ನಾವು ಬಹಿರಂಗವಾಗುವ ಪ್ರಕ್ರಿಯೆಯಲ್ಲಿ ನಡೆದ ವಿದ್ಯಮಾನಗಳು, ಚರ್ಚೆಗಳು, ವರದಿಗಳನ್ನೂ ನೋಡಿ ನಿಮಗೆ ಕಸಿವಿಸಿಯಾಗಿರಲಿಕ್ಕೂ ಸಾಕು. "ಏನಪ್ಪಾ, ನಾವು ಮಾಡುತ್ತಿರುವ ಹೋರಾಟಕ್ಕೆ ಅರ್ಥವಿಲ್ಲ ಎಂಬ ಅಭಿಪ್ರಾಯವನ್ನು ಬಲಗೊಳಿಸಿಬಿಟ್ಟರು" ಎಂದು ಬೇಸರವೂ ಆಗಿರಬಹುದು. ನಮ್ಮ ಮಾತು ಮತ್ತು ಹೇಳಿಕೆಗಳಿಂದ ನಿಮ್ಮ ಘನತೆಗೆ ಧಕ್ಕೆಯಾಗಿದ್ದರೆ, ಮನಸ್ಸಿಗೆ ನೋವಾಗಿದ್ದರೆ ಅದಕ್ಕಾಗಿ ತಲೆಬಾಗಿ ಕ್ಷಮೆಕೋರುತ್ತೇವೆ. ನಿಮ್ಮ ಹೋರಾಟದ ಸಂಕಲ್ಪವನ್ನಾಗಲೀ, ನಿಮ್ಮ ವ್ಯಕ್ತಿತ್ವವನ್ನಾಗಲೀ, ಕಿಂಚಿತ್ತೂ ಘಾಸಿಗೊಳಿಸುವ ಉದ್ದೇಶ ನಮಗಿಲ್ಲ, ಅಂತಹ ಸಂದರ್ಭ ಎದುರಾದಾಗಲೆಲ್ಲಾ ನಾವು ತಪ್ಪು ಗ್ರಹಿಕೆಯನ್ನು ಸರಿತಿದ್ದಲು ಪ್ರಯತ್ನಿಸುತ್ತಲೇ ಬಂದಿದ್ದೇವೆ. ಸಂದರ್ಭದ ಇಕ್ಕಟ್ಟಿನಲ್ಲಿ ಸಿಕ್ಕಿ, ಅದನ್ನು ಮಾಡಲಾಗದೇ ಹೋದಾಗ ಪೇಚಾಡಿಕೊಂಡಿದ್ದೇವೆ. ಆದರೆ ಪಕ್ಷ ಅಳವಡಿಸುತ್ತಿರುವ ಪಥ ಸಮಾಜದ ದೃಷ್ಟಿಯಿಂದ, ಸಂಗಾತಿಗಳ ದೃಷ್ಟಿಯಿಂದ ಹಾಗೂ ಸ್ವಯಂ ಪಕ್ಷದ ದೃಷ್ಟಿಯಿಂದ ಅನಾಹುತಕಾ[illegible] ಎಂಬ ನಮ್ಮ ನಿಲುವನ್ನು ಬಹಿರಂಗವಾಗಿಯ[illegible] ಮುಂದಿಡುವುದು ಇಂದು ಅನಿವಾರ್ಯವಾಗಿದೆ.

ನಿಮಗೆಲ್ಲಾ ಗೊತ್ತಿರುವಂತೆ ನಮ್ಮ ಈ ನಿಲು[illegible] ಇಂದು ನಿನ್ನೆಯದಲ್ಲ, 2001ರಿಂದಲೂ ಇದನ್ನು ಪಕ್ಷದೊ[illegible] ಬಲವಾಗಿ ಪ್ರತಿಪಾದಿಸಿದ್ದೇವೆ. "ಇಂದು ಕರ್ನಾಟಕ[illegible] ತುರ್ತಾಗಿ ಬೇಕಿರುವುದು ಸಶಸ್ತ್ರ ಹೋರಾಟವಲ್ಲ, ವಿಶಾ[illegible] ಹಾಗೂ ದಿಟ್ಟ ಪ್ರಜಾ ಚಳವಳಿ" ಎಂಬುದನ್ನು ಸಾರಿಸಾ[illegible] ಹೇಳಿದ್ದೇವೆ. ಹಲವಾರು ಸುತ್ತಿನ ಚರ್ಚೆ ಹಾಗೂ ಅನುಭವ[illegible] ನಂತರದಲ್ಲಿ ಪಕ್ಷದ ನಾಯಕತ್ವ ತನ್ನ ಮೊಂಡು ನಿಲುವನ್ನು ಬದಲಿಸಿಕೊಳ್ಳಲು ಸಿದ್ಧವಿಲ್ಲದ್ದರಿಂದ ಹೊರಬಂದಿದ್ದೇವೆ. ಹೊರಬಂದ ನಂತರವೂ ನಾವದನ್ನು ಸಾರ್ವಜನಿಕ ಚರ್ಚೆ[illegible] ಒಯ್ಯಲಿಲ್ಲ. ಮಾವೋವಾದಿ ಪಕ್ಷ ನಮ್ಮನ[illegible] 'ಅವಕಾಶವಾದಿ'ಗಳೆಂದು ಅವಹೇಳನ ಮಾಡಿ ಪತ್ರಿಕಾಹೇ[illegible] ನೀಡಿದಾಗಲೂ ನಾವು ಬೇಕೆಂದೇ ಪ್ರತಿಕ್ರಿಯಿಸಲಿಲ್ಲ. ನಾ[illegible] ಪಕ್ಷದಲ್ಲೇ ಇದ್ದೇವೆಂದುಕೊಂಡು ಪೊಲೀಸರು ನಮ್ಮ ಮೇ[illegible] ಸುಳ್ಳು ಕೇಸುಗಳನ್ನು ಹಾಕುವುದನ್ನು ಮುಂದುವರೆಸಿದ್ದರೂ ನಾವು ಸ್ಪಷ್ಟನೆ ನೀಡಲು ಹೋಗಲಿಲ್ಲ.

ಆದರೆ ಇಂದು ಅದನ್ನು ಬಹಿರಂಗಗೊಳಿಸು[illegible] ಅನಿವಾರ್ಯತೆ ಎದುರಾಗಿದೆ. ಅದು ಖಂಡಿತಾ ವ್ಯಕ್ತಿಗ[illegible] ಕಾರಣಕ್ಕಲ್ಲ, ಇಂದಿನ ಕರ್ನಾಟಕದ ಸಂದರ್ಭಕ್ಕೆ ಸ್ಪಂದಿಸಲು ಪ್ರಜಾ ಚಳವಳಿಯನ್ನು ಬಲಪಡಿಸಲು ಈ ನ[illegible] ಅತ್ಯಗತ್ಯವಾಗಿದೆ. ಹಾಗಾಗಿ ಇದನ್ನು ಸಮಯಸಾಧ[illegible] ನಿಲುವಾಗಿಯಲ್ಲದೆ ಹೋರಾಟದ ಮತ್ತು ವೈಚಾರಿ[illegible] ನಿಲುವಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಸಂಗಾತಿಗಳೇ,

ನಮ್ಮ ಕನಸುಗಳಿಗಾಗಿ ಬದುಕುವುದು ಕ್ರಾಂತಿಕಾರಿಗ[illegible] ಲಕ್ಷಣವಲ್ಲ, ಜನರ ಕನಸುಗಳಿಗಾಗಿ ಶ್ರಮಿಸುವುದ[illegible] ಕ್ರಾಂತಿಕಾರಿಗಳ ಲಕ್ಷಣ. ಕರ್ನಾಟಕದ ಹೋರಾಟ ನಿರ[illegible] ಜನತೆ (ನಿಷ್ಕ್ರಿಯ ಜನತೆಯೂ ಅಲ್ಲ, ಒಂದು ಪ್ರದೇಶ[illegible] ಜನತೆಯೂ ಅಲ್ಲ, ಸಮಸ್ತ ಕರ್ನಾಟಕದ ಹೋರಾಟನಿರ[illegible] ಜನತೆ) ಏನು ಬಯಸುತ್ತಿದೆ ಎಂದು ಗ್ರಹಿಸುವುದು ಬಹ[illegible] ಮುಖ್ಯ. ಕರ್ನಾಟಕದಲ್ಲಿ ನಾವು ಎಡವಿದ್ದೇ ಅ[illegible] ಕರ್ನಾಟಕದಲ್ಲಿ ದಲಿತ ಚಳವಳಿಯ ಅಲೆ ಅಪ್ಪಳಿಸುತ್ತಿದ್ದಾ[illegible] ನಾವದರಲ್ಲಿ ಧುಮುಕದೆ ಅದರ ವಿಮರ್ಶಕರಾಗಿ ದೂರ[illegible] ಉಳಿದೆವು. ರೈತಸಂಘದ ನೇತೃತ್ವದಲ್ಲಿ ರೈತರು ಬಾರುಕೋ[illegible] ಹಿಡಿದು ವಿಧಾನಸೌಧಕ್ಕೆ ಲಗ್ಗೆ ಇಡುತ್ತಿದ್ದಾಗಲೂ ನಾ[illegible] ಅವರ ದನಿಗೆ ದನಿಗೂಡಿಸಲಿಲ್ಲ, ಕಾರ್ಮಿಕರು ನೂರಾ[illegible] ದಿನಗಳ ಮುಷ್ಕರ ಹೂಡಿದಾಗಲೂ ಅದರ ನಾಯಕತ್ವದಲ್ಲಿ[illegible] ಸಿಪಿಐ-ಸಿಪಿಎಂನವರನ್ನು ಬಯ್ಯುವುದರಲ್ಲೇ ತೃಪ್ತಿಗೊಂಡೆವು[illegible] ಉದ್ದಕ್ಕೂ ಕರ್ನಾಟಕದಲ್ಲಿ ನಡೆಯುತ್ತಿದ್ದ ಜ[illegible] ಹೋರಾಟಗಳಿಂದ (ಅರ್ಥಾತ್ ಹೋರಾಟನಿರ[illegible] ಜನತೆಯಿಂದ) ದೂರ ಉಳಿದು ನಮ್ಮದೇ ಆದ 'ಶು[illegible] ಮಾದರಿಯ' ಹೋರಾಟದ ಪ್ರತ್ಯೇಕ ದ್ವೀಪವನ್ನು ಬೆಳೆಸ[illegible] ಪ್ರಯತ್ನಿಸಿದೆವು. ಕೊನೆಗೆ ನಮ್ಮ ದ್ವೀಪದಲ್ಲಿ ನಾ[illegible] ಬಂಧಿಗಳಾದೆವು. ದ್ವೀಪದಿಂದ ದ್ವೀಪಕ್ಕೆ ಜಿಗಿಯುತ್ತಿದ್ದೆ[illegible] ಹೊರತು ಸಾಗರಕ್ಕೆ ಇಳಿಯಲೇ ಇಲ್ಲ.

90ರ ದಶಕದಲ್ಲಿ ಕವಿರಂ ಕೆಲಸದ ಭಾಗವ[illegible] ಕರ್ನಾಟಕದ ವಿವಿಧ ಜನಪರ ಶಕ್ತಿಗಳೊಡಗೂಡಿ ಹಲ[illegible] ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಬಂಡವಾಳಶಾ[illegible] ವಿರೋಧಿ, ಕೋಮುವಾದ ವಿರೋಧಿ ಹಾಗೂ ಜನಪರವಾ[illegible] ಹೋರಾಟಗಳಲ್ಲಿ ತೊಡಗಿಸಿಕೊಂಡೆವು. ಹೋರಾಟನಿರ[illegible] ಶಕ್ತಿಗಳೆಲ್ಲಾ ಒಗ್ಗೂಡತೊಡಗಿದ್ದವು. ಎಲ್ಲರ ಸಂಯು[illegible] ಪ್ರಯತ್ನದಿಂದಾಗಿ ಹಲವು ಹೋರಾಟಗಳು ಯಶಸ್ವಿಯ[illegible] ಆಗತೊಡಗಿದವು. ಈ ಪ್ರಕ್ರಿಯೆ ಕರ್ನಾಟಕದ [illegible] ಹೋರಾಟದಲ್ಲಿ ಹೊಸ ವಿದ್ಯಮಾನವನ್ನು ಹುಟ್ಟುಹಾಕು[illegible] ಎಲ್ಲಾ ಲಕ್ಷಣಗಳೂ ಇದ್ದವು. ಆದರೆ ಸಶಸ್ತ್ರ ಹೋರಾ[illegible] ಗೀಳು ನಮ್ಮನ್ನು ಬಿಡಲಿಲ್ಲ, ಪಕ್ಷದ ನಾಯಕತ್ವ ಮಾಡಿ[illegible] ದುಡುಕಿನ ಸಶಸ್ತ್ರ ಹೋರಾಟದ ಸ್ವಯಂಕ[illegible] ಅಪರಾಧದಿಂದಾಗಿ ಕಳೆದುಕೊಂಡಿದ್ದು ನಮ್ಮ ಅಮೂ[illegible] ಸಂಗಾತಿಗಳನ್ನು ಮಾತ್ರವಲ್ಲ, ಕರ್ನಾಟಕದಲ್ಲಿ ಹೋರಾ[illegible] ಹೊಸ ಅಲೆಯನ್ನು ಹುಟ್ಟುಹಾಕಬಹುದಾಗಿದ್ದ ಹೊ[illegible] ಅವಕಾಶವನ್ನು.

ಪ್ರಜಾ ಹೋರಾಟದ ಸಾಗರ ಇಂದು ಕ[illegible] ರಾಚುವಷ್ಟು ಕಲುಷಿತಗೊಂಡಿರುವುದು ವಾಸ್ತ[illegible] ಅದರಲ್ಲಿರುವ ಕೊಳೆ ನಮಗೂ ಅಂಟುವ ಅಪಾ[illegible] ಇಲ್ಲದಿಲ್ಲ, ಹಾಗಂತ ಮಡಿವಂತರಾಗಿ ದಂಡೆಯ ಮೇ[illegible] ನಿಂತರೆ ಸಾಗರಮಂಥನ ನಡೆಯುವುದಿಲ್ಲ, ಬಲಪಂಥೀ[illegible]

ಹರಾ ಬಿರುಸು ಪಡೆಯುತ್ತಿದೆ. ಧಾರ್ಮಿಕ ಮುಖವಾದ 'ದೈವ'ತೆಗಳೆಲ್ಲಾ ಒಗ್ಗೂಡಿ ಜನಮಾನಸವನ್ನು ಾಹಲಗೊಳಿಸುತ್ತಿದ್ದಾರೆ. ಅದಕ್ಕೆದುರಾಗಿ ಬಲವಾದ ಾಜಮಂಥನ ಕ್ರಿಯೆ ನಡೆಯದಿದ್ದರೆ ವಿಷದಿಂದ ೃತವನ್ನು ಪ್ರತ್ಯೇಕಿಸಲು ಆಗುವುದಿಲ್ಲ. 'ಅಸುರರು' ೃತವೆಂದು ತಿಳಿದು ವಿಷವನ್ನೇ ಕುಡಿಯುವುದು ವುದಿಲ್ಲ.

ಇದು ನಮ್ಮ ಮುಂದಿರುವ ಕಠೋರ ಸತ್ಯ. ೀರಾಟದಲ್ಲಿರುವ, ಹೋರಾಡಲು ಬಯಸುತ್ತಿರುವ ಸಮಸ್ತ ಪಿತರ ಜೊತೆಗೂಡಿ ಪ್ರತಿಗಾಮಿ ಪಂಥಕ್ಕೆ ವಿರುದ್ಧವಾಗಿ ಪಂಥವನ್ನು ಬಲಗೊಳಿಸದಿದ್ದರೆ ಶೋಷಿತರ ನತಿಯನ್ನು ತಡೆಗಟ್ಟಲು ಸಾಧ್ಯವಿಲ್ಲ.

ಈ ವಿಷಮ ಪರಿಸ್ಥಿತಿಯಲ್ಲಿ ನಾವು ಡಬಹುದಾದ್ದೇನು? ಎಂದು ಪ್ರತಿಯೊಬ್ಬ ೀರಾಟಗಾರನೂ ಕೇಳಿಕೊಳ್ಳಬೇಕು. ನಾವು ಮಾತ್ರವೇ ಡವನ್ನು ಸೃಷ್ಟಿಸುತ್ತೇವೆ ಎಂಬ 'ಅಹಂ'ನಿಂದ ನಾವು ರಬರಬೇಕು. ನಾವು ಮಾತ್ರವೇ ನಿಜವಾದ ತಿಕಾರಿಗಳೆಂಬ ಭ್ರಾಮಕ 'ಸಿಂಹಾಸನ'ದಿಂದ ಳಿಯಬೇಕು. ಸ್ಥಳ ಹಾಗೂ ಸಂದರ್ಭಾತೀತವಾಗಿ ಕಾಲದಲ್ಲೂ, ಎಲ್ಲಾ ಪ್ರದೇಶಗಳಲ್ಲೂ ಸಶಸ್ತ್ರ ೀರಾಟವೇ ಏಕೈಕ (ಅಥವಾ ಪ್ರಧಾನ) ಹೋರಾಟರೂಪ ಜಡಸಿದ್ಧಾಂತದಿಂದ ಬಿಡಿಸಿಕೊಳ್ಳಬೇಕು. ಆಗ ತ್ರವೇ ಎಲ್ಲರೊಡಗೂಡಿ ಇಂದು ಹಾಗೂ ಇಲ್ಲಿ ನಾವು ಡಬಹುದಾದುದೇನು ಎಂಬ ಪ್ರಶ್ನೆ ಪ್ರಾಮಾಣಿಕವಾಗಿ ಮುಂದೆ ತೆರೆದುಕೊಳ್ಳುತ್ತದೆ. ಯಾವ ಸಂದೇಹವೂ ದೆ ಕರ್ನಾಟಕಕ್ಕೆ ಇಂದು ಬೇಕಿರುವುದು ಎಲ್ಲಾ ೀರಾಟ ಶಕ್ತಿಗಳನ್ನು ಒಗ್ಗೂಡಿಸಬಲ್ಲ ವಿಶಾಲ, ಐಕ್ಯ ಪ್ರಜಾ ಚಳವಳಿ. ಸಮುದ್ರಮಂಥನದ ಅಸುರರ ಸಿದ್ಧವಾಗುವುದು ಇಲ್ಲಿನಿಂದಲೇ. ಈ ಪಡೆಗೆ ನಿಮ್ಮಂಥ ಗಳ ಅಗತ್ಯ ತುಂಬಾ ಇದೆ. ಈ ಕಾಲದ ಕರೆಯನ್ನು ಕರಿಸುವುದು ನಿಜಾರ್ಥದಲ್ಲಿ ಜನಹೋರಾಟಕ್ಕೆ ಮಾಡುವ ಚಾರವೇ ಆಗಿದೆ.

ಪ್ರಶ್ನೆಯೊಂದು ಉದ್ಭವಿಸುವುದು ಸಹಜ. ಒಂದು ನ್ಯಾಯದಕ್ಕೆ ಸಿದ್ಧವಾದರೂ ಸಾಧ್ಯತೆ ಎಲ್ಲಿದೆ? ಮನಸ್ಸಿದ್ದರೆ ರ್ಗ. ಒಮ್ಮೆ ಈ ನಿಟ್ಟಿನಲ್ಲಿ ಒಂದು ಗಂಭೀರ ಯತ್ನವನ್ನಾದರೂ ಮಾಡಿನೋಡಿ. ಇಡೀ ಕರ್ನಾಟಕದ ೀರಾಟನಿರತ ಜನತೆ ನಿಮ್ಮನ್ನು ಬಿಚ್ಚುಮನಸ್ಸಿನಿಂದ ತಿಸಲು ಸಿದ್ಧವಿರುತ್ತದೆ. ನಾವು ತೆಗೆದುಕೊಂಡ ಪ್ರಕ್ರಿಯೆಗೆ ಾದ ಅಭೂತಪೂರ್ವ ಪ್ರತಿಕ್ರಿಯೆ ನಮ್ಮ ಸಾಧನೆಯೂ ನೀಚ ಲಾಬಿಯೂ ಅಲ್ಲ, ಅದು ಇಂದಿನ ಸಂದರ್ಭದ ಸ ಸ್ಪಂದನೆ. ಪರಿಸ್ಥಿತಿ ಬದಲಾಗುತ್ತಿರುವುದರ ಸೂಚನೆ. ಗಾಮಿಗಳು ಬೆಳೆಯುತ್ತಿರುವ, ಪುರೋಗಾಮಿ ಶಕ್ತಿಗಳು ರ್ಬಲವಾಗಿರುವ, ಜನರ ಸಂಕಷ್ಟಗಳು ಹೆಚ್ಚುತ್ತಿರುವ ದರ್ಭದಲ್ಲಿ ಹೊಸದೇನಾದರೂ ಮಾಡಬೇಕು ಎಂಬ ಮಾಣಿಕ ಹಪಹಪಿಕೆಯ ಅಭಿವ್ಯಕ್ತಿ. ಹೀಗಾಗಿಯೇ ಕಾಲದ ಕರೆಗೆ ನೀವು ಓಗೊಟ್ಟರೆ ಕಾಲದ ಪ್ರತಿಧ್ವನಿ ಮ್ಮಟ್ಟಿಗಿರುತ್ತದೆ.

ಈ ನಿರ್ಧಾರಕ್ಕೆ ಇದಕ್ಕಿಂತಲೂ ಪೂರಕವಾದ ಸಂದರ್ಭ ವ ವರ್ಷಗಳಲ್ಲಂತೂ ಬರಲು ಸಾಧ್ಯವಿಲ್ಲ. ಮುಂದಿನ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಮತ್ತೆ ಅತ್ಯಂತ ಪ್ರತಿಗಾಮಿ ರವೇ ಅಧಿಕಾರಕ್ಕೆ ಬರಬಹುದು. ಬರುವ ಸಾಧ್ಯತೆಗಳು ಾಗಿವೆ. ದ್ವೀಪದಿಂದ ಹೊರಬಂದು ವಿಶಾಲ ಜನತೆಯ ತೆ ಒಗ್ಗೂಡದಿದ್ದರೆ ಹೋರಾಟಗಳಿಂದ ಪ್ರತ್ಯೇಕಗೊಂಡು, ಗಳಿಂದ ಸುತ್ತುವರೆಯಲ್ಪಟ್ಟು, ಅಸ್ತಿತ್ವಕ್ಕಾಗಿ ಸಂಘರ್ಷ ಸುತ್ತಾ ಉಳಿದುಹೋಗುವ ಅಪಾಯ ಎದುರಿಗಿದೆ.

ಕೆಲವೇ ತಿಂಗಳ ಹಿಂದೆ "ನಾವು ಮಾತುಕತೆಗೆ ಸಿದ್ಧ" ಹೇಳಿಕೆಯನ್ನು ಮಾವೋವಾದಿ ಪಕ್ಷದ ಕೇಂದ್ರ ತಿಯೇ ಮುಂದಿಟ್ಟಿತ್ತು. ಯಾರ ಮುಂದೆ? ಬಿಜೆಪಿ ರದ ಮುಂದೆ. ರಾಜನಾಥ್ ಸಿಂಗ್ ಕಡೆಯಿಂದ ಕ್ಕೆ ಹೊಡೆದಂತೆ "ಶಸ್ತ್ರಾಸ್ತ್ರ ತೊರೆದರೆ ಮಾತ್ರ ತುಕತೆ" ಎಂಬ ಪ್ರತಿಕ್ರಿಯೆ ಬಂತು. ಕರ್ನಾಟಕದಲ್ಲಿ ಗ್ರೆಸ್ ಸರ್ಕಾರವಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿ. ಮಾತುಕತೆಗೆ 'ಒಕೆ' ಎನ್ನುವ ಪಕ್ಷ ಇಲ್ಲಿ ಮಾತ್ರ ' ಎನ್ನಲು ಕಾರಣವೇನು? 'ಶಾಂತಿಗಾಗಿ ನಾಗರಿಕರ ಕೆ' ಮುಂದಿಟ್ಟ ಕರೆಯನ್ನೂ ಸಹ ಸರಿಯಾದ ನಲ್ಲಿ ಅರ್ಥಮಾಡಿಕೊಳ್ಳದೆ "ಶಸ್ತ್ರ ಬಿಟ್ಟು ಮಾತುಕತೆಗೆ ಎಂದು ಹೇಳುತ್ತಿದ್ದಾರೆ" ಎಂದು ರಾಜನಾಥ್ ಸಿಂಗ್‌ನ ಸಂತೆಯೇ ಗ್ರಹಿಸಿದರೆ ಹೇಗೆ? ಹೇಗಾದರೂ ಬಸ್ಸ್ ಆಶಯ ಹೋರಾಟಗಾರರ ಪ್ರಾಮಾಣಿಕ ತಂಡ ವಾಗುಳಿಯದೆ, ಅನಗತ್ಯ ರಕ್ತಪಾತಕ್ಕೆ ದಾರಿಯಾಗದೆ, ಶಕ್ತಿಗಳ ಐಕ್ಯ ಹೋರಾಟಕ್ಕೆ ಎಲ್ಲರೂ ಒಗ್ಗೂಡಬೇಕು

ತುಡಿತವನ್ನು ಗ್ರಹಿಸದ ಧಾರ್ಷ್ಟ್ಯ ಯಾವ ಚಳವಳಿಗೂ ಒಳಿತನ್ನು ತರುವುದಿಲ್ಲ. ಮಾವೋವಾದಿ ಚಳವಳಿ ಈ ವಿವೇಕವನ್ನೇ ಕಳೆದುಕೊಂಡಿರುವುದು ದುರಂತ ಮತ್ತು ವಿಷಾದನೀಯ.

ನಮ್ಮ ತಿಳವಳಿಕೆಯಲ್ಲಿ ವಿವೇಕ ಮತ್ತು ಅವಿವೇಕದ ನಡುವೆ ವಿಭಜನೆ ಬರಬೇಕು ಎಂದೇ ನಾನು ಬಯಸುತ್ತೇನೆ. ದ್ವೇಷದ ಕಾರಣಕ್ಕೂ ಅಲ್ಲ, ಸ್ವಾರ್ಥದ ಕಾರಣಕ್ಕೂ ಅಲ್ಲ, ಚಳವಳಿಯ ಕಾರಣಕ್ಕೆ. ಕಾಡಿನಲ್ಲಿರುವ ನನ್ನ ಸಂಗಾತಿಗಳ ಸಾಮರ್ಥ್ಯ ಅರ್ಥವಿಲ್ಲದ ಅಲೆದಾಟದಲ್ಲಿ ಚೆಲ್ಲಾಪಿಲ್ಲಿಯಾಗದೆ ಜನಹೋರಾಟದ ಚೈತನ್ಯವಾಗಿ ಮೂಡಿಬರಬೇಕು ಎಂಬ ಪ್ರಾಮಾಣಿಕ ಕಾಳಜಿಯಿಂದಾಗಿ. ನಾಯಕತ್ವ ನಿಂತುಹೋಗಿದೆ. ರೊಟೀನ್ ಯೋಜನೆಗಳನ್ನು ಹಾಕುವುದನ್ನು ಬಿಟ್ಟು ಹೊಸ ತಿರುವನ್ನು ನೀಡಲಾಗುತ್ತಿಲ್ಲ. ಸಂಗಾತಿಗಳು ಜಾಗೃತಗೊಳ್ಳದೆ ಸಂದರ್ಭದ ಈ ಕರೆಗೆ ಓಗೊಡದೆ ಚಲನೆ ಸಾಧ್ಯವಿಲ್ಲ. ನಮ್ಮೆದುರು ಬಂದಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಕನಸಿಗೆಂದಲ್ಲದೆ ಜನರ ಕನಸುಗಳಿಗಾಗಿ ಶ್ರಮಿಸಲಾಗುವುದಿಲ್ಲ.

ನಿಷ್ಠುರ ಮಾತುಗಳಿಗಾಗಿ ಕ್ಷಮೆಕೋರುತ್ತೇನೆ. ಒಂದು ವೇಳೆ ನಾಯಕತ್ವವೇ ಮುಂದೆ ಬಂದು ನನ್ನ ಮಾತಿಗೆ ಎಂದಲ್ಲದೆ ಕರ್ನಾಟಕದ ಸಮಸ್ತ ಹೋರಾಟಗಾರರ ಮಾತಿಗೆ ಓಗೊಟ್ಟರೆ ಅವರ ಬಳಿ ತಲೆಬಾಗಿ ಕ್ಷಮೆ ಕೋರುತ್ತೇನೆ.

ಭಿನ್ನ ನಿಲುವುಗಳ ಹೊರತಾಗಿಯೂ ಭಾವನಾತ್ಮಕ ಸಂಬಂಧವನ್ನು ಹರಿದುಕೊಂಡಿಲ್ಲದ ಸಂಗಾತಿಗಳು ನನ್ನ ಈ ಮಾತುಗಳನ್ನು 'ದ್ರೋಹಿ'ಯ ಮಾತುಗಳೆಂದು ಪರಿಗಣಿಸುವುದಿಲ್ಲ ಎಂಬ ವಿಶ್ವಾಸವಿದೆ.

2006ರ ಜುಲೈ **16**ರ ಆ ದಿನ ಕಣ್ಣಮುಂದೆ ಕಟ್ಟಿದಂತಿದೆ. ದೀರ್ಘಕಾಲದ ಸೈದ್ಧಾಂತಿಕ ಸಂಘರ್ಷದ ನಂತರವೂ ಪಕ್ಷದ ನಾಯಕತ್ವ ತನ್ನ ಜಡ ನಿಲುವನ್ನು ಮಾರ್ಪಾಡು ಮಾಡಿಕೊಳ್ಳುವ ಯಾವ ಸೂಚನೆಯೂ ಕಾಣದಿದ್ದಾಗ 'ಪಕ್ಷದಿಂದ ಹೊರನಡೆದು ಸ್ವತಂತ್ರ ಪ್ರಯತ್ನ ಪ್ರಾರಂಭಿಸುವ' ನಮ್ಮ ನಿಲುವನ್ನು ಕಣ್ಣೀರೊಂದಿಗೇನೆ ಮುಂದಿಟ್ಟೆವು. ನಮ್ಮ ಈ ತೀರ್ಮಾನ ಹಲವು ಸಂಗಾತಿಗಳಿಗೆ ಶಾಕ್ ಆಗಿ ಸಭೆಯಲ್ಲಿ ಕಣ್ಣೀರ ಕೋಡಿಯೇ ಹರಿದಿತ್ತು. ನಾಯಕತ್ವ ನಮ್ಮನ್ನು 'ಅವಕಾಶವಾದಿಗಳು', 'ಪರಿಷ್ಕರಣವಾದಿಗಳು'. 'ಪಲಾಯನವಾದಿಗಳು' ಮುಂತಾದ ಏನೆಲ್ಲಾ ಪದಗಳನ್ನು ಬಳಸಿ ನಮ್ಮನ್ನು ಪೈಶಾಚೀಕರಿಸಲು ಪ್ರಯತ್ನಿಸಿದರೂ ಸಂಗಾತಿಗಳ ಹೃದಯ ನಮ್ಮನ್ನು ಅರ್ಥಮಾಡಿಕೊಂಡಿದ್ದವು. ಶಿಸ್ತುಬದ್ಧ ಪಕ್ಷವೊಂದರಲ್ಲಿ ಭಿನ್ನಮತ ಎತ್ತುವುದು ಸಹ ಬಹಳ ಕಷ್ಟ. ಸಂಗಾತಿಗಳ ಈ ಇಕ್ಕಟ್ಟು ನಮಗೂ ಅರ್ಥವಾಗಿತ್ತು. ಸಂಗಾತಿಗಳನ್ನು ಕಾಡಲ್ಲಿ ಬಿಟ್ಟು ಹೊರಡುವುದು ನಮಗೂ ವಿವರಿಸಲು ಅಸಾಧ್ಯವಾದಷ್ಟು ಕಷ್ಟವಾಗಿತ್ತು. ನೆಲ್ಮೆಯ ಸಂಗಾತಿಗಳನ್ನೂ, ಹೆಮ್ಮೆಯ ಪಕ್ಷವನ್ನೂ ತೊರೆದು ಹೊರಡಲೇಬೇಕಿತ್ತು.

ಏತಕ್ಕಾಗಿ?

ಅಂದಿನ ನಾಯಕತ್ವದ ಪ್ರಕಾರ 'ಮಧ್ಯಮವರ್ಗದ ಬದುಕಿನಲ್ಲಿ ಸೆಟಲ್ ಆಗುವುದಕ್ಕಾಗಿ'. ನಮ್ಮ ಪ್ರಕಾರ ಜನರೊಟ್ಟಿಗೆ ಬೆರೆತು ಜನಚಳವಳಿಯನ್ನು ಬಲಪಡಿಸಲಿಕ್ಕಾಗಿ.

ನಮ್ಮ ಅಂದಿನ ತೀರ್ಮಾನ ಇಂದು ಒಂದು ನಿರ್ದಿಷ್ಟ ರೂಪ ತಳೆಯುವ ಹಂತಕ್ಕೆ ಬಂದಿದೆ. ಇಂದಿಗೂ ಈ ಜೀವ, ಈ ಬದುಕು ಜನಹೋರಾಟಕ್ಕೆ ಮೀಸಲಾಗಿದೆ. ನಿಮಗೆಲ್ಲಾ ಗೊತ್ತಿರುವಂತೆ (ನಾಯಕತ್ವ ಏನೇ ಅಂದರೂ) ನಮ್ಮ ಇಡೀ ಹೋರಾಟ ಜೀವನದಲ್ಲಿ 'ಪಕ್ಷಕ್ಕೆ ನಿಷ್ಠರಾಗಿಯೇ' ಕೆಲಸ ಮಾಡಿದ್ದೇವೆ. ಆದರೆ 'ಪಕ್ಷಕ್ಕೆ ನಿಷ್ಠೆಯೇ' ಅಥವಾ "ಜನ ಚಳವಳಿಗೆ ನಿಷ್ಠೆಯೇ' ಎಂಬ ಆಯ್ಕೆಯ ಅನಿವಾರ್ಯತೆ ನಮ್ಮೆದುರಿಗೆ ಬಂದುನಿಂತಿತ್ತು. ಪಕ್ಷ ನಮಗೆ ಪ್ರಿಯವಾದರೂ 'ಜನಹಿತ' ಅದನ್ನು ಮೀರಿದ ಕರ್ತವ್ಯವಾಗಿತ್ತು. ಪಕ್ಷ ಜನರಿಂದ ದೂರವಾಗುತ್ತಿತ್ತು. ಹಾಗಾಗಿಯೇ ಅಂದು ನಾವು ಪಕ್ಷವನ್ನು ತೊರೆದು ಜನಚಳವಳಿಗೆ ಹತ್ತಿರವಾಗುವ ತೀರ್ಮಾನವನ್ನು ಕೈಗೊಂಡೆವು.

ನಮ್ಮ ಈ ತೀರ್ಮಾನಕ್ಕೆ ನಮ್ಮ ನಿರೀಕ್ಷೆಗೂ ಮೀರಿದ ಸ್ವಾಗತ ಸಮಾಜಮುಖಿ ಸಮುದಾಯದಿಂದ ವ್ಯಕ್ತವಾಗಿದೆ. ಇದೇ ಇಂದಿನ ಸಂದರ್ಭದ ಕರೆಯಾಗಿದೆ. ನಮಗೆ ಸಿಕ್ಕ ಸ್ವಾಗತಕ್ಕಿಂತ ಹತ್ತು ಪಟ್ಟು ಹೆಚ್ಚಿನ ಸ್ವಾಗತ ನಿಮ್ಮ ತೀರ್ಮಾನಕ್ಕೆ ಇರುತ್ತದೆ. ಈ ಕರೆಗೆ ಓಗೊಡುವುದು ನಮ್ಮ ಹಾಗೂ ನಿಮ್ಮೆಲ್ಲರ ಕರ್ತವ್ಯವಾಗಿದೆ. ಬಲಪಂಥೀಯ ಶಕ್ತಿಗಳ ವಿರುದ್ಧ ಮತ್ತು ಜನವಿರೋಧಿ ನೀತಿಗಳ ವಿರುದ್ಧ ಕಠಿಣ ಹೋರಾಟದ ಕಾಲ ಎದುರಾಗಿದೆ. ನೀವೆಲ್ಲಾ ಈ ಜನಧಾರೆಯ ಜೊತೆಗಿರಬೇಕು ಎಂದು ಮನಸ್ಸು ಹಂಬಲಿಸುತ್ತದೆ. ಆಲೋಚಿಸಿ ಎಂದಷ್ಟೇ ಕೇಳಿಕೊಳ್ಳಬಹುದಾಗಿದೆ.

ಕಾಡಿನಲ್ಲಿರುವ ನನ್ನ ನೆಲ್ಮೆಯ ಸಂಗಾತಿಗಳಿಗೆ

ಲಾಲ್ ಸಲಾಂ.

■ ನೂರ್ ಶ್ರೀಧರ್



ಭಗವದ್ಗೀತೆ ತಂದ ವಿಪತ್ತು



ಭಗವದ್ಗೀತೆ ಘಾಟು ಬಲವಾಗಿ ಬಡೀತಿದೆ. ಒಬ್ಬ ವಿದ್ವಾಂಸರು ಅದು ಕೇಡು ಬಯಸುವ ಪುಸ್ತಕ, ಅದನ್ನು ಸುಡಬೇಕು ಅಂತಾರೆ. ಅವರ ಮಾತಿನಂಗೇ ಎಲ್ಲ ಪ್ರತಿಗಳನ್ನೂ ಸುಟ್ಟು 'ಭಸ್ಮಾಸುರ' ಆಗಾನ ಅಂದ್ರೆ ಪ್ರತಿಗಳೇನು ವಸಿ ಇದಾವಾ... ಇರಲಿ. ಅವರೇನೋ ಹಂಗದವ್ರೆ. ಇನ್ನೊಬ್ಬ ವಿದ್ವಾಂಸರು ವ್ಯಾಸ ಅನ್ನೊ ಮಹಾಶಯ ಕೇಡು ಬಯಸುವ ಮಾತುಗಳನ್ನು ಬರೆದಿರಲಾರ. ಅಂತಹ ಮಾತುಗಳನ್ನು ಯಾರೋ ಧೂರ್ತರು ಸೇರಿಸಿರಬೇಕು. ಅವರನ್ನು ಎಳ್ಕೊಂಡ್ ಬಂದು ಸುಡಾನ ಅಂದ್ರೆ ಅವರು ಯಾವ್ದೊ ಕಾಲ್ದೋರು. ಸತ್ತೂ ಆಗದೆ, ಸುಟ್ಟೂ ಆಗದೆ. ಅದ್ಕೆ ಅದರಲ್ಲಿರೋ ಒಳ್ಳೆ ಮಾತುಗಳನ್ನು ಉಳಿಸಿಕೊಂಡು ಮಿಕ್ಕಿದ್ದ ಸುಡಾನ ಅಂದವ್ರೆ. ಒಳ್ಳೇದು, ಕೆಟ್ಟು ಅಂತ ಹೆಂಗೆ ಪತ್ತೆ ಹಚ್ತಾರೋ ಗೊತ್ತಿಲ್ಲ, ಎಂತೆಂತದ್ದೋ ಮಿಸಿನ್‌ಗಳು ಬಂದವೆ. ಇದ್ನೂ ಇದ್ದತ್ತೋ ಏನೋ.. ಒಟ್ನಲ್ಲಿ ಹಂಗಂದವ್ರೆ. ಇನ್ನೊಬ್ರು, ಅವ್ರೂ ವಿದ್ವಾಂಸರೇಯ, ಏನು ಹೇಳವ್ರೆ ಅಂದ್ರೆ ಭಗವದ್ಗೀತೆ ಅನ್ನೋದು ಬೌದ್ಧ ಧರ್ಮದ ಮೇಲ್ಮೆಯನ್ನು ಸಹಿಸದವರು ಅದನ್ನ ತಗ್ಗಿಸೋಕೆ ಅರ್ಜುನ ಅನ್ನೋ ಪೆದ್ದನ್ನ ಹುಡುಕವ್ರೆ. ಆತನ ಬಾಲಿಶ ಪ್ರಶ್ನೆಗಳಿಗೆ ಕೃಷ್ಣ ಚಮತ್ಕಾರದ ಉತ್ತರ ನೀಡಿ ಹಿಂದೂ ಧರ್ಮದ ಅವನತಿ ಹೊಂದುವುದರಿಂದ ಕಾಪಾಡ್ತಾನೆ ಅಂದವ್ರೆ. ಇನ್ನೂ ಕೆಲವರು ಗಾಂಧಿ, ತಿಲಕ್ ಅಂತ ದೊಡ್‌ದೊಡ್ಡೋರೆಲ್ಲ ಇದು ಬೆಸ್ಟ್ ಪುಸ್ತಕ ಅಂದವ್ರೆ. ಅಂತೋರೆ ಹಂಗಂದ ಮೇಲೆ ಅದರಲ್ಲಿ ಯಾವ ನ್ಯೂನತೆಯೂ ಇರಲು ಸಾಧ್ಯ ಇಲ್ಲ ಅಂತ ಪರಾ ಬರೀತಾರೆ. ಹೀಗೆ ತರಾವರಿ ಹೇಳಿಕೆಗಳು ಭೋರ್ಗರೆಯುತ್ತಿದ್ದ ಕಾಲಘಟ್ಟದಲ್ಲಿ...

ಅಡಗೂರು ಎಚ್. ವಿಶ್ವನಾಥ್ ಅವರ ಆತ್ಮಕಥನ ಹಳ್ಳಿ ಹಕ್ಕಿಯ ಹಾಡು ಕಣ್ಣಿಗೆ ಬಿತ್ತು. ಹಾಗೇ ಪುಟ ಮಗುಚಿ ಹಾಕುತ್ತಿದ್ದೆ. ಅಲ್ಲೂ ಭಗವದ್ಗೀತೆ ಕಣ್ಣಿಗೆ ಬಡೀತು. ಈ ಮನುಷ್ಯ ನಾರ್ಮಲ್ ಆಗೇ ಇದ್ದರಲ್ಲ, ಯಾವಾಗ ಬದಲಾದರು ಅಂದುಕೊಳ್ಳುತ್ತಾ ಕುತೂಹಲದಿಂದ ನೋಡಿದಾಗ...

ಅದೇನಾಗಿತ್ತು ಅಂದ್ರೆ ನಂ ಗುಂಡೂರಾಯರು... ಅದೇ ಗುಂಡೂದಾದ... ಈಜುಕೊಳದ ಉದ್ಘಾಟನೆಯನ್ನು ಈಜು ಹೊಡೆದೇ ಉದ್ಘಾಟಿಸಿದರಲ್ಲಾ. ಕ್ರಿಮೆಟೋರಿಯಂ ಉದ್ಘಾಟನೆಗೆ ಇವರನ್ನ ಕರೆದ್ರೆ ಏನಪ್ಪಾ ಗತಿ ಅಂತೆಲ್ಲ ಮಾತಾಡ್ಕೋತಿದ್ದರಲ್ಲ... ಅದೇ ಗುಂಡೂರಾಯರು. ಅವರು ರಾಜ್ಯ ಮುಖ್ಯಮಂತ್ರಿಯಾದ ಹೊಸತು. ಗೋಕಾಕ ಎತ್ತಿ ಎತ್ತಿ ಒಗೀತಿದ್ರು. ದೇವರಾಜ ಅರಸು ಮೀರಿಸೋ ಹಂಗೆ ಆಡಳಿತ ನಡುಸ್ತೀನಿ ಅಣ್ಣದ ಹುಮ್ಮಸ್ಸಿನಲ್ಲಿದ್ರು. ಅಂತಹ ಸುವರ್ಣಕಾಲಘಟ್ಟದಲ್ಲಿ ಸುಬ್ಬಯ್ಯ ಅನ್ನುವವರು ಸಣ್ಣ ನೀರಾವರಿ ಇಲಾಖೆಯ ಮುಖ್ಯ ಇಂಜಿನಿಯರಾಗಿದ್ದರು. ನೀರಾವರಿ ಸಣ್ಣದಾದರೂ 'ಹಣ'ವರಿ ರಭಸವಾಗೇ ಹರೀತಿತ್ತು. ಅಂತ್ಯಕಾಲದವರೆವಿಗೂ ಹಂಗೆ ಇರಬೇಕು ಅಂತ ಪೂಜೆ ಪುನಸ್ಕಾರಗಳನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಆದರೂ ಪಾಪ, ಪೂಜೆ ಮಾಡಿಸಿಕೊಂಡ ಯಾವ ದೇವರೂ ಭಕ್ತರ ವಯಸ್ಸನ್ನು ಕಡಿಮೆ ಮಾಡಲಿಲ್ಲ. ಸೇವಾನಿವೃತ್ತಿಗೆ ಕೇವಲ ಒಂದು ತಿಂಗಳು ಮಾತ್ರ ಇತ್ತು. ಇಂತಹದ್ದೊಂದು ಕಾಲ ಬರಬಹುದು ಅಂತ ಹಣಾವರಿ ಇಂಜಿನಿಯರ್ ಸಾಹೇಬರು ಹಣವನ್ನು ಹೇಗೆ ಹೇಗೆ ವಿನಿಯೋಗಿಸಬೇಕು ಅನ್ನೋದನ್ನ ಕರಗತ ಮಾಡಿಕೊಂಡಿದ್ದರು. ಈ ಹಣ ವಿನಿಯೋಗ ಪ್ರಾವೀಣ್ಯತೆಯಿಂದಾಗಿ ಕೆಲವು ಮಂತ್ರಿಗಳಿಗೂ, ಶಾಸಕರುಗಳಿಗೂ ಆಪ್ತರಾಗಿದ್ದರು. ಇಂತಹ ಧಾರಾಳಿ ಮನುಷ್ಯ ಇನ್ನು ಒಂದು ತಿಂಗಳಿಗೇ ನಿವೃತ್ತರಾಗುತ್ತಾರಲ್ಲ ಅಂತ ಅವರೆಲ್ಲರ 'ಹಣ ಕರುಳು' ಚುರುಕ್ ಅಂತಂತೆ. ಅವರೆಲ್ಲ ಗುಂಡೂರಾಯರ ಬಳಿಗೆ ಹೋಗಿ ದುಡ್ಡಯ್ಯನವರ ಮೇಧಾವಿತನ, ಕಾರ್ಯಕ್ಷಮತೆ ಹಾಡಿ ಹೊಗಳಿದರು. ಇಂತಹ ದಕ್ಷ ಅಧಿಕಾರಿಯ ಸೇವಾ ಅವಧಿಯನ್ನು ಕನಿಷ್ಠ ಎರಡು ವರ್ಷ ವಿಸ್ತರಿಸುವಂತೆ ಮನವಿ ಮಾಡಿದರು.

ಅಹಾ ವಿಧಿಯ ಆಟಕ್ಕೇನೆಂಬೆನು. ಅವರ ಮಾತುಗಳನ್ನು ಆಲಿಸಿದ ಗುಂಡೂರಾಯರು 'ನಿಮ್ಮ ಮಾತು ನಂಬಿ ಅವನ ಸೇವಾವಧಿ ವಿಸ್ತರಣೆ ಮಾಡ್ತೀನಿ. ಇವತ್ತು ರಾತ್ರಿಯೇ ಅವನಿಗೆ ಹಾರ್ಟ್ ಅಟ್ಯಾಕ್ ಆಗಿ ಸತ್ತು ಹೋದರೆ ನೀರಾವರಿ ಕಾಮಗಾರಿಗಳೆಲ್ಲ ನಿಂತುಹೋಗ್ತವಾ. ಸುಮ್ನೆ ಕುಂತ್ಕಳ್ರಿ. ಅವನು ಯಾರು ಯಾರಿಗೆ ಕೊಬ್ಬರಿ ಮಿಠಾಯಿ ತಿನ್ನುಸ್ತಾನೆ ಅಂತ ನನಗೆ ಗೊತ್ತು' ಅಂದು ಬಿಡೋದೆ!

ಸುಬ್ಬಯ್ಯನವರ ವಕೀಲಿ ಮಾಡಿದವರಿಗೆ ಆಯಿತಲ್ಲ ಮಂಗಳಾರತಿ. ಇನ್ನೇನು ಅವರ ಕತೆ ಮುಗಿದಂಗೇಯ ಅಂತ ನೋಡಿದವರಿಗೆ ಅನ್ನಿಸಬಹುದು. ಗುಂಡೂರಾಯರಂತಹ ಹಲವಾರು ರಾಜಕಾರಣಿಗಳನ್ನು ಪಳಗಿಸಿದ ಅನುಭವ ಸುಬ್ಬಯ್ಯನವರಿಗಿತ್ತು. ಕಾರ್ಗತ್ತಲಿನಲ್ಲೂ ಬೆಳಕಿನ ರೇಖೆ ಕಂಡೇ ಕಾಣುತ್ತದೆ ಎಂಬ ಆಶಾಭಾವನೆ ಅವರಲ್ಲಿತ್ತು... ಅವರ ಎಣಿಕೆಯಂತೆಯೇ ಬೆಳಕಿನ ರೇಖೆ ಕಂಡಿತು.

ಇದಾದ ಎಂಟು ದಿವಸಗಳಲ್ಲಿ ಕುಶಾಲನಗರದಲ್ಲಿ ಗುಂಡೂರಾಯರ ತಂದೆಯ ಶ್ರಾದ್ಧ ಇತ್ತು. ಆಧ್ಯಾತ್ಮದ ಮೂಲಕ ಗುಂಡೂರಾಯರನ್ನು ಒಲಿಸಿಕೊಳ್ಳುವ ಅವಕಾಶ ಸಿಕ್ಕಿತ್ತು. ಸುಬ್ಬಯ್ಯ ಚುರುಕಾದರು. ಸಾವಿರಾರು ಭಗವದ್ಗೀತೆ ಪ್ರತಿಗಳನ್ನು ಮುದ್ರಿಸಿ ತಂದರು. ಶ್ರಾದ್ಧಕ್ಕೆ ಬಂದವರಿಗೆಲ್ಲ ಹಂಚಿದರು.

ಭಗವದ್ಗೀತೆ ಪ್ರತಿ ವಿತರಣಾ ವ್ಯವಸ್ಥೆ ಫಲ ನೀಡಿತೆ?

ಮುಖ್ಯಮಂತ್ರಿ ಗುಂಡೂರಾಯರು ಇದನ್ನೆಲ್ಲ ಗಮನಿಸಿದರು.


ಏನಾಯಿತು ಇದರ ಪರಿಣಾಮ?

ಅವತ್ತು ರಾತ್ರಿಯೇ ಸುಬ್ಬಯ್ಯ ಮನೆ ಮೇಲೆ ಲೋಕಾಯುಕ್ತರ ದಾಳಿ! ಮಾರನೆ ಬೆಳಗ್ಗೆ ಸೇವೆಯಿಂದ ಅಮಾನತು!

ಗೌರವಯುತವಾಗಿ ನಿವೃತ್ತಿ ಹೊಂದಬಹುದಾಗಿದ್ದ ಇಂಜಿನಿಯರ್ ಸಾಹೇಬರು ಭಗವದ್ಗೀತೆ ಹಂಚಿ ಸೆರೆಮನೆ ಕಾಣಬೇಕಾಯಿತು!

■ ಎಚ್.ಎಲ್. ಕೇಶವಮೂರ್ತಿ

ಐನ್‌ಸ್ಟೈನ್‌ರ ಸಾಮಾನ್ಯ ಸಾಪೇಕ್ಷತೆಗೆ ನೂರು ವರ್ಷ



"ಪ್ರಕೃತಿಯಲ್ಲಿ ನಾನು ಕಾಣುತ್ತಿರುವುದೆಲ್ಲಾ -ಯೋಚಿಸುತ್ತಿರುವ ಮನುಷ್ಯ ಅಪೂರ್ಣವಾಗಿ ಗ್ರಹಿಸಬಹುದಾದ ಮತ್ತು ಆ ಮೂಲಕ ಮನುಷ್ಯರಲ್ಲಿ ವಿನಮ್ರಭಾವ ತುಂಬಬಲ್ಲ ಭವ್ಯವಾದ ಆಕೃತಿ"


- ಆಲ್ಬರ್ಟ್ ಐನ್‌ಸ್ಟೈನ್

ಆಲ್ಬರ್ಟ್ ಐನ್‌ಸ್ಟೈನ್ ಪ್ರಕೃತಿ ಮತ್ತು ಸತ್ಯದ ಕುರಿತ ಅಗಾಧ ವಿಸ್ಮಯವುಳ್ಳವರಾಗಿದ್ದರು. ಸದಾ ಒಂದಿಲ್ಲೊಂದು ಆಲೋಚನೆಗಳತ್ತಲೇ ಇರುವಂತೆ ಕಾಣುತ್ತಿದ್ದ ಅವರು ಸರಳ ಜೀವನಶೈಲಿಯ ಮೂಲಕ ಹಾಗೂ ವಿಸ್ಮಯದ ತಿಳಿವಿನ ಮೂಲಕ ಜಗತ್ತನ್ನು ಚಕಿತಗೊಳಿಸಿದ್ದರು. ಅವರ ಸಾಮಾನ್ಯ ಸಾಪೇಕ್ಷ ಸಿದ್ಧಾಂತಕ್ಕೆ ನೂರು ತುಂಬಿದ ವರ್ಷ 2015. ಐನ್‌ಸ್ಟೈನ್‌ರ ಜೀವನದಲ್ಲಿ 2005 ಮತ್ತು 2015ರ ನಡುವಣ ವರ್ಷಗಳು ಮಹತ್ವಪೂರ್ಣವಾದವು. ಅವರ ಮಹತ್ವವಾದ ಅನ್ವೇಷಣೆಗಳು ಇದೇ ಕಾಲದಲ್ಲಿ ಪ್ರಕಟಗೊಂಡವು. ಇದೇ ಪ್ರಕಟಣೆಗಳೇ ಅವರನ್ನು ಅದ್ವಿತೀಯರನ್ನಾಗಿಸಿದ್ದಲ್ಲದೆ ವಿಶ್ವದ ಬಗೆಗಿನ ಅವರೆಗಿನ ವೈಜ್ಞಾನಿಕ ತಿಳಿವಳಿಕೆಯೂ ಬದಲಾಯಿತು.

ಸಾಮಾನ್ಯವಾಗಿ ಯಾರನ್ನಾದರೂ ಐನ್‌ಸ್ಟೈನರಿಗೆ ನೊಬೆಲ್ ಬಹುಮಾನ ಬಂದ ಬಗ್ಗೆ ಪ್ರಶ್ನಿಸಿದರೆ ಅದು ಅವರ ಸಾಪೇಕ್ಷ ಸಿದ್ಧಾಂತಕ್ಕೆ ಎಂದು ಉತ್ತರಿಸುವವರೇ ಹೆಚ್ಚು, ಆದರೆ ಅದು ಫೋಟೋ ಇಲೆಕ್ಟ್ರಿಕ್ ಪರಿಣಾಮಕ್ಕೆ ಎನ್ನುವವರು ಕಡಿಮೆಯೇ! ಅಷ್ಟರಮಟ್ಟಿಗೆ ಸಾಪೇಕ್ಷ ಸಿದ್ಧಾಂತದ ಮೂಲಕ ಅವರು ಪರಿಚಿತರು. ಅದರ ವಿವರಗಳ ತಿಳಿವು ಏನೇ ಇರಲಿ, ಅಂತಹದ್ದೊಂದು ಸಿದ್ಧಾಂತದ ಕುರಿತೇ ಅವರು ಜನಪ್ರಿಯ. ಸಾಪೇಕ್ಷ ಸಿದ್ಧಾಂತವನ್ನು ಅವರು ಕಂಡುಕೊಂಡ ಮತ್ತು ಜಗತ್ತಿಗೆ ಹಂಚಿಕೊಂಡ ಬಗ್ಗೆಯೂ ವಿಸ್ಮಯಗಳೇ ಇವೆ. ಕಾರಣ ಆವರೆಗೂ, ಹೆಚ್ಚೇನು ಈಗಲೂ ಸಾಮಾನ್ಯ ತಿಳಿವಳಿಕೆಯಲ್ಲಿ ನ್ಯೂಟನ್ ಗುರುತ್ವದ ಭೌತಶಾಸ್ತ್ರೀಯ ವಿವರಗಳೇ ಹೆಚ್ಚು ಪರಿಚಿತ. ಆದರೆ ಜಗತ್ತು ಹಾಗಿಲ್ಲ, ಅದು ಭಿನ್ನ ಎಂಬ ಪ್ರಶ್ನೆಯೊಂದಿಗೆ ಭೌತಶಾಸ್ತ್ರವನ್ನು ಹೊಸತೊಂದು ಆಯಾಮದ ಮೂಲಕ ದಿಕ್ಕು ಬದಲಿಸಿದ ಕೀರ್ತಿ ಐನ್‌ಸ್ಟೈನ್ ಅವರಿಗೆ ಮಾತ್ರ ಸಲ್ಲುತ್ತದೆ.

ನಮಗೆಲ್ಲಾ ಸಾಮಾನ್ಯವಾಗಿ ವಿಜ್ಞಾನದ ವಿಕಾಸ ಎಂದರೆ ಹತ್ತಾರು ವರ್ಷ ವ್ಯಕ್ತಿಯೊಬ್ಬ ಪ್ರಯೋಗಾಲಯದಲ್ಲಿ ತನ್ನನ್ನೇ ತಾನು ಮರೆತು ಹುಡುಕಾಟದಲ್ಲಿ ಮುಳುಗಿ ಏನೋ ಕಂಡವನಂತೆ 'ಯುರೇಕಾ! ಯುರೇಕಾ' ಎಂಬ ಕೂಗಿನ ಹಿಂದೆ ಇರುವ ಅನ್ವೇಷಣೆ ಎಂಬ ಭ್ರಮೆ ಇದೆಯಲ್ಲವೇ? ಅದೂ ಸಾಲದ್ದಕ್ಕೆ ಹತ್ತಾರು ಜನ ಒಂದಾಗಿ ಸಹ ಕೆಲಸಗಾರರಾಗಿ ಹೊಸತೊಂದು ಕೊಟ್ಟ ಬಗೆಗೆ ವಿಜ್ಞಾನದ ವಿವರಗಳಿರುತ್ತವೆ. ಆದರೆ ಆಲ್ಬರ್ಟ್ ಐನ್‌ಸ್ಟೈನ್ ಇದಕ್ಕೆ ಅಪವಾದ. ಒಂಟಿಯಾಗಿ ಕೇವಲ ಆಲೋಚನೆ ಮತ್ತು ಸಣ್ಣಪುಟ್ಟ ತರ್ಕಗಳ ಹಾಗೂ ಗಣಿತೀಯ ವಿವರಗಳಿಂದ ಜಗತ್ತಿನ ವೈಜ್ಞಾನಿಕ ತಿಳಿವನ್ನೇ ಬದಲಿಸಿದರು. ಹೆಚ್ಚೂಕಡಿಮೆ ನಾಲ್ಕು ಪುಟಗಳಲ್ಲಿ ಆಗಿನ ಭೌತಶಾಸ್ತ್ರೀಯ ಗುರುತ್ವದ ತಿಳಿವನ್ನು ಬದಲಿಸಿಬಿಟ್ಟರು. ಇಡೀ ವಿಶ್ವವನ್ನು ಚಲನಶೀಲವಾಗಿಸಿರುವ ವಿವರಗಳೂ ಈ ತಿಳಿವಳಿಕೆಯಿಂದ ಹೊಸತೊಂದು ಲೋಕವನ್ನೇ ತೆರೆದಿಟ್ಟವು. ಅನೇಕ ಮಹತ್ವದ ಶೋಧಗಳು ಹತ್ತಾರು ಪ್ರತಿಭೆಯ ಮನಸ್ಸುಗಳನ್ನು ಒಳಗೊಂಡ ಶೋಧಗಳಾದರೆ, ಸಾಪೇಕ್ಷ ಸಿದ್ಧಾಂತ ಮಾತ್ರ ಐನ್‌ಸ್ಟೈನ್‌ರ ಏಕವ್ಯಕ್ತಿಯ ಕೊಡುಗೆ. ಬೆಳಗಾಗುವುದರಲ್ಲಿ ಚಲನಚಿತ್ರ ತಾರೆಯಂತೆ ಜನಪ್ರಿಯರಾದ ವಿಜ್ಞಾನಿ. ಐನ್‌ಸ್ಟೈನ್ ಸಾಮಾಜಿಕವಾಗಿಯೂ, ರಾಜಕೀಯವಾಗಿಯೂ ಮಹತ್ವ ಗಳಿಸಿದ್ದರು. ಈಗಿನ ಇಸ್ರೇಲ್ ಅಸ್ತಿತ್ವಕ್ಕೆ ಬರೆವ ಕಾಲದಲ್ಲಿ ಅದರ ಅಧ್ಯಕ್ಷರಾಗಲೂ ಸಹ ಅವರಿಗೆ ಆಹ್ವಾನ ಬಂದಿತ್ತು.

ಸಾಮಾನ್ಯ ಸಾಪೇಕ್ಷ ಸಿದ್ಧಾಂತವು ಗುರುತ್ವದ ಜ್ಯಾಮಿತಿಯ ವಿವರಣೆ. ಇದನ್ನು 1915ರಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ಪ್ರತಿಪಾದಿಸಿದರು. ಇದು ಹಿಂದೆ ನ್ಯೂಟನ್ ಸೇಬು ತಲೆಯ ಮೇಲೆ ಬಿದ್ದ ಉದಾಹರಣೆಯೊಂದಿಗೆ ಭೂಮಿಯ ಸೆಳೆತವೇ ಮೇಲಿನ ವಸ್ತುಗಳು ಭೂಮಿಯತ್ತ ಬೀಳಲು ಕಾರಣ ಎಂದದ್ದಕಿಂತ ತೀರಾ ಭಿನ್ನ. ಸ್ವತಃ ನ್ಯೂಟನ್ನನೇ ಯಾವುದೇ ವಸ್ತುವು ಚಲಿಸಲು ಬಲದ ಅವಶ್ಯಕತೆಯನ್ನು ಚಲನೆಯ ನಿಯಮದಲ್ಲಿ ಹೇಳಿದ್ದನಷ್ಟೇ! ಅದರ ಪ್ರಕಾರವೇ ಭೂಮಿಯ ಮೇಲೂ ಬೀಳುವಂತಾಗಲು ಅಲ್ಲಿಯೂ ಚಲನೆಯು ಘಟಿಸಿದೆಯಲ್ಲವೇ? ಹಾಗಾದರೆ ಇಲ್ಲಿನ ಬಲ ಅಂದರೆ ಅದನ್ನು ತಳ್ಳುವ ಶಕ್ತಿ ಎಲ್ಲಿಯದು? ಇದಕ್ಕೆ ನ್ಯೂಟನ್‌ರ ಗುರುತ್ವದಲ್ಲಿ ಉತ್ತರಗಳು ಸಿಗುವುದಿಲ್ಲ, ಅದನ್ನೇ ಐನ್‌ಸ್ಟೈನ್ ಪ್ರಶ್ನಿಸಿದ್ದು! ಮತ್ತು ಅದಕ್ಕೆ ತಮ್ಮ ಸಾಮಾನ್ಯ ಸಾಪೇಕ್ಷ ಸಿದ್ಧಾಂತದ ಮೂಲಕ ವಿವರಿಸಿದ್ದು. ಇದು ಅವರದ್ದೇ ಆದ ವಿಶೇಷ ಸಾಪೇಕ್ಷ ಸಿದ್ಧಾಂತ ಮತ್ತು ಸಾರ್ವತ್ರಿಕ ಗುರುತ್ವ ಕುರಿತ ನ್ಯೂಟನ್ ನಿಯಮ ಎರಡನ್ನೂ ಸಮ್ಮಿಳನಗೊಳಿಸಿದ ಸಿದ್ಧಾಂತ. ಇದೇ ಮುಂದೆ ಗುರುತ್ವವು ಆಕಾಶ (Space) ಮತ್ತು ಕಾಲದ (Time) ಜ್ಯಾಮಿತಿಯ ಗುಣಗಳನ್ನು ಅವಲಂಬಿಸಿದ ವಿವರಗಳನ್ನು ಒದಗಿಸಿದ ಸಿದ್ಧಾಂತ. ಇದನ್ನೇ ಆಧುನಿಕ ಭೌತಶಾಸ್ತ್ರವು ಭೂಮಿಯ ಗುರುತ್ವಾಕರ್ಷಣಕ್ಕೆ ವಿವರವನ್ನು ಕೊಡಲು ಬಳಸಿಕೊಂಡಿದೆ. ಭೂಮಿಯ ಗುರುತ್ವಕ್ಕೆ ಆಕಾಶದ ಬಾಗಿದ ರಚನೆಯೂ ಮತ್ತು ಅದು ಒಡ್ಡುವ ಬಲವೂ ಕಾರಣ ಎಂಬ ವಿವರಗಳು. ಇವೆ ಮುಂದೆ ಕಾಲವೂ ಸಹ ಸಾಪೇಕ್ಷ ಅಷ್ಟೇಕೆ ನಮ್ಮೆಲ್ಲ ಅನುಭವಗಳೂ ಸಾಪೇಕ್ಷವೇ ಎಂಬ ತೀರ್ಮಾನಕ್ಕೆ ಮಾರ್ಗದರ್ಶನ ಕೊಟ್ಟವು.



ಗುರುತ್ವ ನಾವಂದುಕೊಂಡಂತೆ ಅಲ್ಲ

ನಮಗೆ ನ್ಯೂಟನ್ನನ ಮಾದರಿಯ ವಿವರಗಳಿಂದ ಗುರುತ್ವಾಕರ್ಷಣೆಯನ್ನು ಅರಿತಿದ್ದೇವೆ ಮತ್ತು ಅದನ್ನೇ ನಿಜವೆಂದು ಅಂದುಕೊಂಡಿದ್ದರೂ ಆಶ್ಚರ್ಯವಿಲ್ಲ, ಆದರೆ ಅದು ಹಾಗಲ್ಲ, ಸ್ವತಃ ನ್ಯೂಟನ್ನನೇ ಅದರ ಬಗ್ಗೆ ಪ್ರಶ್ನೆಗಳನ್ನು ಹೊಂದಿದ್ದನೆಂಬುದೂ ತಿಳಿದುಬರುತ್ತದೆ. ಹಾಗಾದರೆ ಅದು ಹೇಗೆ? ನಮ್ಮ ಸಾಮಾನ್ಯ ಗ್ರಹಿಕೆಯಂತೆ ಎಲ್ಲ ವಸ್ತುಗಳೂ ಒಂದನ್ನೊಂದು ಆಕರ್ಷಿಸುವ ರೀತಿಯಲ್ಲಿ ನಾವು ಅಂದುಕೊಂಡಿರಲು ಸಾಧ್ಯ. ಅದೇರೀತಿ ಸೂರ್ಯ ಮತ್ತು ಭೂಮಿಗಳೆರಡೂ ಗುರುತ್ವವನ್ನು ಹೊಂದಿದ್ದು, ಪರಸ್ಪರ ಆಕರ್ಷಿಸುವುದರಿಂದ ಚಲನೆ ಸಾಧ್ಯವಾಗಿದೆ. ಆದ್ದರಿಂದ ಭೂಮಿ ಸೂರ್ಯನ ಸುತ್ತುತ್ತಿದೆ. ಅದೇ ರೀತಿಯ ರಚನೆಯಿಂದ ಆಕಾಶಕಾಯದ ಚಲನೆಗಳು ಸಾಧ್ಯವಾಗಿವೆ ಎಂಬುದು ನಂಬಿಕೆ ಅಷ್ಟೆ! ಅದು ನೈಜವಾದ ಜ್ಞಾನವಲ್ಲ. ಅದನ್ನೇ ಐನ್‌ಸ್ಟೈನ್ ತಮ್ಮ ಆಲೋಚನೆಗಳ ತಳಹದಿಯಿಂದ ವಸ್ತುಗಳ ದ್ರವ್ಯರಾಶಿಯನ್ನು ಸುತ್ತಲಿನ ಆಕಾಶ ಮತ್ತು ಕಾಲಕ್ಕೆ ಮತ್ತವುಗಳ ನಡುವಣ ಸಾಪೇಕ್ಷ ಸಂಬಂಧಗಳಿಗೆ ಹೋಲಿಸಿ ಜ್ಯಾಮಿತಿಯ ಹಿನ್ನೆಲೆಯಲ್ಲಿ ವಿವರಿಸಿದರು. ಬಾಗಿದ ಆಕಾಶವೇ ಭೂಮಿಯ ಕಡೆ ಚಲಿಸುವ ಅಥವಾ ಬೀಳುವ ವಸ್ತುಗಳನ್ನು ತಳ್ಳುವಂತೆ ಮಾಡುತ್ತದೆ. ಹೀಗಾಗಲು ದ್ರವ್ಯರಾಶಿ ಮತ್ತು ಆಕಾಶ ಹಾಗೂ ಕಾಲದ ಅನುಸಂಧಾನವಾಗಿರುತ್ತದೆ.

ಅಂದರೆ ಗುರುತ್ವವು ಭೂಮಿಯಂತಹ ವಸ್ತುಗಳು ಆಕಾಶದಲ್ಲಿ ಚಲಿಸುವುದರಿಂದಾದ ಪರಿಣಾಮವಲ್ಲ, ಬದಲಿಗೆ ವಿಶ್ವದ ಗೊತ್ತಾದ ಸ್ಥಳಗಳಲ್ಲಿ ಸೂರ್ಯನಂತಹ -ವಸ್ತು ಮತ್ತು ಶಕ್ತಿಯ ಸಮೂಹಗಳಿಂದ, ಆಕಾಶವೇ ಬಾಗುವಂತಾದುದರ ಪರಿಣಾಮ. ಉದಾಹರಣೆಗೆ ಗುರುತ್ವಾಕರ್ಷಣೆ ಉಂಟಾಗುವುದು ಸೂರ್ಯನನ್ನು ಸುತ್ತುವ ಭೂಮಿಯ ದ್ರವ್ಯರಾಶಿ ಮತ್ತೊಂದನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿರುವುದರಿಂದ ಅಲ್ಲ, ಬಾಗಿದ ಆಕಾಶದಿಂದ ಉಂಟಾದುದರ ಪರಿಣಾಮ. ಹಾಗೆ ನೋಡಿದರೆ ಬಾಗಿದ ಆಕಾಶದಲ್ಲಿ ಭೂಮಿಯೂ ಸಹ ಸಾಧ್ಯವಾದಷ್ಟು ನೇರ ಪಥವನ್ನೇ ಅನುಸರಿಸುತ್ತದೆ, ಆದರೇ ಆ ಪಥವೇ ಬಾಗಿದ್ದರಿಂದ ಅದು ಸುತ್ತುತ್ತದೆ. ಐನ್‌ಸ್ಟೈನ್‌ರ ಈ ತಿಳಿವಳಿಕೆಯ ಸಿದ್ಧಾಂತದಿಂದಾಗಿ ಭೌತಶಾಸ್ತ್ರೀಯ ಅರಿವು ಅಸ್ತವ್ಯಸ್ತಗೊಂಡಿದ್ದವು. ಬಹಳ ಮುಖ್ಯವಾಗಿ ಬೆಳಕಿನ ಕಿರಣಗಳು ಬಾಗುವುದೆಂದರೇ? ಸಹಜ ತಿಳಿವಿನಂತೆ ಬೆಳಕು ನೇರವಾಗಿ ಚಲಿಸುತ್ತದೆ, ಇದೂ ಕೂಡ ಬಾಗಿದ ಆಕಾಶದಲ್ಲಿ ನೇರ ಪಥವೇ ಅನುಸರಿಸಿ ಪಥವೇ ಬಾಗಿದ್ದರ ಪರಿಣಾಮ ಅದರ ಈ ವರ್ತನೆ.

ಆ ಕಾಲಕ್ಕೆ ಐನ್‌ಸ್ಟೈನ್ ಅವರಿಂದಾಗಿ ವಿಶ್ವದ ಮೂಲ ಗುಣಗಳಾದ, ಬೆಳಕಿನ ವೇಗ ಮತ್ತು ಕಾಲ ಇವುಗಳ ಚಲನೆ ಮತ್ತು ಅಳತೆಯಲ್ಲಿ ಹೊಸ ತಿರುವನ್ನು ಕೊಟ್ಟಿತು.

ಹಾಗಾದರೆ ಬೆಳಕು ಹೇಗೆ ಚಲಿಸುತ್ತದೆ?

ಇದರ ಉತ್ತರಕ್ಕೇ ಕೇವಲ ನಮ್ಮ ಎದುರಿನಲ್ಲಿ ಚಲಿಸುವ ಬೆಳಕಿನ ಕಲ್ಪನೆಯಷ್ಟೇ ಸಾಲದು. ಇಡೀ ವಿಶ್ವದ ಅಗಾಧ ಬೆಳಕಿನ ಊಹೆ ಬೇಕು. ದೂರದ ನಕ್ಷತ್ರಗಳಿಂದ ಬರುವ ಬೆಳಕಿನ ಕಿರಣಗಳು ಸೂರ್ಯನಂತಹ ಮತ್ತೊಂದು ನಕ್ಷತ್ರದ ಸಮೀಪ ಹಾಯುವಾಗ ಬಾಗುತ್ತವೆ. ಅದು ಹೇಗೆ ಮತ್ತು ಅದನ್ನು ನಿಖರವಾಗಿ ನಂಬುವುದಾದರೂ ಹೇಗೆ? ಉತ್ತರಕ್ಕಾಗಿ ಮುಂದೆ ನಾಲ್ಕು ವರ್ಷ ಕಾಯಬೇಕಾಯಿತು. 1919ರ ನವೆಂಬರ್ ತಿಂಗಳ 9ನೇ ದಿನ. ಲಂಡನ್ನಿನ ರಾಯಲ್ ಸೊಸೈಟಿಯ ಕೇಂದ್ರ ಕಚೇರಿಯಲ್ಲಿ ಕಿಕ್ಕಿರಿದ ವಿಜ್ಞಾನಿಗಳ ದಂಡು ಕಾದಿದ್ದರು. ಏಕೆಂದರೆ ಡಾ. ಕ್ರೊಮೆಲಿನ್ ಮತ್ತು ಡಾ. ಎಡಿಂಗ್ಟನ್ ಅವರು ಬ್ರೆಜಿಲ್ ಮತ್ತು ಪಶ್ಚಿಮ ಆಫ್ರಿಕಾದ ತೀರ ಪ್ರದೇಶಗಳ ವೀಕ್ಷಣಾಲಯದಿಂದ ಸೆರೆ ಹಿಡಿದ ಸಂಶೋಧನಾ ಅವಲೋಕನದ ಚಿತ್ರಗಳ ವಿವರಗಳನ್ನು ಕೊಡುವವರಿದ್ದರು.

ಸಾಮಾನ್ಯವಾಗಿ ರಾತ್ರಿಯಲ್ಲಿ ಮಾತ್ರ ಕಾಣಬರುವ ಮತ್ತು ಕೆಲವೊಮ್ಮೆ ಹಗಲಿನಲ್ಲಿ ಸೂರ್ಯಗ್ರಹಣದ ದಿನ ಮಾತ್ರವೇ ಕಾಣುವ ಕೆಲವು ನಕ್ಷತ್ರಗಳ ಫೋಟೊವನ್ನು ಅವರು ಸೆರೆಹಿಡಿದಿದ್ದರು. ಛಾಯಾಚಿತ್ರಗಳ ವಿವರಗಳು ಮಾಮೂಲಿನಂತೆಯೇ ಇದ್ದವು. ಆದರೆ ವೀಕ್ಷಣಾಲಯದ ಫೋಟೊಗಳೊಂದಿಗೆ ಹೋಲಿಸಿದಾಗ ಚಿತ್ರಗಳು ಇರಬೇಕಾದ ಸ್ಥಳಗಳಲ್ಲಿ ಇರಲಿಲ್ಲ, ಏನಾಯಿತು ಅದೇಕೆ, ಚಲಿಸಿದವು? ಈ ಭೂಮಿಯ ಮೇಲೆ ಅಥವಾ ಆಗಸದಲ್ಲಿ ಏನಾಗುತ್ತಿದೆ. ಅದೆಲ್ಲಾ ಬೆಳಕು ಬಾಗಿದ್ದರ ಪರಿಣಾಮ. ಅದನ್ನು ಐನ್‌ಸ್ಟೈನ್ ಮೊದಲೇ ಕಾಲಜ್ಞಾನದ ಹಾಗೆ ನುಡಿದಿದ್ದರು. ಬಾಗಿದ ಆಕಾಶದಲ್ಲಿ ಸಾಧ್ಯವಾದಷ್ಟೂ ನೇರವಾಗಿ ಬೆಳಕು ಚಲಿಸುತ್ತದೆ, ಆದರೆ ಆಕಾಶವೇ ಬಾಗಿದರೆ ಬೆಳಕೇನು ಮಾಡೀತು? ಅದು ಆಕಾಶವನ್ನು ಅನುಸರಿಸಲೇ ಬೇಕು ತಾನೆ? ಈಗಾಗುತ್ತಿರುವುದೂ ಅದೇ ಅದಕ್ಕೇ ಜಗತ್ತಿನ ಎಲ್ಲಾ ವಹಿವಾಟುಗಳೂ ನಾವಂದುಕೊಂಡಂತೆ ಅಲ್ಲ! ಅವೆಲ್ಲಾ ಸಾಪೇಕ್ಷ ಪರಿಣಾಮಗಳಷ್ಟೇ!

ಆಲ್ಬರ್ಟ್ ಐನ್‌ಸ್ಟೈನ್ ಮಾತ್ರ ಕ್ರೊಮೆಲಿನ್ ಮತ್ತು ಎಡಿಂಗ್‌ಟನ್ ಅವರ ಫಲಿತಗಳಿಂದ ನೆಮ್ಮದಿಯನ್ನು ಪಡೆದವರಾಗಿದ್ದರು. ಛಾಯಾಚಿತ್ರದಲ್ಲಿ ಕಾಣುವುದನ್ನು ಮೊದಲೇ ಭವಿಷ್ಯದ ಮಾದರಿಯಲ್ಲಿ ಹೇಳಿದಂತಿತ್ತು, ಅವರ ಸಾಮಾನ್ಯ ಸಾಪೇಕ್ಷ ಸಿದ್ಧಾಂತವು ಇದನ್ನೇ ಆಗಸದ ಜ್ಯಾಮಿಯ ವಿವರಗಳಿಂದ ಆಕಾಶ ಮತ್ತು ಕಾಲದ ಅನುಸಂಧಾನದಂತೆ ಹೇಳಿದ್ದರು. ಬೆಳಕು ಸೂರ್ಯನ ಸಮೀಪ ಹಾಯುವಾಗ ಬಾಗುವುದರಿಂದ ನಕ್ಷತ್ರಗಳು ಚಲಿಸುವಂತೆ ಕಾಣಿಸುವುದರ ಪರಿಣಾಮ ಚಿತ್ರಗಳ ಸ್ಥಳ ಬದಲಾಗಲು ಕಾರಣ. ಇದೊಂದು ಐನ್‌ಸ್ಟೈನ್‌ರ ಸಿದ್ಧಾಂತಕ್ಕೆ ಪ್ರಾಯೋಗಿಕ ಬೆಂಬಲ ಒದಗಿಸಿತ್ತು, ಬೆಳಕು ಬಾಗುವ ಆಕಾಶ, ಕಾಲದ ಸಾಪೇಕ್ಷತೆ ಎಲ್ಲವೂ ಒಂದು ಬಗೆಯಲ್ಲಿ ಅಯೋಮಯ. ನಮ್ಮ ಹೊರ ತೋರಿಕೆಯಲ್ಲಿ ನಿರಾಕಾರ ಆಕಾಶ. ಇನ್ನು ಅದು ಬಾಗಿದುದದರ ಪರಿಣಾಮ ಊಹೆಗೆ ನಿಲುಕದ್ದು. ಎಲ್ಲವೂ ಮೂಲಭೂತ ಭೌತಶಾಸ್ತ್ರಕ್ಕೆ ದೊಡ್ಡ ಸವಾಲಿನಂತಿತ್ತು.

ಇದೀಗ ಮತ್ತೆ ರಾಯಲ್ ಸೊಸೈಟಿಯ ಕಲಾಪಕ್ಕೆ ಬರೋಣ. ಆಗ ಅಲ್ಲಿ ಸಾಕಷ್ಟು ವಾಗ್ವಾದಗಳೇ ನಡೆದವು. ಕೆಲವು ವಿಜ್ಞಾನಿಗಳಂತೂ ಸಭಾತ್ಯಾಗವನ್ನೇ ಮಾಡಿದ್ದರು. ಅದೇನೇ ಇದ್ದರೂ ಹೊಸತೊಂದು ಆಯಾಮ ವಸ್ತುಗ... ನಿಖರ ವಿಮರ್ಶೆಗೆ ದಕ್ಕಿತ್ತು, ಅದು ಕಾಲದ ಆಯಾಮ... ಅಂದಿನ ರಾಯಲ್ ಸೊಸೈಟಿಯ ಅಧ್ಯಕ್ಷರು "ಮನುಷ್ಯ... ಆಲೋಚನೆಯ ಇತಿಹಾಸದಲ್ಲೇ ಹೊಸತೊಂದು... ಮೈಲಿಗಲ್ಲು" ಎಂದು ಬಣ್ಣಿಸಿದ್ದರು. ಬೆಳಗಾಗುವುದರ... ಸಿನಿಮಾತಾರೆಯಂತೆ ವಿಜ್ಞಾನಿಯೊಬ್ಬರು ಸುದ್ದಿ ಮಾಡಿದ್ದರು...

******


ಓರ್ವ ವಿದ್ಯಾರ್ಥಿಯು ತನ್ನನ್ನು ಮೆಚ್ಚಿಕೊಂಡು ಬರೆ... ಪತ್ರಕ್ಕೆ ಉತ್ತರವಾಗಿ ಬರೆಯುತ್ತಾ ಐನ್‌ಸ್ಟೈನ್ ಹೀಗೆಂದಿದ್ದರು... "ಸತ್ಯದ ಒಂದು ತುಣುಕನ್ನು ಅರಿಯಲು ಜೀವಮಾನವಿಡೀ ದುಡಿದವನಿಗೆ, -ಇತರರಲ್ಲಿ ಅವನ ಕೆಲಸದ ಅರಿವು ಮತ್ತು ತೃಪ್ತಿ ಮೂಡುವುದೇ ಮಹತ್ತರವಾದ ಕಾಣಿಕೆ". ಹೀ... ಸತ್ಯವನ್ನು ನಿರಂತರವಾಗಿ ಬೆನ್ನು ಹತ್ತುತ್ತಾ ಸದಾ... ಚಟುವಟಿಕೆಯಿಂದ ಇದ್ದಂತಹ ಮಹಾ ಮೇಧಾವಿ... ಮಿದುಳೂ ಕೂಡ ವಿಜ್ಞಾನದ ವಿಷಯವಾಗಿತ್ತು, ಅದ... ಸಂರಚನೆ ಮತ್ತು ಕೆಲಸ ನಿರ್ವಹಿಸುವ ರೀತಿಯ ಬಗ್ಗೆ... ಹಲವಾರು ಕಥನಗಳೇ ಹುಟ್ಟಿಕೊಂಡಿದ್ದವು.

ಈ ಜಗತ್ತು ಕಂಡ ಮಹಾಬುದ್ಧಿವಂತರ... ಪ್ರಮುಖರಾದವರು ಆಲ್ಬರ್ಟ್ ಐನ್‌ಸ್ಟೀನ್. ಬುದ್ಧಿವಂತಿಕೆ... ಐನ್‌ಸ್ಟೈನ್ ಒಂದು ಪರ್ಯಾಯ ಹೆಸರಾಗಿತ್ತು, ಈಗಲೂ ಸಹ ಐನ್‌ಸ್ಟೀನ್‌ರನ್ನು ಬುದ್ಧಿವಂತಿಕೆಯ... ಮಹೋನ್ನತೆಯಲ್ಲಿಯೇ ನೋಡಲಾಗುತ್ತಿದೆ. ಅದೆಷ್ಟೋ ಬಾರಿ ಅವರನ್ನು ಅಲ್ಲಗಳೆವ ಸಂಶೋಧನೆಗಳು ನಡೆದಿದ್ದರೂ... ಅವೆಲ್ಲವೂ ಮತ್ತೆ ಮತ್ತೆ ವಿಫಲವಾಗಿವೆ. ಮತ್ತೆ ಮ... ಐನ್‌ಸ್ಟೀನ್‌ರ ಸಂಶೋಧನೆಗಳು ಸಾಕ್ಷಿ ಪಡೆಯುತ್ತಲೇ... ಇರುತ್ತವೆ. ಅಷ್ಟರಮಟ್ಟಿಗೆ ಅವರ ವೈಜ್ಞಾನಿಕ ಸಂಗತಿಗಳು... ನೈಜ ತಿಳಿವಿನ ಸಂಸ್ಕಾರವನ್ನು ಪಡೆದಿವೆ.

ಚಿರಂತನತೆಯ ಸೂತ್ರ

ಮಾರ್ಚ್ 14 ರಂದು ಐನ್‌ಸ್ಟೈನ್ ಅವರ ಹುಟ್ಟುಹಬ್ಬ... ಇದೇ ವರ್ಷ ಅವರ ಸಾಮಾನ್ಯ ಸಾಪೇಕ್ಷ ಸಿದ್ಧಾಂತಕ್ಕೆ... ನೂರು ವರ್ಷ ತುಂಬಿದೆ. ಓರ್ವ ವಿಜ್ಞಾನಿಯಾಗಿ ಅವ... ಕೊಡುಗೆಯು ಅಮೂಲ್ಯವಾದುದು. ಏಕೆಂದರೆ ನ್ಯೂಟನ್... ಕಾಲದಿಂದಲೂ ಕಡೆಗಣಿಸಿದ ಅನೇಕ ಸಮಸ್ಯೆಗಳಿಗೆ ಹೊ... ವಿಧಾನಗಳನ್ನು ಕೊಟ್ಟರು. ನಮ್ಮ ವಿಶ್ವದ ಬಗ್ಗೆ ಕಾಲ-ಮ... ಆಕಾಶ-ದಲ್ಲಿನ ಸ್ಥಿತಿಯ ಕುರಿತು ಹೊಸ ಅರಿವ... ಮೂಡಿಸಿದರು. ವಿಶ್ವದ ಹುಟ್ಟು ಮತ್ತದರ ಕಾರ್ಯವ... ಅರಿಯಲು ಅವರ ನಂತರದ ವಿಜ್ಞಾನಿಗಳಿ... ಸಹಾಯಕವಾಗಲೆಂದೇ ಹೊಸ ಗಣಿತದ ವಿನ್ಯಾಸವನ್ನು... ಕೊಟ್ಟರು. ಆಲ್ಬರ್ಟ್ ಐನ್‌ಸ್ಟೈನ್ ಅವರಿಗೆ ವೈಜ್ಞಾನಿ... ಸಂಶೋಧನೆ ಅತ್ಯಂತ ಆತ್ಮತೃಪ್ತಿಯನ್ನು ತಂದುಕೊಟ್ಟಿ... ಮೊದಲನೆಯದಾಗಿ ಅವರ ಅತೀ ಶ್ರೇಷ್ಠ ಆವಿಷ್ಕಾರ "ಕತ್ತಲ... ಸತ್ಯಕ್ಕಾಗಿ ಅನೇಕ ವರ್ಷಗಳ ಹುಡುಕಾಟ. ಆ ಸತ್ಯ ಕೇವ... ಭ್ರಮೆಯಲ್ಲ, ಅನುಭವಕ್ಕೆ ಸಾಧ್ಯವಾಗುವಂತಹದ... ವಿಮರ್ಶೆಗಲ್ಲ! ತಿಳಿದು ಅರ್ಥೈಸಿದವರಿಗೆ ಮಾತ್ರ ಅದ... ಪರಿಪೂರ್ಣತೆ ಸ್ವಚ್ಛ ಅನುಭವವಾಗುವಂತಹದು... ಎರಡನೆಯದಾಗಿ ಅವರ ವಿಶ್ವದ ಕುರಿತ ಶಾಶ್ವತ ಸತ್ಯ... ನಂಬಿಕೆ.

ಅವರ ವೈಜ್ಞಾನಿಕ ಚಿಂತನೆಗಳಂತೆಯೇ ಅವ... ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗ... ಪ್ರಸಿದ್ಧವಾಗಿದ್ದವು. ಆದರೆ ಅವರು ವಿಜ್ಞಾನಕ್ಕೆ ಮಹ... ಕೊಟ್ಟರು. ಅವರೇ ಹೇಳಿದ್ದಂತೆ "ರಾಜಕೀಯ ಒಂದು... ದಿನಕ್ಕೆ ಮಾತ್ರ, ಆದರೆ ಒಂದು ಸೂತ್ರ, ಸಮೀಕರಣಗ... ಚಿರಂತನತೆಗಾಗಿ."



ಯೋಗೇಶ್ ಮಾಸ್ಟರ್
ಪುರಾಣದ ಹೂರಣ

ಜ್ಞಾನಿಯಾಂಚ ರಾಜ ಜ್ಞಾನೇಶ್ವರನ ಪವಾಡಗಳು

ಸಾವು ಹುಟ್ಟಿಸುವ ಅನುಕಂಪದ ಅಲೆ ಇನ್ಯಾವ ...ಮಾನಗಳೂ ಹುಟ್ಟಿಸಲಾರವೇನೋ. ಭಾರತದಂತಹ ...ದು ದೊಡ್ಡ ಉಪಖಂಡದಲ್ಲಿ ರಾಜಕೀಯ ...ಯಕರೊಬ್ಬರ ಸಾವು ಎಬ್ಬಿಸುವ ಅನುಕಂಪದ ಅಲೆ ...ೀ ದೇಶದ ಅಧಿಕಾರವನ್ನೇ ಕೊಟ್ಟಿರುವ ಉದಾಹರಣೆ ...ೆ. 1984ರಲ್ಲಿ ಇಂದಿರಾ ಗಾಂಧಿಯವರ ಹತ್ಯೆಯ ...ಬ್ಬಿಸಿದ ಅನುಕಂಪದ ಅಲೆ ಭಾರತೀಯ ಕಾಂಗ್ರೆಸ್ ...ರ್ಟಿಗೆ 414 ಸ್ಥಾನಗಳನ್ನು ಒದಗಿಸಿ ಗೆಲ್ಲುವಂತೆ ಮಾಡಿತ್ತು. ...ಜೀವ್ ಗಾಂಧಿ ಚುನಾವಣೆಗೂ ಮುನ್ನವೇ ಪ್ರಧಾನ ...ಂತ್ರಿಯೂ ಆದರು.

...ಬಡಿವಾರದ ಬದುಕಲ್ಲಿ ಅದೆಷ್ಟೇ ಬಡಿದಾಡಿಕೊಂಡಿದ್ದು ...ಧಿಸಲಾಗುವುದೋ, ಇಲ್ಲವೋ ಆದರೆ ಬಹಳಷ್ಟು ಜನರ ...ಧನೆಯ ಸೂಕ್ಷ್ಮ ಪರಿಚಯವಾಗುವುದೂ ಕೂಡ ಅವರ ...ವಿನ ನಂತರವೇ. ಆದರಲ್ಲೂ ಭಾರತದ ಆಧ್ಯಾತ್ಮಿಕ ...ತ್ತು ಧಾರ್ಮಿಕ ಇತಿಹಾಸಗಳನ್ನು ನೋಡಿದರೆ, ಧಾರ್ಮಿಕ ...ಥವಾ ಆಧ್ಯಾತ್ಮಿಕ ನಾಯಕರು ಅಥವಾ ಹೋರಾಟಗಾರರು ...ಮೇಲೆ ಸಂತರಾಗಿಬಿಡುತ್ತಾರೆ. ಅವರ ಬಗ್ಗೆಯಂತೂ ...ನೇಕಾನೇಕ ದಂತಕಥೆಗಳು ಹುಟ್ಟಿಕೊಳ್ಳುತ್ತವೆ. ಅವು ...ಳಿಗೆಯಿಂದ ಪೀಳಿಗೆಗೆ ದಾಟುತ್ತಾ ಅದೆಲ್ಲವೂ ಸತ್ಯ ...ಟನೆಗಳಾಗಿಯೇ ನಂಬಲ್ಪಡುತ್ತದೆ. ಆಗಿನ ಕಾಲದಲ್ಲಿ ...ವಂತರಿಗೆ ಪೌರಾಣಿಕ ಘಟನೆಗಳೆಲ್ಲವೂ ಸಾಧ್ಯ ಎಂದು ...ಗಲೂ ಅದೆಷ್ಟೋ ಜನರು ನಂಬುತ್ತಾರೆ. ಅಂಥಾ ...ರಾಣಿಕ ಅಥವಾ ಪವಾಡ ಸದೃಶವಾದಂತಹ ...ಟನೆಗಳನ್ನೂ, ಅದನ್ನು ನಡೆಸಲು ಸಾಧ್ಯವಿರುವಂತಹ ...ವಂತರನ್ನು ಈಗಲೂ ಎದುರು ನೋಡುತ್ತಿರುವ ಜನರನ್ನು ...ವಾಗಿಯೂ ಕಂಡಿದ್ದೇನೆ.

ಪವಾಡವೇ ಮಹಾಂತನ ಮಾನದಂಡ

...ಪವಾಡಗಳನ್ನು ಮಾಡದೇ ಹೋದರೆ ಅವನು ...ರಮಪುರುಷನಾಗಲಿಕ್ಕೆ, ಮಹಾಂತನಾಗಲಿಕ್ಕೆ, ಮಹಾ ...ತನಾಗಲಿಕ್ಕೆ ಸಾಧ್ಯವೇ ಇಲ್ಲ.

...ತಂದೆ ವಿಠಲ ಪಂತ ಸನ್ಯಾಸಿಯಾಗಿದ್ದವನು ಸಂಸಾರಿ ...ದ ಎಂಬ ಒಂದೇ ಕಾರಣಕ್ಕೆ ಬಹಿಷ್ಕಾರವನ್ನು ಹಾಕಿ, ...ವಮಾನಗಳನ್ನು ಮಾಡಿ ಕೊನೆಗೆ ಪ್ರಾಣವನ್ನೇ ಕಸಿದುಕೊಂಡ ...ಬ್ರಾಹ್ಮಣ ಸಮಾಜವು ಜ್ಞಾನೇಶ್ವರನನೂ ಅತಿ ...ಕ್ಕವಯಸ್ಸಿನಲ್ಲೇ ಆತ್ಮಹತ್ಯೆ ಮಾಡಿಕೊಂಡು ಸತ್ತ ಮೇಲೆ "...ಜ್ಞಾನೇಶೋ ಭಗವಾನ್ ವಿಷ್ಣುಃ ನಿವೃತ್ತಿ ಭಗವಾನ್ ಹರಃ ...ೋಪಾನೋ ಭಗವಾನ್ ಬ್ರಹ್ಮಾ ಮುಕ್ತಾಖ್ಯಾ ಬ್ರಹ್ಮಣಃ ...ಾ" ಅಂದರೆ ಹರನೇ ನಿವೃತ್ತಿನಾಥನಾಗಿ, ವಿಷ್ಣುವೇ ...ಜ್ಞಾನೇಶ್ವರನಾಗಿ, ಬ್ರಹ್ಮದೇವನೇ ಸೋಪಾನದೇವನಾಗಿ ಹಾಗೂ ...ಗವಂತನಲ್ಲಿಯ ಚಿತ್ಕಳೆಯೇ ಮುಕ್ತಾಬಾಯಿಯಾಗಿ ...ವತಾರ ತಾಳಿದರೆಂದು ಕೊಂಡಾಡಿದರು.

ಸನ್ಯಾಸಿಯ ಮಕ್ಕಳಾಗಿ ಹುಟ್ಟಿದ ಪಾಪಿಗಳಾಗಿದ್ದ ನಿವೃತ್ತಿ ...ನ, ಸೋಪಾನ ಮತ್ತು ಮುಕ್ತಾ ಒಂದೊಂದು ದಿನವೂ ...ಮಾಜಿಕವಾಗಿ ನರಳಿದ್ದವರೇ. ಅವರು ಬೇರೆ ಯಾವ ...ಕ್ಕಳ ಜೊತೆಗೆ ಸೇರದಂತೆ ಎಚ್ಚರವಹಿಸಿತ್ತು ವಿಪ್ರ ಸಮಾಜ.

ಒಮ್ಮೆ ಹುಲಿಯಿಂದ ತಪ್ಪಿಸಿಕೊಳ್ಳಲು ವಿಠಲ ಪಂತನ ...ಟುಂಬವು ಅರಣ್ಯದಲ್ಲಿ ದಿಕ್ಕಾಪಾಲಾಗಿ ಓಡಿದಾಗ ...ವೃತ್ತಿಯು ಅಂಜಲಿ ಪರ್ವತದ ಒಂದು ಗುಹೆಯನ್ನು ...ಕ್ಕನು. ಅದರಲ್ಲಿ ಗೋರಕ್ಷನಾಥರ ಶಿಷ್ಯ ಗಹಿನೀನಾಥರು ...ವ ಶಿಷ್ಯರೊಡನೆ ಇದ್ದರು. ಅಲ್ಲಿ ನಿವೃತ್ತಿಗೆ ದೀಕ್ಷೆ ಲಭಿಸಿತು. ...ಥ ಸಂಪ್ರದಾಯದೊಡನೆ ಭಾಗವತ ಧರ್ಮವು ಕೂಡಿ ...ಂದೆ ಮಹಾರಾಷ್ಟ್ರದಲ್ಲಿ ಅತ್ಯಂತ ದೊಡ್ಡ ಪಂಥವಾಗಿ ...ೆಳೆಯಿತು. ನಾಥ ಸಂಪ್ರದಾಯದ ಈ ಭಕ್ತಿ ಪ್ರವಾಹವು ...ರಕರಿ ಸಂಪ್ರದಾಯದಲ್ಲಿಯೂ ಸೇರಿತು. ನಿವೃತ್ತಿನಾಥನು ...ತಮ್ಮ ಜ್ಞಾನೇಶ್ವರನಿಗೆ ದೀಕ್ಷೆ ನೀಡಿದನು.

...ಸ್ವಯಂ ಜ್ಞಾನೇಶ್ವರನೇ ಉಲ್ಲೇಖಿಸುವಂತೆ ಅವರ ಗುರುಪರಂಪರೆಯು ಆದಿನಾಥ, ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಗಹಿನೀನಾಥ, ನಿವೃತ್ತಿನಾಥ, ಜ್ಞಾನೇಶ್ವರ. ಇರಲಿ, ವಿಠಲ ಪಂತನ ನಾಲ್ವರೂ ಮಕ್ಕಳು ಸಾತ್ವಿಕರೂ ಮತ್ತು ಜ್ಞಾನಿಗಳೂ, ಜೊತೆಗೆ ಅಪಾರ ಆಸಕ್ತಿಯನ್ನು, ಆಸಕ್ತಿಗೆ ತಕ್ಕ ಅಭ್ಯಾಸವನ್ನು ಆಧ್ಯಾತ್ಮದಲ್ಲಿ ಹೊಂದಿದ್ದರು.

ಇವಿಷ್ಟೇ ಆದರೆ ಸಾಮಾನ್ಯ ಜನರನ್ನು ಅವರು ತಲುಪಲು ಸಾಧ್ಯವಿಲ್ಲ, ಆಧ್ಯಾತ್ಮ ಸಾಧನೆಗಳೇನಿದ್ದರೂ ಸಾಮಾನ್ಯವಾಗಿ ತೀರ ವ್ಯಕ್ತಿಗತವೇ. ತಾನು ತನ್ನಲ್ಲಿ, ತನ್ನ ಆತ್ಮವು ಪರಮಾತ್ಮನಲ್ಲಿ, ತನ್ನ ಜ್ಞಾನೋದಯ ಇತ್ಯಾದಿಯಾಗಿ ಎಲ್ಲವೂ ಆತ್ಮಕೇಂದ್ರಿತವೇ. ಆದರೆ ಅವರ ಆಕರ್ಷಣೆಯಿಂದ ಮಾತ್ರ ಜನಸಾಮಾನ್ಯರಿಗೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಮೊದಲನೆಯದಾಗಿ ತಾವು ಹೆಂಡತಿ ಮಕ್ಕಳು ಸಂಸಾರ ಎಂದು ಒದ್ದಾಡಿಕೊಂಡಿರುವಾಗ, ಕಾಮ ಮತ್ಸರ ಕ್ರೋಧಾದಿ ವಿಷಯಗಳಿಂದ ಮಾನಸಿಕವಾಗಿ ಮತ್ತು ಆದರಿಂದಲೇ ಉಂಟಾದ ದೈಹಿಕ ತೊಂದರೆಗಳನ್ನು ಅನುಭವಿಸುವಾಗ, ಅಶಾಂತಿಯಿಂದ ಕಂಗೆಟ್ಟಾಗ, ತಮ್ಮ ವ್ಯವಸ್ಥೆಯೊಳಗೆಯೇ ಸರಿಪಡಿಸಿಕೊಳ್ಳಲು ಅಥವಾ ಶಾಂತಿ ಹೊಂದಲು ಅಧ್ಯಾತ್ಮದ ಭಾಗಶಃ ನೆರವನ್ನು ಪಡೆಯಲು ಬರುತ್ತಾರೆ. ಹಾಗಾಗಿ, ವ್ಯವಸ್ಥೆಯೊಳಗೆ ಉಳಿದೇ ನೆರವನ್ನು ಪಡೆಯುವ ಈ ಜನರಿಗೆ ಸಂತರ ಮೇಲೆ, ಅಧ್ಯಾತ್ಮಿಕ ನಾಯಕರ ಮೇಲೆ ಅಪಾರ ಗೌರವ. ಇದೇ ಜನರು ಮುಂದೆ ತಮ್ಮ ಲೌಕಿಕ ಅಭಿರುಚಿಗೆ ತಕ್ಕಂತೆ ತಮ್ಮ ನೆಚ್ಚಿನ ಸಂತರನ್ನು ವೈಭವೀಕರಿಸಲೂ ಮುಂದಾಗುತ್ತಾರೆ. ತಮ್ಮ ಲೌಕಿಕ ಪ್ರಪಂಚದಲ್ಲಿ ಕಂಡಂತೆ ಮತ್ತೊಬ್ಬನ ನೆಚ್ಚಿನ ಸಂತನನ್ನೋ, ಆಧ್ಯಾತ್ಮಿಕ ಅಥವಾ ಧಾರ್ಮಿಕ ನಾಯಕನನ್ನೋ ಕಂಡು ಅವನಿಗಿಂತ ತಮ್ಮ ನೆಚ್ಚಿನ ಸಂತನೇನೂ ಕಡಿಮೆ ಇಲ್ಲ ಎಂಬಂತೆ ಇನ್ನಷ್ಟು ಉಪ್ಪು ಹುಳಿ ಖಾರಗಳನ್ನು ಹಚ್ಚಿ ಮಹಿಮೆಯನ್ನು ಸ್ಪರ್ಧಾತ್ಮಕವಾಗಿ ಹರಡುತ್ತಾ ಹೋಗುತ್ತಾರೆ.

ಅದೆಷ್ಟೋ ಕಾಲಾನಂತರ ಅಂತಹ ದಡ್ಡ ಮತ್ತು ಮೂರ್ಖರ ಕಥೆಗಳನ್ನು ಹಿಡಿದುಕೊಂಡು ದೊಡ್ಡ ದೊಡ್ಡ ವಿದ್ವಾಂಸರು, ವಿಶ್ಲೇಷಕರು, ಸಂಶೋಧಕರು ಮಾನವಶಾಸ್ತ್ರೀಯ ಅಧ್ಯಯನದ ಮೂಲಕ ಇದನ್ನು ಹೇಗೆ ಗ್ರಹಿಸುವುದು? ಸಾಂಸ್ಕೃತಿಕ ಅಧ್ಯಯನದಲ್ಲಿ ಇದು ಹೇಗೆ ತೋರುತ್ತದೆ? ಆಧ್ಯಾತ್ಮಿಕವಾಗಿ ಇದರ ಒಗಟನ್ನು ಹೇಗೆ ಬಿಡಿಸುವುದು? ರೂಪಕದಲ್ಲಿ ಹೇಳಲಾಗಿರುವ ಈ ವಿಷಯಗಳು ಏನನ್ನು ಸೂಚಿಸಬಹುದು? ಸಾಮಾಜಿಕವಾಗಿ ಇದು ಏನು ಹೇಳುತ್ತದೆ ಎಂದೆಲ್ಲಾ ಒದ್ದಾಡುತ್ತಿರುತ್ತಾರೆ. ಕೆಲವೊಮ್ಮೆ ವಿಷಯಗಳು ಗೋಚರವಾಗುತ್ತವೆ. ವಸ್ತುಸ್ಥಿತಿಗಳು ತಿಳಿಯುತ್ತವೆ. ಆದರೆ, ಮತ್ತೂ ಕೆಲವೊಮ್ಮೆ ಗೊಂದಲಗಳಿಂದ ಕೂಡಿದ ಅಂತಹ ಕೃತಿಗಳನ್ನು ವರ್ಷಾನುಗಟ್ಟಳೆ ಚರ್ಚೆ ಮಾಡುತ್ತಾ "ಇನ್ನೂ ಕೆಲವು ಅಂಶಗಳು ಚರ್ಚಾಸ್ಪದವಾಗಿದೆ. ವಿದ್ವಾಂಸರು ಒಮ್ಮತದ ಅಭಿಪ್ರಾಯಕ್ಕೆ ಬರಲಾಗಿಲ್ಲ" ಎಂದೆಲ್ಲಾ ಮಾತಾಡುತ್ತಿರುತ್ತೇವೆ.

ಪ್ರಾಮಾಣಿಕವಲ್ಲದ, ನೇರ ಮತ್ತು ನಿಷ್ಠುರವಲ್ಲದ ಸಾಹಿತ್ಯಗಳು ಮತ್ತು ಕಥೆಗಳು ಒಡ್ಡುವ ತೊಂದರೆಗಳೇ ಇವು. ಮುಂದಿನ ಪೀಳಿಗೆಯವರ ಬಹುಪಾಲು ಸಮಯ ಮತ್ತು ಶ್ರಮವನ್ನು ಅನವಶ್ಯಕವಾಗಿ ಪೋಲು ಮಾಡಬೇಕೆಂದರೆ ಧಾರ್ಮಿಕ, ಸಾಂಸ್ಕೃತಿಕವಾದ ಧ್ವನಿಗಳನ್ನು ವಿಚಿತ್ರವಾಗಿ, ಗೊಂದಲಪೂರಿತವಾಗಿ ಅತಿದೊಡ್ಡ ದೊಡ್ಡ ಶಬ್ದಗಳಿಂದ, ವರ್ಣರಂಜಿತವಾಗಿ ದಾಖಲು ಮಾಡಿಬಿಡುವುದು. ವಿಜ್ಞಾನ, ತಂತ್ರಜ್ಞಾನ ಮತ್ತು ರಾಜಕೀಯದಂತಹ ಬದುಕಿಗೆ ಅವಶ್ಯಕವಾಗಿ ಬೇಕಾಗಿರುವ ವಿಷಯಗಳನ್ನು, ಮಾನವ ಸಂಬಂಧ, ಸಾಮರಸ್ಯಗಳನ್ನೆಲ್ಲಾ ಬಿಟ್ಟು-ಶ್ರದ್ಧೆ ನಂಬಿಕೆ, ಕುಲದ ಬಡಿಂಬಟಿ, ಪರಂಪರೆ ಇತ್ಯಾದಿಗಳನ್ನು ಹೇಳಿಕೊಂಡು, ಹಳೆಯ ಪುರಾಣಗಳನ್ನು ರುಬ್ಬಿಕೊಂಡು ಸಾಯಲಿ!

ಜ್ಞಾನದೇವನ ನಿಲುವು

ಇಷ್ಟಾದರೂ ಇಂತಹ ಕಥೆಗಳು ನಾನಾ ಕಾರಣಗಳಿಗೆ ನಿಜಕ್ಕೂ ಅಧ್ಯಯನಕ್ಕೆ ಯೋಗ್ಯ ವಸ್ತುವೇ! ಏಕೆಂದರೆ, ಕಥಾಕಥಿಕವಾಗಿ ನಂಬಿರುವ ತಮ್ಮ ಸಹಜೀವಿಗಳಿಗೆ ಅವರ ಶ್ರಮ ಮತ್ತು ಸಮಯವನ್ನು, ಸಂಪನ್ಮೂಲಗಳನ್ನು ಅನವಶ್ಯವಾಗಿ ಪೋಲು ಮಾಡಬೇಡಿ ಎಂದು ಹೇಳಲಾದರೂ ಕೆಲವರು ಇವುಗಳ ಅಧ್ಯಯನಗಳನ್ನು, ಸಂಶೋಧನೆಗಳನ್ನು ಮಾಡಲೇಬೇಕು.

ಇರಲಿ, ತಂದೆತಾಯಿಗಳಿಬ್ಬರನ್ನೂ ಕಳೆದುಕೊಂಡಾಗ ನಿವೃತ್ತಿನಾಥನಿಗೆ ಬರಿಯ ಹತ್ತು ವರ್ಷ, ಅವನಿಗಿಂತ ಎರಡು ವರ್ಷ ಚಿಕ್ಕವನು ಜ್ಞಾನದೇವ. ಅಂತೆಯೇ ಉಳಿದಿಬ್ಬರಿಗೂ ಎರಡೆರಡು ವರ್ಷಗಳ ಅಂತರ.

ವಿಠಲ ಪಂತನಿಗೆ ಕಾಡಿದ್ದಂತೆ ಉಪನಯನದ ಚಿಂತೆ ಜ್ಞಾನದೇವನಿಗೂ ಕಾಡಿತ್ತು, ಆದರೆ ನಿವೃತ್ತಿನಾಥ ಮತ್ತು ಸೋಪಾನರಿಬ್ಬರೂ ತಾವು ವರ್ಣಾಶ್ರಮಧರ್ಮವನ್ನು ಮೀರಿದವರಾಗಿಯೂ, ನಮಗೆ ಇಂತಹ ಸಂಸ್ಕಾರಗಳ ಅಗತ್ಯವಿಲ್ಲ ಎಂಬುದಾಗಿಯೂ ಮನವರಿಕೆ ಮಾಡಿಕೊಟ್ಟರು. ಅಂತಹ ಧಾರ್ಮಿಕ ಸಂಸ್ಕಾರವನ್ನು ತಿರಸ್ಕರಿಸಿದರು.

ಆಧರೆ ಜ್ಞಾನದೇವನು ಧರ್ಮವನ್ನು ತಿರಸ್ಕರಿಸಲು ಒಪ್ಪಲಿಲ್ಲ, ಸಮಾಜದ ಜನರಲ್ಲಿ, ಒಬ್ಬೊಬ್ಬ ವ್ಯಕ್ತಿಯಲ್ಲೂ ಅಂತರ್ಗತವಾಗಿರುವ ಧರ್ಮವನ್ನು ನಿರಾಕರಿಸುವ ಬದಲು ಅದರ ಮೂಲಕವೇ ಸಮಾಜದಲ್ಲಿ ಬದಲಾವಣೆಯನ್ನು ತರಬೇಕೆಂದು ಸ್ಪಷ್ಟವಾಗಿ ಹೇಳುತ್ತಾನೆ. ಜನರಿಗೆ ಲೌಕಿಕದ ಮೂಲಕವೇ ಅಲೌಕಿಕವನ್ನು ಬೋಧಿಸಬೇಕೆಂದು ಬಯಸುತ್ತಾನೆ. ವೈದಿಕತೆಯಿಂದ ಅದೆಷ್ಟೋ ತೊಂದರೆಯನ್ನು ಅನುಭವಿಸಿದ್ದರೂ, ಅದು ಉಂಟುಮಾಡಿದ ಕೆಡುಕುಗಳಿಗೆ ತಾನೇ ನೇರ ಫಲಾನುಭವಿಯಾಗಿದ್ದರೂ ಅದನ್ನು ಬಿಟ್ಟು ಕೊಡದ ಜ್ಞಾನದೇವ ಭಗವದ್ಗೀತೆಯನ್ನು ಮರಾಠಿಯಲ್ಲಿ ಜ್ಞಾನೇಶ್ವರಿ ಎಂದು ಬರೆಯುತ್ತಾನೆ. ಅದರಲ್ಲಿ ತನ್ನ ವಿಷಯಗಳನ್ನು, ವಿಶ್ಲೇಷಣೆಗಳನ್ನು, ಒಲವು, ನಿಲುವುಗಳನ್ನು ಬೆರೆಸುತ್ತಾ ಹೋಗುತ್ತಾನೆ.


ಪೈಠಣದಲ್ಲಿ ಪವಾಡ


ಪೈಠಣ ಆ ಕಾಲದ ಮಹಾರಾಷ್ಟ್ರದ ಸಾಂಸ್ಕೃತಿಕ ಕೇಂದ್ರವೆನ್ನಬಹುದು. ಅಲ್ಲಿಗೆ ಜ್ಞಾನದೇವ ಮತ್ತು ಒಡಹುಟ್ಟುಗಳು ದೊಡ್ಡ ದೊಡ್ಡ ಶಾಸ್ತ್ರಿಗಳ ವೃಂದಗಳಿರುವ ಕಡೆ ಹೋಗಿ ತಮ್ಮ ಬಗ್ಗೆ ನಿವೇದಿಸಿಕೊಂಡರು.

ಆದರೆ ಅವರ ಶಾಸ್ತ್ರದ ಪ್ರಕಾರ ಅವರಿಗೆ ಮನ್ನಣೆ ಸಿಗಲಿಲ್ಲ, ಹೊರಗೆ ಹಲವಾರು ಜನ ಇವರ ವಿದ್ವತ್ತಿನ ಬಗ್ಗೆ ಆಡಿಕೊಂಡು ನಕ್ಕರು. ಆಗ ಜ್ಞಾನದೇವ ಒಬ್ಬನ ಕುಚೇಷ್ಟೆಗೆ ಉತ್ತರವಾಗಿ ಅಲ್ಲೇ ದಾರಿಯಲ್ಲಿ ಬರುತ್ತಿದ್ದ ಕೋಣದ ಬಾಯಿಂದ ವೇದವನ್ನು ಹೇಳಿಸಿದನಂತೆ. ಆಗ ಜನರೆಲ್ಲ ಬೆರಗಾದರು. ಆದೇ ರೀತಿ ಈ ನಾಲ್ವರೂ ಒಬ್ಬ ಗೃಹಸ್ಥನ ಮನೆಯಲ್ಲಿ ತಂಗಿದ್ದಾಗ, ಇವರಿದ್ದ ಕಾರಣಕ್ಕೇ ವೈದಿಕರು ಆ ಗೃಹಸ್ಥನ ಮನೆಯಲ್ಲಿ ಶ್ರಾದ್ಧ ಮಾಡಿಸಲು ಬರಲಿಲ್ಲ, ಆಗ ಈ ಜ್ಞಾನದೇವ ಮತ್ತು ನಿವೃತ್ತಿನಾಥರು ಸಾಕ್ಷಾತ್ ಸತ್ತು ಸ್ವರ್ಗದಲ್ಲಿದ್ದ ಆ ಗೃಹಸ್ಥನ ಪಿತೃಗಳು ಕೆಳಗಿಳಿದು ಬಂದು ಮಣೆಯ ಮೇಲೆ ಕೂತು, ಪೂಜೆ ಸ್ವೀಕರಿಸಿ, ಉಂಡುಹೋದರು. ಆಗ ಜ್ಞಾನೇಶ್ವರನ ಮಹಿಮೆ ಹರಡಿತು. ಪೈಠಣದಲ್ಲಿ ಜ್ಞಾನದೇವ ಬ್ರಾಹ್ಮಣರ ಗರ್ವಭಂಗ ಮಾಡಿ, ಎಲ್ಲರೊಡನೆ ಅಧ್ಯಾತ್ಮ ಮತ್ತು ಗೀತೆ ಇತ್ಯಾದಿಗಳ ಬಗ್ಗೆ ಸಂವಾದ, ಚರ್ಚೆಗಳನ್ನು ಮಾಡುತ್ತಾ ಮತ್ತಷ್ಟು ಖ್ಯಾತಿಯನ್ನು ಹೊಂದಿದನು.


ಮುಂದೆ ಇದೇ ಜ್ಞಾನದೇವ ನೇವಾಶಕ್ಕೆ ಹೋದಾಗ ಒಬ್ಬ ಸತ್ತುಹೋಗಿದ್ದು ಸಂಬಂಧಿಕರು ಅಳುತ್ತಿದ್ದರು. ಆತನ ಹೆಸರು ಸಚ್ಚಿದಾನಂದ ಎಂದು ತಿಳಿದುಬಂತು. ಅವನನ್ನು ಜ್ಞಾನದೇವನು ಬದುಕಿಸಿದನು. ಅವನೇ ಮುಂದೆ ಸಚ್ಚಿದಾನಂದಬಾಬಾ ಎಂಬ ಹೆಸರಿನಿಂದ ಜ್ಞಾನದೇವನ ಗೀತಭಾಷ್ಯಕಾರನಾದನು.

ಮುಕ್ತಾಬಾಯಿ ಒಮ್ಮೆ ತನ್ನ ಸೋದರನಿಗೆ ಮಂಡಿಗೆಯನ್ನು ಸುಟ್ಟುಕೊಡಲು ಮಣ್ಣಿನ ಹರಿವೆಗಾಗಿ ಕುಂಬಾರನ ಬಳಿಗೆ ಹೋದಳು. ಕುಂಬಾರನು ಕೊಡಲಿದ್ದರೂ ವಿಸೋಬಾ ಚಾಟಿ ಎಂಬ ಬ್ರಾಹ್ಮಣನು ಅವಳಿಗೆ ಅದನ್ನು ಕೊಡಲು ಬಿಡದೇ ಸನ್ಯಾಸಿಯ ಮಕ್ಕಳು, ಜೀವನ್ಮುಕ್ತಿಯ ಬಗ್ಗೆ ಮಾತಾಡುವವರು ನಿಮಗೇಕೆ ನಾಲಿಗೆಯ ಚಪಲ ಎಂದೆಲ್ಲಾ ಹಂಗಿಸಿ, ದೂಷಿಸಿ ಅವಳನ್ನು ನೋಯಿಸಿ ಕಳುಹಿಸಿದನು. ವಿಸೋಬಾ ಚಾಟಿಯು ಬಂದು ಕಿಟಕಿಯಲ್ಲಿ ನೋಡಲು, ಜ್ಞಾನೇಶ್ವರನು ಅಂಗಿಯನ್ನು ತೆಗೆದು ತನ್ನ ಬೆನ್ನಿನ ಮೇಲೆಯೇ ಮಂಡಿಗೆಯನ್ನು ಮಾಡಲು ಅನುವು ಮಾಡಿದನು. ಅವನ ಬೆನ್ನೇ ಸುಡುವ ಕಾವಲಿಯಾಗಿದ್ದು





ಜ್ಞಾನದೇವ



ಅದರ ಮೇಲೆಯೇ ಮುಕ್ತಾ ಅಡುಗೆ ಮಾಡಿದಳು.


ಇಷ್ಟಕ್ಕೇ ಜ್ಞಾನದೇವನ ಪವಾಡಗಳು ಮುಗಿಯುವುದಿಲ್ಲ, ಜ್ಞಾನದೇವನು ಸತ್ತ ನಂತರ ಅದ್ಯಾವ ಕಾಲದಲ್ಲಿ ಅವನ ಜೀವನದ ಘಟನೆಗಳಿಗೆ ಪವಾಡಗಳ ಲೇಪಗಳು ಹಚ್ಚಿಕೊಂಡವೋ ತಿಳಿಯದು. ಆದರೆ ಅವನಿಗಂತೂ ಕರ್ಮಠ ಸಮಾಜದಲ್ಲಿ ಒಂದೊಂದು ದಿನವೂ ಬದುಕಿ, ತಾನು ಹೇಳಬೇಕಾಗಿರುವುದನ್ನೆಲ್ಲಾ ಬರೆದಿರಿಸಿ, ತಾನೇ ಒಬ್ಬ ಮಹಾನ್ ಸಂತನಾಗಿದ್ದು ಈಗ ಇಷ್ಟೊಂದು ಗೌರವಕ್ಕೆ ಪಾತ್ರವಾಗಿರುವುದಂತೂ ದೊಡ್ಡ ಪವಾಡವೇ ಸರಿ.

ಮೊದಲು ಸಾಯಬೇಕು. ಅದು ಹೇಗಾದರೂ ಸರಿ. ಸತ್ತ ಮೇಲೆ ಅವರ ಸಮಕಾಲೀನರೆಲ್ಲಾ ಮರೆಯಾಗುತ್ತಾ ಹೋಗುವಾಗ ಅವರ ನಾಮದ ಲಾಂಛನವನ್ನು ಎತ್ತಿ ಹಿಡಿದಿರುವ ಜನರು ಅವರನ್ನು ಪವಾಡಪುರುಷರನ್ನಾಗಿಸುತ್ತಾ ಹೋಗುತ್ತಾರೆ. ಅದೇ ಪುರಾಣವನ್ನು ಇತಿಹಾಸ ಎನ್ನುತ್ತಾರೆ.

ಪೈಠಣದಲ್ಲಿ ಒಬ್ಬ ಸಾಮಾನ್ಯ ಗೃಹಸ್ಥ ತಿರಸ್ಕಾರಕ್ಕೆ ಒಳಗಾಗಿದ್ದ ಜ್ಞಾನೇಶ್ವರನನ್ನೂ ಮತ್ತು ಅವನ ಒಡಹುಟ್ಟುಗಳನ್ನು, ಮಕ್ಕಳೆಂದೂ, ಜ್ಞಾನಿಗಳೆಂದೂ ಮರುಕದಿಂದ ಮತ್ತು ಮೆಚ್ಚುಗೆಯಿಂದ ಕರೆತಂದಿದ್ದು ಅದೇ ಕಾಲಕ್ಕೆ ಅವನ ಹಿರಿಯರ ಶ್ರಾದ್ಧವೂ ಇದ್ದು ಬ್ರಾಹ್ಮಣರು ಅವನು ಸೇರಿಸಿಕೊಂಡಿರುವ ಮಕ್ಕಳ ಕಾರಣಕ್ಕೆ ಬರದೇ ಹೋಗುವರು. ಶ್ರಾದ್ಧದ ಬಗ್ಗೆ ಮತ್ತು ಪಿತೃಋಣದ ಬಗ್ಗೆ ವೈಚಾರಿಕವಾಗಿ ಅಥವಾ ಆಧ್ಯಾತ್ಮಿಕವಾಗಿ ಮಾತಾಡಿರುವ ಜ್ಞಾನೇಶ್ವರ ಮತ್ತು ನಿವೃತ್ತಿನಾಥರ ವಿಚಾರಗಳಿಗೆ ಒಪ್ಪಿದ ಗೃಹಸ್ಥನು ಶ್ರಾದ್ಧಾ ಮಾಡುವ ವಿಚಾರದ ಬಗ್ಗೆ ಬೇರೆಯೇ ನಿಲುವನ್ನು ತಳೆದಿರುತ್ತಾನೆ.

ತಾತ್ವಿಕವಾದ ಗೊಂದಲವೂ ನಿವಾರಣೆಯಾಗಿರುತ್ತದೆ. ಅವನಿಗೆ ನಿಜವಾಗಿಯೂ ತನ್ನ ಪಿತೃಗಳೇ ಬಂದು ಉಂಡು ಹೋದಷ್ಟು ಸಂತೋಷವಾಗಿರುತ್ತದೆ.

ಅವನು ಅದನ್ನು ಹಾಗೆಯೇ ಉಲ್ಲೇಖಿಸಿದ್ದನ್ನು ಮುಂದೆ ಕಾಲಾನಂತರ 'ಬಂದು ಉಂಡೇ ಹೋದರು' ಎಂದು ಪುರಾಣಪ್ರೇಮಿಗಳು ದಾಖಲಿಸಿದರೋ ಅಥವಾ ಅದೇ ಗೃಹಸ್ಥನು ಜ್ಞಾನದೇವನು ಹೊರಟುಹೋದ ಮೇಲೆ ತಾನು ನಿತ್ಯ ಏಗಬೇಕಾಗಿರುವ ಬ್ರಾಹ್ಮಣರಿಗೆ ಹಾಗೊಂದು ಪವಾಡ ಸದೃಶವಾದ ಕಥೆ ಕಟ್ಟಿದನೋ ಯಾರಿಗೆ ಗೊತ್ತು? ಏಕೆಂದರೆ ಜ್ಞಾನದೇವನ ನಿರ್ಗಮನದ ನಂತರ ಅವನು ಪೈಠಣದಲ್ಲಿ ಅದೇ ಸಮಾಜದಲ್ಲಿ, ಬ್ರಾಹ್ಮಣರೊಂದಿಗೆ ಇರಬೇಕಿತ್ತು. ಸರಳವಾಗಿ ಒಪ್ಪಿಸಲಾಗದ ಜ್ಞಾನದೇವನನ್ನು ಒಪ್ಪಿಸಲು ಈ ತಂತ್ರವನ್ನೇನಾದರೂ ಬಳಸಿದ್ದರೂ ಆಶ್ಚರ್ಯವೇನೂ ಇಲ್ಲ. ■



ತುಂಬಿ ತುಳುಕುತ್ತಿದೆ ನಮ್ಮಯ ಸ್ತ್ರೀ ಕಾಳಜಿ

ಗೌರಿ ಮೇಡಮ್ ಬರೆದ 'ಭಾರತದ ಮಗಳು' ಸಂಪಾದಕೀಯ ಮನಸ್ಸಿಗೆ ನಾಟುವಂತಿತ್ತು. ಶಿಖಾ ಸೂದ್ ಅವರು ಹೇಳುವಂತೆ ಭಾರತೀಯರ 'ಪುರುಷಪ್ರಧಾನ ಮನಸ್ಥಿತಿ' ಬದಲಾಗದೇ ಯಾವ ಪರಿವರ್ತನೆಯೂ ಕಾರ್ಯರೂಪಕ್ಕೆ ಬರದು. 'ಇಂಡಿಯಾಸ್ ಡಾಟರ್' ಸಾಕ್ಷ್ಯ ಚಿತ್ರದಲ್ಲಿ ನಿರ್ಭಯಾ ಕೇಸಿನ ಆರೋಪಿ ಮುಖೇಶ್ ಸಿಂಗ್ ತನ್ನ ಕೃತ್ಯದ ಬಗ್ಗೆ ಯಾವುದೇ ಪಶ್ಚಾತ್ತಾಪದ ಛಾಯೆ ಇಲ್ಲದೇ ಸಂಸ್ಕೃತಿ ವಕ್ತಾರನಂತೆ ಮಾತಾಡುತ್ತಾ ದೇಶದ ಹೆಣ್ಣುಮಕ್ಕಳಿಗೇ ಬುದ್ಧಿವಾದ ಹೇಳುತ್ತಾ ತನ್ನ ಪುಣ್ಯಕಾರ್ಯ(ತಪ್ಪಿತಸ್ಥಳಿಗೆ ತಕ್ಕ ಶಿಕ್ಷೆ ನೀಡಿದಂತಹ)ವನ್ನು ಸಮರ್ಥಿಸುವುದನ್ನ ನೋಡಿದಾಗ ಈ ದೇಶ ಯಾವ ದಿಕ್ಕಿನೆಡೆಗೆ ಸಾಗುತ್ತಿದೆಯೆಂದೇ ಅರ್ಥವಾಗದು. ಅದಕ್ಕಿಂತ ದುರಂತವೆಂದರೆ, ಈತನೇನೋ ಕುಡುಕ, ಹಾದಿತಪ್ಪಿದವ ಆದರೆ ದೇಶದ ಸಂವಿಧಾನದ ಬಗ್ಗೆ ಅರಿವಿರುವ, ನ್ಯಾಯನೀತಿಗಳ ಕುರಿತಾಗಿ ಕಾನೂನಿನ ಅಧ್ಯಯನ ನಡೆಸಿರುವ ಶರ್ಮಾ ಎನ್ನುವ ಹಿರಿಯ ವಕೀಲನೂ ಅಂತಾರಾಷ್ಟ್ರೀಯ ಮಟ್ಟದ ಮಾಧ್ಯಮವೊಂದರ ಬಳಿ ಮಾತಾಡುತ್ತಾ ಉದ್ದೇಶ ಪೂರ್ವಕವಾಗಿ ತನ್ನ ಮರ್ಯಾದಾ ಹತ್ಯೆ ಪರ ನಿಲುವನ್ನು ಸಮರ್ಥಿಸುವ, ಸ್ತ್ರೀಯರು ತಮ್ಮ ಮಿತಿಯೊಳಗಿದ್ದರೇನೇ ಚೆಂದ ಹೊರಗೆ ಬೇಕಾಬಿಟ್ಟಿ ಅಡ್ಡಾಡುವುದು ಅಪಾಯಕಾರಿ ಎನ್ನುವಂತಹ ಮಾತನಾಡಿದ್ದು ಅತ್ಯಂತ ಹೇಯ ಸಂಗತಿ ಎನ್ನದೇ ವಿಧಿಯಿಲ್ಲ.

ಯಾಕೆಂದರೆ ಇಂದಿರಾ ಗಾಂಧಿ ಮತ್ತು ಕಲ್ಪನಾ ಚಾವ್ಲಾರಂತವರನ್ನು ಕೊಟ್ಟಂತಹ ದೇಶವಿದು ಎನ್ನುವುದನ್ನು ಆತ ಮರೆತಂತಿದೆ. ಎಷ್ಟೇ ಆದರೂ ಈ ಶರ್ಮಾ ಚಾಣಕ್ಯ-ಮನುಗಳ ವಂಶಜನಲ್ಲವೇ? ಚಾಣಕ್ಯ ನೀತಿಯ 6ನೇ ಅಧ್ಯಾಯದಲ್ಲಿ ಬರುವ ಒಂದು ವಾಕ್ಯ ಹೀಗಿದೆ: "ಭ್ರಮನ್ ಸಂಪೂಜ್ಯತೇ ಯೋಗಿ, ಸ್ತ್ರೀ ಭ್ರಮಂತಿ ವಿನಶ್ಯತಿ". ಅರ್ಥಾತ್ ಯೋಗಿ ತಿರುಗಾಟದಿಂದ ಖ್ಯಾತನಾದರೆ, ತಿರುಗಾಟದಿಂದ ಸ್ತ್ರೀ ವಿನಾಶ ಹೊಂದುತ್ತಾಳೆ.

ಈ ರೀತಿ ಮಾತಾಡುವವರಿಗೆ ಯಾವ ಭಯವೂ ಇಲ್ಲ. ಹಾಗಾಗಿಯೇ ಎಲ್ಲ ಗೊತ್ತಿದ್ದೂ ಕೂಡ ಶರ್ಮಾ ಬಿಬಿಸಿ ಸಂದರ್ಶನದಲ್ಲಿ ತನ್ನ ಭಾವನೆಯನ್ನು ಫಿಲ್ಟರ್ ಮಾಡದೇ ಹೊರಹಾಕಿದ್ದ. ಈ ಕಾರಣಕ್ಕೇ ವಿ.ಆರ್.ಭಟ್ಟನಂತವರು ನಿಮ್ಮಂತಹ ಮಹಿಳೆಯರನ್ನು ಜುಟ್ಟು ಹಿಡಿದು ಅತ್ಯಾಚಾರ ಮಾಡಬೇಕೆಂದು ಬಹಿರಂಗವಾಗಿ ಕರೆಕೊಟ್ಟರೆ ಇನ್ನು ಕೆಲವರು ಆರೋಪಿಯೊಬ್ಬ ಸ್ವಾಮಿ ಎನ್ನುವ ಕಾರಣಕ್ಕೆ ಅತ್ಯಾಚಾರಕ್ಕೊಳಗಾದ ಮಹಿಳೆಯ ಪರ ನಿಲ್ಲುವ ಬದಲು ಕೀಳು ಅಪಪ್ರಚಾರಗಳ ಮೂಲಕ ಆಕೆಯನ್ನು ಮತ್ತಷ್ಟು ಕುಗ್ಗಿಸಲು ಹೆಣಗುತ್ತಾರೆ.

ಬಹುಶಃ ನಮ್ಮಲ್ಲಿ ಸ್ತ್ರೀ ಎನ್ನುವುದು 'ಅಧೀನಕ್ಕೊಳಪಟ್ಟ ಒಂದು ವಸ್ತು' ಎಂಬಂತೆ ಪರಿಗಣಿತವಾಗಿರುವುದೇ ಇಂತಹ ಅಭಿಪ್ರಾಯಗಳಿಗೆಲ್ಲ ಮೂಲಕಾರಣವಿದ್ದರೂ ಇರಬಹುದು. ಯಾಕೆಂದರೆ, ಮೊನ್ನೆ ಸಂಬಂಧವಿಲ್ಲದಿದ್ದರೂ ಶರದ್ ಯಾದವ್, ತ್ರಿಪಾಠಿಯಂತವರು ರಾಜಕೀಯ ಚರ್ಚೆಯ ವೇಳೆಯಲ್ಲಿ ಅನವಶ್ಯಕವಾಗಿ ಸ್ತ್ರೀಯರ ದೇಹಸಿರಿಯನ್ನು ಎಳೆದು ತಂದು ರಂಪಾಟಕ್ಕೆ ಕಾರಣರಾಗಿದ್ದುದು ಎಲ್ಲರಿಗೂ ತಿಳಿದೇ ಇದೆ. ಮುಖೇಶ್ ಸಿಂಗ್‌ನಿಂದ ಹಿಡಿದು ಶರದ್ ಯಾದವ್‌ವರೆಗೆ ಎಲ್ಲರಿಗೂ ಏನು ಹೇಳಿದರೂ ನಡೆಯುವ 'ಅಧೀನದ ಸಂಗತಿ' ಎಂಬ ಭಾವವೇ ಇದಕ್ಕೆಲ್ಲ ಕಾರಣವಲ್ಲದೇ ಮತ್ತೇನು? ರಾಮಾಯಣದ ಸೀತೆ ಅನಿವಾರ್ಯವಾಗಿ ಗಂಡನಿಂದ ದೂರವಿರಬೇಕಾಗಿ ಬಂದು ಆ ಕಾರಣಕ್ಕಾಗಿ ಅಗ್ನಿಪರೀಕ್ಷೆಯಲ್ಲದೇ ಬಳಿಕ ತನ್ನ 'ಶೀಲ' ಶುದ್ಧತೆಯ ಅನುಮಾನಕ್ಕೊಳಗಾಗಿ ಕಾಡುಪಾಲಾಗುವ ಸಂದರ್ಭವನ್ನೂ ಎದುರಿಸಬೇಕಾಗಿ ಬಂತು.

ಮನುಸ್ಮೃತಿಯ 9ನೇ ಅಧ್ಯಾಯದ 3ನೇ ಶ್ಲೋಕದಲ್ಲಿನ ಕುಪ್ರಸಿದ್ಧ ವಾಕ್ಯ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಶ್ಲೋಕವನ್ನನುಸರಿಸಿ ಅದರ ಹಿನ್ನೆಲೆಯಲ್ಲೇ ಮುಂದೆ ಕಾಣಿಸಿಕೊಳ್ಳುವ ಕೆಲ ಶ್ಲೋಕಗಳು ಹೀಗಿವೆ- ನೈತಾ ರೂಪಂ ಪರೀಕ್ಷಂತೇ ನಾಸಾಂ ವಯಸಿ ಸಂಸ್ಥಿತಿಃ ಸುರೂಪಂ ವಾ ವಿರೂಪಂ ವಾ ಪುಮಾನಿತ್ಯೇವ ಭುಂಜತೇ (ಚಂಚಲೆಯರಾದ ಸ್ತ್ರೀಯರಿಗೆ ಪುರುಷರ ರೂಪವಾಗಲೀ ವಯಸ್ಸಾಗಲೀ ಮುಖ್ಯವೆನಿಸುವುದಿಲ್ಲ (14ನೇ ಶ್ಲೋ))

ಪೌಂಶ್ಚಲ್ಯಾಚ್ಚಲ ಚಿತ್ತಾಚ್ಚ ನೈಸ್ನೇಹ್ಯಾಚ್ಚ ಸ್ವಭಾವತಃರಕ್ಷಿತಾ ತತ್ನತೋಪೀಹ ಭರ್ತೃಷ್ವೇತಾ ವಿಕುರ್ವತೇ (ಇಂತಹ ಚಂಚಲೆಯರನ್ನು ಎಷ್ಟೇ ಕಣ್ಣಿಟ್ಟು ಕಾದರೂ ಕೂಡ ಗಂಡಂದಿರಿಗೆ ಅವರು ದ್ರೋಹವನ್ನು ಬಗೆದೇ ಬಗೆಯುತ್ತಾರೆ (15ನೇ ಶ್ಲೋ))

ಏವಂ ಸ್ವಭಾವಂಜ್ಞಾತ್ವಾಸಾಂಪ್ರಜಾಪತಿ ನಿಸರ್ಗಜಂ ಪರಮಂ ಯತ್ನಮಾತಿಷ್ಠೇತ್ಪುರುಷೋ ರಕ್ಷಣಂ ಪ್ರತಿ (ಸ್ತ್ರೀಯರ ಈ ನಿಸರ್ಗಸಹಜವಾದ ಸ್ವಭಾವದ ಕಾರಣಕ್ಕೆ ಪುರುಷರ ರಕ್ಷಣೆಯ ಹಿನ್ನೆಲೆ ಅವರಿಗೆ ಅತೀ ಮುಖ್ಯ (16ನೇ ಶ್ಲೋ))

ಶಯ್ಯಾ ಸನಮಲಂಕಾರಂ ಕಾಮಂ ಕ್ರೋಧಮನಾರ್ಜವಂ ದ್ರೋಹಭಾವಂ ಕುಚರ್ಯಾಂ ಚ ಸ್ತ್ರೀಯೋ ನೃತಮಿತಿ ಸ್ಥಿತಿಃ (ಶಯ್ಯೆ ಅಲಂಕಾರ ಕಾಮ ಕ್ರೋಧ ಅಪ್ರಾಮಾಣಿಕತೆ, ಪತಿದ್ರೋಹ ಮತ್ತು ದುರ್ನಡತೆ ಇವೆಲ್ಲ ಸ್ತ್ರೀಯರ ಸಹಜಗುಣಗಳೆಂದು ಮನುವು ಹೇಳುತ್ತಾನೆ...(18ನೇ ಶ್ಲೋ))

... ಹೀಗೆ ಸಾಗುತ್ತದೆ ಮನುವಿನ ಸ್ತ್ರೀ ಕಾಳಜಿ ಪುರಾಣ. ಇಂತಹ ಹಿನ್ನೆಲೆಯ ಮನಸ್ಥಿತಿಯಿದ್ದರೆ ಬೇರೇನು ಮಾಡಲು ತಾನೆ ಸಾಧ್ಯ?


ಮೊನ್ನೆ ಮಂಗಳೂರಿನ ಹಿಂದೂ ಸಮಾಜೋತ್ಸವದಲ್ಲಿ ಭರ್ಜರಿ ದಿಕ್ಸೂಚಿ ಭಾಷಣ ಮಾಡಿದ ಸಾಧ್ವಿ ಬಾಲಿಕಾ ಸರಸ್ವತಿ ಮಾತಾಡುತ್ತಾ ಮುಸ್ಲಿಮ್ ತಲೆತಿರುಕ ಓವೈಸಿಗೆ ಬೈಯ್ಯುವ ನೆಪದಲ್ಲಿ ಓವೈಸಿ ಸಾಲಾ ಎನ್ನುವ ಪದವನ್ನು ಬಳಸಿ ಸ್ತ್ರೀಯರ ಕುರಿತಾಗಿ ತನ್ನ ಧರ್ಮದಲ್ಲೇ ಇದ್ದ ಹುಳುಕನ್ನೇ ಎತ್ತಿ ತೋರಿಸಿದ್ದಳು. ಬೋ.. ಮಗ (ಅನೈತಿಕ ಸಂಬಂಧದಿಂದ ವಿಧವೆಗೆ ಹುಟ್ಟಿದವ) ಸೂ.. ಮಗ ಗಳಂತೆ ಉತ್ತರ ಭಾರತದಲ್ಲೂ ಸ್ತ್ರೀಯರನ್ನು ಕೀಳಾಗಿ ಕಾಣುವ ಬೈಗಳು ಪದಗಳು ಇಲ್ಲಿಗಿಂತ ಹೆಚ್ಚಾಗಿ ಅತ್ಯಂತ ಸಹಜ ಎಂಬಂತೆ ಅಲ್ಲಿ ಬಳಕೆಯಲ್ಲಿವೆ. ಅವುಗಳಲ್ಲಿ ಕಟುವಾಗಿರದಂತೆ ತೋರುವ ಈ "ಸಾಲಾ" ಕೂಡಾ ಒಂದು. ಸಾಲಾ ಎಂದರೆ ಭಾವ ನೆಂಟ ಎಂದರ್ಥ ಅರ್ಥಾತ್ ಬೈಯ್ಸಿ ಕೊಳ್ಳುವವನ ಸೋದರಿಯೊಂದಿಗೆ ಸಂಬಂಧ ಕಲ್ಪಿಸಿ ಮಾತಾಡುವ ಬೈಗಳು ಪದವಿದು. ಸಾಮಾನ್ಯವಾಗಿ ಗಂಡಸರಷ್ಟೆ ಬಳಸುವ ಇದನ್ನು ತನ್ನ ಭಾಷಣಕ್ಕೆ ಜೋಶ್ ತರುವ ಉದ್ದೇಶಕ್ಕೆ ಈ ಸಾಧ್ವಿ ಬಳಸಿಕೊಂಡು ತನ್ನವರ ಹುಳುಕನ್ನು ಹೊರತೆಗೆದು ಎಲ್ಲರೆದುರು ತೋರಿದ್ದಳು.

ಹೆಣ್ಣಿನ ವಿಚಾರದಲ್ಲಿ ನಿರ್ಭಯಾ ಪ್ರಕರಣ ನಮಗೊಂದು ಪಾಠವೆನಿಸಬೇಕೇ ವಿನಹ ನಾವೇ ಅವಮಾಯಕಿ ನಿರ್ಭಯಾಳಂತವರಿಗೆ ಬಿಟ್ಟಿ ಪಾಠ ಹೇಳುವ ದಾರ್ಷ್ಟ್ಯದ ಮನಸ್ಥಿತಿಯುಳ್ಳವರಾಗಿ ಬದಲಾಗುವುದು ಯಾವತ್ತಿಗೂ ಸಮಾಜಮುಖಿಯೆನಿಸದು.

- ರವಿಶಂಕರ್ ಪ್ರಸಾದ್, ಮಂಗಳೂರು



ಕರಾವಳಿಯ ವೆರೈಟೀ ಬಂಟ ಸ್ವಾಮಿಗಳು



ಮಾ. 18ರ ಸಂಚಿಕೆಯಲ್ಲಿ ಮಂಗಳೂರಿನ ಜೆ. ರವಿಕಿರಣ ರೈಯವರು ಹಿಂದೂ ಸಮಾಜೋತ್ಸವದ ಕುರಿತು ಬರೆಯುತ್ತಾ 'ಕರಾವಳಿಯ ಎಲ್ಲಾ ಕಾವಿಧಾರಿ ಸ್ವಾಮಿಗಳು ಈ ಸಮಾಜೋತ್ಸವದಲ್ಲಿ ಭಾಗ ವಹಿಸಿದ್ದರು. ಕೇವಲ ಕೇಮಾರು ವಿಠ್ಠಲದಾಸಸ್ವಾಮಿಗೆ ಆಹ್ವಾನವಿದ್ದಿದ್ದರೂ ಅವರು ಭಾಗವಹಿಸಿರಲಿಲ್ಲ ಯಾಕೆಂದರೆ, ಇಲ್ಲಿನ ಸ್ವಾಮೀಜಿಗಳಲ್ಲಿ ಅವರೊಬ್ಬರೇ ದೇವರು-ಧರ್ಮ-ಮಾನವೀಯತೆಗಳನ್ನು ಸರಿಯಾಗಿ ಅರ್ಥೈಸಿಕೊಂಡವರು' ಎಂದು ಬರೆದಿದ್ದರು. ಇದು ನಿಜಕ್ಕೂ ಎಲ್ಲರೂ ಒಪ್ಪಲೇಬೇಕಾದಂತಹ ಮಾತು.

ಹಿಂದೂವಾದಿಗಳು ಗೋಡ್ಸೆಗೆ ದೇವಾಲಯ ಕಟ್ಟುವುದು ಆತನನ್ನು ಹಾಡಿಹೊಗಳುವುದು ಬೇರಿನ್ನಾವ ಕಾರಣಕ್ಕೂ ಅಲ್ಲ, ಕೇವಲ ಒಂದೇ ಕಾರಣಕ್ಕೆ, ಅದುವೇ ಗಾಂಧಿಯನ್ನ ವಧಿಸಿದಂತಹ ಮಹತ್ಕಾರ್ಯಕ್ಕಾಗಿ ಅಷ್ಟೆ. ಇಷ್ಟೊಂದು ಮಟ್ಟದಲ್ಲಿ ದ್ವೇಷಿಸಲ್ಪಡುತ್ತಿರುವ ಗಾಂಧಿಯನ್ನೂ ಈ ಹಿಂದೂ ನಾಯಕರುಗಳು ಆಗಾಗ ಕೊಂಡಾಡುವುದುಂಟು. ಯಾಕೆಂದರೆ ಗಾಂಧಿ ಒಬ್ಬ ಇಂಟರ್‌ನ್ಯಾಷನಲ್ ಫಿಗರ್. ಅವರನ್ನು ಜರಿದು ಗಿಟ್ಟಿಸಿಕೊಳ್ಳುವುದು ಕಷ್ಟ ಎಂಬುದರ ಅರಿವು ಅವರಿಗಾಗಿದೆ ಎಂಬುದು ಇದರರ್ಥ.

ಇದೇ ರೀತಿಯಲ್ಲಿ ತಮ್ಮ ಸ್ಫೂರ್ತಿ ಎಂದು ಸ್ವಾಮಿ ವಿವೇಕಾನಂದರನ್ನೂ ಸುಳ್ಳು ಸುಳ್ಳೇ ಬಿಂಬಿಸಿಕೊಳ್ಳುತ್ತಿರುವ ಹಿಂದೂತ್ವವಾದಿಗಳು ಕೂಡ ಹಾಗೆ ಮಾಡುತ್ತಿರುವುದು ಅವರು ಒಬ್ಬ ಇಂಟರ್‌ನ್ಯಾಷನಲ್ ಫಿಗರ್ ಎನ್ನುವ ಕಾರಣಕ್ಕೆ. (ಶಂಕರಾಚಾರಿಯನ್ನೋ, ಮಧ್ವನನ್ನೋ ಬಿಂಬಿಸಿದರೆ ಎಲ್ಲರನ್ನೂ, ಅದರಲ್ಲೂ ಯುವಪೀಳಿಗೆಯನ್ನು ಆಕರ್ಷಿಸಲಾದೀತೇ? ಹಾಗಾಗಿ ವಿವೇಕಾನಂದರನ್ನು ಅಪಹರಿಸಿದ್ದಾರೆ). ಇಲ್ಲವಾದಲ್ಲಿ ಸನಾತನ ಧರ್ಮವನ್ನು ಮುಚ್ಚುಮರೆಯಿಲ್ಲದೇ ನಿರಂತರವಾಗಿ ಟೀಕಿಸುತ್ತಿದ್ದ ವಿವೇಕಾನಂದರು ಇವರ್‍ಯಾರಿಗೂ ಬೇಕಾಗುತ್ತಲೇ ಇರಲಿಲ್ಲ. ವಿವೇಕಾನಂದರು ತಮ್ಮ ಜೀವಂತಕಾಲದಲ್ಲಿ ಸಂಪ್ರದಾಯವಾದಿಗಳ ತೀವ್ರ ವಿರೋಧವನ್ನು ಕಟ್ಟಿಕೊಂಡಿದ್ದರೆಂಬುದಿಲ್ಲಿ ಗಮನಾರ್ಹ.

ರೈಯವರು ಅಂದಂತೆ ಕರಾವಳಿಯಲ್ಲಿ ವಿವೇಕಾನಂದರ ದಾರಿಯಲ್ಲಿ ಧೈರ್ಯದಿಂದ ನಡೆಯುತ್ತಿರುವ ಒಬ್ಬರೇ ಒಬ್ಬ ಕಾವಿಧಾರಿಯೆಂದರೆ ಅದು ಇದೇ ಕೇಮಾರು ಸ್ವಾಮಿ ಮಾತ್ರ. ಉಳಿದವರೆಲ್ಲರೂ ಅವಿವೇಕಾನಂದರೇ. ಅದರಲ್ಲೂ ಅಸ್ಪೃಶ್ಯತೆ ಬೇಡ, ಜಾತೀಯತೆ ಬೇಕು, ಅಂತರ್ಜಾತಿ ವಿವಾಹ ಸರಿಯಲ್ಲ, ಅದು ಸಂಪ್ರದಾಯವನ್ನು ಹಾಳುಗೆಡವುತ್ತದೆ ಎಂದೆಲ್ಲಾ ಹುಚ್ಚುಹುಚ್ಚಾಗಿ ಮಾತಾಡುವ ಪೇಜಾವರರಂತೂ ಅವಿವೇಕದ ಹಳೇ ಮೂಟೆಯೇ ಸರಿ.

ಏನಾದರೂ ಜನಪರ ಹೋರಾಟ ನಡೆದಾಗ ಅದರಲ್ಲಿ ಮುಂಚೂಣಿಯಲ್ಲಿರುವವರೆಂದರೆ ಇದೇ ಕೇಮಾರು ಶ್ರೀಗಳು. ಎಲ್ಲಕ್ಕೂ ಹೆಚ್ಚಾಗಿ ಧರ್ಮಾಧಿಕಾರಿ ಹೆಗಡೆಯ ವಿರುದ್ಧ ಹಳೇ ದ್ವೇಷವೋ-ಮತ್ತೊಂದೋ ಯಾವ ಪೂರ್ವಾಗ್ರಹಗಳೂ ಇಲ್ಲದೇ ಕೇವಲ ಸೌಜನ್ಯಾ ಎಂಬ ಹೆಣ್ಣಿಗೆ ನ್ಯಾಯ ಕೊಡಿಸುವ ಸಲುವಾಗಿ ಬಲಾಢ್ಯ ವ್ಯಕ್ತಿಯನ್ನು ಎದುರುಹಾಕಿಕೊಂಡು ಕರಾವಳಿಯಲ್ಲಿ ಸೌಜನ್ಯಾ ಕುರಿತ ಹೋರಾಟಕ್ಕೆ ಹಗಲಿರುಳು ಶ್ರಮಿಸಿದ ಕರಾವಳಿಯ ಏಕೈಕ ಕಾವಿಧಾರಿ ಈ ಕೇಮಾರು.

ಕರಾವಳಿಯಲ್ಲಿನ ಕೆಲ ಬಂಟಸ್ವಾಮಿಗಳಲ್ಲಿ ಇವರೂ ಒಬ್ಬರಾಗಿದ್ದರೂ ಕೂಡ ಇವರು ಇತರರಂತೆ ಸ್ವಾರ್ಥಸಾಧಕರಲ್ಲವೇ ಅಲ್ಲ. ಕರಾವಳಿಯಲ್ಲಿನ ಅನೇಕಾನೇಕ ಹಿಂದೂತ್ವದ ಗಲಭೆಗಳಿಗೆಲ್ಲ ಬೆನ್ನೆಲುಬಾಗಿ ನಿಂತಿರುವುದು ನೋಣಯ್ಯ ಶೆಟ್ಟಿ ಎಂಬ ಮೂಲ ಹೆಸರಿನ ಗುರುಪುರದ ವಜ್ರದೇಹಿ ಸ್ವಾಮಿ. ಇನ್ನೊಬ್ಬ ಬಂಟ ಸ್ವಾಮಿ ಒಡಿಯೂರಿನ ದೇವಾನಂದರು ಗಲಭೆಗಳಿಗೆ ಪ್ರೋತ್ಸಾಹಿಸುವವರಲ್ಲದಿದ್ದರೂ ಅದನ್ನ ವಿರೋಧಿಸುವುದೂ ಇಲ್ಲ ಎನ್ನುವುದು ಅಷ್ಟೇ ಸತ್ಯ. ಮತ್ತೊಬ್ಬ ಶಿವಮೊಗ್ಗದ ಗುಳಿಗೆ ತಯಾರಕನಾಗಿ ಇದೀಗ ತಾನೊಬ್ಬ ಶೆಟ್ಟಿ ಎನ್ನುವ ಕಾರಣಕ್ಕೆ ಕರಾವಳಿಗೆ ವಕ್ಕರಿಸಿ ನಾಟಕೀಯವಾಗಿ ಎಲ್ಲೆಡೆ ವರ್ತಿಸುತ್ತಿದ್ದಾನೆ. ಟೀವಿಯಲ್ಲಿ ಮುಖ ತೋರಿಸುವ ಹುಚ್ಚಿನ ಈತ ಈಗ ಹಿಂದೂತ್ವದ ದೊಡ್ಡ ವಕ್ತಾರನಂತೆ ಕಂಗೊಳಿಸುತ್ತಿದ್ದಾನೆ. ಕೆ.ಎಸ್.ಭಗವಾನ್‌ರಂತಹ ಹಿರಿಯರು ಸಕಾರಣವಾಗಿ ಚಾತುರ್ವರ್ಣ ಭೇದ ಹಾಗು ಅಸಮಾನತೆಯನ್ನು ಸಾರುವ ಗೀತೆಯನ್ನು ಖಂಡಿಸಿದರೆ ಈತ ಟಿವಿಯಲ್ಲಿ ಕೂತು ಆ ಬಗ್ಗೆ ಕಿಡಿಕಾರುತ್ತಾನೆ. ತಮಾಷೆಯೆಂದರೆ, ಉಡುಪಿ ಮಠದ ಗುಲಾಮನಂತೆ ವರ್ತಿಸುವ ಈತ ವನಿತಾ ಶೆಟ್ಟಿ ಎಂಬ ತನ್ನದೇ ಬಂಟ ಮಹಿಳೆಯನ್ನು ಉಡುಪಿಯಲ್ಲಿ ಊಟದ ಮಧ್ಯೆ ಎಬ್ಬಿಸಿ ಅವಮಾನಿಸಿದ ಪ್ರಕರಣ ವಿಕೋಪ... ಹೋದಾಗ ಉಡುಪಿ ಸ್ವಾಮಿಗಳು ಈತನನ್ನು ಛೂಬಿಟ್ಟು ಬಚಾವಾಗಿದ್ದರು. ಆ ಬಗ್ಗೆ ಈತನನ್ನು ಕೇಳಿದರೆ ಪೆಕರನಂ... ಹಲ್ಲುಕಿರಿಯುತ್ತಾನೆ. ಮೂಲತಃ ಈತನಿಗೆ ಯಾ... ಸಿದ್ಧಾಂತಗಳೂ ಇಲ್ಲ; ಇರುವುದು ಕೇವಲ ಪ್ರಚಾರ... ತೆವಲಷ್ಟೆ.

ಪ್ರಾಚೀನ ತುಳುನಾಡಿನ ರಾಜಧಾನಿ ಬಾರಕೂರು ಅನೇ... ಅವೈದಿಕ ಜಾತಿಯವರ ಪ್ರಮುಖ ಮೂಲಸ್ಥಾನ. ಅಂತ... ಸ್ಥಾನದಲ್ಲಿ ಬಾರಕೂರು ಮಹಾ ಸಂಸ್ಥಾನ ಹುಟ್ಟುಹಾ... ಸಂಬಂಧವಿಲ್ಲದ ಪರಶುರಾಮನ ಹೆಸರಲ್ಲಿ ಭಾರ್ಗ... ಪೀಠವನ್ನು ಸ್ಥಾಪಿಸಿಕೊಂಡು ಅಲ್ಲೀಗ ಆತ ಪರ್ಮನೆಂಟಾ... ಜಂಡಾ ಊರಲು ಭಾರೀ ತಯಾರಿ ನಡೆಸಿದ್ದಾನೆ. ಇತ್ತೀಚೆ... ಸುವರ್ಣ ನ್ಯೂಸ್ ಚಾನೆಲ್‌ನಲ್ಲಿನ 'ಗುಡಿಯ ನೋಡಿರ... ಕಾರ್ಯಕ್ರಮದಲ್ಲಿ ತನ್ನನ್ನು ಬಾರಕೂರ ಸ್ವಾಮಿ ಎಂಬ... ಬಿಂಬಿಸಿಕೊಂಡು ಅನೇಕರ ಕೆಂಗಣ್ಣಿಗೂ ಈ... ಗುರಿಯಾಗಿದ್ದಾನೆ. ಅಲ್ಲಿನ ದೇಗುಲವೇ ತನ್ನ ವಾಸಸ್ಥಾ... ಶಾಶ್ವತ ಕಾರ್ಯಕ್ಷೇತ್ರ. ಪ್ರಾಚೀನ ನಗರವಾದ ಇ... ಬಾರಕೂರೇ ನನ್ನದು ನಾನೇ ಬಾರಕೂರು ಎಂಬಂತೆ ದೂರ... ಶಿವಮೊಗ್ಗದ ಈತ ಟೀವಿಯಲ್ಲಿ ಬಿಂಬಿಸಿಕೊಂಡಿದ್ದು... ಅನೇಕರ ಅಸಮಾಧಾನಕ್ಕೂ ಕಾರಣವಾಗಿತ್ತು, ಎ... ಅವೈದಿಕರಿಗೆ ಸೇರಿರುವ ಬಾರಕೂರನ್ನು ಎಲ್ಲಿಂದಲೋ... ಬಂದ ಈ ಪಡಪೋಸಿ ತನ್ನ ಸುಪರ್ದಿಗೆ ತೆಗೆದುಕೊಂ... ತನ್ನ ಮನಬಂದಂತೆ ವರ್ತಿಸುತ್ತಿರುವುದು ಅನೇಕರ... ಕೆರಳಿಸಿದೆ.

ಇಂತಹ ಎಡಬಿಡಂಗಿ ಸ್ವಾಮಿಗಳ ನಡುವೆ ಕೇಮಾ... ಸ್ವಾಮಿ ತಮ್ಮ ಜನಪರ ನಿಲುವುಗಳ ಮೂಲಕ ಪ್ರತ್ಯೇಕವಾ... ತೋರುತ್ತಾರೆ. ಒಡಿಯೂರಿನ ದೇವಾನಂದ ಸ್ವಾಮಿ... ಬ್ರಾಹ್ಮಣ ಅರ್ಚಕನೊಬ್ಬ ಶೂದ್ರ ಎನಿದು ಅವಮಾನಿಸಿದಾ... ಒಡಿಯೂರು ಸ್ವಾಮಿ ಸೇರಿ ಯಾರೂ ಪ್ರತಿಭಟಿಸಿರಲಿ... ಆದರೆ ನಾಲ್ಕು ತಿಂಗಳ ಹಿಂದೆ ಕೊಲ್ಲೂರಿನ ಸೌಪರ್ಣಿ... ನದಿಗೆ ಸಂಬಂಧಿಸಿ ಹೋರಾಟವೊಂದರಲ್ಲಿ ಭಾಗವಹಿಸ... ಕೊಲ್ಲೂರಿಗೆ ಕೇಮಾರು ಶ್ರೀಗಳು ಹೋದಾಗ ದೇಗುಲ... ಮಂದಿ ಉದ್ದೇಶಪೂರ್ವಕವಾಗಿ ಈ ಕ್ರಾಂತಿಕಾರಿ ಸ್ವಾ... ಬರಬಾರದೆಂದು ಬಾಗಿಲು ಬೀಗಹಾಕಿದ್ದನ್ನು ಕಂಡು ವ್ಯಗ್ರ... ಸ್ವಾಮಿ ದೇಗುಲದವರನ್ನು ಕುರಿತು 'ಒಬ್ಬ ಬ್ರಾಹ್ಮಣ ಸ್ವಾ... ಹೀಗೆ ಬಂದಿದ್ದಲ್ಲಿ ನೀವು ಈ ರೀತಿ ವರ್ತಿಸುತ್ತಿದ್ದೀರಾ... ಎಂದು ತರಾಟೆಗೆ ತೆಗೆದುಕೊಂಡಿದ್ದರು.

- ಅವಿನಾಶ್ ಎಮ್.ಎಸ್, ನೆಲ್ಲಿಕಾ...

ಮದರ್ ತೆರೇಸಾ ಸೂರ್ಯ ಇದ್ದಂತೆ

ಮದರ್ ತೆರೇಸಾ ಇವರು ಪಶ್ಚಿಮ ಬಂಗಾಳದ... ಮಾಡಿರುವ ನಿಸ್ವಾರ್ಥ ಜನಸೇವೆ ಇಡೀ ಜಗತ್ತಿಗೆ ಗೊತ್ತಿ... ಸಂಘ ಪರಿವಾರದವರಿಗೂ ಗೊತ್ತಿದೆ. ಆದರೆ ಅವ... ಜಾಣಕುರುಡು ಪ್ರದರ್ಶಿಸುತ್ತಿದ್ದಾರೆ ಅಷ್ಟೇ. ಅವಕ್ಕಾಗಿ ಅವ... ಮದರ್ ತೆರೇಸಾರವರದ್ದು ಮತಾಂತರದ ಉದ್ದೇಶ... ಸೇವೆಯಾಗಿತ್ತೇ ಹೊರತು ನಿಸ್ವಾರ್ಥ ಸೇವೆಯಾಗಿರಲಿ... ಎಂಬ ಮೂರ್ಖ ಹೇಳಿಕೆ ಕೊಡುತ್ತಿದ್ದಾರೆ.

ಆಗಲಿ ಒಂದುಕ್ಷಣ ವಾದಕ್ಕಾಗಿ ಮದರ್ ತೆರೇಸಾ... ವರದ್ದು ಸ್ವಾರ್ಥಭರಿತ ಸೇವೆಯಾಗಿತ್ತು ಎಂದೇ ಒಪ್ಪೋಣ... ಸಂಘಪರಿವಾರದವರೇ ಅಂತಹದ್ದೇ ಜನಸೇವೆ ನೀ... ಮಾಡಿ ತೆರೇಸಾರಂತೆ ಸಂತ ಪದವಿ ನೀವೂ ಯ... ಗಳಿಸಬಾರದು? ಅವರಂತೆ ನೀವು ಒಂದಾದರ... ಕುಷ್ಠರೋಗಿಯನ್ನು ಮುಟ್ಟಿದ್ದೀರಾ ಅಥವಾ ಒಂದಾದ... ಅನಾಥ ಮಗುವನ್ನು ದತ್ತು ತೆಗೆದುಕೊಂಡಿದ್ದೀರ... ಯಾರಿಗಾದರೂ ವಿದ್ಯಾಭ್ಯಾಸಕ್ಕಾಗಿ ಒಂಚೂರಾದರ... ಸಹಾಯ ಮಾಡಿದ್ದೀರಾ? ನೀವೂ ತೆರೇಸಾರಂತೆ ಇ... ಧರ್ಮದ ದೀನ-ದುಃಖಿಗಳ ಸೇವೆ ಮಾಡಿ ಅವರ...



ಪ್ರೀತಿಯ ಗೌರಿ ಲಂಕೇಶ್‌ರವರಿಗೆ,

'ಮಾರ್ಚ್-8' ಇದು ಬಹಳ ವಿಶೇಷದ ದಿನ. ಅವತ್ತು ನೀವು ಲಂಕೇಶ್‌ರ 80ನೇ ಹುಟ್ಟುಹಬ್ಬದ ಸಮಾರಂಭ ಏರ್ಪಡಿಸಿರುವುದನ್ನು ಪತ್ರಿಕೆಯಲ್ಲಿ ಓದಿ ಶ್ರೀರಾಮ್ ಮತ್ತು ನಾನು ಸಮಾರಂಭಕ್ಕೆ ಬರಬೇಕೆಂದು ಯೋಚಿಸಿದ್ದೆವು. ಮತ್ತು ಇಲ್ಲಿ ಮೈಸೂರಿನಲ್ಲಿ ನಾವು ಗೆಳೆಯರೆಲ್ಲಾ ಸೇರಿ ಲಂಕೇಶ್-60 ಎಂದು ಲಂಕೇಶರೊಡನೆ ಅವರ ಹುಟ್ಟುಹಬ್ಬ ಆಚರಿಸಿದ್ದು ನೆನೆಸಿಕೊಂಡು ಸಂತೋಷಪಟ್ಟೆವು. ಆದರೆ ನನ್ನ ಬಂಧು ಒಬ್ಬರ ಅನಾರೋಗ್ಯದ ದೆಸೆಯಿಂದ ಬರಲು ಆಗಲಿಲ್ಲ. ಆದರೂ ಆ ದಿನ ನಾವು ಮನದಲ್ಲೇ ಲಂಕೇಶರನ್ನ ನೆನೆದೆವು.


ಲಂಕೇಶರು ಒಂದು ಕಾಲಮಾನದಲ್ಲಿ ಅನೇಕ ಸ್ತ್ರೀಯರ ಹೃದಯದೊಳಗಿದ್ದ ಲೇಖಕಿಯರನ್ನು ಹೊರತಂದರು. ನನಗಂತೂ ಅವರಿಂದ ಸಿಕ್ಕಿದ ಪ್ರೋತ್ಸಾಹ, ಅವಕಾಶ, ಮಾರ್ಗದರ್ಶನ ಎಣಿಕೆಗೆ ನಿಲುಕದ್ದು. ಈ ಸಂದರ್ಭದಲ್ಲಿ ತೇಜಸ್ವಿಯವರು ಪತ್ರಿಕೆ ಬಗ್ಗೆ ಹೇಳುತ್ತಿದ್ದ "ಈ ಪತ್ರಿಕೆ ಏನನ್ನಾದರೂ ಸರಿ ಅರಗಿಸಿಕೊಂಡು ಬಿಡುತ್ತದೆ" ಎಂಬ ಮಾತು ನೆನಪಿಗೆ ಬರುತ್ತಿದೆ.

ನಿಮ್ಮ ಸಂಪಾದಕೀಯದಲ್ಲಿ ನಮ್ಮನ್ನೆಲ್ಲಾ ಜ್ಞಾಪಿಸಿಕೊಂಡಿರುವಿರಿ, ವಂದನೆಗಳು. ನಮ್ಮ ಸ್ನೇಹದ ಬಳ್ಳಿ ಹೀಗೆ ಚಿಗುರುತ್ತಿರಲಿ ಎಂದು ಆಶಿಸುತ್ತೇನೆ.



ನಿಮ್ಮ ಅಮ್ಮನವರಿಗೆ ನನ್ನ ಪ್ರೀತಿಯ ನಮಸ್ಕಾರ ತಿಳಿಸಿ. ನಿಮಗೆ ಮತ್ತು ಪತ್ರಿಕೆಗೆ ಎಲ್ಲ ಶುಭ ಹಾರೈಸುವೆ.

ಇಂತಿ,
ಪದ್ಮಾ ಶ್ರೀರಾಮ್,
ಮೈಸೂರು



ಂದೂ ಧರ್ಮಕ್ಕೆ ತರಬಹುದಿತ್ತು ಅಲ್ಲವೇ? ಅದೇಕೆ ಮ್ಮಿಂದ ಸಾಧ್ಯವಾಗುತ್ತಿಲ್ಲ? ತೆರೇಸಾರಿಗಿಂತ ಎಷ್ಟೋ ಟ್ಟು ಹೆಚ್ಚು ಬಿಲಿಯನ್‌ಗಟ್ಟಲೆ ಫಂಡ್ ನಿಮಗೂ ದೇಶದಿಂದ ಬರುತ್ತಿದೆ ತಾನೇ? ಅಮೆರಿಕಾ ಒಂದರಲ್ಲಿಯೇ ಂಘಪರಿವಾರದ ನೂರಾಹದಿನಾಲ್ಕು ಶಾಖೆಗಳು ಾರಿಟೇಬಲ್ ಸಂಸ್ಥೆಗಳು ಎಂಬ ಸುಳ್ಳು ಹಣೆಪಟ್ಟಿಯೊಂದಿಗೆ ಾರ್ಯಾಚರಿಸುತ್ತಿವೆ ಎಂದು ದಾಖಲೆ ಸಹಿತ .ಜಿ.ನೂರಾನಿಯವರು ತಮ್ಮ ಪುಸ್ತಕವೊಂದರಲ್ಲಿ ಹಿರಂಗಪಡಿಸಿದ್ದಾರೆ (ಮೂಲ ಇಂಗ್ಲಿಷ್ - ಆರ್‌ಎಸ್‌ಎಸ್ ಬಿಜೆಪಿ- ಡಿವಿಜನ್ ಆಫ್ ಲೇಬರ್, ಕನ್ನಡ ಅನುವಾದ: ುರೇಶ್ ಭಟ್ ಬಾಕ್ರಬೈಲ್). ಹಾಗಾದರೆ ಸಂಘ ಪರಿವಾರಕ್ಕೆ ರುವ ಇಷ್ಟೊಂದು ಅಗಾಧ ವಿದೇಶಿ ಫಂಡ್ ಎಲ್ಲಿ ಹೋಗುತ್ತಿದೆ?

ಈ ವಿದೇಶಿ ಫಂಡುಗಳ ಹೊರತು ದಕ್ಷಿಣ ನ್ನಡ-ಉಡುಪಿ ಈ ಎರಡು ಜಿಲ್ಲೆಗಳಲ್ಲಿಯೇ ಪ್ರತಿವರ್ಷ ನಿಷ್ಟು ನೂರು ಕೋಟಿ ರೂಪಾಯಿ ಕೇವಲ ಅಷ್ಟಬಂಧ ಬ್ರಹ್ಮಕಲಶ ಜೀರ್ಣೋದ್ಧಾರ ನಾಗಮಂಡಲ ಇಂತಹ ಅನುತ್ಪಾದಕ ಧಾರ್ಮಿಕ ಕಾರ್ಯಗಳಿಗೆ ಮುಂಬೈಯವರ ಾಪಕೂಪದ ಹಣ ಹರಿದುಬರುತ್ತಿದೆ. ಈ ನಿರುಪಯುಕ್ತ ಪೂಜೆ ಪುನಸ್ಕಾರದ ಬದಲಿಗೆ ಪ್ರತಿವರ್ಷ ಇದೇ ಭಾರಿ ಮೊತ್ತದಿಂದ ಸಮಾಜಕ್ಕೆ ಹಾಗೂ ಬಡವರ ವಿದ್ಯಾಭ್ಯಾಸಕ್ಕೆ ಜವಾಗಿ ಉಪಯೋಗವಾಗುವ ಅಗಾಧ ಕೆಲಸಗಳನ್ನು ಮಾಡಬಹುದಿತ್ತು. ಅದರಿಂದ ಸಿಗುವ ಪುಣ್ಯವು ಪೂಜೆಗಳಿಂದ ಸಿಗುವ ಪುಣ್ಯಕ್ಕಿಂತ ಸಾವಿರಾರು ಪಾಲು ಹೆಚ್ಚು ಎಂದು ಕರಾವಳಿಯ ಧನಿಕರಿಗೆ ಒಮ್ಮೆಯಾದರೂ ತಿಳಿಹೇಳಲು ಸಂಘಪರಿವಾರದವರು ಪ್ರಯತ್ನಿಸಿದ್ದಾರೆಯೇ?

ಪ್ರತಿ ವರ್ಷ ನೂರು ಕೋಟಿಯಷ್ಟು ಇಂತಹ ಹಣ ಸಮಾಜದ ನಿಜವಾದ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗವಾದರೆ ಕಾಲಾಂತರದಲ್ಲಿ ಬಡ ಜನರಿಗೆ ಆಗಬಹುದಾದ ಬೃಹತ್ ಲಾಭ ಎಷ್ಟೆಂದು ಎಂದಾದರೂ ಆಲೋಚಿಸಿದ್ದೀರಾ? ನಿಮ್ಮಂತೆ ಮದರ್ ತೆರೆಸಾ ಎಂದಾದರೂ ಕೋಟಿ-ಕೋಟಿ ಹಣ ತಮ್ಮ ದೇವರ ಪೂಜೆಗೆ ಅಥವಾ ಚರ್ಚಿನ ಜೀರ್ಣೋದ್ಧಾರಕ್ಕೆ ಖರ್ಚು ಮಾಡಿದ್ದಾರೆಯೇ? ನಿಮ್ಮ ಕಾವಿ ಸ್ವಾಮೀಜಿಗಳು ಹಾಗೂ ಅಸ್ತ್ರಾನಿಗಳು ಹೋದ ಹೋದಲ್ಲೆಲ್ಲಾ ಧನಿಕರಿಂದ ಹಣ ಇಸ್ಕೊಂಡು ತಾವೇ ಪಾದ ಪೂಜೆ ಮಾಡಿಸಿಕೊಳ್ಳುವ ಬದಲು ಎಂದಾದರೂ ಮದರ್ ತೆರೆಸಾರಂತೆ ಒಬ್ಬನೇ ಒಬ್ಬ ಕುಷ್ಠ ರೋಗಿಯ ಪಾದ ತಾವೇ ತೊಳೆದಿದ್ದಾರೆಯೇ? ಕರಾವಳಿಯ ಕಾವಿ ಸ್ವಾಮೀಜಿಗಳು ಒಂದಾದರೂ ಅನಾಥಾಶ್ರಮ ಅಥವಾ ವೃದ್ಧಾಶ್ರಮ ನಡೆಸುತ್ತಿದ್ದಾರೆಯೇ? ನಿಮ್ಮ ಹರೇಕೃಷ್ಣ ಪಂಥದವರು ಕೃಷ್ಣನ ಹೆಸರಲ್ಲಿ ಭಾರಿ ಕೇಟರಿಂಗ್ ವಹಿವಾಟು ಮಾಡುತ್ತಿದ್ದಾರೆ, ಆದರೆ ಮದರ್ ತೆರೇಸಾ ಎಂದಾದರೂ ಕ್ರಿಸ್ತನ ಹೆಸರಲ್ಲಿ ಇಂತಹ ಕೆಟರಿಂಗ್ ಬಿಸಿನೆಸ್ ಮಾಡಿದ್ದಾರೆಯೇ? ನೋಡಿ ಸಂಘ ಪರಿವಾರದವರೇ - ಮದರ್ ತೆರೇಸಾ ಸೂರ್ಯ ಇದ್ದಂತೆ. ನೀವು ಮೇಲೆ ಮುಖ ಮಾಡಿ ಆ ಸೂರ್ಯನತ್ತ ಉಗುಳಿದರೆ ಆ ಉಗುಳು ಬಂದು ಬೀಳುವುದು ನಿಮ್ಮ ಮುಖಕ್ಕೇನೇ ಹೊರತು ಸೂರ್ಯನಿಗೆ ಏನೂ ಆಗುವುದಿಲ್ಲ ಎಂಬ ಜಾಣ್ಮುಡಿ ನೆನಪಿರಲಿ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಶರದ್ ಯಾದವ್ ಹೇಳಿದ್ದರಲ್ಲಿ ತಪ್ಪೇನಿದೆ?


ಇತ್ತೀಚಿಗೆ ಲೋಕಸಭೆಯಲ್ಲಿ ಜೆಡಿಯೂ ಪಕ್ಷದ ಶರದ್ ಯಾದವರವರು ದಕ್ಷಿಣ ಭಾರತೀಯ ಮಹಿಳೆಯರು ಕಪ್ಪು ಬಣ್ಣದವರಾದರೂ ಸುಂದರಿಯರು ಮತ್ತು ಪ್ರತಿಭಾನ್ವಿತರು ಎಂದು ಹೇಳಿದಕ್ಕೆ, ಇತರ ಪಕ್ಷದವರು ಹಾಗೂ ಮಾಧ್ಯಮದವರು ಬಹಳ ಗಲಾಟೆ ಮಾಡಿದರು. ಹಿಂದೂ ದೇವರಾದ ಶಿವ ರಾಮ ಕೃಷ್ಣ ಗಣಪತಿ ಹನುಮಂತ ದುರ್ಗಾದೇವಿ ಕಾಳಿದೇವಿ ಇವರೂ ಕಪ್ಪು ಬಣ್ಣದವರಾದರೂ ಅವರು ಪೂಜ್ಯರಾಗಿದ್ದಾರೆ ಎಂದು ಸಹ ಶರದ್ ಯಾದವ್ ಹೇಳಿದ್ದರು. ಇದಕ್ಕೂ, ಆರ್ಯ ಮನಸ್ಥಿತಿಯ ಮೇಲ್ಜಾತಿಯವರೆಲ್ಲ ಆಕ್ಷೇಪಣೆ ಎತ್ತಿದ್ದಾರೆ. ಶರದ್ ಯಾದವ್ ಹೇಳಿದ್ದರಲ್ಲಿ ನಿಜವಾಗಿ ತಪ್ಪೇನೂ ಇಲ್ಲ, ಅವರು ಭಾರತೀಯರು ಬುದ್ಧಿವಂತಿಕೆಗಿಂತ ಹೆಚ್ಚಾಗಿ ಬಾಹ್ಯ ಬಿಳಿ ಚರ್ಮಕ್ಕೆ ಅನವಶ್ಯಕ ಪ್ರಾಮುಖ್ಯತೆ ಕೊಡುತ್ತಿದ್ದಾರೆ ಎಂದು ತಿಳಿ ಹೇಳಲು ಈ ಉದಾಹರಣೆಗಳನ್ನ ಕೊಟ್ಟಿದ್ದಾರೆ ಅಷ್ಟೇ. ವಿನಃ ದಕ್ಷಿಣ ಭಾರತೀಯ ಮಹಿಳೆಯರನ್ನು ಅವಹೇಳನ ಮಾಡಿಲ್ಲ ಅಥವಾ ಹಿಂದೂ ದೇವರನ್ನು ಅವಮಾನಿಸಿಲ್ಲ.

ನಿಜವಾಗಿ ಫೇರ್-ನೆಸ್ ಕ್ರೀಂ ಮಾರುವ ಕಂಪನಿಗಳೇ ಕಪ್ಪು ಚರ್ಮದ ಮಹಿಳೆಯರನ್ನು ಅನುದಿನವೂ ಅವಮಾನಿಸುತ್ತಿರುವುದು. ಹುಡುಗಹುಡುಗಿ ಇಬ್ಬರಿಗೂ ಕಪ್ಪು ಚರ್ಮ ಇದ್ದರೆ ಗೆಳೆಯರು ದೂರ ಸರಿಯುತ್ತಾರೆ, ಒಳ್ಳೆಯ ನೌಕರಿ ಸಿಗುವುದಿಲ್ಲ, ಆತ್ಮವಿಶ್ವಾಸ ಬೆಳೆಯುವುದಿಲ್ಲ ಎಂದೆಲ್ಲಾ ಸ್ಕಿನ್-ಕ್ರೀಂಗಳ ಜಾಹೀರಾತನ್ನು ಭಾರತದ ಎಲ್ಲಾ ಭಾಷೆಯಲ್ಲಿ ವಿವಿಧ ರೀತಿಯಲ್ಲಿ ದಿನಕ್ಕೆ ನೂರಾರು ಬಾರಿ ಟಿವಿಯಲ್ಲಿ ಸಿನೆಮಾ ಥಿಯೇಟರುಗಳಲ್ಲಿ ತೋರಿಸಿ ತೋರಿಸಿ ಕಪ್ಪು ಚರ್ಮದವರಿಗೆ ಇಡೀ ಜೀವನಕ್ಕೆ ಸಾಕಾಗುವಷ್ಟು ಅವಮಾನಿಸಿ ಅವರಲ್ಲಿ ನಕಾರಾತ್ಮಕ ಬುದ್ಧಿ ಹಾಗೂ ಕೀಳುಭಾವನೆ (ಇನ್ಫೀರಿಯಾರಿಟಿ ಕಾಂಪ್ಲೆಕ್ಸ್) ಬೆಳೆಸುತ್ತಾರೆ. ಹಾಗಾದರೆ ಇದರ ವಿರುದ್ಧ ಶರದ್ ಯಾದವ್ ಲೋಕಸಭೆಯಲ್ಲಿ ಮಾತನಾಡಿದ್ದು ಹೇಗೆ ತಪ್ಪು?


ಹಿಂದೊಮ್ಮೆ ಲಾಲೂ ಪ್ರಸಾದ್ ಯಾದವರೂ ಇಂತಹ ಒಂದು ವಿವಾದಾತ್ಮಕ ಹೇಳಿಕೆ ಕೊಟ್ಟಿದ್ದರು. ಅದೆಂದರೆ ಮೊದಲು ಎಲ್ಲಾ ಭಾರತೀಯರು ಸಮಾನ ಕಪ್ಪು ಬಣ್ಣದವರಾಗಿದ್ದರು, ಆದರೆ ಎರಡು ಸಾವಿರ ವರ್ಷದ ಹಿಂದೆ ಪಂಜಾಬ ಹರಿಯಾಣ ಕಾಶ್ಮೀರ ರಾಜಸ್ಥಾನ ಸಿಂಧ್ ಈ ವಾಯುವ್ಯ ಭಾರತದ ಪ್ರದೇಶದಲ್ಲಿ ಅಲೆಕ್ಸಾಂಡರ್ ತನ್ನ ಐದು ಲಕ್ಷ ಸೈನಿಕರೊಂದಿಗೆ ಆರು ತಿಂಗಳು ಬೀಡು ಬಿಟ್ಟಿದ್ದಾಗ ಆಗಿನ ಭಾರತೀಯ ಮೇಲ್ಜಾತಿಯವರ ಮಕ್ಕಳು ಗ್ರೀಕ್ ಸೈನಿಕರಿಗೆ ಹುಟ್ಟಿದ ಅನೈತಿಕ ಸಂತಾನವಾಗಿತ್ತು, ಹಾಗೂ ನಂತರ ಭಾರತಕ್ಕೆ ದಾಳಿ ಮಾಡಿದ ಲಕ್ಷಾಂತರ ತುರ್ಕಿ-ಪರ್ಶಿಯನ್ ಸೈನಿಕರೂ ಇದೇ ರೀತಿಯ ಅನೈತಿಕ ಕೆಲಸ ಮಾಡಿದ್ದರಿಂದ ವಾಯುವ್ಯ ಭಾರತದಲ್ಲಿ ಸ್ಥಳೀಯ ಹಿಂದೂ ಮೇಲ್ಜಾತಿಯವರಿಗೆ ಬಿಳಿಯ ಮಕ್ಕಳು ಹುಟ್ಟಿದವಂತೆ. ಜಗತ್ತಿನ ಯಾವುದೇ ಭಾಗದಲ್ಲಾಗಲಿ ಗೆದ್ದ ರಾಜನ ಸೈನಿಕರು ಮಾಡುತ್ತಿದ್ದದ್ದು ಎರಡೇ ಕೆಲಸ. ಒಂದನೇಯದು ಸೋತ ರಾಜ್ಯದ ಜನತೆಯ ಸಂಪತ್ತು ಲೂಟಿ ಹೊಡೆಯುವುದು ಹಾಗೂ ಎರಡನೆಯದು ಅಲ್ಲಿಯ ಯುವತಿಯರನ್ನು ಭೋಗಿಸುವುದು. ಧರ್ಮಯುದ್ಧ ಎಂಬುದು ಬರೀ ಧರ್ಮಗ್ರಂಥಗಳಿಗೆ ಮಾತ್ರ ಸೀಮಿತವಾಗಿತ್ತು, ಹಾಗೆ ಹುಟ್ಟಿದ ಮುಂದಿನ ಪೀಳಿಗೆಯವರು ಗ್ರೀಕ್ ಪರ್ಶಿಯನ್ನರಂತೆ ಬಿಳಿ ಚರ್ಮದವರಾದರು ಹಾಗೂ ಅವರ ಮರಿಮಕ್ಕಳು ಈಗಿನ ಬಾಲಿವುಡ್ ನಟರಾದರು ಎಂಬ ಅತ್ಯಂತ ಕ್ರೂರ ಸತ್ಯವನ್ನು ಲಾಲೂ ಹೇಳಿದ್ದರು. (ಅವರ ಮರಿಗಳಲ್ಲಿ ಕೆಲವರು ಕದಂಬರ ಕಾಲದಲ್ಲಿ ಅಹಿಛತ್ರದಿಂದ ಕರ್ನಾಟಕಕ್ಕೂ ವಲಸೆ ಬಂದ ಸವರ್ಣೀಯರಿರಬಹುದೇ?) ಆದರೆ ಆಗ ಲಾಲೂರವರ ಇಂತಹ ಅವಮಾನಕರ ಹೇಳಿಕೆಯ ವಿರುದ್ಧ ಯಾರೂ ಆಕ್ಷೇಪಣೆ ಎತ್ತಿರಲಿಲ್ಲ. ಆದರೆ ಈಗ ಶರದ್ ಯಾದವರ ಹೇಳಿಕೆಯಲ್ಲಿ ಯಾರಿಗೂ ಅವಮಾನವಾಗುವಂತಹದ್ದೇನೂ ಇಲ್ಲದಿದ್ದರೂ ವಿನಾಕಾರಣ ಗಲಾಟೆ ಎಬ್ಬಿಸಲಾಗುತ್ತಿದೆ. ಯಾಕೆಂದರೆ ಈ ಬಿಳಿ ಮತ್ತು ಕರಿ ಚರ್ಮದ ವಿವಾದ ಆರ್ಯ ಮತ್ತು ದ್ರಾವಿಡ ಜನಾಂಗ ಭೇದದ ಸಿದ್ಧಾಂತಕ್ಕೆ ಇಂಬು ಕೊಡುತ್ತದೆ. ಮೇಲಾಗಿ ಭಾರತದ ಮನುವಾದಿ ವಿದ್ಯಾವಂತರಲ್ಲಿ ಈಗಲೂ ಇರುವ ಗೋತ್ರ ಹಾಗೂ ಶುದ್ಧ ಆರ್ಯ ರಕ್ತ ಎಂಬ ಮೂರ್ಖ ಮೇಲರಿಮೆಯ ಅಡಿಪಾಯವನ್ನೇ ಈ ವಿವಾದ ಅಲುಗಾಡಿಸುತ್ತದೆ ತಾನೇ! ಹಾಗಾಗಿ ಇದು ಅಷಾಢಭೂತಿ ಸವರ್ಣೀಯರಿಗೆ ಬೇಕಿಲ್ಲ ಅಷ್ಟೇ.

- ವೀರಪ್ಪ ಡಿ.ಎನ್. ಮಂಗಳೂರು

ಕಾರ್ಪೊರೇಟ್‌ಶಾಹಿಗಳ ನಿಯಂತ್ರಣದಲ್ಲಿ ಮಾಧ್ಯಮ



'ನರೇಂದ್ರ ಮೋದಿ ಮತ್ತು ರಿಲೈಯನ್ಸ್ ಸಂಸ್ಥೆಗೆ ಕೆಟ್ಟ ಹೆಸರು ತರುವಂತಹ ಯಾವುದೇ ಸುದ್ದಿಯನ್ನು ಪ್ರಸಾರ ಮಾಡಕೂಡದು' - ಇದು ರಿಲೈಯನ್ಸ್ ಮಾಲಿಕತ್ವದ ಐಬಿಎನ್ 7 ಚಾನಲ್‌ನ ನೌಕರರಿಗೆ ಕೊಡಲಾಗಿರುವ ಕಾಯಂ ಅಧಿಸೂಚನೆ! 'ರಿಲೈಯನ್ಸ್ ಇಂಡಿಯಾ' ಕಳೆದ ಸೆಪ್ಟಂಬರ್‌ನಲ್ಲಿ 'ನೆಟ್‌ವರ್ಕ್ 18 ಮಾಧ್ಯಮ ಮತ್ತು ಹೂಡಿಕೆ' ಎಂಬ ಬೃಹತ್ತಾದ ಸಂಸ್ಥೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುವ ವಿಚಾರ ಪ್ರಾಯಶಃ ನಿಮ್ಮಲ್ಲಿ ಹೆಚ್ಚಿನವರಿಗೆ ತಿಳಿದಿರಬಹುದು. ಈ ನೆಟ್‌ವರ್ಕ್ 18 ಒಡಲೊಳಗೆ ಐಬಿಎನ್ 7, ಸಿಎನ್‌ಬಿಸಿ ಟಿವಿ 18, ಸಿಎನ್‌ಎನ್-ಐಬಿಎನ್, ಸಿಎನ್‌ಎನ್ ಆವಾಜ್ ಮುಂತಾದ ಚಾನಲ್‌ಗಳಲ್ಲದೆ ಫಸ್ಟ್‌ಪೋಸ್ಟ್ ಡಾಟ್ ಕಾಮ್ ಮುಂತಾದ ಜಾಲತಾಣಗಳೂ, ಹಲವಾರು ನಿಯತಕಾಲಿಕಗಳೂ ಇವೆ. ರಿಲೈಯನ್ಸ್ ಕೈಗೆ ಹಸ್ತಾಂತರವಾದ ನಂತರ ನೆಟ್‌ವರ್ಕ್ 18ರ ವರದಿಗಾರರು ಒಂದೋ ಮಾಲೀಕರ ನೀತಿಗನುಗುಣವಾಗಿ ವರದಿ ಮಾಡಬೇಕು, ಅವರು ತೋರಿಸಿದವರನ್ನು ಹೊಗಳಬೇಕು ಇಲ್ಲವಾದರೆ ನೌಕರಿ ಬಿಡಬೇಕು ಎಂದಾಗಿದೆ. ಪರಿಣಾಮವಾಗಿ ನೆಟ್‌ವರ್ಕ್



18 ಇಂದು ಅಖಂಡ ಮೋದಿ ಭಜನೆಯಲ್ಲಿ ತೊಡಗಿಸಿಕೊಂಡಿರುವ ಭಜನಾಮಂಡಳಿಯ ಹಾಗೆ ತೋರಿಬರುತ್ತಿದೆ.

ಐಬಿಎನ್ 7 ಚಾನಲ್‌ನ ವಾತಾವರಣ ಉಸಿರುಗಟ್ಟಿಸುವಂತಾಗಿದೆ ಎನ್ನುತ್ತಾನೆ ಅಲ್ಲಿ ಏಳು ವರ್ಷಗಳ ಕಾಲ ಸಹಸಂಪಾದಕನಾಗಿ ಕೆಲಸಮಾಡಿದ್ದ ಪಂಕಜ್ ಶ್ರೀವಾತ್ಸವ. "ನೆಟ್‌ವರ್ಕ್ 18 ಗುಂಪು ರಿಲೈಯನ್ಸ್ ಸಂಸ್ಥೆಯ ಸ್ವಾಧೀನಕ್ಕೆ ಬಂದನಂತರ ಟೌನ್‌ಹಾಲ್‌ನಲ್ಲಿ ಒಂದು ಸಭೆ ನಡೆದಿತ್ತು. ಅದರ ಅಧ್ಯಕ್ಷತೆಯನ್ನು ರಿಲೈಯನ್ಸ್ ಅಧಿಕಾರಿ ರೋಹಿಂತ್ ಬನ್ಸಲ್ ಮತ್ತು ನೆಟ್‌ವರ್ಕ್ 18ರ ಅಧ್ಯಕ್ಷ ಉಪಾಧ್ಯಾಯ ವಹಿಸಿದ್ದರು. ಇನ್ನು ಮುಂದೆ ಚಾನಲ್ ಆಮ್ ಆದ್ಮಿ ಪಕ್ಷದ ಪ್ರತಿನಿಧಿಗಳ ಲೈವ್ ಭಾಷಣಗಳನ್ನು ಪ್ರಸಾರ ಮಾಡಕೂಡದೆಂಬ ಸ್ಪಷ್ಟ ಸಂದೇಶವನ್ನು ಅಂದು ನೀಡಲಾಯಿತು" ಎಂದಾತ ಹೇಳುತ್ತಾನೆ. ಇದರ ಬಳಿಕ ಐಬಿಎನ್ 7 ಚಾನಲ್‌ನ ಧೋರಣೆಗಳು ಬದಲಾಗಿರುವುದಕ್ಕೆ ಸಾಕ್ಷಿಯಾಗಿ ಹಲವು ಉದಾಹರಣೆಗಳನ್ನು ಕೊಡಬಹುದು: "ಲವ್ ಜಿಹಾದ್ ಅಲ್ಲ ಕ್ರಿಕೆಟ್ ಜಿಹಾದ್" ಎಂಬ ಹೆಡ್‌ಲೈನ್, "ಮೋದಿ ಸರ್ಕಾರದ 100 ದಿನಗಳು" ಎಂಬ ಚರ್ಚಾ ಕಾರ್ಯಕ್ರಮದ ವೇಳೆ ಮೋದಿಯನ್ನು ಕೆಟ್ಟದಾಗಿ ಬಿಂಬಿಸುವ ಪ್ರಶ್ನೆಗಳು ನುಸುಳಿದಾಗ ದೊಡ್ಡ ಗಲಾಟೆಯಾಗಿ ಕೊನೆಗೆ ಜಾಲತಾಣದಿಂದ ಕಾರ್ಯಕ್ರಮವನ್ನು ತೆಗೆದುಹಾಕಿರುವುದು, "ಶಿಕ್ಷಕರ ದಿನಾಚರಣೆ"ಯಂದು ಡಾ। ರಾಧಾಕೃಷ್ಣನ್ ಕಣ್ಮರೆಯಾಗಿ ಮೋದಿ ವಿಜೃಂಭಿಸಿರುವುದು, "ಮೋದಿ ವಿರುದ್ಧವಿರುವ ಯಾವುದೇ ಹೇಳಿಕೆಯನ್ನು ಪ್ರಸಾರ ಮಾಡಕೂಡದು" ಎಂಬ ಸೂಚನೆಗಳು ಇತ್ಯಾದಿ.

ದಿಲ್ಲಿ ಚುನಾವಣೆಗಳು ಶುರುವಾಗುತ್ತಲೆ ಚಾನಲ್ ಪಕ್ಷಪಾತೀಯವಾಗಿ ವರದಿ ಮಾಡುತ್ತಿದೆ, ಉದ್ದೇಶಪೂರ್ವಕವಾಗಿ ಕೇಜ್ರಿವಾಲ್ ಬಗ್ಗೆ ವರದಿ ಮಾಡುತ್ತಿಲ್ಲವೆಂಬ ಆರೋಪಗಳು ಬರಲಾರಂಭಿಸಿದಾಗ ಪಂಕಜ್ ತನ್ನ ಪ್ರತಿರೋಧವನ್ನು ವ್ಯಕ್ತಪಡಿಸತೊಡಗಿದ. ಚುನಾವಣೆಗಳ ವೇಳೆ ಆತ ಕಳುಹಿಸಿದ ಎಸ್‌ಎಮ್‌ಎಸ್ ಒಂದು ದೊಡ್ಡ ರಾದ್ಧಾಂತವನ್ನೆ ಸೃಷ್ಟಿಸಿತು. "ನಾವು ಆಮ್ ಆದ್ಮಿ ಪಕ್ಷವನ್ನು ಸೋಲಿಸುವ ಆಂದೋಳನಕ್ಕೆ ಸೇರಿರುವಂತಿದೆ. ಇದು ನ್ಯಾಯವಲ್ಲ, ಇದರ ಹಿಂದೆ ಉಮೇಶ್ ಉಪಾಧ್ಯಾಯನ (ದಿಲ್ಲಿ ಬಿಜೆಪಿ ಅಧ್ಯಕ್ಷನ ಸೋದರ) ಕೈವಾಡ ಇದೆಯೆಂಬುದು ಅನೇಕರ ನಂಬಿಕೆಯಾಗಿದೆ. ಇದು ಓರ್ವ ಪತ್ರಕರ್ತನಾಗಿ ನನ್ನ ನೀತಿಗೆ ವಿರುದ್ಧವಾಗಿದೆ" ಎಂಬ ಸಂದೇಶ ಕಳುಹಿಸಿದ ಮೂರು ತಾಸಿನೊಳಗಾಗಿ ಚಾನಲ್‌ನ ಮಾನವ ಸಂಪನ್ಮೂಲ ವಿಭಾಗದಿಂದ ಪಂಕಜ್‌ಗೆ ಬುಲಾವ್ ಬಂದಿದೆ. ಅಲ್ಲಿ ಚಾನಲ್‌ನ ಉಪನಿರ್ದೇಶಕ ಸುಮಿತ್ ಅವಸ್ತಿ ಇವನಿಗಾಗಿ ಕಾದಿದ್ದ. ಆತ, ಪಂಕಜ್ ತಕ್ಷಣ ರಾಜೀನಾಮೆ ನೀಡಿ ಬೇರೆ ನೌಕರಿ ಹುಡುಕಬೇಕೆಂದು ಆಜ್ಞಾಪಿಸಿದ. ಆದರೆ ಇದಕ್ಕೆ ಜಗ್ಗದ ಪಂಕಜ್, "ರಾಜೀನಾಮೆ ಕೊಡೋದಿಲ್ಲ, ಬೇಕಿದ್ದರೆ ನೀವೇ ನನ್ನನ್ನು ಕಿತ್ತುಹಾಕಿ" ಎಂದು ಸವಾಲು ಹಾಕಿದ. ಈಗಾತ ಚಾನಲ್ ವಿರುದ್ಧ ಕಾನೂನು ಹೋರಾಟಕ್ಕೆ ಸಜ್ಜುಗೊಳ್ಳುತ್ತಿದ್ದಾನೆ.


ಕಾರ್ಪೊರೇಟುಶಾಹಿ ಮತ್ತು ಹಿಂದೂತ್ವವಾದಗಳ ಮಿಶ್ರಣ ಮಾಧ್ಯಮವನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸುವ ಮೂಲಕ ಅಂತಿಮವಾಗಿ ಪ್ರಜಾಪ್ರಭುತ್ವದ ಬುಡಕ್ಕೇ ಕೊಡಲಿಯೇಟು ನೀಡಲಿದೆ ಎಂಬುದಕ್ಕೆ ಇನ್ನೇನು ಪುರಾವೆ ಬೇಕು?

(ಆಧಾರ: ತೆಹೆಲ್ಕಾ 14 ಮಾರ್ಚ್ 2015)

ಬಾಯಾರಿಕೆ ಅಂತ ಬಚ್ಚಲುಮನೆ ನೀರು ಕುಡೀಬಾರ್ದು

'ಬಾಳಿದರೆ ಅವರಂಗೆ ಬಾಳಬೇಕು' ಅಂತ ನಾಕು ಜನ ಅನ್ನೊ ಹಂಗೆ ಬಾಳಿ ಬದುಕುತ್ತಿದ್ದ ಮನೆ ಅದು. ಮಾನಮರ್ಯಾದೆಗೆ ಅಂಜುವ ಮನೆತನ. ಪ್ರಾಣ ಹೋದರೂ ಸರಿ ಅಂತ ಹೋರಾಡಿ ಮನೆತನದ ಗೌರವ ಕಾಪಾಡುತ್ತಿದ್ದಂತಹ ಮಾನಧನರಿದ್ದ ವಂಶ ಅದು. ಹೊಟ್ಟೆಬಟ್ಟೆಗೇನೂ ಕೊರತೆ ಇರ್ಲಿಲ್ಲ. ಆಸ್ತಿಪಾಸ್ತಿ ನಗನಾಣ್ಯ ಆಳುಕಾಳು ಎಲ್ಲಾನೂವೆ ಬೇಕು ಬೇಕಾದಂಗಿದ್ದೊ. ಒಟ್ಟನಲ್ಲಿ ಗೌರವಸ್ಥರ ಕುಟುಂಬ ಹೆಂಗಿರಬೇಕಿತ್ತೋ ಹಂಗಿತ್ತು.

ಹಾಳಾದ ದೇವರು ತಿರುಪೆ ಎತ್ತೋವ್ನೆಲ್ಲಿ ಬ್ಯಾಡಬ್ಯಾಡ ಅಂದ್ರೂ ಮನೆ ತುಂಬ ಮಕ್ಕಳು ಕೊಡ್ತಾನೆ. ನಂ ಗೌರವಸ್ಥರ ಮನೆಗೆ 'ಒಂದು ಹೆಣ್ಣಾಗಲಿ, ಒಂದು ಹೆಣ್ಣಾಗಲಿ' ಅಂತ ಹಂಬಲಿಸಿದರೂ ಎರಡು ಗಂಡು ಕುಡಿ ಕೊಟ್ಟು ನಿಲ್ಸೇ ಬುಟ್ಟ. ಸೊಸೇದಿರ್ನೆ ಮಗಳು ಅಂದುಕೊಂಡ್ರಾಯ್ತು ಅಂತ ಸಮಾಧಾನ ಮಾಡಿಕೊಂಡ್ರು. ಹಿಂಗೇ ನಡೀತಿತ್ತು ಕಾಲ. ಹಿರೀದು, ಕಿರೀದು ಮದುವೆ ವಯಸ್ಸಿಗೆ ಬಂದೊ. ಹೆಣ್ಣ ತಡ್ಕಕೆ ಹಚ್ಚಿಕೊಂಡರು. ಹಿರೀ ಹುಡುಗನಂತೂ ಅವರ ಅವ್ವನ ಹತ್ರ "ಯವ್ವಾ ಯವ್ವಾ ಅಂತಸ್ತು ಗಿಂತಸ್ತು ಅಂತ ಕುಂತ್ರೆ ಆಗಾಕಿಲ್ಲ, ಮನೆ ಅಂದಮೇಲೆ ಮಾತು ಬರ್ತವೆ ಹೋಗ್ತವೆ. ಸಾಹುಕಾರ್ರ ಮನೆ ಹೆಣ್ಣು ತಂದ್ರೆ ಕೆಮ್ಮಿದ್ದ ಕ್ಯಾಕರಿಸಿದ್ದ ಎಲ್ಲಾನೂವೆ ತೌರು ಮನೆಗೆ ಹೇಳ್ತವೆ ನಮ್ಮ ಮನೆತನದ ಮರ್ಯಾದೆ ಹಾಳು ಮಾಡ್ತವೆ. ಬಡವರ ಮನೆ ಹೆಣ್ಣಾದ್ರೆ ಎಲ್ಲಾನೂ ಹೊಟ್ಟೆಗಾಕ್ಕೊಂಡು ಸಂಸಾರ ನೀಗಿಸ್ತಾಳೆ" ಅಂತೆಲ್ಲ ಹೇಳ್ದ. ಅವ್ವನಿಗೂ ಅದೇ ಸೈ ಅನ್ನುಸ್ತು. ತೆಳ್ಳಗೆ ಬೆಳ್ಳಗೆ ನೀಟಾಗಿದ್ದ ಬಡವರ ಮನೆ ಹೆಣ್ಣಾ ಮನೆ ತುಂಬಿಸಿಕೊಂಡರು.



ಮೊದಲ ರಾತ್ರಿ ಸಿನಿಮಾದಲ್ಲಿ ತೋರಿಸೊ ಹಂಗೇನೂ ಇರ್ಲಿಲ್ಲ, ಇದ್ದ ಒಂದು ಹಾಸಿಗೆ ಮೇಲೆ ಹೊಸ ಗಂಡು ಕುಂತಿತ್ತು, ಹೆಂಡತಿ ಬಂದು ಬಾಗಿಲು ಭದ್ರ ಮಾಡಿದ್ದೇ ತಡ ಹೊಸ ಗಂಡು ಏನು ಮಾಡ್ತು? ಅನಾಮತ್ತು ಹೆಂಡತಿ ಕಾಲಿಡ್ಕೊಂಡು 'ನಮ್ಮ ಮನೆತನದ ಗೌರವ ನಿನ್ ಕೈಲದೆ ಅದ ಉಳ್ಸು' ಅಂತ ಬೇಡ್ಕಂತು. ಅದೇನಾಗಿತ್ತು ಅಂದ್ರೆ ಅದ್ಕೆ ಅದೇನೋ ಯಾವುದೋ ನರದೌರ್ಬಲ್ಯ ಅಂತೆ. ದಾಂಪತ್ಯ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದಂತೆ. ಅದನ್ನು ಹೊರಗೆ ಪ್ರಚಾರ ಮಾಡಿ ಮರ್ಯಾದೆಗೇಡು ಮಾಡಬೇಡ ಎಂಬುದು ಅವನ ಅಳಲಾಗಿತ್ತು.

ಅವಳೇನೋ ಮನೆತನದ ಮರ್ಯಾದೆ ಕಾಪಾಡಲು ಸಿದ್ಧವಾಗಿದ್ದಳು. ಆದರೆ ದೇಹ ಕೇಳಬೇಕಲ್ಲ, ಬಯಕೆಯ ಕಣ್ಣುಗಳಿಂದ ಗಂಡಸರನ್ನು ನೋಡುವ ಹಾಗೆ ಆಗೋದು. ಆ ಸೂಕ್ಷ್ಮ ಅತ್ತೆಗೆ ತಿಳಿಯಿತು. ಮನೆತನದ ಮರ್ಯಾದೆ ಅವಳನ್ನು ಕಾಡಿತು. ಸಮಯ ನೋಡಿ ಸೊಸೆಗೆ 'ಮರ್ರ್ಯಾದಸ್ಥರ ವಂಶ ನಮ್ದು, ಅದ ಕಾಪಾಡೋದು ನಿನ್ಕೈಲದೆ. ಬಾಯಾರಿಕೆ ಆಯ್ತದೆ ಅಂತ ಬಚ್ಚಲು ಮನೆ ನೀರ ಕುಡಿಬಾರ್ದು ಕನವ್ವ. ಅಲ್ಲಿ ಇಲ್ಲಿ ಯಾಕೆ ತಡಕೀಯೆ, ನಿನ್ ಮೈದುನನೇ ಅವ್ನಲ್ಲ' ಉಪದೇಶ ಮಾಡಿದಳು ಅತ್ತೆ. ಯಾಕೆ ಅಂದ್ರೆ, ಮನೆತನದ ಗೌರವ ಅಡಗಿದೆ ನೋಡಿ!

ಭಾರತದ ಮಗಳು ಸಾಕ್ಷ್ಯ ಚಿತ್ರಕ್ಕೆ ಬರುತ್ತಿರುವ ಪ್ರತಿಕ್ರಿಯೆಗಳು ನೋಡಿದಾಗ ಮೇಲಿನ ಕತೆ ನೆನಪಾಯಿತು.

ಅತ್ಯಾಚಾರ ನಡೆಯುತ್ತಲೇ ಇರಲಿ
ಹೊರಕ್ಕೆ ಮಾತ್ರ ತಿಳಿಯದೆ ಇರಲಿ!
ಎಂತಹ ಆಷಾಢಭೂತಿಗಳು ನಾವು!

■ ಎಚ್ಚೆಲ್ಕೆ



ಸದ್ಯದಲ್ಲಿ 'ನೀರ್ ದೋಸೆ' ರೆಡಿ

'ಸಿದ್ಲಿಂಗು' ಖ್ಯಾತಿಯ ವಿಜಯ್ ಪ್ರಸಾದ್ ನಿರ್ದೇಶಿಸುತ್ತಿರುವ, ಮೋಹಕ ತಾರೆ ರಮ್ಯಾ ಅಭಿನಯಿಸುತ್ತಿದ್ದ 'ನೀರ್ ದೋಸೆ' ಚಿತ್ರಕ್ಕೆ ಮತ್ತೆ ಜೀವ ಬಂದಿದೆ. ಎರಡು ವರ್ಷಗಳ ಹಿಂದೆ ರಮ್ಯಾ ಮೇಡಂ ಅವರ ಡೇಟ್ಸ್ ಸಮಸ್ಯೆಯಿಂದ ಚಿತ್ರ ಅರ್ಧಕ್ಕೆ ನಿಂತಿತ್ತು, ಲೋಕಸಭಾ ಚುನಾವಣೆಯಲ್ಲಿ ಸೋತ ನಂತರ ಮಂಡ್ಯದಿಂದ ನಾಪತ್ತೆ ಆಗಿ ಲಂಡನ್‌ನಲ್ಲಿ ಪ್ರತ್ಯಕ್ಷವಾಗಿದ್ದ ರಮ್ಯಾ ಮೇಡಂ ಚಿತ್ರವನ್ನು ಮುಗಿಸಿಕೊಡುವ ಸೂಚನೆಯನ್ನಂತೂ ಕೊಡಲಿಲ್ಲ. ಇದರಿಂದ ಚಿತ್ರ ನಿರ್ಮಾಣ ಮಾಡುತ್ತಿದ್ದ ಸುಧೀಂದ್ರ ಮತ್ತು ಸ್ನೇಹಿತರು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಚಿತ್ರದಿಂದ ಹಿಂದೆ ಸರಿಯುವಂತಾಗಿತ್ತು.

ಈಗ ಈ ಚಿತ್ರವನ್ನು ನಿರ್ಮಾಣ ಮಾಡಲು 'ರಾಧಾ ಕಲ್ಯಾಣ' ಧಾರಾವಾಹಿಯ ನಿರ್ಮಾಪಕ ಆಶು ಬೆದ್ರಾ ಮುಂದೆ ಬಂದಿದ್ದಾರಂತೆ. ಆದರೆ ರಮ್ಯಾ ಅವರ ಜಾಗಕ್ಕೆ ಯಾವ ನಾಯಕಿ ಬರುತ್ತಾರೆ ಎಂಬುದು ಗಾಂಧಿನಗರದವರಿಗೆ ಯಕ್ಷಪ್ರಶ್ನೆಯಾಗಿದೆ.

ವಿವಾದಕ್ಕೆ ಮುನ್ನುಡಿ ಬರೆದ ಪಿ.ಶೇಷಾದ್ರಿ

ಮೈಸೂರಿನಲ್ಲಿ ನಡೆದ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಖಳನಾಯಕರಿಗೆ ಪ್ರಶಸ್ತಿ ನೀಡಿ ಗೌರವಿಸಬೇಕು ಅನ್ನೋ ಬೇಡಿಕೆಯನ್ನಿಟ್ಟಿದ್ದನ್ನು, ಅದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಂದಿಸಿ



ಮುಂದಿನ ವರ್ಷದಿಂದ ಖಳನಾಯಕರಿಗೂ ಪ್ರಶಸ್ತಿ ನೀಡುತ್ತೇವೆ ಎಂದು ಘೋಷಿಸಿದ್ದನ್ನು ನೀವು ಇದೇ ಪತ್ರಿಕೆಯಲ್ಲಿ ಓದಿದ್ದೀರಿ.

ಈಗ ವಿಷಯ ಏನಪ್ಪ ಅಂದ್ರೆ 'ಉತ್ತಮ ಖಳನಟ' ಪ್ರಶಸ್ತಿ ಬಗ್ಗೆ ದರ್ಶನ್ ನೀಡಿದ ಪ್ರಸ್ತಾವನೆ ಮತ್ತು ಅದನ್ನ ಸರ್ಕಾರ ಪರಿಗಣಿಸಿರುವ ಬಗ್ಗೆ ಪ್ರಶಸ್ತಿ ವಿಜೇತ ನಿರ್ದೇಶಕ ಪಿ.ಶೇಷಾದ್ರಿ ತಗಾದೆ ತೆಗೆದಿದ್ದಾರೆ. 'ವಿಲನ್‌ಗಳಿಗೆ ಪ್ರತ್ಯೇಕ ಪ್ರಶಸ್ತಿ ನೀಡುವುದು ಸರಿಯಲ್ಲ. ಈಗಾಗಲೇ ಸರ್ಕಾರದ ಪ್ರಶಸ್ತಿಗಳ ಪಟ್ಟಿಯಲ್ಲಿ 'ಪೋಷಕ ನಟ' ಮತ್ತು 'ಪೋಷಕ ನಟಿ' ಪ್ರಶಸ್ತಿಗಳು ಇವೆ. ಈ ವಿಭಾಗದಲ್ಲಿ ಖಳನಟರೂ ಬರುತ್ತಾರೆ. ಈ ಹಿಂದೆ ಅಂತಹ ನಟರಿಗೆ ಪ್ರಶಸ್ತಿ ದೊರಕಿರುವ ಉದಾಹರಣೆಗಳೂ ಇವೆ. ಹೀಗಿರುವಾಗ ಅತ್ಯುತ್ತಮ ಖಳನಟ ಪ್ರಶಸ್ತಿ ನೀಡುವುದು ಎಷ್ಟು ಸರಿ?' ಅಂತಾರೆ ಈ ನಿರ್ದೇಶಕರು.

ಶೇಷಾದ್ರಿ ಅವರ ಈ ಹೇಳಿಕೆಯಿಂದ ಕೋಪಗೊಂಡಿರುವ ಗಾಂಧಿನಗರದ ಮಂದಿ "ಯಾರು ಈ ನಿರ್ದೇಶಕರು? ಬರೀ ಪ್ರಶಸ್ತಿಗಾಗಿ ಮತ್ತು 8-10 ಪ್ರಶಸ್ತಿ ಸಮಿತಿಯ ಸದಸ್ಯರಿಗಾಗಿ ಮಾತ್ರ ಸಿನಿಮಾ ಮಾಡುವವರು ಈ ರೀತಿ ಹೇಳಿಕೆ ನೀಡುವುದು ಸರಿಯಿಲ್ಲ, ಮೊದಲು ಜನರು ನೋಡುವಂತಹ ಸಿನಿಮಾವನ್ನು ಮಾಡಲಿ" ಎಂದು ಕಿಡಿಕಾರಿದ್ದಾರೆ.



ಅಷ್ಟೇಅಲ್ಲ, ಶೇಷಾದ್ರಿ ಅವರ ಹೇಳಿಕೆಯ ವಿರುದ್ಧ ನವರಸನಾಯಕ ಜಗ್ಗೇಶ್ ಟಾಂಗ್ ನೀಡಿದ್ದಾರೆ. "ಇವರಿಗೆ ಮಾತ್ರ ಪ್ರಶಸ್ತಿ ಬೇಕು, ಬೇರೆಯವರಿಗೆ ಬೇಡ್ವಾ..?" ಅಂತ ಜಗ್ಗೇಶ್ ಟ್ವಿಟ್ಟರ್‌ನಲ್ಲಿ ತಮ್ಮ ಅಭಿಮಾನಿಗಳ ಮುಂದೆ ಪ್ರಶ್ನೆ ಇಟ್ಟಿದ್ದಾರೆ.

"ನಿಮಗೆ ಮಾತ್ರ ರೆಡ್ ಕಾರ್ಪೆಟ್ಟಾ? ಬೇರೆಯವರಿಗೆ ಬೇಡ್ವಾ? ದರ್ಶನ್ ಮಾಡಿಸಿದ್ದು ಅಂತ ಅವರ ಹೆಸರಿಟ್ಟುಕೊಂಡು ಮತ್ತೊಂದು ಬಿಟ್ಟಿ ಪ್ರಚಾರ ಬೇಕಾ ನಿಮ್ಮಂಥವರಿಗೆ? ಈ ನ್ಯೂಸೆನ್ಸ್ ನಿಲ್ಲಿಸಿ" ಅಂತ ಜಗ್ಗೇಶ್ ಕಿಡಿಕಾರಿದ್ದಾರೆ.

ಆ ಮೂಲಕ ಖಳನಟರ ಪರ ನಿಂತಿರುವ ಜಗ್ಗೇಶ್, ದರ್ಶನ್ ಪರ ಬ್ಯಾಟಿಂಗ್ ಮಾಡಿದ್ದಾರೆ. "ಕನ್ನಡ ಚಿತ್ರರಂಗಕ್ಕೆ 80 ವರ್ಷಗಳ ಇತಿಹಾಸವಿದೆ. ವಜ್ರಮುನಿ, ತೂಗುದೀಪ ಶ್ರೀನಿವಾಸ್, ಸುಧೀರ್ ಸೇರಿದಂತೆ ಅನೇಕ ಖಳ ನಟರು ಚಿತ್ರರಂಗಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಆದರೆ ಅವರನ್ನ ಸರ್ಕಾರ ಗುರುತಿಸಿರುವುದಾದರೂ ಎಲ್ಲಿ? ಪೋಷಕನಟರೇ ಬೇರೆ, ಖಳನಟರೇ ಬೇರೆ ಆಗಿರುವ ಕಾರಣ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಲ್ಲ" ಎಂದಿದ್ದಾರೆ ನವರಸನಾಯಕ ಜಗ್ಗೇಶ್.

ಯುವರ್ ಟರ್ನ್ ಶೇಷಾದ್ರಿ!

ಸ್ನೇಹಕ್ಕಾಗಿ ಸಂಭಾವನೆ ಪಡೆಯದ ನಟ



ಕನ್ನಡ ಚಿತ್ರರಂಗದಲ್ಲಿ ಒಂದು ಕಡೆ ಸ್ಟಾರ್ ನಾಯಕನಟರು ಕೋಟಿ ಕೋಟಿ ಲೆಕ್ಕದಲ್ಲಿ ಸಂಭಾವನೆ ಪಡೆಯುತ್ತಿದ್ದರೆ ಮತ್ತೊಂದು ಕಡೆ ಒಂದೋ ಎರಡೋ ಸಿನಿಮಾ ಮಾಡಿ ಹೆಸರು ಮಾಡಿರುವ ಯುವ ನಾಯಕರು ಕೂಡ ಕೋಟಿ ಲೆಕ್ಕದಲ್ಲಿ ಸಂಭಾವನೆ ಕೇಳುತ್ತಿದ್ದಾರಂತೆ. ಅಂಥದ್ರಲ್ಲಿ ಈಗಾಗಲೇ ಸಾಕಷ್ಟು ಹಿಟ್ ಸಿನಿಮಾ ನೀಡಿರುವ ನಾಯಕ ನಟ ಸ್ನೇಹಕ್ಕಾಗಿ ನಯಾಪೈಸೆ ಸಂಭಾವನೆಯನ್ನು ಪಡೆಯದೆ ನಟಿಸಿದ್ದಾರಂತೆ. ಯಾರು ಈ ನಾಯಕ ನಟ? 'ನೆನಪಿರಲಿ' ಅಂತ ಹಾಡುತ್ತಲೇ ಕನ್ನಡ ಚಿತ್ರರಂಗದಲ್ಲಿ ನೆಲೆಕಂಡುಕೊಂಡ ಚಾಕಲೇಟ್ ಹೀರೋ ಲವ್ಲಿ ಸ್ಟಾರ್ ಪ್ರೇಮ್.

'ಜೊತೆಜೊತೆಯಲಿ' ಚಿತ್ರದ ನಂತರ ಸಾಲುಸಾಲು ಫ್ಲಾಪ್ ಸಿನಿಮಾಗಳನ್ನು ನೀಡಿದ್ದ ಪ್ರೇಮ್ ವೃತ್ತಿ ಬದುಕಿಗೆ ದೊಡ್ಡತಿರುವು ಕೊಟ್ಟ ಚಿತ್ರ 'ಚಾರ್ಮಿನಾರ್'. ಆದಕ್ಕಾಗಿ ಈ ಚಿತ್ರದ ನಿರ್ದೇಶಕ ಚಂದ್ರು ಬಗ್ಗೆ ಅಪಾರ ಗೌರವ ಮತ್ತು ಅಭಿಮಾನ ಹೊಂದಿರುವ ಪ್ರೇಮ್ 'ಮಳೆ' ಚಿತ್ರಕ್ಕಾಗಿ ಫ್ರೀ ಕಾಲ್ ಡೇಟ್ಸ್ ನೀಡಿದ್ದರಂತೆ. ಚಂದ್ರು ಹೋಮ್ ಪ್ರೊಡಕ್ಷನ್ನಲ್ಲಿ 'ಮಳೆ' ಚಿತ್ರ ನಿರ್ಮಾಣವಾಗುತ್ತಿದ್ದ ಚಂದ್ರು ಶಿಷ್ಯ ತೇಜಸ್ ಈ ಸಿನಿಮಾಗೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಕಾಸು ಕೊಡದಿದ್ದರೆ ಶೂಟಿಂಗ್‌ಗೆ ಗೈರುಹಾಜರಾಗುವ ನಟರೇ ಹೆಚ್ಚಾಗಿರುವ ಕಾಲದಲ್ಲಿ ಸ್ನೇಹಕ್ಕಾಗಿ ಫ್ರೀ ಕಾಲ್ ಶೀಟ್ ಕೊಟ್ಟ ಪ್ರೇಮ್ ತೆರೆಯ ಮೇ[...] ಮಾತ್ರವಲ್ಲ, ನಿಜಜೀವನದಲ್ಲೂ ಸಹೃದಯಿ ಎಂಬುದನ್ನು ತೋರಿಸಿಕೊಟ್ಟಿದ್ದಾ[...]



ಯಾರದೋ ದುಡ್ಡು ಹೆಚ್.ಡಿ.ಕೆ ಜಾತ್[ರೆ]

ಹಿತ್ತಲ ಗಿಡ ಮದ್ದಲ್ಲ ಅನ್ನೋ ಗಾದೆಯನ್ನು ನಮ್ಮ ಮಾ[ಜಿ] ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ[...] ಅನುಸರಿಸುತ್ತಿದ್ದಾರಂತೆ.

ವಿಷಯ ಇಷ್ಟೆ. ಕುಮಾರಸ್ವಾಮಿಯವರು ಕನ್ನಡ ಚಿತ್ರರಂ[ಗಕ್ಕೆ] ತಮ್ಮ ಏಕೈಕ ಸುಪುತ್ರ ನಿಖಿಲ್ ಗೌಡನನ್ನು ಪರಿಚಯಿಸುವ ಮೂ[ಲಕ] ರೀಎಂಟ್ರಿ ಕೊಡುತ್ತಿದ್ದಾರೆ. ಆದರೆ ನಮ್ಮ ಮಾಜಿ ಮುಖ್ಯಮಂತ್ರಿಗ[ಳಿಗೆ] ತಮ್ಮ ಮಗನಲ್ಲಿರಬಹುದಾದ ನಟನನ್ನು ಹೊರ ತೆಗೆಯಬ[...] ಒಬ್ಬನೇ ಒಬ್ಬ ಕನ್ನಡದ ನಿರ್ದೇಶಕ ಕಂಡುಬಂದಿಲ್ಲ. ಕನ್ನಡ[ದ] ನಿರ್ದೇಶಕರಾದ ಭಟ್ರು, ಸೂರಿ, ಶಶಾಂಕ. ಮುಂತಾದವರು ಕುಮಾರ[...] ಪಾಲಿಗೆ ಹಿತ್ತಲ ಗಿಡ. ಆದ್ದರಿಂದ ಅವರು ತಮ್ಮ ಮಗನ ಮೊದ[ಲ] ಸಿನಿಮಾಕ್ಕೆ ತೆಲುಗಿನ ಖ್ಯಾತ ನಿರ್ದೇಶಕರಾದ ಎಸ್. ರಾಜಮೌ[ಳಿ,] ರಾಮ್‌ಗೋಪಾಲ್ ವರ್ಮಾ ಇತ್ಯಾದಿ ಜನರನ್ನು ಸಂಪರ್ಕಿಸಿದರಂ[ತೆ].



ಅಂತಿಮವಾಗಿ ಅವರಿಗೆ ಪುರಿ ಜಗನ್ನಾಥ್ ಸಿಕ್ಕಿದ್ದು ಅವರ ಕೈಗೆ ತಮ್ಮ ಮಗನನ್ನು ಅರ್ಪಿಸಿದ್ದಾರೆ.

ಸ್ಯಾಂಡಲ್‌ವುಡ್ ಇತಿಹಾಸದಲ್ಲೇ ಇದು ಮೆಗಾ ಬಜೆಟ್ಟಿನ ಸಿನಿಮಾ ಆಗಲಿದೆಯಂತೆ. ಸಾಮಾನ್ಯವಾಗಿ ಕನ್ನಡದಲ್ಲಿ ರೂ. 5 ಕೋಟಿ ಎಂದರೇನೇ ಬಿಗ್ ಬಜೆಟ್ ಚಿತ್ರ. ಇನ್ನು ಪುನೀತ್, ಸುದೀಪ್, ದರ್ಶನ್ ತರಹದ ದೊ[ಡ್ಡ] ನಟರು ತಾರಾಗಣದಲ್ಲಿದ್ದರೆ ಅದಕ್ಕೆ ಅಬ್ಬಬ್ಬಾ ಎಂದರೆ ರೂ. 10 ಕೋ[ಟಿ] ಬಜೆಟ್ ಇರುತ್ತದೆ. ಯಾಕೆಂದರೆ ಕನ್ನಡ ಸಿನಿಮಾಗಳ ಮಾರುಕಟ್ಟೆ ಹೆಚ್ಚೆಂ[ದರೆ] 15 ಕೋಟಿ ಮಾತ್ರ.

ಆದರೆ ಕುಮಾರಸ್ವಾಮಿಯವರು ಚಿತ್ರ ಆರಂಭವಾಗುವುದಕ್ಕೂ ಮುನ್ನ[...] ತಮ್ಮ ಪುತ್ರನಿಗಾಗಿ ರೂ. 1 ಕೋಟಿ ಖರ್ಚು ಮಾಡಿದ್ದಾರೆ. ಅಷ್ಟೇ ಅಲ್ಲ[...] ಈ ಚಿತ್ರಕ್ಕಾಗಿ ಅವರು 60 ಕೋಟಿ ವೆಚ್ಚ ಮಾಡಲಿದ್ದಾರಂತೆ. ಅಂ[...] ಕುಮಾರಣ್ಣನಿಗೆ ಕನಿಷ್ಠ 50 ಕೋಟಿ ಲಾಸ್ ಆಗಲಿದೆ ಎಂದು ಗಾಂಧಿನಗ[ರದ] ಪಂಡಿತರು ಭವಿಷ್ಯ ನುಡಿದಿದ್ದಾರೆ.

ಜೊತೆಗೆ 'ಯಾರದ್ದೋ ದುಡ್ಡು ಹೆಚ್.ಡಿ.ಕೆ ಜಾತ್ರೆ' ಎಂದು ಚಾಮರಾಜಪೇ[ಟೆ] ಶಾಸಕ ಹಾಸ್ಯ ಮಾಡುತ್ತಿರುವುದೂ ಈಗ ಸುದ್ದಿಯಾಗಿದೆ!

ಇದೆಲ್ಲದರ ಮಧ್ಯೆ ಇನ್ನೊಂದು ಸುದ್ದಿಯೂ ಗಾಂಧಿನಗರದ ಗಲ್ಲಿಗ[ಳಲ್ಲಿ] ಕೇಳಿಬರುತ್ತಿದೆ. ಅದೇನೆಂದರೆ ಕುಮಾರಸ್ವಾಮಿಯವರ 'ಮಿಸಸ್' ರಾಧಿ[ಕಾ] ನಿರ್ಮಿಸಿ-ನಟಿಸಲಿದ್ದ 'ಬಂಗಾರದವಂಶ' ಚಿತ್ರ ಕುರಿತದ್ದು. ಶಿವರಾಜ್‌ಕುಮಾ[ರ್] ಹೀರೋ ಆಗಲಿದ್ದ ಸೆಂಟಿಮೆಂಟ್ ಕಿಂಗ್ ಸಾಯಿಪ್ರಕಾಶ್ ನಿರ್ದೇಶಿಸ[...] ಈ ಚಿತ್ರ ಸದ್ಯಕ್ಕೆ ಸೆಟ್ಟೇರುವ ಸೂಚನೆಗಳಿಲ್ಲ. "ಮಗನ ಅರಂಗೇಟ್ರಂಗೆ [...] ಕೋಟಿ ರೂಪಾಯಿ ಖರ್ಚು ಮಾಡುತ್ತಿರುವುದರಿಂದ ಎರಡನೆ ಪತ್ನಿ [...] ಸಿನಿಮಾಗೆ ಕುಮ್ಮಿ ಎಲ್ಲಿಂದ ಹಣ ತರುತ್ತಾರೆ?"ಎಂದು ಹಲವರು ತಮ[...] ಮಾಡುತ್ತಿದ್ದಾರೆ.

ಸನ್ನಿಲಿಯೋನ್ ಟ್ರೈಲರ್ ಭರ್ಜರಿ ಹಿಟ್



ಪಡ್ಡೆ ಹುಡುಗರ ಮನದನ್ನೆ ಸನ್ನಿ ಲಿಯೋನ್ ನಟಿಸಿರುವ 'ಏಕ್ ಪಹೇಲಿ ಲೀಲಾ' ಚಿತ್ರದ ಟ್ರೈಲರ್ ಯೂಟ್ಯೂಬ್‌ನಲ್ಲಿ ಭರ್ಜರಿ ಹಿಟ್ ಆಗಿದೆ. ಚಿತ್ರದ ಟ್ರೈಲರ್‌ಅನ್ನು ಈಗಾಗಲೇ 12 ದಶಲಕ್ಷ ಜನರು ವೀಕ್ಷಿಸಿದ್ದು ಭಾರಿ ಮೆಚ್ಚುಗೆ ವ್ಯಕ್ತವಾಗಿದೆ. ಏಪ್ರಿಲ್ 10 ರಂದು ಚಿತ್ರ ತೆರೆಗೆ ಬರಲಿದೆಯಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com